ಇತ್ತೀಚೆಗೆ ಹೋದ ವರ್ಷದಲ್ಲಿ ತೆಗೆದ ಮೂರು ಬೋರ್‌ವೆಲ್‌ಗಳ ಪೈಕಿ ಒಂದರಲ್ಲಿ ೮ ಸಾವಿರ ಲೀಟರ್ ನೀರು ಸಿಗುತ್ತಿದೆ. ಇದಕ್ಕೆ ಪಂಪ್‌ಸೆಟ್‌ಗಳನ್ನು ಹಚ್ಚಬೇಕೆಂದು ಈಗಾಗಲೇ ಹೇಳಿದ್ದೇನೆ. ಸದ್ಯಕ್ಕೆ ನಾವು ಇಷ್ಟು ಮಾಡಲಿಕ್ಕೆ ಸಾಧ್ಯವಾಗಿದೆ. ಇದನ್ನು ಬಿಟ್ಟು ಬೇರೆ ಹೊಸ ವಿಚಾರಗಳಿದ್ದರೆ ತಾವು ಅದನ್ನು ನನಗೆ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಪ್ರಸನ್ನ.—(ಹಾಜರಿರಲಿಲ್ಲ)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—(ಹಾಜರಿರಲಿಲ್ಲ)

(೬) ಸಾರಿಗೆ ಸಂಸ್ಥೆಯಿಂದ ಬೆಂಗಳೂರು ಬೈಂದೂರ್ ಮಾರ್ಗದಲ್ಲಿ ಹೊಸ ಸುವಿಹಾರಿ ಬಸ್ ಹಾಕಲು ಕೋರಿಕೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು–ಬೈಂದೂರು ಮಾರ್ಗದಲ್ಲಿ ಹೊಸ ಸುವಿಹಾರಿ ಬಸ್ ಹಾಕಲು ಕೋರಿಕೆ. ಬೆಂಗಳೂರು–ಬೈಂದೂರು ಸುವಿಹಾರಿ ಬಸ್ಸು, ಇದರಲ್ಲಿ ಪಯಣಿಸಿದರೆ ಖಂಡಿತ ಕಡಿಮೆ ಆಯುಸ್ಸು. ಕಿಟಕಿ, ಬಾಗಿಲು, ಬೀಡಿಂಗ್ ಬಾಡಿ–ಎಲ್ಲವೂ ''ಲಟ ಲಟ' ಎನ್ನುವ ಮೋಜು ನೋಡಿ ಬೈಯುವರು. ದೂರುವವರು ಬೈಂದೂರು ಬಸ್ಸಿನಲ್ಲಿ ಪಯಣಿಸುವ ಜನರೆಲ್ಲಾ. ''ನಮಗೇಕೆ ಈ ಶಾಪ, ನಮಗೇಕೆ ಈ ತಾಪತ್ರಯದ ಪರಿತಾಪ''. ರಾಜ್ಯ ರಸ್ತೆ ಸಾರಿಗೆ ನಿಗಮದವರಲ್ಲಿ ಮಾನ್ಯ ಸಚಿವರಲ್ಲಿ ನಾನು ಮಾಡಿದ್ದೆ ಬಹಳ ಸಲ ಅರಿಕೆ, ಒಳ್ಳೆಯ ಬಸ್ಸನ್ನು ಹಾಕಿ ಎಂದು. ಈಗ ಮತ್ತೊಮ್ಮೆ. ಮತ್ತೊಮ್ಮೆ ಆಗ್ರಹದ ಅರಿಕೆ, ಒತ್ತಾಯದ ಕೋರಿಕೆ. ಇತ್ತೀಚೆಗಂತೂ ಬಹಳಷ್ಟು ರೂಟಿನಲ್ಲೂ ಹೊಸ ಬಸ್ಸು. ಬೈಂದೂರಿಗೂ ಹಾಕಲು ಮಾಡಿ ಬೇಗ ದೊಡ್ಡ ಮನಸ್ಸು.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು–ಬೈಂದೂರು ನಡುವೆ ಸಧ್ಯದಲ್ಲಿ ಹೊಸ ಸುವಿಹಾರಿ ಬಸ್ಸನ್ನು ಓಡಿಸಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

೧೯೮೦–೮೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

(ಬಂದರು, ಮೀನುಗಾರಿಕೆ, ಮತ್ತು ನಗರಾಭಿವೃದ್ಧಿ ಇಲಾಖಾ ಬೇಡಿಕೆಗಳು)

ಉಪಾಧ್ಯಕ್ಷರು.—ನಾಲ್ಕು ಘಂಟೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಇನ್ನೂ ಐದು ಜನ ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ದಯವಿಟ್ಟು ಹತ್ತು ಹತ್ತು ನಿಮಿಷ ಮಾತನಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ

† ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).—ಸನ್ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲದ ಪುರಸಭೆ ವಿಚಾರವಾಗಿ ಮಾತನಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕೊಳ್ಳೇಗಾಲದ ಪುರಸಭೆಯು ಬಹಳ ತಿಂಗಳಿಂದ ಹಿಂದುಳಿದಂಥ ಪುರಸಭೆ ಆಗಿದೆ. ಏಕೆಂದರೆ ಅಲ್ಲಿ ನೀರಿನ ಬವಣೆ ಬಹಳಷ್ಟು ಹೆಚ್ಚಾಗಿದೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಹಿಂದೆ ನಮ್ಮ ಬಿ. ಡಿ. ಜತ್ತಿ ಅವರ ಕಾಲದಲ್ಲಿ ೬ ಸಾವಿರ ಜನಸಂಖ್ಯೆ ಇದ್ದ ಒಂದು ಕಾಲದಲ್ಲಿ ಅಲ್ಲಿಗೆ ಅವರು ಒಂದು ಚಿಕ್ಕ ಟ್ಯಾಂಕನ್ನು ಓಪನ್ ಮಾಡಿದರು. ಈಗಿನ ಕಾಲದಲ್ಲಿ ನೋಡಿದಾಗ ೨೦ ವರ್ಷದ ಮೇಲಾಗಿದೆ. ಈಗ ನೀರಿನ ಬವಣೆ ಬಹಳ ಜಾಸ್ತಿಯಾಗಿದೆ. ಈಗ ೫೦ ಸಾವಿರ ಜನಸಂಖ್ಯೆ ಇರತಕ್ಕ ನಗರದಲ್ಲಿ ನೀರಿನ ಬವಣೆ ಹೆಚ್ಚಾಗಿದೆ. ಆದ್ದರಿಂದ ಸೆಕೆಂಡ್ ಸ್ಟೇಜ್ ವಾಟರ್ ಸಪ್ಲೈ ಸ್ಕೀಮನ್ನು ತಕ್ಷಣದಲ್ಲೇ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಮಹದೇಶ್ವರ ಬೆಟ್ಟಕ್ಕೆ ಹೋಗುವ ಜನರೆಲ್ಲಾ ಅಲ್ಲಿಗೆ ಬರುತ್ತಾರೆ. ಅವರಿಗೆ ನೀರು ಬೇಕಾಗುತ್ತದೆ, ಈಗ ಅವರಿಗೆ ಒಳ್ಳೆಯ ನೀರು ಕೊಡ ಪುದಕಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಸೆಕೆಂಡ್ ಸ್ಟೇಜ್‌ನ ಮೂಲಕ ಜರೂರಾಗಿ ಅಲ್ಲಿಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಮತ್ತೆ ಅಲ್ಲಿ ಪುರಸಭೆಯಲ್ಲಿರತಕ್ಕ ಸ್ಕ್ಯಾವೆಂಜರ್‌ಸ್‌ಗೆ ಸ್ಥಳಾವಕಾಶ ಇಲ್ಲದೆ, ಮನೆ ಮಠ ಇಲ್ಲದೆ ಒಂದು ಷೆಡ್‌ನಲ್ಲಿದ್ದುಕೊಂಡು ಕೆಲಸ ಮಾಡುತ್ತಿದ್ದಾರೆ. ದೇವರಾಜ ಅರಸರ ಕಾಲದಲ್ಲಿ ಮನೆಗಳನ್ನು ಕಟ್ಟಿಕೊಡಬೇಕೆಂದು ಸ್ವಲ್ಪ ಹಣ ಬಿಡುಗಡೆ ಮಾಡಿದರು. ಆದರೆ ಅಲ್ಲಿನ ಮುನಿಸಿಪಾಲಿಟಿ

ಅಧಿಕಾರಿಗಳು ಆ ಕೆಲಸ ತೆಗೆದುಕೊಳ್ಳದೆ ಅದನ್ನು ವಜಾ ಮಾಡಿಬಿಟ್ಟಿದ್ದಾರೆ. ಆದ್ದರಿಂದ ಅವರಿಗೆ ಸರ್ಕಾರದಿಂದ ಜರೂರಾಗಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತೆ ಅಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಪುರಸಭೆಯ ಪಕ್ಕದಲ್ಲಿರತಕ್ಕ ನೂರಾರು ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ಸೈಟ್ ಮಾಡಿ ದುರುಪಯೋಗ ಮಾಡುತ್ತಿದ್ದಾರೆ ಅದನ್ನು ತಪ್ಪಿಸಿ ಸರ್ಕಾರವೇ ಅದನ್ನು ಅಕ್ವೈರ್ ಮಾಡಿಕೊಂಡು ಬಡಜನರಿಗೆ ಅದನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಅಲ್ಲಿರತಕ್ಕವರೆಲ್ಲಾ ಬಡಜನರೇ ಆಗಿದ್ದಾರೆ. ಸ್ವಲ್ಪ ವ್ಯಾಪಾರಸ್ಥರಿದ್ದಾರೆ ಅಷ್ಟೆ. ನೇರೆಯುವರೆಲ್ಲಾ ಅಲ್ಲಿ ಸ್ಥಳಾವಕಾಶ ಇಲ್ಲದೆ ತೊಂದರೆಪಡುತ್ತಿದ್ದಾರೆ. ತಮಿಳುನಾಡಿನಿಂದ ಆಂಧ್ರಪ್ರದೇಶದಿಂದ ಬಂದು ಒಕ್ಕಲುತನ ಮಾಡುತ್ತಿದ್ದಾರೆ. ಇವರೆಲ್ಲರೂ ಬಡಜನರಿದ್ದಾರೆ. ಈ ವಿಷಯದಲ್ಲಿ ಕ್ರಮ ಕೈಗೊಂಡು ಅವರ ಜಮೀನುಗಳನ್ನು ವಾಪಸ್ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮ ಪಟ್ಟಣದ ಪಕ್ಕದಲ್ಲಿ ಮುದಗುಂಡ ಬಳಿ ಸಣ್ಣ ಸಣ್ಣ ಟ್ಯಾಂಕುಗಳಿವೆ. ಅದನ್ನು ಬಿಟ್ಟುಕೊಡಬೇಕೆಂದು ಕೇಳಿದರೂ ರೆವಿನ್ಯೂ ಇಲಾಖೆಯವರು ಬಿಡುಗಡೆ ಮಾಡಿಕೊಟ್ಟಿಲ್ಲ. ಆದ್ದರಿಂದ ದಯವಿಟ್ಟು ಅಲ್ಲಿರುವ ಎರಡು ಟ್ಯಾಂಕುಗಳನ್ನು ಸರ್ಕಾರದಿಂದ ಮುನಿಸಿಪಾಲಿಟಿಗೆ ವಶಪಡಿಸಿಕೊಟ್ಟರೆ ನಮಗೆ ಅನೇಕ ಸೌಲಭ್ಯಗಳನ್ನು ಒದಗಿಸುವುದಕ್ಕೆ, ಅಂದರೆ ಮನೆಗಳನ್ನು ಕಟ್ಟಿಸುವುದಕ್ಕೆ ಬಸ್ ಸ್ಟ್ಯಾಂಡ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಅದನ್ನು ದಯವಿಟ್ಟು ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತೆ ಕೊಳ್ಳೇಗಾಲದಲ್ಲಿ ಅಧಿಕಾರಿಗಳಿಗೆ ಸರಿಯಾದ ವಸತಿ ಸೌಕರ್ಯ ಇಲ್ಲದೇ ಇರುವುದರಿಂದ ಯಾರೂ ಕೂಡಾ ಅಧಿಕಾರಿಗಳು ವ್ಯವಸ್ಥಿತವಾಗಿ ಸರ್ಕಾರಿ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ಅವರು ಅಲ್ಲಿ ವಾಸ ಮಾಡುವುದಕ್ಕೆ ಮನೆವ ಠ ಸಿಗುತ್ತಾ ಇಲ್ಲ. ನಾನು ಹಿಂದೆ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಆಗ ಸುಮಾರು ೮೦ ಮನೆಗಳಿಗೆ ೬೧ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು. ಆಗ ಮುನಿಸಿಪಾಲಿಟಿಯವರು ಅಲ್ಲಿ ಸೈಟ್ ಕೊಡದ್ದರಿಂದ ಅದೂ ಕೂಡಾ ಹಾಗೇ ನಿಂತಿತು. ಈ ಬಗ್ಗೆ ಹೋದ ಸರ್ಕಾರದಲ್ಲಿ ಆ ಕ್ಷೇತ್ರ ಪ್ರತಿನಿಧಿಸಿದ್ದ ಶಾಸಕರು ಆದರೂ ಈ ಬಗ್ಗೆ ಹೋರಾಟ ಮಾಡಬಹುದಾಗಿತ್ತು. ಆದರೆ ಅವರು ಈ ಬಗ್ಗೆ ಗಮನ ಕೊಟ್ಟಿಲ್ಲ. ಆದ್ದರಿಂದ ಈ ಕೆಲಸವನ್ನು ತಮ್ಮ ಕಾಲದಲ್ಲಿ ಮಾಡಿಕೊಡಬೇಕು. ನಮ್ಮಲ್ಲಿರತಕ್ಕ ಮಲೆ ಮಹದೇಶ್ವರನ ಬೆಟ್ಟಕ್ಕೆ ಅನೇಕ ಜನ ಯಾತ್ರಾರ್ಥಿಗಳು ಹೋಗುತ್ತಿರುತ್ತಾರೆ. ಅವರಿಗೆ ಅಲ್ಲಿ ಶೌಚಾಲಯಗಳ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈ ಕ್ಷೇತ್ರದ ಹಿಂದಿನ ಮುಖಂಡರು ಈ ಬಗ್ಗೆ ಕೇಳಿಲ್ಲ. ಶೌಚಾಲಯ ವ್ಯವಸ್ಥೆ ಇಲ್ಲದಿದ್ದರೆ ಖಾಯಿಲೆ ತನ್‌ತಾನೇ ಉತ್ಪತ್ತಿಯಾಗುತ್ತದೆ ಆದ್ದರಿಂದ ಅಲ್ಲಿ ಶೌಚಾಲಯ ಕಟ್ಟಲು ಸರ್ಕಾರದಿಂದ ಗ್ರಾಂಟ್ ಕೊಟ್ಟ ತಕ್ಷಣ ಅದನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತೆ ನಮ್ಮ ತಾಲ್ಲೂಕಿನ ವಿಸ್ತೀರ್ಣ ಕೊಡಗು ಜಿಲ್ಲೆಯ ವಿಸ್ತೀರ್ಣದಷ್ಟು ಇದೆ. ರಾಜ್ಯದ ಒಂದು ಜಿಲ್ಲೆಯಷ್ಟು ದೊಡ್ಡ ವಿಸ್ತೀರ್ಣ ಇರುವ ನಮ್ಮ ತಾಲ್ಲೂಕಿಗೆ ಅನೇಕ ಸೌಲಭ್ಯಗಳು ಬೇಕಾಗುತ್ತದೆ. ನಮ್ಮ ತಾಲ್ಲೂಕು ಮೈಸೂರು ಜಿಲ್ಲೆಯಲ್ಲೇ ಅತಿ ದೊಡ್ಡ ತಾಲ್ಲೂಕಾಗಿದ್ದು ೭೦ ಮೈಲಿ ಉದ್ದ ಇದೆ. ಇವತ್ತು ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳು ಸುಸ್ಥಿತಿಯಲ್ಲಿ ಇಲ್ಲ. ನಮ್ಮ ಟೌನ್ ರಸ್ತೆಗಳಂತೂ ಸಂಚಾರಕ್ಕೆ ಯೋಗ್ಯವಾಗಿಲ್ಲ. ಈಗ ತಾವು ಮಂತ್ರಿಗಳಾಗಿದ್ದೀರಿ. ನಮ್ಮ ಕಷ್ಟ ಸುಖಗಳನ್ನು ತಾವು ಅಲ್ಲಿಗೆ ಬಂದು ನೋಡಿದ್ದೀರಿ. ಚುನಾವಣೆ ಕಾಲದಲ್ಲಿ ತಾವು ಅಲ್ಲಿಗೆ ಬಂದಿದ್ದಿರಿ. ಕಾಂಗ್ರೆಸ್ ಪರವಾಗಿ ನಮ್ಮ ಜಿಲ್ಲೆಯಲ್ಲಿ ೧೯ರಲ್ಲಿ ೧೭ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ ಅಧಿಕಾರ ಸೂತ್ರ ಹಿಡಿಯುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಜಯಭೇರಿ ಗಳಿಸಿರುವಷ್ಟು ಬೇರೆ ಯಾವ ಜಿಲ್ಲೆಯಲ್ಲಿಯೂ ಇಲ್ಲ. ಇದನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇದನ್ನೆಲ್ಲಾ ಗಮನಿಸಿ ತಾವು ನಮ್ಮ ಕ್ಷೇತ್ರಕ್ಕೆ ಒದಗಿಸಬೇಕಾದ ಸೌಲಭ್ಯಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೊಳ್ಳೇಗಾಲ ಒಂದು ವ್ಯಾಪಾರಿ ಕೇಂದ್ರವಾಗಿದೆ. ಇಲ್ಲಿ ದಿನವೂ ಕೋಟಿಗಟ್ಟಲೆ ವ್ಯವಹಾರ ನಡೆಯುತ್ತದೆ. ಇಲ್ಲಿ ದೊಡ್ಡ ದೊಡ್ಡ ವರ್ತಕರು ಬೇಕಾದಷ್ಟು ವ್ಯವಹಾರ ನಡೆಸುತ್ತಿದ್ದಾರೆ. ಅಲ್ಲಿ ದೊಡ್ಡ ವರ್ತಕರಿಗೆ ದಾಸ್ತಾನು ಏನು ಬರುತ್ತದೆ ಅದಕ್ಕೆ ಟ್ಯಾಕ್ಸ್ ಹಾಕಿದರೆ ಸರ್ಕಾರಕ್ಕೆ ಹಣ ಬರುತ್ತದೆ. ಈ ಹಣದಿಂದ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸಬಹುದು ಇನ್ನು ಟೌನ್‌ನಲ್ಲಿ ಇರುವ ಜನರಿಗೆ ಸ್ಥಳಾವಕಾಶ ಅಭಾವ ಸಾಕಷ್ಟು ಇದೆ. ಅವರು ಊರಿಂದ ಹೊರಗಡೆ ಯಾವ ಕಡೆ ಹೋಗುವುದಕ್ಕೂ ಸಾಧ್ಯವಿಲ್ಲ. ಕಾರಣ ಸುತ್ತಮುತ್ತಲ ಜಾಗವನ್ನು ದೊಡ್ಡ ದೊಡ್ಡ ಶ್ರೀಮಂತರು ಪಡೆದುಕೊಂಡು ಅಲಿನೇಷನ್ ಕೂಡಾ ಮಾಡಿಸಿ ಕೊಂಡಿದ್ದಾರೆ. ಹಿಂದಿನ ಸರ್ಕಾರ ಮಾಡಿರುವ ಈ ಅನ್ಯಾಯದಿಂದಾಗಿ ಟೌನ್ ಇವತ್ತು ಸುತ್ತಮುತ್ತ ಮುಂದುವರಿಯುವುದಕ್ಕೆ ಅವಕಾಶ ಆಗಿಲ್ಲ. ದಯಮಾಡಿ ನಮ್ಮ ನಗರದ ನೀರಿನ ವ್ಯವಸ್ಥೆ ಮತ್ತು ಬಡವರಿಗೆ ಸೈಟ್ ಕೊಡುವ ವ್ಯವಸ್ಥೆ ಮಾಡುವುದರ ಜೊತೆಗೆ ಮುನಿಸಿಪಾಲಿಟಿಗೆ ದಾಸ್ತಾನಿನಿಂದ ಬರುವ

ಟ್ಯಾಕ್ಸನ್ನು ಪಡೆದುಕೊಳ್ಳುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಹೇಳಿದ್ದೇನೆ. ಇನ್ನು ಇಲ್ಲಿನ ಅನೇಕ ಬಡಜನರಿಗೆ ಸೈಟ್ ಕೊಡುವುದಕ್ಕೆ ಗಮನಹರಿಸಬೇಕು. ಮೂರು ನಾಲ್ಕು ಸಾರಿ ತಾವು ನಮ್ಮ ಟೌನ್‌ಗೆ ಬಂದಿದ್ದೀರಿ. ಟೌನಿನಲ್ಲಿರುವ ಅವ್ಯವಸ್ಥೆ ಏನು ಎಂಬುದು ತಮಗೆ ಗೊತ್ತೇ ಇದೆ. ತಾವು ಎಷ್ಟೋ ಸಾರಿ ನಿಮ್ಮ ಊರಿಗೆ ಬರುವುದಕ್ಕೆ ಅಸಹ್ಯವಾಗುತ್ತದೆ ಎಂದು ಹೇಳಿದ್ದೀರಿ. ಈಗ ತಾವೇ ನಗರಾಭಿವೃದ್ಧಿ ಮಂತ್ರಿಗಳಾಗಿದ್ದೀರಿ. ತಾವು ದಯಮಾಡಿ ಈ ಎಲ್ಲ ಅವ್ಯವಸ್ಥೆಗಳ ಬಗ್ಗೆ ಗಮನಹರಿಸಿ ಸುವ್ಯವಸ್ಥೆಗೊಳಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ೧೯೮೦-೮೧ನೇ ಸಾಲಿನ ಮಾನ್ಯ ಬಂದರು ಮತ್ತು ಮೀನುಗಾರಿಕೆ ಹಾಗೂ ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಉದ್ದೇಶಿಸಿ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಅನೇಕ ಮಾನ್ಯ ಶಾಸನ ಸಭಾ ಸದಸ್ಯರು ಪ್ರಮುಖವಾದಂಥ ವ್ಯಕ್ತಿಗಳು ನಗರಾಭಿವೃದ್ಧಿ ಮತ್ತು ಮೀನುಗಾರಿಕೆ ಹಾಗೂ ಬಂದರು ಇಲಾಖೆಗಳ ಬಗ್ಗೆ ಸಾಕಷ್ಟು ವಿವೇಚನೆಪೂರ್ಣವಾದ ಸಲಹೆಗಳನ್ನು ಹಾಗೂ ಸರ್ಕಾರದಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ ಹೆಚ್ಚಿಗೆ ಹೇಳಿದ್ದಾರೆ. ನಾನೂ ಆ ಬಗ್ಗೆ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಆದರೆ ಕೆಲವು ವಿಚಾರಗಳನ್ನು ಈ ಒಂದು ಸಂದರ್ಭದಲ್ಲಿ ಆಗುವಂತಹ ಅನಾಹುತಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಅಂಕಿ ಸಂಖ್ಯೆಗಳ ಪ್ರಕಾರ ನಾವು ನೋಡಿದರೆ ಬೀದರ್ ಜಿಲ್ಲೆ ಅತ್ಯಂತ ಹಿಂದುಳಿದಿರತಕ್ಕ ಜಿಲ್ಲೆಯಾಗಿದೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಆದರೆ ಹಲವಾರು ಸರ್ಕಾರಗಳು ಬಂದು ಹೋದರೂ ಸಹ ನಮ್ಮ ಹಿಂದುಳಿದಿರುವಂತಹ ಜಿಲ್ಲೆಯ ಬಗ್ಗೆ ಹೆಚ್ಚು ಗಮನ ಕೊಡುವುದಾಗಲಿ, ಆ ಬಗ್ಗೆ ಹೆಚ್ಚು ಸವಲತ್ತುಗಳನ್ನು ಕೊಡುವುದಾಗಲಿ, ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಾಗಲಿ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ. ಬೀದರ್ ಜಿಲ್ಲೆಯ ಬಗ್ಗೆ ವಿಶೇಷವಾಗಿ ಇಲ್ಲಿ ಹೇಳಬೇಕಾದರೆ 200 ಕಿಲೋಮೀಟರ್ ದೂರದಿಂದ ಬೆಂಗಳೂರು ರಾಜಧಾನಿಗೆ ಬಂದು ಅಲ್ಲಿರತಕ್ಕ ಜನರ ಕಷ್ಟ ಸುಖಗಳನ್ನು ಹೇಳುವುದಕ್ಕೆ ವಿಧಾನ ಸಭೆಯಲ್ಲೂ ಸಮಯ ಸಿಕ್ಕದಿರುವುದು ಅತ್ಯಂತ ದುರದೃಷ್ಟಕರವಾದ ಸಂಗತಿ. ಈ ದಿಸೆಯಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ''ಸರ್ಕಾರದ ಕೆಲಸ ದೇವರ ಕೆಲಸ'' ದಿವಂಗತ ಕೆಂಗಲ್ ಹನುಮಂತಯ್ಯನವರು ಸಾರಿ ಹೋಗಿದ್ದಾರೆ. ಮಂತ್ರಿಗಳಾದವರು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಮಂತ್ರಿಗಳಾಗುತ್ತಾರೆ. ಈ ರಾಜ್ಯದ ಪ್ರತಿಯೊಂದು ಪ್ರದೇಶದ ಬಗ್ಗೆ ಗಮನ ಹರಿಸುವಂತಹದು ಅತ್ಯಂತ ಅಗತ್ಯವಾಗಿ ಆಗಬೇಕಾದಂತಹ ಕೆಲಸ. ಅದರಲ್ಲೂ ನಗರಾಭಿವೃದ್ಧಿ ಸಚಿವರು ಈ ವಿಚಾರದಲ್ಲಿ ಹೆಚ್ಚು ಮಹತ್ವವನ್ನು ಕೊಡಬೇಕಾಗುತ್ತದೆಂದು ಒತ್ತಿ ಹೇಳುತ್ತೇನೆ. ಸರ್ಕಾರ ಬರುತ್ತದೆ ಸಾಕಷ್ಟು ಜನ ಮಂತ್ರಿಗಳೂ ಆಗುತ್ತಾರೆ. ಎಲ್ಲ ಪ್ರದೇಶಗಳ ಬಗ್ಗೆ ಗಮನ ಹರಿಸದಿದ್ದರೆ ಏನು ಪ್ರಯೋಜನವೆಂದು ಆ ಭಾಗದ ಜನರು ಮಾತನಾಡಿಕೊಳ್ಳುತ್ತಿದ್ದಾರೆ, ಮಾದರಿಯ ಸರ್ಕಾರವನ್ನು ಕೊಡಬೇಕು. ಮಾದರಿಯಾದ ಮಂತ್ರಿಗಳಾಗಬೇಕು. ನಮ್ಮ ಇಡೀ ರಾಜ್ಯದ ಜನರ ಕಲ್ಯಾಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಹಿಂದೆ ಈ ರಾಜ್ಯದ ಲೋಕೋಪಯೋಗಿ ಸಚಿವರಾಗಿದ್ದಂತಹ ದಿವಂಗತ ಚೆನ್ನಬಸಪ್ಪನವರ ಬಗ್ಗೆ ಒಂದು ಒಳ್ಳೆಯ ಭಾವನೆ ಎಲ್ಲ ಭಾಗದ ಜನರಲ್ಲಿತ್ತು. ಅದೇ ದಿಕ್ಕಿನಲ್ಲಿ ಮತ್ತೊಬ್ಬರು ಮಾಜಿ ಪ್ರಧಾನಿಗಳಾದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕೇಂದ್ರದಲ್ಲಿ ರೈಲ್ವೇ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಆದಂತಹ ಒಂದು ಅಪಘಾತದ ಜವಾಬ್ದಾರಿಯನ್ನು ಹೊತ್ತುಕೊಂಡು ತಮ್ಮ ಸಚಿವ ಪದವಿಗೆ ರಾಜೀನಾಮೆಯನ್ನು ಕೊಟ್ಟರು. ಅಂತಹ ಆದರ್ಶ ಮಂತ್ರಿಗಳು ನಮ್ಮ ದೇಶದಲ್ಲಿ ಆಳಿ ಹೋದವರು ಇದ್ದಾರೆ. ಆ ದಿಕ್ಕಿನಲ್ಲಿ ಇಂದು ನಗರಾಭಿವೃದ್ಧಿ ಮಂತ್ರಿಗಳಾದ ಶ್ರೀಮಾನ್ ನರಸಿಂಹ ಮೂರ್ತಿಯವರು ಈ ಕರ್ನಾಟಕ ರಾಜ್ಯದ ಜನತೆಯ ಸೇವೆಯನ್ನು ಮಾಡುವಂತಹ ಒಂದು ಅವಕಾಶವನ್ನು ಪಡೆದಿದ್ದಾರೆ. ಅವರು ಈಗಿನ ಮಂತ್ರಿಮಂಡಲದಲ್ಲಿ ಒಂದು ಸ್ಥಾನವನ್ನು ತೆಗೆದುಕೊಂಡ ಮೇಲೆ ಎಲ್ಲ ಭಾಗಗಳ ನಗರಾಭಿವೃದ್ಧಿಯ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗ ನಗರಗಳಲ್ಲಿ ಸಾಕಷ್ಟು ಕಾರ್ಪೊರೇಷನ್‌ಗಳು ಇವೆ. ಆ ಕಾರ್ಪೊರೇಷನ್‌ಗಳಿಂದ ಈ ರಾಜ್ಯದ ಜನತೆಗೆ ಹೆಚ್ಚು ಉಪಯೋಗ ಆಗುವಂತಹ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಒಂದು ದಿಸೆಯಲ್ಲಿ ನಮ್ಮ ಶ್ರೀಮಾನ್ ನರಸಿಂಹ ಮೂರ್ತಿಯವರು ಹೆಚ್ಚಿನ ಆಸಕ್ತಿ ವಹಿಸಿ ಕರ್ನಾಟಕ ರಾಜ್ಯದ ಜನತೆಯ ಅದರಲ್ಲೂ ವಿಶೇಷವಾಗಿ ಬೀದರ್ ಜಿಲ್ಲೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನನಗಿಂತ ಮೊದಲು ಮಾತನಾಡಿದಂತಹ ಸಾಕಷ್ಟು ಹಿರಿಯ ಸದಸ್ಯರು ಬೆಂಗಳೂರು ನಗರ ಸಭೆ ಹಾಗೂ ಬೆಂಗಳೂರು ಅಭಿವೃದ್ಧಿ

ಪ್ರಾಧಿಕಾರದ ಬಗ್ಗೆ ಹಲವಾರು ವಿಷಯಗಳನ್ನು ತಮ್ಮ ತಮ್ಮ ಮತ ಕ್ಷೇತ್ರಗಳ ಬಗ್ಗೆ ಸಾಕಷ್ಟು ವಿವರವಾಗಿ ಹೇಳಿದ್ದಾರೆ. ಈ ಸರ್ಕಾರದಲ್ಲಿ ಮಂತ್ರಿಗಳಾದಂತಹವರು ಮಂತ್ರಿಗಳಾದ ಮೇಲೆ ಬೀದರ್ ಜಿಲ್ಲೆಗೆ ಯಾರೂ ಬಂದೇ ಇಲ್ಲ. ಬೀದರ್ ಜಿಲ್ಲೆಗೆ ಮಂತ್ರಿ ಮಂಡಲದಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಆ ಪ್ರಕಾರವೇ ಆಯಿತು. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ ಈಗಲೂ ಅದೇ ಪರಿಸ್ಥಿತಿ ಇದೆ. ಆ ಭಾಗಕ್ಕೆ ಮಂತ್ರಿಗಳನ್ನು ಕೊಟ್ಟಿಲ್ಲ. ಇದರಿಂದಾಗಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದುಳಿದಿರುವ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಬೀದರ್ ಜಿಲ್ಲೆಗೆ ಸಂಬಂಧಪಟ್ಟ ಷಿ ವಿಚಾರಗಳನ್ನು ಅದರಲ್ಲೂ ಬೀದರ್ ನಗರದ ಬಗ್ಗೆ ಶ್ರೀ ನಾರಾಯಣ ರಾವ್ ಮನವಳ್ಳಿಯವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಾದರೂ ಅವರಿಗೆ ಅವಕಾಶ ಸಿಕ್ಕಿದ್ದರಿಂದ ಈ ವೇದಿಕೆಯ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ಬೀದರ್ ನಗರಕ್ಕೆ ಮಾಂಜ್ರಾ ನದಿಯಿಂದ ನೀರನ್ನು ತರತಕ್ಕ ಯೋಜನೆಗೆ ಶ್ರೀಮಾನ್ ವೀರೇಂದ್ರ ಪಾಟೀಲರ ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಅಡಿಗಲ್ಲು ಹಾಕಿದ್ದರು. ಆದರೆ ಇದುವರೆವಿಗೂ ಆ ಕೆಲಸ ಆಗಿಲ್ಲ. ಮಾಂಜ್ರ ರಿವರ್‌ನಿಂದ ಬೀದರ್ ನಗರಕ್ಕೆ ಕುಡಿಯುವ ನೀರು ತರುವಂತಹ ಕಾರ್ಯಕ್ರಮವನ್ನು ಹಿಂದೆ ಮಾನ್ಯ ವೀರೇಂದ್ರಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅಡಿಗಲ್ಲನ್ನು ಹಾಕಿದ್ದರು. ಆದರೆ ಅದರ ಬಗ್ಗೆಯೂ ಸಾಕಷ್ಟು ಪ್ರಯತ್ನ ಪಟ್ಟರೂ ಕೂಡ ಬೀದರ್ ನಗರಕ್ಕೆ ಕುಡಿಯುವ ನೀರು ದೊರಕುತ್ತಿಲ್ಲ ಮತ್ತು ಅದರಿಂದ ಅನುಕೂಲ ವಾಗುತ್ತಿಲ್ಲ. ಬೀದರ್ ಜಿಲ್ಲೆಯನ್ನು ಕೇಂದ್ರಸರ್ಕಾರ ದಕ್ಷಿಣಭಾರತದ ಕೈಗಾರಿಕಾ ನಗರವನ್ನಾಗಿ ಪರಿವರ್ತನೆ ಮಾಡಿದ ಮೇಲೆ ಅಲ್ಲಿಗೆ ಸಾಕಷ್ಟು ಜನರು ಬರುತ್ತಿದ್ದಾರೆ. ಕೈಗಾರಿಕೋದ್ಯಮಿಗಳು ಬೀದರ್‌ಗೆ ಬರುತ್ತಿದ್ದಾರೆ. ೨ ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಬೀದರ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ವಿಶೇಷವಾದ ಕಾಳಜಿಯನ್ನು ವಹಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಈ ವರ್ಷದ ಬಜೆಟ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಮಾನ್ಯಮಂತ್ರಿಗಳು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಬಜೆಟ್‌ನಲ್ಲಿ ಈ ಕೆಲಸವನ್ನು ಮಾಡಿಕೊಳ್ಳಲಿಕ್ಕೆ ಸಾಧ್ಯವಾಗದಿದ್ದರೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದಲಾದರೂ ಮಾಂಜ್ರ ನದಿ ನೀರನ್ನು ಬೀದರ್‌ಗೆ ತರುವಂತಹ ಕೆಲಸ ಮಾಡಬೇಕು. ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಬೀದರ್ ನಗರದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳ ಬಯಸುತ್ತೇನೆ. ಬೀದರ್ ನಗರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಬೀದರ್ ನಗರ ವ್ಯಾಪ್ತಿಯಲ್ಲಿ ಕೆಲವು ಓಣಿಗಳು ಮಂಡಲ ಪಂಚಾಯಿತಿಗೆ ಬರುತ್ತವೆ. ಅದೇ ರೀತಿ ಹಲವಾರು ಗ್ರಾಮಗಳು ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುತ್ತವೆ ಉದಾಹರಣೆ ಹೇಳುವುದಾದರೆ ನವಬಾದ್ ಇದೆ, ಹಾರಗೇರಿ ಇದೆ ಇನ್ನಿತರ ಗಲ್ಲಿಗಳು ಬೀದರ್ ನಗರ ವ್ಯಾಪ್ತಿಯಲ್ಲಿ ಬರುತ್ತವೆ, ಅಲ್ಲಿ ಮಂಡಲ ಪಂಚಾಯತಿ ಮತ್ತು ನಗರಸಭೆ ಯಾವುದೂ ಕೆಲಸವನ್ನು ಮಾಡುತ್ತಿಲ್ಲ. ಆ ಮುರ್ನಾಲ್ಕು ಹಳ್ಳಿಗಳನ್ನು ನಗರಸಭೆ ವ್ಯಾಪ್ತಿಗೆ ತೆಗೆದುಕೊಂಡು ನಗರಸಭೆ ವ್ಯಾಪ್ತಿಯಲ್ಲಿರತಕ್ಕ ಜನರಿಗೆ ಏನು ಸೌಲಭ್ಯಗಳನ್ನು ಒದಗಿಸುತ್ತಿದ್ದೀರಿ ಅವನ್ನೇ ಇವರಿಗೂ ಒದಗಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಗರಸಭೆಯವರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ಬೀದರ್ ಜಿಲ್ಲೆಯ ಹೆಡ್‌ಕ್ವಾರ್ಟರ್ ಆದರೂ ಅಲ್ಲಿಗೆ ಯಾವ ಅಧಿಕಾರಿಗಳು ಬರುವುದಿಲ್ಲ, ಅಲ್ಲಿಗೆ ವರ್ಗಾವಣೆ ಮಾಡಿದರೆ ಯಾರೂ ಅಲ್ಲಿಗೆ ಬರುವುದಿಲ್ಲ. ಬೀದರ್ ಬಹಳ ದೂರವೆಂದು ಬಹಳ ಜನ ಬರುವುದಿಲ್ಲ.

ಹುಡ್ಕೋ ಯೋಜನೆ ನೆರವಿನಿಂದ ಮನೆಗಳನ್ನು ಹೆಚ್ಚು ಕಟ್ಟಬೇಕು. ನಮ್ಮಲ್ಲಿ ಸಾಕಷ್ಟು ಭೂಮಿ ಇದೆ. ಸರ್ಕಾರ ಭೂಮಿಯನ್ನು ಗ್ರ್ಯಾಂಟ್ ಮಾಡಿಸಿಕೊಂಡು ನಮ್ಮ ಭಾಗದ ಜನರಿಗೆ ಹುಡ್ಕೋ ಮನೆಗಳನ್ನು ಹೆಚ್ಚಿನ ರೀತಿಯಲ್ಲಿ ಕಟ್ಟಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಲವಾರು ವಿಚಾರಗಳು ಇವೆ ಅವುಗಳನ್ನೆಲ್ಲ ಪ್ರಸ್ತಾಪ ಮಾಡದೆ, ನನ್ನ ಮತದಾರ ಕ್ಷೇತ್ರವಾದ ಬಸವಕಲ್ಯಾಣದ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಬಸವಕಲ್ಯಾಣಕ್ಕೆ ಸಂಬಂಧಪಟ್ಟಂತೆ ಹಲವಾರು ಕಾರ್ಯಕ್ರಮಗಳಿವೆ. ಅವುಗಳನ್ನೆಲ್ಲ ಜಾರಿಗೆ ತಂದು ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಅದರ ಬಗ್ಗೆ ಪ್ರಯತ್ನ ಪಡಬೇಕೆಂದು ಹೇಳುತ್ತೇನೆ. ಬಸವಕಲ್ಯಾಣ ಐತಿಹಾಸಿಕ ಸ್ಥಳವಾಗಿದೆ ಬೇರೆ ಬೇರೆ ಭಾಗಗಳಿಂದ ಅಲ್ಲಿಗೆ ಜನರು ಬರುತ್ತಿದ್ದಾರೆ. ಇದು ವ್ಯಾಪಾರ ಕೇಂದ್ರವಾಗಿದೆ. ಬಸವಕಲ್ಯಾಣದಲ್ಲಿ ೪೦ಸಾವಿರ ಜನಸಂಖ್ಯೆ ಇದೆ. ಅಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಬಸವಕಲ್ಯಾಣ ಇಡೀ ಕರ್ನಾಟಕ ರಾಜ್ಯದಲ್ಲಿಯೇ ಐತಿಹಾಸಿಕ ಕ್ಷೇತ್ರವಾಗಿದೆ. ಜಗಜ್ಯೋತಿ ಬಸವಣ್ಣನವರು ಸಾಮಾಜಿಕ ಮತ್ತು ಧಾರ್ಮಿಕವಾಗಿ ಹೋರಾಟ ಮಾಡಿದಂತಹ ಸ್ಥಳ. ಅಲ್ಲಿ

ಸಾಕಷ್ಟು ಪ್ರಗತಿಪರವಾದ ಕೆಲಸಕಾರ್ಯಗಳು ಆಗುತ್ತಿಲ್ಲ. ಅಲ್ಲಿರತಕ್ಕ ೪೦ಸಾವಿರ ಜನಸಂಖ್ಯೆ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ನಾನು ಹಿಂದೆ ಶಾಸನಸಭಾ ಸದಸ್ಯನಾಗಿದ್ದಾಗ ಆಗಿನ ಸರ್ಕಾರಕ್ಕೆ ಕೇಳಿದರೂ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗಲಿಲ್ಲ. ಹಿಂದಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಬಸವಕಲ್ಯಾಣಕ್ಕೆ ಬಂದಿದ್ದಾಗ, ಕೆರೆಯ ಮುಖಾಂತರ ನೀರು ಸರಬರಾಜು ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ಕೆಲಸ ಮಾಡುವಂತೆ ತಿಳಿಸಿದ್ದರು. ಅದರ ಪ್ರಕಾರ ಆಡಳಿತಾತ್ಮಕ ಒಪ್ಪಿಗೆ ದೊರೆತಿದ್ದು ಒಂದು ಕೋಟಿ ರೂಪಾಯಿಗಳ ಅಂದಾಜು ತಯಾರಾಗಿದ್ದರೂ ಅದನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಅದು ಇನ್ನೂ ಏನೂ ಆಗಿಲ್ಲ. ಅದು ಸರ್ಕಾರಕ್ಕೆ ಬಂದಿದೆ. ಅದರ ಬಗ್ಗೆ ಮಾನ್ಯಮಂತ್ರಿಗಳು ಗಮನಹರಿಸಿ ಬಜೆಟ್‌ನಲ್ಲಿ ಆಗಲಿ ಅಥವಾ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದಲಾಗಲೀ ಹಣವನ್ನು ಬಿಡುಗಡೆ ಮಾಡಿ ಬಸವಕಲ್ಯಾಣಕ್ಕೆ ಅಲ್ಲಿನ ಕೆರೆಯ ಮುಖಾಂತರ ನೀರು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷ ಅದನ್ನು ಕೈಗೆತ್ತಿಕೊಂಡು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಾದ ನರಸಿಂಹಮೂರ್ತಿಯವರು ಮಾಡುತ್ತಾರೆಂದು ನಾನು ತಿಳಿದಿದ್ದೇನೆ ಬಸವಕಲ್ಯಾಣದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಮಳೆ ಬಂದಾಗ ಸಾಕಷ್ಟು ನೀರು ಬೀದಿಗಳಲ್ಲಿ ಹೋಗುತ್ತದೆ. ಬೀದಿಯಲ್ಲಿ ನೀರು ಹರಿದು ಬರುವುದರಿಂದ ಜನರಿಗೆ ತೊಂದರೆಯಾಗುತ್ತದೆ. ಬೇರೆ ಬೇರೆ ಭಾಗಗಳಿಂದ ಜನರು ಬಸವಕಲ್ಯಾಣಕ್ಕೆ ಬರುತ್ತಾರೆ. ಅದು ಒಂದು ಪ್ರವಾಸಿ ಕೇಂದ್ರವಾಗಿದೆ. ಬಸವಕಲ್ಯಾಣಕ್ಕೆ ಸಂಪರ್ಕವಾದ ರಸ್ತೆಯಿಲ್ಲ, ಸಮರ್ಪಕವಾದ ದಾರಿದೀಪವಿಲ್ಲ. ನಗರಾಭಿವೃದ್ಧಿ ಸಚಿವರು ಬಹಳ ಕಾಳಜಿ ವಹಿಸಿ ಸಣ್ಣಪುಟ್ಟ ಸಮಸ್ಯೆಗಳು ಏನೇ ಇದ್ದರೂ ಅವುಗಳನ್ನು ಬದಿಗೊತ್ತಿ ಬಸವಕಲ್ಯಾಣಕ್ಕೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು. ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಿ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ವಿಚಾರಗಳನ್ನು ನನ್ನ ಮತದಾರ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಹೇಳಿದ್ದೇನೆ ನನ್ನ ಕ್ಷೇತ್ರವಾದ ಬಸವಕಲ್ಯಾಣಕ್ಕೆ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮತ್ತೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಸವಕಲ್ಯಾಣದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ನೂರು ಮನೆಗಳನ್ನು ಕಟ್ಟುವ ಯೋಜನೆ ಇದೆ ಬಾಕಿ ಯೋಜನೆಯಿಂದ ೧೦೦೦ ಮನೆಗಳನ್ನು ಕಟ್ಟುವ ಯೋಜನೆ ಇದೆ. ಕಳೆದ ಎರಡು ವರ್ಷಗಳಿಂದ ಸಮರ್ಪಕವಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಗೃಹನಿರ್ಮಾಣ ಮಂಡಳಿಯವರು ಮನೆಗಳನ್ನು ಸರಿಯಾದ ರೀತಿಯಲ್ಲಿ ಕಟ್ಟಲಿಕ್ಕೆ ಆಗುತ್ತಿಲ್ಲ. ಈ ಬಗ್ಗೆ ಎರಡು ಮೂರು ಪತ್ರಗಳನ್ನು ಗೃಹನಿರ್ಮಾಣ ಮಂಡಳಿ ಕಮೀಷನರ್ ರವರಿಗೆ ಬರೆದಿದ್ದೇನೆ. ಸರಿಯಾದ ರೀತಿಯಲ್ಲಿ ಮನೆಗಳನ್ನು ಕಟ್ಟಿ ಜನರಿಗೆ ಕೊಡಿರಿ ಎನ್ನುವ ಮಾತನ್ನು ಹೇಳಿದರೂ ಕೂಡ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಮುಖ್ಯ ಇಂಜಿನಿಯರ್ ರವರಿಗೆ ಪತ್ರ ಬರೆದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಬಸವಕಲ್ಯಾಣದಲ್ಲಿ ಕಟ್ಟಿರುವಂತಹ ಮನೆಗಳು ಕಳಪೆ ಮನೆಗಳಾಗಿವೆ. ಆ ಮನೆಗಳಲ್ಲಿ ಜನರು ವಾಸ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆ ಇಂತಹ ಮನೆಗಳನ್ನು ಕಟ್ಟುತ್ತೀರಿ ಅಂದರೆ ಎಸ್ಟಿಮೇಟ್ ಬಹಳ ಕಡಿಮೆ ಇದೆ ನಾವೇನು ಮಾಡೋಣವೆಂದು ಅಧಿಕಾರಿಗಳು ಹೇಳುತ್ತಾರೆ. ಎಸ್ಟಿಮೇಟ್ ೧ಲಕ್ಷ ಮಾಡಿದ್ದರೂ ಜನರು ಮನೆಗಳನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಉತ್ತಮ ರೀತಿಯ ಕಟ್ಟಡಗಳನ್ನು ಕಟ್ಟಿಸಿ ಜನರಿಗೆ ಮನೆಗಳನ್ನು ಕೊಡುವಂತಹದ್ದು ನಿಮ್ಮ ಕರ್ತವ್ಯವಾಗಿದೆ.

೩-೨೦ ಪಿ.ಎಂ.

ಈ ದಿಸೆಯಲ್ಲಿ ನಿಮ್ಮ ಅಧಿಕಾರಿಗಳ ಜೊತೆಯಲ್ಲಿ ಹೆಚ್ಚಿನ ವಿಚಾರಗಳನ್ನು ನೀಡಿ ಉತ್ತಮವಾದ ಮನೆಗಳನ್ನು ಕಟ್ಟಿಕೊಡಲಿಕ್ಕೆ ತಾವು ಸಹಾಯ ಮಾಡಬೇಕೆಂಬ ಮಾತನ್ನು ಈ ಒಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಳಚರಂಡಿ ಯೋಜನೆಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಬಸವಕಲ್ಯಾಣದಲ್ಲಿ ಸುಮಾರು ೪೧ ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಕೊಟ್ಟು ಸರ್ವೆ ನಂಬರುಗಳನ್ನು ಖರೀದಿ ಮಾಡಿಕೊಂಡು ಈಗಾಗಲೇ ಅಧಿಕಾರಿಗಳು ಬೆಂಗಳೂರಿನಿಂದ ಬಂದು ಹೋಗಿದ್ದಾರೆ. ಬೆಂಗಳೂರಿನಿಂದ ಬಂದು ಸ್ಥಳ ಪರಿಶೀಲನೆ ಮಾಡಿ ಸುಮಾರು ಇನ್ನೂರು ಮನೆಗಳನ್ನು ಕಟ್ಟುತ್ತೇವೆ ಎಂಬ ಮಾತನ್ನು ಹೇಳಿಹೋಗಿದ್ದಾರೆ, ಅದನ್ನು ಕೂಡ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ೪೦ ಲಕ್ಷ ಖರ್ಚು ಮಾಡತಕ್ಕಂಥ ಯೋಜನೆಯನ್ನು ತಯಾರು ಮಾಡಬೇಕೆಂದು ಮುನಿಸಿಪಾಲಿಟಿ ನಗರಸಭೆಯವರು, ಬಸವಕಲ್ಯಾಣ ಪುರಸಭೆಯವರು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಈ ಯೋಜನೆಯನ್ನು ಕೂಡ ಕೈಗೆ ತೆಗೆದುಕೊಂಡು ಮನೆಗಳನ್ನು ಕಟ್ಟುವಂಥ ಕಾರ್ಯಕ್ರಮ ಏನಿದೆ. ನಮ್ಮ ಮತಕ್ಷೇತ್ರಕ್ಕೆ ಅದನ್ನು ಕೊಡಬೇಕೆಂಬ ಮಾತನ್ನು ಕೂಡ

ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ದಿವಸ ಹುಡ್ಕೋ ಮನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟುತ್ತಿದ್ದೀರಿ. ಆದರೆ ಈ ಮನೆಗಳನ್ನು ಸಮರ್ಪಕವಾದ ರೀತಿಯಲ್ಲಿ ಕಟ್ಟಲಿಕ್ಕೆ ಆಗುತ್ತಿಲ್ಲ. ಅಧಿಕಾರಿಗಳು ಇವತ್ತು ನಾಲ್ಕು ಸಾವಿರಕ್ಕೆ ಕಟ್ಟಬೇಕೆಂದು ಇದ್ದದ್ದು ೬ ಸಾವಿರ ಆಗುತ್ತದೆ ಎಂದು ಸ್ವಲ್ಪ ಹೆಚ್ಚಿಗೆ ಅಂದಾಜು ಮಾಡಿದರೂ ಪರವಾಗಿಲ್ಲ. ಆದರೆ ಉತ್ತಮವಾದ ಕಟ್ಟಡಗಳನ್ನು ನಿರ್ಮಾಣ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಒಂದು ಮಾದರಿಯಾದ ಸರ್ಕಾರ ರಚನೆ ಮಾಡುವುದಕ್ಕೆ ತಾವು ಸಹಾಯ ಮಾಡಬೇಕು. ತಾವು ಹಿರಿಯ ಸಚಿವರಾಗಿ ಕೆಲಸ ಮಾಡುತ್ತಿದ್ದೀರಿ. ಈ ಒಂದು ಸಂದರ್ಭದಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷವಾಗಿ ಬೀದರ್ ಬಸವ ಕಲ್ಯಾಣ ಮತ್ತು ನಮ್ಮ ಭಾರತಿ ಪಟ್ಟಣಕ್ಕೆ ಏನು ಸಮಸ್ಯೆಗಳು ಇವೆ, ಆ ಸಮಸ್ಯೆಗಳನ್ನು ಯಾವಾಗಲೂ ತಮ್ಮ ಮುಖಾಂತರ ಹೇಳುವುದಕ್ಕೆ ಆಗುವುದಿಲ್ಲ. ತಾವು ಪದೇಪದೇ ಭೇಟಿಕೊಟ್ಟು ಪರಿಶೀಲನೆ ಮಾಡಿ ಅಗತ್ಯವಾದ ಏನೇನು ಕಾರ್ಯಕ್ರಮಗಳಿವೆ, ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ನಿವೇಶನಗಳನ್ನು ಕೊಡುವಂಥ ಮತ್ತು ಮನೆಗಳನ್ನು ಕೊಡುವಂಥ ಕಾರ್ಯಕ್ರಮಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಾವು ಮಾಡುತ್ತಿದ್ದೀರಿ. ಆದರೆ ಇದು ಜನರಿಗೆ ಹೋಗಿ ಮುಟ್ಟುತ್ತಿಲ್ಲ. ನಾನು ಹೇಳುವುದೇನೆಂದರೆ ನಿಸ್ವಾರ್ಥವಾಗಿ ಸೇವೆ ಮಾಡುವ ಮನೋಭಾವ ನಮ್ಮ ಅಧಿಕಾರಿಗಳಲ್ಲಿ ಬರಬೇಕು ತಾವು ತಮ್ಮ ಅಧಿಕಾರಿಗಳಿಗೆ ಈ ರೀತಿಯಾಗಿ ಆದೇಶ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದಕ್ಕಾಗಿ ಟೈಮ್ ಬೌಂಡ್ ಪ್ರೋಗ್ರಾಮ್‌ನ್ನು ಫಿಕ್ಸ್ ಮಾಡಬೇಕು ಬಹಳಷ್ಟು ಜನರಿಗೆ ೪೦ ವರ್ಷಗಳಾದರೂ ಕೂಡ ನಿವೇಶನ ಇಲ್ಲ, ಮನೆ ಇಲ್ಲ. ಬಹಳಷ್ಟು ಜನರಿಗೆ ನಿವೇಶನ ಇಲ್ಲ, ಮನೆ ಇಲ್ಲ. ನಾನು ಅಲ್ಲಿಗೆ ಹೋದ ಬಹಳಷ್ಟು ಸಂದರ್ಭಗಳಲ್ಲಿ ಮನೆಯಾದರೂ ಕೊಡಿಸಿ, ನಿವೇಶನವಾದರೂ ಕೊಡಿಸಿ ಎಂದು ಜನರು ಕೇಳುತ್ತಿದ್ದರೂ ಕೂಡ, ಇವತ್ತು ನಾವು ಅವರಿಗೆ ನಿವೇಶನಗಳನ್ನು ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ವೆನಂಬರುಗಳನ್ನು ಟೌನ್‌ಪ್ಲಾನಿಂಗ್‌ನವರು ಗ್ರಾಂಟ್ ಮಾಡಿಕೊಂಡು ಬೇರೆ ಸಂಘಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಈ ರೀತಿಯಾದ ಕಾರ್ಯಕ್ರಮದಿಂದ ಜನರಿಗೆ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡಿಕೊಡಲು ನಮಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರದ ಯೋಜನೆಗಳು ಏನಿವೆ, ಕಾರ್ಯಕ್ರಮಗಳು ಏನಿವೆ, ಅವುಗಳನ್ನು ಚಾಚೂತಪ್ಪದ ರೀತಿಯಲ್ಲಿ ಮಾಡಲಿಕ್ಕೆ ತಮ್ಮ ಅಧಿಕಾರಿಗಳ ಮೇಲೂ ಕೂಡಾ ಸಾಕಷ್ಟು ಜವಾಬ್ದಾರಿ ಇದೆ. ಇದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಹೆಚ್ಚಿನ ಆಸಕ್ತಿ ವಹಿಸಬೇಕು. ಏಕೆಂದರೆ ಅವರು ಮಾನ್ಯ ವೀರೇಂದ್ರಪಾಟೀಲರಿಗೆ ಬಹಳ ಬೇಕಾದ ಮಂತ್ರಿಗಳು ಆಗಿದ್ದಾರೆ.

ಉಪಾಧ್ಯಕ್ಷರು.—ನೀವು ಬೇಗ ಮುಗಿಸಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಇನ್ನು ಬಸವಕಲ್ಯಾಣ, ಬೀದರ್ ಪಟ್ಟಣಕ್ಕೆ ನೀರಿನ ವ್ಯವಸ್ಥೆ ಏನಿದೆ, ಇಲಾಖೆಗೆ ಸಂಬಂಧಪಟ್ಟಂತೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅವುಗಳನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಬೇಕು. ಕೊನೆಯದಾಗಿ ಬುಡಕಟ್ಟು ಉಪಯೋಜನೆ ಮೇರೆಗೆ ವಸತಿ ಯೋಜನೆಯ ಕಾರ್ಯಕ್ರಮವನ್ನು ತಂದಿದ್ದಾರೆ. ಇಡೀ ರಾಜ್ಯದಲ್ಲಿ ೧೭೫ ತಾಲ್ಲೂಕುಗಳ ಪೈಕಿ ೫ ತಾಲ್ಲೂಕುಗಳಲ್ಲಿ ಮಾತ್ರ ಈ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಇದರ ಪ್ರಕಾರ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುವುದು, ಏನೆಂದರೆ, ಈ ಯೋಜನೆಯ ಮೇರೆಗೆ ಬಸವಕಲ್ಯಾಣ, ಬೀದರ್‌ನಲ್ಲಿ, ಭಾಲ್ಕಿಯಲ್ಲಿ ಕೂಡ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಈ ಭಾಗದ ಜನರಿಗೆ, ಬಡ ಜನರಿಗೆ, ಭೂಮಿ ಇಲ್ಲದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಮಂಡಿಸಲಿಕ್ಕೆ ನನಗೆ ಸಾಕಷ್ಟು ಸಮಯ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಮತ್ತು ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಕೆಲವು ಬೇಡಿಕೆಗಳನ್ನು ಈ ಸದನದಲ್ಲಿ ಏನು ಮಂಡಿಸಿದ್ದಾರೆ ಅದನ್ನು ಸ್ವಾಗತಿಸುತ್ತಾ ನನ್ನ ಕ್ಷೇತ್ರದಜನರು ಏನು ಕೆಲವು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಅದನ್ನು ನಮ್ಮ ನೆಚ್ಚಿನ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಚಿಕ್ಕಮಗಳೂರು ಪಟ್ಟಣದಲ್ಲಿ ೧೯೮೭ ಮತ್ತು ೧೯೮೮ರಲ್ಲಿ ಬಡ ಜನರಿಗಾಗಿ ಮನೆ ನಿವೇಶನಗಳನ್ನು ಕೊಡಲಾಗಿತ್ತು, ಅದರ ಜೊತೆಗೆ ಪುರಸಭೆ ವತಿಯಿಂದ ಈ ಬಡ ಜನರಿಗೆ ಹಕ್ಕುಪತ್ರಗಳನ್ನು ಸಹ ಕೊಡಲಾಗಿತ್ತು. ಪುರಸಭೆಯ ವತಿಯಿಂದ ೩೦೦ ಬಡ ಜನರಿಗೆ ಈ ಸೈಟುಗಳನ್ನು ಕೊಟ್ಟಿದ್ದನ್ನು ನಮ್ಮ ಸರ್ಕಾರದ ಗಮನಕ್ಕೆ ತಂದಾಗ ಇವತ್ತಿನವರೆಗೆ ಸಹ ಸರ್ಕಾರ ತನ್ನ ಅನುಮತಿಯನ್ನು ಕೊಟ್ಟಿಲ್ಲ ಹಾಗೂ ಅನುಮೋದನೆಯನ್ನು ಕೊಟ್ಟಿರುವುದಿಲ್ಲ. ನಮ್ಮ ನೆಚ್ಚಿನ ಮಂತ್ರಿಗಳು

ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಟ್ಟು ಉಪಕಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಜೊತೆಗೆ ಹಿಂದಿನ ವರ್ಷಗಳಲ್ಲಿ ಬಹಿರಂಗವಾಗಿ ಹರಾಜು ಮೂಲಕ ಮಾಡಿದಂಥ ಅನೇಕ ನಿವೇಶನಗಳನ್ನು ಸಾರ್ವಜನಿಕರು ಕೊಂಡುಕೊಂಡಿದ್ದಾರೆ. ಹರಾಜಿನಲ್ಲಿ ಕಟ್ಟುವಂಥ ಹಣವನ್ನೂ ಸಹ ನಮ್ಮ ನಗರಸಭೆಗೆ ಕಟ್ಟಿರುತ್ತಾರೆ. ಈ ಬಹಿರಂಗ ಹರಾಜಿಗೆ ಸಂಬಂಧಪಟ್ಟ ಕಡತವನ್ನು ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆ. ಒಂದು ವರ್ಷವಾದರೂ ಸರ್ಕಾರದ ಅನುಮತಿ ಬಾರದೇ ಹಾಗೆಯೇ ಉಳಿದಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು, ದಯಮಾಡಿ ತಾವು ಅಧಿಕಾರಿ ವರ್ಗದವರಿಗೆ ಸೂಕ್ತ ಆದೇಶ ಕೊಟ್ಟು, ಈ ಕಡತವನ್ನು ವಿಲೇವಾರಿ ಮಾಡಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರ ಎಂದರೆ ೧೯೭೬–೭೭ನೇ ಇಸವಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕೆಂದು ನಗರಸಭೆಯವರು ಕೇಳಿಕೊಂಡಿದ್ದು ಜೊತೆಗೆ ಸರ್ಕಾರದವರೂ ಸಹ ಇದಕ್ಕೆ ಅಪ್ಪಣೆಯನ್ನು ಕೊಟ್ಟಿರುತ್ತಾರೆ. ೧೯೭೬–೭೭ನೇ ಇಸವಿಯಲ್ಲಿ ಇದರ ವೆಚ್ಚ ೪೫ ಲಕ್ಷ ರೂಪಾಯಿ ಎಂದು ಹೇಳಿ ಅಂದಾಜು ಪಟ್ಟಿಯನ್ನು ನಮ್ಮ ಪುರಸಭೆಯವರಿಗೆ ಕಳುಹಿಸಿಕೊಡಲಾಗಿತ್ತು, ನಮ್ಮ ಪಟ್ಟಣದ ಜನಸಂಖ್ಯೆ ಆ ಕಾಲದಲ್ಲಿ ೫೫-೬೦ ಸಾವಿರ ಇತ್ತು. ಆದರೆ ಇವತ್ತಿಗೂ ಈ ಒಳಚರಂಡಿ ವ್ಯವಸ್ಥೆಯನ್ನು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಈ ಕೆಲಸ ಪೂರೈಸುವುದಕ್ಕೆ ಇವತ್ತು ೧೧೪ ಲಕ್ಷದಿಂದ ೧೨೦ ಲಕ್ಷ ಆಗುತ್ತದೆ ಎಂದು ಕೇಳಿ ಬರುತ್ತಿದೆ. ಜೊತೆಗೆ ಇವತ್ತು ನಮ್ಮ ಪಟ್ಟಣದಲ್ಲಿರುವಂಥ ಮನೆಗಳು ೫,೬೦೦ ರಿಂದ ೬,೦೦೦ ಮನೆಗಳು ಇವೆ. ಅರ್ಧ ಭಾಗದಷ್ಟು ನಗರಕ್ಕೆ ಇದರ ಪ್ರಯೋಜನವಾಗಿದೆ. ಇನ್ನು ಉಳಿದ ಅರ್ಧ ಭಾಗಕ್ಕೆ ಇದರ ಪ್ರಯೋಜನವಾಗಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಕೊಟ್ಟು ಮುಂದಿನ ವರ್ಷಗಳಲ್ಲಿ ನಮ್ಮ ಪಟ್ಟಣಕ್ಕೆ ಈ ಸೌಲಭ್ಯವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದು ಹೇಳಿದರೆ, ನಮ್ಮ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ವಿಚಾರ, ನಮ್ಮ ಪಟ್ಟಣದಲ್ಲಿ ಯಾವ ಯಾವ ಏರಿಯಾ ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೆ ಸೇರಿಸಿದ್ದಾರೆ ಎಂದು ಅಂದಾಜು ಸಹ ನಾನು ಒಬ್ಬ ಶಾಸಕನಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ೫-೬ ವರ್ಷದ ಹಿಂದೆ ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಮಾಡಿದಾಗ ೩ ೧/೨ ಲಕ್ಷ ರೂಗಳ ವೆಚ್ಚದಲ್ಲಿ ಕೆಲವೊಂದು ಏರಿಯಾಕ್ಕೆ ಡ್ರೈನ್ ಮಾಡುವುದನ್ನು ಬಿಟ್ಟರೆ, ಬೇರೆ ಯಾವ ಏರಿಯಾಕ್ಕೂ ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನ ಒಂದು ಆಶೀರ್ವಾದ ಆಗಿಲ್ಲ. ಆದ್ದರಿಂದ ಇನ್ನು ಮುಂದಾದರೂ ಈ ಬೋರ್ಡಿನಿಂದ ನಮ್ಮ ಪಟ್ಟಣದಲ್ಲಿರುವ ಎಲ್ಲಾ ಏರಿಯಾಕ್ಕೂ ಅನುಕೂಲ ಮಾಡಿಕೊಡುತ್ತೀರಿ ಎಂಬ ಭಾವನೆ ನನ್ನ ಮನಸ್ಸಿನಲ್ಲಿದೆ. ಜೊತೆಗೆ ಮಾನ್ಯ ಮಂತ್ರಿಗಳು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಅನೇಕ ಕಡೆ ಅನ್ ಅಥರೈಸ್ಡ್ ಮನೆ ಕಟ್ಟಡಗಳು ಬರುತ್ತಿವೆ ಎಂದು ಶಾಸನ ಸಭೆಯಲ್ಲಿ ಅನೇಕ ಜನ ಶಾಸಕರು ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ನಮ್ಮ ಚಿಕ್ಕಮಗಳೂರು ಮುನಿಸಿಪಾಲಿಟಿಯಲ್ಲಿ ನೋಟಿಫೈಡ್ ಏರಿಯಾ ೫ ಕಿಲೋಮೀಟರ್ ವ್ಯಾಪ್ತಿ ಎಂದು ಕೇಳಿಬರುತ್ತಿದೆ. ಈ ನೋಟಿಫೈಡ್ ಏರಿಯಾ ಸರ್ಕಾರದ ವತಿಯಿಂದಾಗಲೀ, ಅಥವಾ ನಮ್ಮ ಮುನಿಸಿಪಾಲಿಟಿಯಿಂದಾಗಲೀ ಡೀಮಾರ್ಕೇಷನ್ ಆಗಿಲ್ಲವೆಂದು ನಾನು ಭಾವಿಸುತ್ತೇನೆ ಆದಕಾರಣ ಈ ೫ ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವಂಥ ಜಾಗದಲ್ಲಿ ಅನೇಕ ಅನ್ ಅಥರೈಸ್ಡ್ ಮನೆಗಳು ಬರುತ್ತಿವೆ. ಬಹುಶಃ ಇದರಿಂದ ನಮ್ಮ ನಗರಸಭೆಗೆ ಸಾಕಷ್ಟು ನಷ್ಟವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ವಿಚಾರದಲ್ಲಿ ಸಹ ಮಾನ್ಯ ಮಂತ್ರಿಗಳು ಸೂಕ್ತ ಆದೇಶವನ್ನು ಅಧಿಕಾರಿಗಳಿಗೆ ನೀಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಜೊತೆಗೆ ಚಿಕ್ಕಮಗಳೂರು ಪಟ್ಟಣದಲ್ಲಿ ಬಹಳಷ್ಟು ವರ್ಷಗಳಿಂದ ನೀರಿಗಾಗಿ ನಾವು ತೊಂದರೆ ಅನುಭವಿಸುತ್ತಿದ್ದೇವೆ. ಇದಕ್ಕಾಗಿ ನಮ್ಮ ನಾಗರೀಕರು ಬಹಳಷ್ಟು ಹೋರಾಟ ನಡೆಸಿದ ನಂತರ ನಮ್ಮ ಘನ ಸರಕಾರದವರು ಹೊಸಮ್ಮನಹಳ್ಳಿ ಒಂದನೇ ಮತ್ತು ಎರಡನೇ ಹಂತದ ಯೋಜನೆಗಾಗಿ ಎರಡು ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿಕೊಟ್ಟಿರುವುದಕ್ಕಾಗಿ ನನ್ನ ಪರವಾಗಿ ಹಾಗೂ ನಮ್ಮ ಪಟ್ಟಣದ ನಾಗರೀಕರ ಪರವಾಗಿ ವಂದನೆಗಳನ್ನು ಸಲ್ಲಿಸುತ್ತಾ, ನೀರಿನ ಅಭಾವದ ವಿಚಾರದಲ್ಲಿ ಕೆಲವು ಮಾತಂಗಳನ್ನು ನಮ್ಮ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಪಟ್ಟಣದಲ್ಲಿ ೫,೬೦೦ ಮನೆಗಳು ಇದ್ದು ಹೌಸಿಂಗ್ ಬೋರ್ಡ್ ವತಿಯಿಂದ ೨೫೦೦ ಮನೆಗಳನ್ನು ಕಟ್ಟುವಂತಹ ಯೋಜನೆ ನಡೆಯುತ್ತಿದೆ. ಅದರಲ್ಲಿ ಮೊದಲನೇ ಹಂತದ ಹೌಸಿಂಗ್ ಬೋರ್ಡ್ ಮನೆಗಳನ್ನು ನಮ್ಮ ಮಂಡಲ ಪಂಚಾಯುತಿಯವರಿಗೆ ವಹಿಸಿಕೊಡಲಾಗಿದೆ. ಮಂಡಲ ಪಂಚಾಯುತಿಯವರ ಹಣದ ಒಂದು ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ ೧೮೭ ಮನೆಗಳು ಏನಿದ್ದಾವೆ ಅದರಲ್ಲಿ ೮೭ ಮನೆಗಳಿಗೆ ನಾಗರೀಕ ಸೌಲಭ್ಯಗಳನ್ನು ಸರಿಯಾಗಿ ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ನಾನು ಕೇಳಿದ್ದೇನೆ. ಜೊತೆಗೆ ಮಂಡಲ ಪಂಚಾಯುತಿಗೆ ಈ ಸವಲತ್ತು

ಗಳನ್ನು ಒದಗಿಸುವ ಶಕ್ತಿ ಇಲ್ಲ. ಜೊತೆಗೆ ಅವರಿಗೆ ಹಣದ ಕೊರತೆ ಇರುವುದರಿಂದ ನಾಗರೀಕ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಆದರೂ ಸಹ ಹೇಗೆ ಕರ್ನಾಟಕ ಹೌಸಿಂಗ್ ಬೋರ್ಡಿನವರು ಈ ಮಂಡಲ ಪಂಚಾಯತಿಗೆ ಇದನ್ನು ವಹಿಸಿಕೊಟ್ಟಿದ್ದಾರೆ ಎಂಬ ಪ್ರಶ್ನೆ ನನಗೂ ತಿಳಿದು ಬಂದಿಲ್ಲ. ಇದನ್ನು ಮಂಡಲ ಪಂಚಾಯತಿಗೆ ಕೊಟ್ಟಿರುವುದರಿಂದ ಬಹಳಷ್ಟು ಜನ ಇದರಿಂದ ತೊಂದರೆ ಅನುಭವಿಸುತ್ತಿರುವುದರಿಂದ, ಕರ್ನಾಟಕ ಹೌಸಿಂಗ್ ಬೋರ್ಡಿನವರು ಇದನ್ನು ವಾಪಸ್ ತೆಗೆದುಕೊಂಡು ನಾಗರೀಕ ಸವಲತ್ತುಗಳನ್ನು ಅವರೇ ಒದಗಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಹೌಸಿಂಗ್ ಬೋರ್ಡಿನವರು ಎಂ. ಐ. ಜಿ., ಎಲ್. ಐ. ಜಿ. ಮತ್ತು ಹೆಚ್. ಐ ಜಿ ಗ್ರೂಪ್‌ಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ಒಂದು ಯೋಜನೆ ಹಾಕಿಕೊಂಡಿದ್ದರು, ಈ ಬಗ್ಗೆ ಹಿಂದಿನ ವರ್ಷಗಳಲ್ಲಿ ಇದಕ್ಕೆ ಬೆಲೆಗಳನ್ನು ನಿಗದಿ ಮಾಡಿದ್ದರು. ೧೫ ಸಾವಿರ ರೂಪಾಯಿಗಳಲ್ಲಿ ಕಟ್ಟಿಕೊಡುವ ಒಂದು ಮನೆಗೆ ಇವತ್ತು ೪೫ ಸಾವಿರ ರೂಪಾಯಿ ಆಗುತ್ತದೆಂದು ಅನೇಕ ಜನ ಮನೆಗಳಿಗಾಗಿ ಏನು ಅರ್ಜಿ ಹಾಕಿಕೊಂಡಿದ್ದರು ಅವರಿಗೆ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಅವರು ನಮಗೆ ಶಕ್ತಿ ಇಲ್ಲ, ಹಣ ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಅಡ್ವಾನ್ಸ್ ಅಂದರೆ ಮುಂಗಡವಾಗಿ ಯಾವ ಹಣ ಕಟ್ಟಿದ್ದೇವೆ, ಅದನ್ನು ಮರುಪಾವತಿ ಮಾಡಿ ಎಂದು ಒಂದು ವರ್ಷದಿಂದ ಕೇಳಿಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ ಕಚೇರಿಯಿಂದ ಆಗಲೀ ಅಥವಾ ಅಧಿಕಾರ ವರ್ಗದವರಿಂದ ಯಾವುದೇ ರೀತಿಯ ಉತ್ತರ ಬಂದಿರುವುದಿಲ್ಲ. ಆದಕಾರಣ ಈ ಹಣವನ್ನು ಮರುಪಾವತಿ ಮಾಡಿ ಎಂದು ಯಾವ ಜನರು ಕೇಳಿಕೊಂಡಿದ್ದಾರೆ, ಅವರಿಗೆ ಹಣವನ್ನು ದಯವಿಟ್ಟು ವಾಪಸ್ ಕೊಡಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಾ ಈ ಸಭೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ).—ಮಾನ್ಯ ಉಪಾಧ್ಯಕ್ಷಣಿಯವರೇ, ಸನ್ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಸದನದಲ್ಲಿ ಮಂಡಿಸಿರುವ ಬೇಡಿಕೆಯನ್ನು ಹಾರ್ದಿಕವಾಗಿ ಸ್ವಾಗತಿಸಿ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಲವಾರು ವಿಚಾರಗಳನ್ನು ಮತ್ತು ಮಾಡಬೇಕಾದಂಥ ಕಾರ್ಯಗಳನ್ನು ಹಾಗೂ ತೀವ್ರಗತಿಯಲ್ಲಿ ಆಗಬೇಕಾಗಿರುವ ವಿಚಾರಗಳನ್ನು ಈ ಸದನದ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ತಮಗೇ ತಿಳಿದಿರುವಂತೆ ನಮ್ಮ ದಾವಣಗೆರೆ ಮಹಾನಗರ ರಾಜ್ಯದ ಮುಖ್ಯ ನಗರವಾಗಿದ್ದು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ. ಅನೇಕ ಜಟಿಲ ಸಮಸ್ಯೆಗಳು ಇವತ್ತು ಎದುರಿಸುತ್ತಿದೆ. ನೀರಿನ ಸಮಸ್ಯೆ, ನಿವೇಶನಗಳ ಸಮಸ್ಯೆ, ಕಾಮಗಾರಿ ಸಮಸ್ಯೆ ಹೀಗೆ ಎಲ್ಲಾ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿ ಹಲವಾರು ವರ್ಷಗಳಿಂದ ತೊಂದರೆಗೆಈಡಾಗಿರತಕ್ಕಂಥಾದ್ದು ತಮಗೆ ತಿಳಿದೇ ಇದೆ. ಇವತ್ತಿನ ದಿವಸ ಪ್ರಥಮ ಪ್ರಾಶಸ್ತ್ಯದಿಂದ ಆಗಬೇಕಾದಂಥ ವಿಚಾರ ಎಂದರೆ ನಗರಕ್ಕೆ ಸಮಗ್ರ ನೀರು ಸರಬರಾಜು ಯೋಜನೆ. ಈ ಸಮಸ್ಯೆಯು ನಿವಾರಣೆಯಾಗಬೇಕಾಗಿದೆ, ೧೯೨೮ನೇ ಇಸವಿಯ ಜನಸಂಖ್ಯೆಗನುಗುಣವಾಗಿ ಹರಿಹರದ ಹತ್ತಿರದ ಇರುವ ತುಂಗಭದ್ರಾ ನದಿಯಿಂದ ನಗರಕ್ಕೆ ನೀರು ಸರಬರಾಜು ಆಗುತ್ತಿದ್ದು, ಇದು ೧೯೬೧ನೇ ಇಸವಿಯಲ್ಲಿ ೮೦ ಸಾವಿರ ಜನಸಂಖ್ಯೆಗೆ ಅನುಗುಣವಾಗಿ ನಗರದ ಹತ್ತಿರ ಹಾದು ಹೋಗುವ ಭದ್ರಾ ಚಾನಲ್‌ನಿಂದ ನಗರಕ್ಕೆ ಸಮಗ್ರ ನೀರು ಸರಬರಾಜು ಯೋಜನೆ ಪ್ರಾರಂಭವಾಯಿತು. ಇದು ೭೭ನೇ ಇಸವಿಯಲ್ಲಿ ಸ್ಥಾಪಿತವಾಗಿ ನಗರಕ್ಕೆ ನೀರನ್ನು ಒದಗಿಸುತ್ತಾ ಬಂದಿದೆ.

ಈಗ ನಗರ ಬಹಳ ದೊಡ್ಡದಾಗಿ ಬೆಳೆದಿದ್ದು ಜನಸಂಖ್ಯಾ ಪ್ರಮಾಣ ಕೂಡ ಮೂರೂವರೆ ಲಕ್ಷದಿಂದ ನಾಲ್ಕು ಲಕ್ಷದವರೆಗೆ ಹೆಚ್ಚಿದೆ ಈ ಜನಗಳಿಗೆ ಒದಗಿಸತಕ್ಕಂಥ ನೀರಿನ ಪ್ರಮಾಣ ಅತಿ ಕಡಿಮೆ ಆಗಿದೆ, ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ೧೯೭೭ ರಿಂದಲೂ ಇರುವಂತಹ ಒಂದು ಸಂಗತಿ ಎನ್ನುವುದು ತಮಗೆಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಭದ್ರಾ ಪ್ರಾಜೆಕ್ಟಿನ ನೀರನ್ನು ರೈತರಿಗೆ ಸಮರ್ಪಕವಾಗಿ ಪೂರೈಸಲು ಆಗದೇ ಇರುವುದರಿಂದ ಹಾಗೂ ಅದರ ಚಾನಲ್‌ನಿಂದ ಬರುವ ನೀರನ್ನು ನಗರಕ್ಕೆ ಉಪಯೋಗಿಸಿಕೊಳ್ಳತಕ್ಕಂಥದ್ದು ಒಂದು ತೊಡಕಿನ ಪ್ರಶ್ನೆಯಾಗಿದೆ. ಮತ್ತು ಸಕಾಲದಲ್ಲಿ ಮಳೆ ಬಂದು ಭದ್ರಾ ಡ್ಯಾಮ್ ತುಂಬಿ ನೀರು ಭರ್ತಿಯಾಗಿದ್ದರೆ ಮಾತ್ರ ನಗರದ ನಾಗರೀಕರಿಗೆ ನೀರು ಸರಬರಾಜು ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಇಲ್ಲದಿದ್ದರೆ ತೊಂದರೆ ತಪ್ಪಿದ್ದಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನೀರಿನ ಕೊರತೆ ತುಂಬಾ ಇದೆ. ಈ ಸಮಸ್ಯೆಯನ್ನು ಬಗೆಹರಿಸಲು ಹರಿಹರ ತುಂಗಭದ್ರಾ ನದಿಯ ನೀರನ್ನು ರಾಜನಹಳ್ಳಿ ಗುಡ್ಡದ ಮೇಲೆ ಅಂದರೆ ನ್ಯಾಷನಲ್ ರಸ್ತೆಗೆ ಬೈಪಾಸ್ ಇರುವ ಗುಡ್ಡದ ಮೇಲೆ ಒಂದು ದೊಡ್ಡ ಟ್ಯಾಂಕನ್ನು ಕಟ್ಟಿ ಆ ಟ್ಯಾಂಕ್‌ನಿಂದ ನಗರದ ನಾಗರೀಕರಿಗೆ ನೀರು ಸರಬರಾಜು ಮಾಡಿದರೆ ಮಾತ್ರ ಇನ್ನು ೨೫–೩೦ ವರ್ಷಗಳ ಕಾಲ ಎಷ್ಟೇ ಜನಸಂಖ್ಯೆ ಬೆಳೆದರೂ

ಅದಕ್ಕೆ ಅನುಗುಣವಾಗಿ ಕುಡಿಯುವ ನೀರನ್ನು ಒದಗಿಸಲು ಸಹಾಯವಾಗುತ್ತದೆ. ಈ ದೃಷ್ಟಿಯಿಂದ ಈಗಾಗಲೇ ಕುಡಿಯುವ ನೀರು ಮತ್ತು ಒಳಚರಂಡಿ ಮಂಡಲಿಯವರು ೧೩.೬೦ ಕೋಟಿ ರೂಪಾಯಿಗಳ ಒಂದು ಎಸ್ಟಿಮೇಟನ್ನು ತಯಾರಿಸಿದ್ದು, ಅದು ಕಾರ್ಯೋನ್ಮುಖ ಆಗಲು ಸರ್ಕಾರದ ಒಪ್ಪಿಗೆ ಬೇಕಾಗಿದೆ. ಮತ್ತು ಸಂಬಂಧಪಟ್ಟ ಇಲಾಖೆಯವರು ಕಾರ್ಯೋನ್ಮುಖರಾಗಲು ಕೇಳಿಕೊಂಡಿದ್ದಾರೆ. ಈ ಕೆಲಸವನ್ನು ಸನ್ಮಾನ್ಯ ಮಂತ್ರಿಗಳು ತ್ವರಿತಗತಿಯಲ್ಲಿ ಮಾಡಿಕೊಡುವ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಗರದ ಮಧ್ಯಮ ವರ್ಗ ಮತ್ತು ಸಾಮಾನ್ಯ ವರ್ಗದ ಜನರಿಗೆ ವಸತಿ ಸೌಕರ್ಯ ಬಹಳ ವರ್ಷಗಳಿಂದ ಸಿಗದೆ ತೊಂದರೆ ಪಡುತ್ತಿದ್ದಾರೆ. ಕಾರಣ ೧೯೭೪ನೇ ಇಸವಿಯಿಂದ ಅಲ್ಲಿನ ನಗರಾಭಿವೃದ್ಧಿ ಮಂಡಲಿಯವರು ಯೋಜನಾಬದ್ಧವಾದ ಮಂಡಲಿಗೆ ಅನುಗುಣವಾದ ರೀತಿಯಲ್ಲಿ ಅನೇಕ ನಿವೇಶನಗಳನ್ನು ನಗರಾಭಿವೃದ್ಧಿ ಮಂಡಲಿಯವರು ರಚಿಸಿ ಯೋಜನಾಬದ್ಧವಾದ ಬಡಾವಣೆಗಳನ್ನು ಮಾಡಿ ವಸತಿ ಸೌಕರ್ಯಕ್ಕೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ಆ ನಂತರ ೧೯೭೪ರಿಂದ ಈಚೆಗೆ ನಗರಾಭಿವೃದ್ಧಿ ಮಂಡಲಿಯ ಆಡಳಿತ ಹಿಂದೆ ಆಡಳಿತ ನಡೆಸಿದವರ ಕೈಗೆ ಸಿಕ್ಕಿದ ಮೇಲೆ, ವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಆಗಿಲ್ಲ. ಆದ್ದರಿಂದ ಜನರಿಗೆ ಬಹಳ ತೊಂದರೆಯಾಯಿತು. ಆದ್ದರಿಂದ ಕೂಡಲೇ ನಗರಾಭಿವೃದ್ಧಿ ಮಂಡಲಿಯವರು ವಸತಿ ಸೌಕರ್ಯಕ್ಕೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಂಡು ಹೆಚ್ಚಿನ ನಿವೇಶನಗಳನ್ನು ಸಾಮಾನ್ಯ ಜನರಿಗೆ ಹರಿಜನ ಮತ್ತು ಗಿರಿಜನರಿಗೆ ಅಲ್ಪಸಂಖ್ಯಾತರಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಬಹಳ ದೊಡ್ಡದಾಗಿ ಬೆಳೆದಿರತಕ್ಕಂಥ ಮಹಾನಗರದಲ್ಲಿ ಪ್ರಾಥಮಿಕ ಸೌಲಭ್ಯಗಳನ್ನು ಮತ್ತು ಅವರಿಗೆ ಬೇಕಾದಂತಹ ಅವಶ್ಯಕ ಸೌಲಭ್ಯಗಳನ್ನು ಒದಗಿಸಿ ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಈ ಮಹಾನಗರದಲ್ಲಿ ಈ ಸೌಲಭ್ಯಗಳ ಅವಶ್ಯಕತೆ ಇರುವುದರಿಂದ ಇದನ್ನೆಲ್ಲಾ ಒದಗಿಸಲು ನಮ್ಮ ಸನ್ಮಾನ್ಯ ಸಚಿವರು ಕಾರ್ಯೋನ್ಮುಖರಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಹೇಳುವುದಾದರೆ ಸುಮಾರು ೧೦-೧೫ ವರ್ಷಗಳಿಂದ ರಸ್ತೆಗಳು ರಿಪೇರಿ ಆಗದೆ ಒಳಚರಂಡಿ ಯೋಜನೆ ಕೂಡ ತುಂಬಾ ಶಿಥಿಲ ಪರಿಸ್ಥಿತಿಯಲ್ಲಿ ಇದೆ. ದಾವಣಗೆರೆ ಮಹಾನಗರದಲ್ಲಿ ನಾಲ್ಕು ಲಕ್ಷಕ್ಕೂ ಜಾಸ್ತಿ ಜನಸಂಖ್ಯೆ ಇದೆ. ಅಲ್ಲಿ ಇರತಕ್ಕಂಥ ಒಳಚರಂಡಿ ವ್ಯವಸ್ಥೆ ಬಹಳ ಕಡಿಮೆ. ಅಲ್ಲಿ ಒಳಚರಂಡಿ ವ್ಯವಸ್ಥೆ ಎಲ್ಲಾ ಶಿಥಿಲಗೊಂಡು ಆ ನೀರು ರಸ್ತೆಗಳ ಮೇಲೆ ಬಂದು ಗಲೀಜು ನೀರು ಮಹಾನಗರದ ರಸ್ತೆಗಳಲ್ಲಿ ಹರಿದು ನೋಡಲಾಗದಂತಹ ಶೋಚನೀಯವಾದ ಪರಿಸ್ಥಿತಿಗೆ ಬಂದಿದೆ. ಈ ವಿಚಾರವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇನ್ನು ಹೊಸ ಬಡಾವಣೆಗಳಿಗೆ ಸರಿಯಾದ ದೀಪದ ವ್ಯವಸ್ಥೆ ಇಲ್ಲ. ಸಾರಿಗೆ ವ್ಯವಸ್ಥೆ ಇಲ್ಲ. ಇವೆಲ್ಲಕ್ಕಿಂತ ಹೆಚ್ಚು ನೀರಿನ ವ್ಯವಸ್ಥೆ ಆಗಿಲ್ಲ. ದಾವಣಗೆರೆ ಮಹಾ ನಗರದಲ್ಲಿ ನೀರಿನ ಪೈಪ್‌ಗಳು ೧೯೩೦ನೇ ಇಸವಿಯಲ್ಲಿ ಹಾಕಿರುವುದು. ಇದರಿಂದ ನೀರಿನ ಸರಬರಾಜು ಆ ಹಳೆಯ ಪೈಪ್‌ಗಳಲ್ಲಿ ಇವತ್ತಿಗೂ ಸರಬರಾಜು ಆಗುತ್ತಿದೆ. ಅಲ್ಲಿ ಹೊಸ ವ್ಯವಸ್ಥೆ ಆಗಿಲ್ಲ ಹಳೆಯ ಪೈಪ್‌ಗಳಲ್ಲಿ ನೀರು ಸರಬರಾಜು ಮಾಡುವುದರಿಂದ ಎಲ್ಲಾದರೂ ಒಂದು ಕಡೆ ಪೈಪ್ ಒಡೆದು ಹೋದರೆ ಆ ಪೈಪ್‌ಗಳಲ್ಲಿ ಗಲೀಜು ನೀರು ತುಂಬಿಕೊಂಡು ಕೊಳೆ ನೀರು ದಾವಣಗೆರೆ ಮಹಾನಗರಕ್ಕೆ ಸರಬರಾಜು ಆಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ತಕ್ಷಣ ಹೊಸ ಪೈಪ್‌ಗಳನ್ನು ಅಳವಡಿಸಿ ನೀರಿನ ಸರಬರಾಜು ಮಾಡಬೇಕು, ಅಲ್ಲಿನ ಅವಶ್ಯಕತೆಯನ್ನು ಮಾನ್ಯ ಮಂತ್ರಿಗಳು ಅರಿತುಕೊಂಡು ಬೇಗ ಈ ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ನಾಲ್ಕಾರು ನಗರಸಭೆಗಳು ಇವೆ. ಅದರಲ್ಲಿ ದಾವಣಗೆರೆ ಮಹಾನಗರ ಸಹ ಒಂದು. ಈ ಮಹಾನಗರ ಸಭೆಯ ಆದಾಯ ದಿನೇ ದಿನೇ ಹೆಚ್ಚಾಗುತ್ತಿದೆ. ಆದಾಗೂ ಕೂಡ ಹಿಂದೆ ಆಡಳಿತ ಮಾಡಿರತಕ್ಕಂಥವರ ದುರಾಡಳಿತದಿಂದ ಅಲ್ಲಿ ಪರಿಸ್ಥಿತಿ ಸ್ವಲ್ಪ ಕೆಟ್ಟಿದೆ. ಹಿಂದೆ ಆಕ್ಟ್ರಾಯ್ ಏನು ಬರುತ್ತಿತ್ತು, ಅದನ್ನು ಅನುಸರಿಸಿ ಸರ್ಕಾರ ಅನುದಾನ ಕೊಡುತ್ತಿತ್ತು, ನಂತರ ಅಲ್ಲಿ ಬರತಕ್ಕಂಥ ಆದಾಯ ಮತ್ತು ಆಗತಕ್ಕಂಥ ವೆಚ್ಚವನ್ನು ನೋಡಿಕೊಂಡು ಅವರಿಗೆ ಅನುದಾನ ಕೊಡುತ್ತಿದ್ದರು. ಸರ್ಕಾರದವರು ಈಗ ಏನು ಅನುದಾನ ಕೊಡುತ್ತಾರೆ ಆ ಹಣ ನಾಗರೀಕರ ಪ್ರಾಥಮಿಕ ಸೌಲಭ್ಯಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆದಾಯ ಹೆಚ್ಚು ಬಂದಂತೆ ಅನುದಾನವನ್ನು ಸಹ ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ದಾವಣಗೆರೆ ನಗರದಲ್ಲಿ ಸುಮಾರು ೩೬ ಕೊಳಚೆ ಪ್ರದೇಶಗಳು ಇವೆ. ಇಲ್ಲಿ ಬಡವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ವರ್ಗದ ಜನರು ವಾಸ ಮಾಡುತ್ತಿದ್ದಾರೆ. ಈ ಕೊಳಚೆ ಪ್ರದೇಶಗಳು ಬಹಳ ತಗ್ಗಿನ ಪ್ರದೇಶಗಳಲ್ಲಿರುವುದರಿಂದ ಮಳೆಗಾಲದಲ್ಲಿ ಮಳೆ ಬಂದಾಗ ನೀರು ಕೊಳಚೆ ಪ್ರದೇಶಗಳಲ್ಲಿ ನಿಂತುಕೊಂಡು ಜನರ ಜೀವನ ಸ್ಥಿತಿ ಬಹಳ ಹೀನಾಯ ಪರಿಸ್ಥಿತಿಯಾಗುತ್ತದೆ. ಕೊಳಚೆ ಪ್ರದೇಶಗಳನ್ನು ಸುಧಾರಣೆ ಮಾಡಬೇಕಾದುದು ಸರ್ಕಾರದ ಮತ್ತು ನಮ್ಮೆಲ್ಲರ ಕರ್ತವ್ಯ ಆಗಿದೆ. ಆದ್ದರಿಂದ ಸರ್ಕಾರವು

ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಕೊಳಚೆ ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳನ್ನು ಮಾಡಿಸಬೇಕು ಮತ್ತು ನೀರಿನ ವ್ಯವಸ್ಥೆಯನ್ನು ಒದಗಿಸಬೇಕು. ಕೊಳಚೆ ಪ್ರದೇಶಗಳು ಇರುವ ಜಾಗದಲ್ಲಿ ಹುಡ್ಕೋ ನೆರವಿನಿಂದ ಮನೆಗಳನ್ನು ಕಟ್ಟಿಸಿ ಅಲ್ಲಿ ವಾಸ ಮಾಡತಕ್ಕ ಬಡ ಜನರಿಗೆ ಕೊಟ್ಟು ಅವರೂ ಸಹ ಉತ್ತಮ ರೀತಿಯಲ್ಲಿ ವಾಸ ಮಾಡುವುದಕ್ಕೆ ಅವಕಾಶ ವನ್ನು ಮಾಡಿಕೊಡಬೇಕು. ಖಾಯಂ ಆಗಿ ವಸತಿಗಳನ್ನು ಅವರಿಗೆ ಮಾಡಿಕೊಟ್ಟರೆ ಅವರೂ ಸಹ ಬೇರೆ ಯವರಂತೆ ಬಾಳುವುದಕ್ಕೆ ಸಹಾಯವಾಗುತ್ತದೆ. ಕೊಳಚೆ ಪ್ರದೇಶಗಳು ಇರುವ ಕಡೆ ಸರ್ಕಾರದವರು ಮನೆಗಳನ್ನು ಕಟ್ಟಿಸಿ ಕೊಡುವ ಯೋಜನೆಗಳನ್ನು ಮಾಡಿದರೆ ಕೊಳಚೆ ಪ್ರದೇಶಗಳು ಇಲ್ಲದ ಹಾಗೆ ಆಗುತ್ತವೆ. ಅಲ್ಲಿರುವ ಜನರ ಜೀವನದ ವ್ಯವಸ್ಥೆಯನ್ನು ಒದಗಿಸಿ ಸುಧಾರಣೆ ಮಾಡಲಿಕ್ಕಾದರೂ ಈ ರೀತಿಯಾದ ಉತ್ತಮ ಕೆಲಸಗಳನ್ನು ಮಾಡಬೇಕು. ಆಮೇಲೆ ದಾವಣಗೆರೆ ನಗರಸಭೆಯಲ್ಲಿ ೧೯೮೪ ರಿಂದ ೧೯೮೯ ರವರೆಗೂ ಆಡಿಟ್ ವರದಿ ಸಮರ್ಪಕವಾಗಿಲ್ಲ. ೧೯೮೯ರವರೆಗೆ ಜನತಾ ಪಕ್ಷದವರು ಮತ್ತು ಕಮ್ಯೂನಿಸ್ಟ್ ಪಕ್ಷದವರು ಒಟ್ಟಾಗಿ ಸೇರಿಕೊಂಡು ಹೊಂದಾಣಿಕೆಯಿಂದ ನಗರ ಸಭೆಯ ಆಡಳಿತ ವನ್ನು ಮಾಡುವ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳ ಅನ್ಯಾಯ ಹಾಗೂ ಅವ್ಯವಹಾರ ಮಾಡುವುದರ ಮೂಲಕ ಹಣವನ್ನು ಪೋಲು ಮಾಡಿದ್ದಾರೆ. ಇದೆಲ್ಲಾ ಆಡಿಟ್‌ನವರ ಆಡಳಿತ ವರದಿ ಯಲ್ಲಿ ಮಾಡಿರುವ ಅವ್ಯವಹಾರವನ್ನು ನಾನು ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಆದ್ದರಿಂದ ಯಾರು ಈ ರೀತಿ ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕೋಟ್ಯಾಂತರ ರೂಪಾಯಿಗಳ ವ್ಯತ್ಯಾಸವಾದರೂ ಈವರೆಗೆ ಸಂಬಂಧಪಟ್ಟ ಇಲಾಖೆಯವರು ಯಾವ ಕ್ರಮವನ್ನೂ ಇದುವರೆಗೆ ಜರುಗಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಈ ದೃಷ್ಟಿಯಿಂದ ಈ ಬಗ್ಗೆ ಪರಿಶೀಲನೆ ಮಾಡಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಗರಸಭೆ ವ್ಯಾಪ್ತಿಯಲ್ಲಿ ಬರತಕ್ಕ ರೆವಿನ್ಯೂ ಜಾಗಗಳಲ್ಲಿ ಅನಧಿಕೃತವಾದ ಕಟ್ಟಡಗಳು ದಾವಣಗೆರೆ ನಗರದಲ್ಲಿ ಬರುತ್ತಿವೆ. ಸುಮಾರು ೧೦ ಸಾವಿರಕ್ಕೂ ಹೆಚ್ಚು ಅನಧಿಕೃತ ಮನೆಗಳು ರೆವಿನ್ಯೂ ಜಾಗದಲ್ಲಿ ಬರುತ್ತಿವೆ. ರೆವಿನ್ಯೂ ಜಾಗದಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿರುವವರಿಗೆ ಕಂದಾಯವನ್ನು ಫಿಕ್ಸ್ ಮಾಡುವ ಬಗ್ಗೆ ಒಂದು ತೀರ್ಮಾನವನ್ನು ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾಡಲಾಗಿದ್ದ ಈ ಸಮಿತಿಯು ಇದುವರೆಗೆ ಯಾವ ತೀರ್ಮಾನವನ್ನೂ ಮಾಡಿಲ್ಲ. ವ್ಯವಸ್ಥಿತವಾಗಿ ಅನಧಿಕೃತ ಮನೆಗಳಿಗೆ ಕಂದಾಯವನ್ನು ವಿಧಿಸಿದರೆ ಲಕ್ಷಾಂತರ ರೂಪಾಯಿಗಳ ಆದಾಯ ನಗರಸಭೆಗೆ ಬರುತ್ತದೆ. ಆದುದರಿಂದ, ಈ ಬಗ್ಗೆ ಅಂದರೆ ಅನಧಿಕೃತವಾಗಿ ದಾವಣಗೆರೆಯಲ್ಲಿ ಮನೆಗಳನ್ನು ಕಟ್ಟಿರುವವರ ಮೇಲೆ ಕಂದಾಯವನ್ನು ಫಿಕ್ಸ್ ಮಾಡುವ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಾವಣಗೆರೆ ನಗರದಲ್ಲಿ ಸುಮಾರು ೩ ಲಕ್ಷದವರೆಗೆ ಜನಸಂಖ್ಯೆ ಬೆಳೆಯುತ್ತಿರುವುದರಿಂದ ಅದನ್ನು ಕಾರ್ಪೊರೇಷನ್ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ ಅನುಕೂಲಕರವಾದ ಕೆಲಸಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಮಾಡುವುದಕ್ಕೆ ಸಹಾಯವಾಗುತ್ತದೆ. ಆ ದೃಷ್ಟಿಯಿಂದ ನಮ್ಮ ಮಾನ್ಯ ಸಚಿವರು ಆಲೋಚನೆ ಮಾಡಿ ಇದ್ದಂಥ ಅಂಕಿಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಕಾರ್ಪೊರೇಷನ್ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ದಾವಣಗೆರೆ ಜನತೆಯು ಬಹಳ ಸಂತೋಷ ಪಡುತ್ತಾರೆ. ಇನ್ನೂ ಒಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ದಾವಣಗೆರೆ ನಗರದಲ್ಲಿ ಗೃಹ ನಿರ್ಮಾಣ ಮಂಡಳಿ ವತಿಯಿಂದ ಮನೆಗಳನ್ನು ಕಟ್ಟಿ ಕಛೇರಿ ನೌಕರರುಗಳಿಗೆ ಕ್ವಾರ್ಟರ್ಸ್ ರೂಪದಲ್ಲಿ ಕೊಡಲಾಗಿದೆ. ಈಗ ಅಲ್ಲಿ ಯಾರು ಯಾರು ವಾಸವಾಗಿದ್ದಾರೋ ಅವರುಗಳಿಗೆ ಅದರ ಮಾಲೀಕತ್ವವನ್ನು ವಹಿಸಿ ಕೊಡುವ ಏರ್ಪಾಡು ನಡೆಯುತ್ತಿದೆ ಎಂಬ ಸುದ್ದಿ ಇದೆ. ಇದು ಸರಿಯಾದ ಕ್ರಮವಲ್ಲ. ಆ ಕಟ್ಟಡಗಳು ಇರುವ ಜಾಗವು ನಗರಸಭೆಯ ಅಸ್ತಿತ್ವದಲ್ಲಿ ಬರುತ್ತದೆ ಅದು ನಗರ ಸಭೆಯ ಆಸ್ತಿಯಾಗಿಯೇ ಉಳಿಯಬೇಕು. ಈಗಾಗಲೇ ನಾನು ಮಂತ್ರಿಗಳಲ್ಲಿ ಮನವಿಯ ಮೂಲಕ ತಿಳಿಸಿದ್ದೇನೆ. ನಗರ ಸಭೆಯ ಆಸ್ತಿ ಅನ್ಯಾಯವಾಗಬಾರದು ಎನ್ನುವ ದೃಷ್ಟಿಯಿಂದ ಈ ವಿಷಯವನ್ನು ಸದನದ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ದಾವಣಗೆರೆಯ ಸಮಗ್ರವಾದ ಒಂದು ಅಭಿವೃದ್ಧಿಗೋಸ್ಕರ ಅಲ್ಲಿನ ಜನರ ಅನುಕೂಲಕ್ಕೋಸ್ಕರ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಂತಿಸಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷಿಣಿಯವರೇ ಈ ಸಭೆಯ ಮುಂದಿರುವ ನಗರಾಭಿವೃದ್ಧಿ, ಮೀನುಗಾರಿಕೆ ಮತ್ತು ಬಂದರು ಇಲಾಖೆಗಳ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ಮೀನುಗಾರಿಕೆ ಬಗ್ಗೆ ಕೆಲವು ಮಾತನ್ನು ಆಡುತ್ತೇನೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆಗೆ ಬಹಳಷ್ಟು ಅವಕಾಶವಿದೆ. ಕೆಲವು ರಾಜ್ಯಗಳಲ್ಲಿ ಕೇವಲ ಒಳನಾಡು ಮೀನುಗಾರಿಕೆ ಮಾಡಲು ಸಾಧ್ಯವಾದರೆ ನಮ್ಮಲ್ಲಿ ಒಳನಾಡು ಮೀನುಗಾರಿಕೆಗೆ ಮತ್ತು ಸಮುದ್ರ ಮೀನುಗಾರಿಕೆ ಅವಕಾಶವಿದೆ. ಅದರಲ್ಲೂ ಸಮುದ್ರ ಮೀನುಗಾರಿಕೆಗಂತೂ ವಿಪರೀತವಾದಂಥ ಅವಕಾಶವಿದೆ. ಇದರಿಂದ ರಾಜ್ಯದ ಮತ್ತು ಜನತೆಯ ಸಂಪತ್ತಿಗೆ ಹೆಚ್ಚಿನ ಭಾಗ ಕೊಡುವಂತಹ ಒಂದು ಅವಕಾಶ ನಮ್ಮ ರಾಜ್ಯದಲ್ಲಿದೆ. ಮೈಸೂರು, ಬಳ್ಳಾರಿ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಒಳನಾಡು ಮೀನುಗಾರಿಕೆಗೆ ಹೆಚ್ಚಿನ ಅವಕಾಶವಿದೆ. ಆದರೆ ದುರದೃಷ್ಟವಶಾತ್ ಅವಕಾಶವಿರುವಷ್ಟನ್ನು ಉಪಯೋಗಿಸಿಕೊಳ್ಳಲು ಮತ್ತು ಬಳಕೆ ಮಾಡಿಕೊಳ್ಳಲು ತೀವ್ರತರವಾದಂಥ ಪ್ರಯತ್ನ ನಡೆದಿಲ್ಲ.

ಒಳನಾಡು ಮೀನುಗಾರಿಕೆ ಬಗ್ಗೆ ಹೇಳುವುದಾದರೆ ಇದರಲ್ಲಿ ಮೀನು ಮರಿ ಉತ್ಪಾದನೆ ಮಾಡುವುದು ಮತ್ತು ಅವನ್ನು ನೀರಿಗೆ ಬಿಡುವುದು ಬಹಳ ಮಹತ್ವದ ಕೆಲಸ ಮತ್ತು ಮುಖ್ಯವಾದ ಕೆಲಸ. ನಾನು ಮಂತ್ರಿಯಾಗಿದ್ದಾಗಲೂ ಸಹ ಎಷ್ಟೇ ಪ್ರಯತ್ನಿಸಿದರೂ ೮೦ಕೋಟಿ ಮೀನು ಮರಿಗಳನ್ನು ಉತ್ಪಾದನೆ ಗುರಿಯನ್ನು ಮುಟ್ಟಲು ಸಾಧ್ಯ ಆಗಲಿಲ್ಲ. ಇದರ ಪರಿಣಾಮವಾಗಿ ಇವತ್ತು ಆಂಧ್ರ ಮತ್ತು ಪಶ್ಚಿಮ ಬಂಗಾಳಗಳಿಂದ ಮೀನು ಮರಿ ತರಿಸುವ ಕೆಲಸ ನಿಂತಿಲ್ಲ. ಇದು ಬಹಳ ದುರದೃಷ್ಟಕರ ಸಂಗತಿ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಈ ಇಲಾಖೆಯವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಮೀನು ಮರಿ ಉತ್ಪಾದನೆ ಕುಂಠಿತ ಗೊಂಡಿದೆ ಎಂಬುದು ತಿಳಿದುಬರುತ್ತದೆ. ಈ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ವಾರ್ಷಿಕ ವರದಿಯ ಅಂಕಿಅಂಶಗಳ ಪ್ರಕಾರ ಸುಮಾರು ೨೦ ಕೋಟಿ ಮೀನು ಮರಿಗಳನ್ನು ಉತ್ಪಾದಿಸುವ ಕಡೆ ೧೭.೨೪ ಕೋಟಿ ಮಾತ್ರ ಉತ್ಪಾದನೆಯಾಗಿದೆ. ಅಂದರೆ ನಮ್ಮ ಅವಶ್ಯಕತೆಯ ೮೦ ಕೋಟಿ ಮೀನುಮರಿ ಉತ್ಪಾದನೆಯಲ್ಲಿ ಶೇಕಡ ೨೫ರಷ್ಟು ಮಾತ್ರ ಉತ್ಪಾದನೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಸೂಚನೆ ಮಾಡುವುದೇನೆಂದರೆ ಅವರು ಒಳನಾಡಿನ ಮೀನುಗಾರಿಕೆಗೆ ಹೆಚ್ಚಿನ ಆಸಕ್ತಿ ಶ್ರದ್ಧೆ ತೋರಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಈ ಮೀನು ಮರಿ ಉತ್ಪಾದಿಸಲು ನಮ್ಮಲ್ಲಿ ಸುಸಜ್ಜಿತವಾದ ಕೇಂದ್ರಗಳು ಏನಿವೆ, ಇವುಗಳ ಬಗ್ಗೆ ಹೇಳಬೇಕೆಂದರೆ ನಾರಾಯಣಪುರ ಅಣೆಕಟ್ಟೆಗೆ ಹೋಗಿ ನೋಡಿದರೆ, ಕೋಟ್ಯಾಂತರ ರೂಗಳನ್ನು ಮೀನು ಮರಿ ತೊಟ್ಟಿ ಕಟ್ಟಲು ವ್ಯಯವಾಗಿದೆ. ಆದರೆ ಒಂದು ಮೀನು ಮರಿ ತೊಟ್ಟಿಯನ್ನೂ ಉಪಯೋಗಿಸುವ ಪರಿಸ್ಥಿತಿಯಲ್ಲಿ ನಾವಿಲ್ಲ. ಇದರ ಬಗ್ಗೆ ಹಿಂದೆ ವಿಚಾರಣೆ ಕೂಡ ನಡೆಯುತ್ತಿತ್ತು, ಅದು ಏನಾಯಿತೋ ಗೊತ್ತಿಲ್ಲ. ಅದು ಇನ್ನೂ ಬೆಳಕಿಗೆ ಬಂದಿಲ್ಲ. ಆಗಿನ ನನ್ನ ಒಂದು ಅಂದಾಜಿನ ಪ್ರಕಾರ ೬೦–೭೦ ಲಕ್ಷ ರೂಗಳನ್ನು ಅದಕ್ಕಾಗಿ ಅಲ್ಲಿ ಖರ್ಚು ಮಾಡಲಾಗಿದೆ. ಕರಾರುವಕ್ಕಾಗಿ ಇಷ್ಟೇ ಖರ್ಚಾಗಿದೆ ಎಂದು ಹೇಳಲಾರೆ.

೩–೫೦ ಪಿ. ಎಂ.

ಆದರೆ ಇವತ್ತಿನವರೆಗೂ ಕೂಡಾ ೬೦–೭೦ ಪೈಸೆಯಷ್ಟು ಕೂಡಾ ಅದರಿಂದ ಪ್ರಯೋಜನವಾಗಿಲ್ಲ. ಈ ದುರಂತವನ್ನು ಮಾಡಿರತಕ್ಕಂಥವರು ಯಾರು ? ಯಾರು ಇದಕ್ಕೆ ಕಾರಣ ಎನ್ನತಕ್ಕಂಥ ತಾವು ದಯವಿಟ್ಟು ಅದನ್ನು ಖುದ್ದಾಗಿ, ತಾವು ನೋಡಬೇಕಾಗಿರತಕ್ಕಂಥದ್ದು. ಆಗಿರತಕ್ಕಂಥ ನಷ್ಟವನ್ನು ತಪ್ಪಿಸತಕ್ಕಂಥದ್ದಕ್ಕಾದರೂ ತಾವು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈ ಒಳನಾಡು ಮೀನುಗಾರಿಕೆಗೆ ಅತಿ ಮುಖ್ಯವಾಗಿರುವಂಥ ಬೀಜೋತ್ಪಾದನೆ ಕೆಲಸವನ್ನು ತಾವು ತೀವ್ರವಾಗಿ ಅಷ್ಟೇ ಅಲ್ಲದೇ ನಮ್ಮ ಗುರಿಯನ್ನು ಮುಟ್ಟತಕ್ಕಂಥ ಒಂದು ಮಹಾ ಕಾರ್ಯವನ್ನು ತಾವು ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಕಡಲು ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ ಈ ಮೀನುಗಾರಿಕೆಯಲ್ಲಿ ಸಹ ಎಲ್ಲಾ ರಂಗದಲ್ಲೂ ಇರುವ ತರಹ ಈ ಕಡಲು ಮೀನುಗಾರಿಕೆಯಲ್ಲೂ ನ್ಯೂನತೆಗಳಿವೆ. ನಮ್ಮಲ್ಲಿ ವಾಡಿಕೆಗೆ ಆಡುವ ಒಂದು ಮಾತಿದೆ. ಏನೆಂದರೆ, “ಸಣ್ಣ ಮೀನನ್ನು ದೊಡ್ಡ ಮೀನು ನುಂಗುತ್ತದೆ” ಎಂದು, ಅದು ಕಡಲು ಮೀನುಗಾರಿಕೆಯಲ್ಲಿ ಅದು ನಿಜವಾಗಿಯೂ ಕೂಡಾ ಅಕ್ಷರಶಃ ನಿಜ. ನಮ್ಮ ಇದಿನಬ್ಬನವರು ಹೇಳುತ್ತಿದ್ದರು. ಅವರು ಸಭೆಯಲ್ಲಿ ಈಗ ಇಲ್ಲ. ಬಹಳ ಚೆನ್ನಾಗಿ ವರ್ಣನೆ ಮಾಡಿ ಪದ್ಯವನ್ನು ಕಟ್ಟಿ ಅವರು ಹೇಳುತ್ತಿದ್ದರು. ಮೀನುಗಾರರ ಕಷ್ಟವನ್ನು ಅವರು ಹೇಳುತ್ತಿದ್ದರು. ಅವರು ಹೇಳುವುದಕ್ಕಿಂತಲೂ ಬಹಳ ತೀವ್ರತರವಾದಂಥ ಕಷ್ಟವನ್ನು ಮೀನುಗಾರರು ಪಡುತ್ತಿದ್ದಾರೆ. ಮೀನನ್ನು ತಂದು ಕೊನೆಗೆ ಕಸವಾಗಿ ಹೊರಗೆ ಹಾಕುತ್ತಿದ್ದಾರೆ. ಲಾರಿಗಳಲ್ಲಿ ಅದನ್ನು ಕಸವಾಗಿ

ಸಾಗಿಸುತ್ತಾರೆ. ಕಾರಣವೇನೆಂದರೆ ಅದನ್ನು ತಂದ ತಕ್ಷಣ ಮೀನನ್ನು ಶೇಖರಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ, ಜೊತೆಗೆ ಅದನ್ನು ಎಲ್ಲಿ ಉಪಯೋಗಿಸುತ್ತಾರೆಯೋ ಅಲ್ಲಿ ಉಪಯೋಗಿಸತಕ್ಕಂಥ ಸ್ಥಳಗಳಿಗೆ ಕಳುಹಿಸತಕ್ಕಂಥ ವ್ಯವಸ್ಥೆ ಸರಿಯಾಗಿ ಇವತ್ತಿನ ದಿವಸ ಇಲ್ಲ. ಅಲ್ಲಿ ಮಧ್ಯವರ್ತಿಗಳು ಕೂಡಾ ಯಥೇಚ್ಛವಾಗಿದ್ದಾರೆ. ಮೀನುಗಾರರಲ್ಲಿ ಅಪ್ಪ ಸಮುದ್ರಕ್ಕೆ ಹೋಗುತ್ತಾನೆ ಎಂದರೆ ಮಗ ಮುಂದೆ ಸಮುದ್ರಕ್ಕೆ ಹೋಗುತ್ತಾನೆ. ಮುಂದೆ ಅವನ ಮರಿ ಮಗನೂ ಕೂಡಾ ಸಮುದ್ರಕ್ಕೆ ಹೋಗುತ್ತಾನೆ. ಈ ರೀತಿ ವಂಶ ಪಾರಂಪರ್ಯವಾಗಿ ಸಮುದ್ರವನ್ನೇ ನಂಬಿರತಕ್ಕಂಥ ಜನ ಅವರು. ಸಮುದ್ರವನ್ನೇ ಅವಲಂಬಿಸಿರತಕ್ಕಂಥ ಜನ ವಂಶಪಾರಂಪರ್ಯವಾಗಿ ಬರುತ್ತಿದ್ದರೂ ಕೂಡಾ ಅವರ ಆರ್ಥಿಕ ಪರಿಸ್ಥಿತಿಯಂತೂ ಕೂಡಾ ಯಾವ ವಿಧದಲ್ಲೂ ಇಲ್ಲಿಯವರೆಗೂ ಸುಧಾರಣೆಯಾಗಿಲ್ಲ. ಈ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಬಡ ಮೀನುಗಾರರ ಪರಿಸ್ಥಿತಿ ಯಾವ ವಿಧದಲ್ಲೂ ಕೂಡಾ ಸುಧಾರಣೆಯಾಗಿಲ್ಲ. ನಮ್ಮ ನರಸಿಂಹಮೂರ್ತಿಯವರು ಹೇಳಿದರು, ಅವರಿಗೋಸ್ಕರ ಇನ್‌ಸೂರೆನ್ಸ್ ಇದೆ, ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ಹೇಳಿದರು, ಅವರಿಗಾಗಿ ಇನ್‌ಸೂರೆನ್ಸ್ ಇರುವುದು ನಿಜ. ಎಷ್ಟು ಕೊಡುತ್ತೀರಿ ನೀವು ? ಹತ್ತು ಸಾವಿರ ರೂಪಾಯಿ ಮಾತ್ರ ಕೊಡುತ್ತೀರಿ ? ಅದನ್ನು ಇವತ್ತು ಇತ್ತೀಚೆಗೆ ಜಾಸ್ತಿಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ಕೆಲವು ಮೀನುಗಾರರು ಅನೇಕ ಸಂದರ್ಭಗಳಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಂಡಿರುವಂಥ ನಿದರ್ಶನಗಳು ಕೂಡಾ ಇದೆ. ಆದರೂ ಕೂಡಾ ಅವರ ಆರ್ಥಿಕ ಸ್ಥಿತಿ ಯಾವ ವಿಧದಲ್ಲೂ ಕೂಡಾ ಸುಧಾರಣೆಯಾಗಿಲ್ಲ, ಮತ್ತು ಅವರ ಪರಿಸ್ಥಿತಿಗಾಗಿ ಒಂದು ಸುಧಾರಣೆ ಮಾಡತಕ್ಕಂಥ ಪ್ರಯತ್ನ ಕೂಡಾ ನಡೆದಿಲ್ಲ. ಅವರ ಸಮಸ್ಯೆಗಾಗಿ ಪ್ರಯತ್ನ ಮಾಡಿಯೂ ಇಲ್ಲ. ಒಟ್ಟಿನಲ್ಲಿ ಅವರ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದರೆ "ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ" ಎನ್ನುವ ಹಾಗೆ ಆಗಿದೆ. ಆ ಮಾತು ಇದೆ. ಈ ಮಾತಿನ ಪ್ರಕಾರ ಅವರ ಆರ್ಥಿಕ ಪರಿಸ್ಥಿತಿಯಾಗಿದೆ. ಮತ್ತು ಇವತ್ತು ಅನೇಕ ಮೀನು ಬಂದರುಗಳು ಕೂಡಾ ಇದೆ. ಅದರಲ್ಲಿ ಈ ದಿಕ್ಕಿನಲ್ಲಿ ಇರತಕ್ಕಂಥ ಮಂಗಳೂರು ಬಂದರು. ಆ ದಿಕ್ಕಿನಲ್ಲಿರತಕ್ಕಂಥ ಕಾರವಾರ ಬಂದರು. ಎರಡು ಮುಖ್ಯವಾದಂಥ ಬಂದರುಗಳು, ಇವತ್ತು ಬಂದರಿನ ಕೆಲಸ ನಡೆಯುತ್ತಿದೆಯೋ ಇಲ್ಲವೋ. ಯಾವ ಪರಿಸ್ಥಿತಿಯಲ್ಲಿವೆಯೋ ಏನೋ ನನಗೆ ಗೊತ್ತಿಲ್ಲ. ನಾನು ಇತ್ತೀಚೆಗೆ ಮಂಗಳೂರಿಗೆ ಹೋಗತಕ್ಕಂಥ ಅವಕಾಶ ಕೂಡಾ ದೊರಕಲಿಲ್ಲ. ತೀವ್ರ ಗತಿಯಲ್ಲಿ ಆ ಬಂದರಿನ ಕೆಲಸಕಾರ್ಯಗಳನ್ನು ಮಾಡಿ ಮುಗಿಸತಕ್ಕಂಥ ಕೆಲಸವನ್ನು ಮಾಡಬೇಕು. ಮಂಗಳೂರಿನಲ್ಲಿ ಅತಿ ಶೀಘ್ರವಾಗಿ ಕೆಲಸಕಾರ್ಯಗಳು ಆಗಬೇಕೆಂದು ಅಲ್ಲಿಂದ ಬರತಕ್ಕಂಥ ಸ್ನೇಹಿತರುಗಳು ಕೂಡಾ ಹೇಳಿದ್ದಾರೆ. ಮುಂಗಾರು ಬಂತು ಎಂದು ಹೇಳಿದರೆ ಅಲ್ಲಿ ಮಳೆಗಾಲ ಪ್ರಾರಂಭವಾದ ತಕ್ಷಣ ದೊಡ್ಡ ಅಲೆಗಳು ಬಂದು ಮರಳು ದೋಣಿ ಹೋಗತಕ್ಕಂಥ ದಾರಿಯಲ್ಲಿ ಅಡ್ಡ ಬಂದಿರುತ್ತದೆ. ದೋಣಿಯಲ್ಲಿ ಮೀನಿಗಾಗಿ ಹೋದಾಗ ಮರಳು ದಿಣ್ಣೆಗೆ ಹೊಡೆದು ಅನೇಕ ದೋಣಿಗಳು ಅಪಘಾತಕ್ಕೆ ಈಡಾಗಿವೆ. ಅದಕ್ಕೆ ಡ್ರೆಡ್ಜ್ ಮಾಡಬೇಕು. ಅದಕ್ಕೆ ಹೆಚ್ಚು ತೀವ್ರತರವಾದಂಥ ಬೇಡಿಕೆ ಇದೆ. ನಾನು ಮಂತ್ರಿಯಾದಾಗ ಸ್ವಲ್ಪ ಕೆಲಸ ನಡೆಯಿತು. ಸ್ಪರ್ಸ್ ಹಾಕತಕ್ಕಂಥ ಕೆಲಸವನ್ನು ಮಾಡಿದೆ. ನೀರಿನ ರಭಸವನ್ನು ಹೆಚ್ಚು ಮಾಡತಕ್ಕಂಥ ಕೆಲಸ, ನೀರು ರಭಸದಿಂದ ಬಂದ ಕೂಡಲೇ ಮರಳನ್ನು ಪುನಃ ಸಮುದ್ರಕ್ಕೆ ಎಳೆದುಕೊಂಡು ಹೋಗತಕ್ಕಂಥ ಒಂದು ಕೆಲಸ ಆಯಿತು. ಇದಾದಮೇಲೆ ಇಲ್ಲಿಯವರೆಗೂ ಕೂಡಾ ಏನೂ ಕೆಲಸಕಾರ್ಯಗಳು ಆಗಿಲ್ಲ.

ಪ್ರತಿ ವರ್ಷವೂ ನಾವು ಕೇಳುತ್ತಿದ್ದೇವೆ. ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಡ್ರೆಡ್ಜರ್ ಇವತ್ತು ಬರುತ್ತೆ, ನಾಳೆ ಬರುತ್ತೆ, ಎಂದೆಲ್ಲ ಹೇಳುತ್ತಾರೆ. ಆದರೆ ಅದು ಬಂದಿಲ್ಲ. ಕೆಲಸ ಆಗಿಲ್ಲ. ನಾನು ಮಂತ್ರಿಯಾಗಿದ್ದಾಗ ಒಂದು ಡ್ರೆಡ್ಜರ್ ಅನ್ನು ೪ ಕೋಟಿ ರೂಪಾಯಿ ಅಂದಾಜಿನಲ್ಲಿ ಕೊಂಡುಕೊಳ್ಳಬೇಕೆಂದು ಒಂದು ತೀರ್ಮಾನ ಆಗಿತ್ತು. ಆದರೆ ಅಲ್ಲಿಂದ ಇಲ್ಲಿಯವರೆಗೆ ಆ ತೀರ್ಮಾನ ಕಾರ್ಯಗತವಾಗಿಲ್ಲ. ಇನ್ನೂ ಆ ಡ್ರೆಡ್ಜರ್ ಬಂದಿಲ್ಲ. ಮೂಲಭೂತವಾದ ಸಮಸ್ಯೆ ಏನೆಂದರೆ ಗುರುಪುರ ಮತ್ತು ನೇತ್ರಾವತಿ ನದಿಗಳಿಗೆ ರಿವರ್ ಡ್ರೈನ್ ವಾಲ್‌ಗಳನ್ನು ಎರಡೂ ಕಡೆ ಕಟ್ಟಿದರೆ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ರಿವರ್ ಡ್ರೈನ್ ವಾಲ್‌ಗಳನ್ನು ಕಟ್ಟಬೇಕಾದರೆ ಕೋಟ್ಯಾಂತರ ರೂಪಾಯಿ ಹಣ ಬೇಕಾಗುತ್ತದೆ. ಏನಾದರೂ ಮಾಡಿ ಈ ಮೀನುಗಾರರ ಪ್ರಾಣವನ್ನು ರಕ್ಷಣೆ ಮಾಡಬೇಕು. ಈ ರಾಜ್ಯದ ಸಂಪತ್ತನ್ನು ಹೆಚ್ಚು ಮಾಡಬೇಕೆಂದು ಇದ್ದರೆ ಇವರಿಗೆ ಶಾಶ್ವತವಾದ ಪರಿಹಾರವಾಗಿ ಈ ರಿವರ್ ಡ್ರೈನ್ ವಾಲ್‌ಗಳನ್ನು ಕಟ್ಟಿಸುವ ಕೆಲಸ ಆಗಬೇಕು. ಅದನ್ನು ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಕಾರವಾರದಲ್ಲಿಯೂ ಅದೇ ಪರಿಸ್ಥಿತಿ ಇದೆ. ಕಾರವಾರ ಬಂದರು ಇವತ್ತು ವಾಣಿಜ್ಯ ಬಂದರು ಆಗಿದೆ. ಅದರ ಪಕ್ಕದಲ್ಲಿ ಮೀನುಗಾರಿಕೆ ಬಂದರು ಇದೆ. ಮಳೆಗಾಲದಲ್ಲಿ ಅಲ್ಲಿಯೂ ಕೂಡ ಮೀನುಗಾರಿಕಾ ದೋಣಿಗಳು ಮುಳುಗಿಹೋಗತಕ್ಕ ಪ್ರಸಂಗಗಳು ಇವೆ. ವಾರ್ಫ್ ಮುಟ್ಟಲು ಸಾಧ್ಯವಾಗುವುದಿಲ್ಲ ಅಂತಹ ಪರಿಸ್ಥಿತಿ ಅಲ್ಲಿದೆ. ಬೇಕ್ ವಾಟರ್ಸ್ ಅನ್ನು ಕಾರವಾರದ ಬಂದರಿನಲ್ಲಿ ಹಾಕಿದರೆ ಈ ಮರಳು ಮೀನುಗಾರಿಕಾ ಬಂದರಿಗೆ ಬರುವುದು ತಪ್ಪುತ್ತದೆ.

ಆ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಲ್ಪೆ ಮೀನುಗಾರಿಕೆಯ ಬಂದರು ನಾನು ಇದ್ದಾಗ ಯಾವ ಪರಿಸ್ಥಿತಿಯಲ್ಲಿತ್ತೋ ಅದೇ ಪರಿಸ್ಥಿತಿ ಇವತ್ತಿನವರೆಗೂ ಮುಂದುವರಿಯುತ್ತಿದೆ. ಇದರ ಕೆಲಸವನ್ನು ತುಂಗಭದ್ರಾ ಸ್ಟೀಲ್ಸ್‌ಗೆ ನೀವು ಕೊಟ್ಟಿರುವದು ಒಂದು ಹಳೇ ಕಥೆ. ಏತಕ್ಕೆ ಇದು ಇಷ್ಟು ತಡವಾಗಿದೆ. ಇದಕ್ಕೆ ಕಾರಣಗಳೇನು. ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಡ್ರೆಡ್ಜಿಂಗ್ ಕೆಲಸ ಅತಿ ಅಗತ್ಯವಾಗಿ ಆಗಬೇಕಾಗಿದೆ. ಅನೇಕ ಸಂದರ್ಭದಲ್ಲಿ ಲೋಟೈಡ್‌ನಲ್ಲಿ ಬೋಟುಗಳು ನೆಲ ಕಚ್ಚುವ ಸಂದರ್ಭ ಇದೆ. ಆದ್ದರಿಂದ ಡ್ರೆಡ್ಜಿಂಗ್ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ನಮ್ಮ ಸಮುದ್ರದ ದಂಡೆಯಲ್ಲಿ ಸಾಕಷ್ಟು ಭೂಮಿ ಇದೆ. ಕೆಲವು ಕಡೆಗಳಲ್ಲಿ ಈ ಭೂಮಿಯನ್ನು ಕೆಲವರಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದಾರೆ. ಯಾವ ಉದ್ದೇಶಕ್ಕೆ ಈ ಭೂಮಿಯನ್ನು ಕೊಟ್ಟಿದ್ದರೋ ಆ ಉದ್ದೇಶಕ್ಕೆ ಈ ಮೀನುಗಾರಿಕೆ ಭೂಮಿ ಉಪಯೋಗವಾಗುತ್ತಿಲ್ಲ. ಅದು ನಾನಾ ಉದ್ದೇಶಗಳಿಗೆ ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗವಾಗುತ್ತಿದೆ. ಇದನ್ನು ತಡೆಗಟ್ಟಬೇಕು. ಅದರಲ್ಲೂ ಮುಖ್ಯವಾಗಿ ಕೆಲವು ಕಡೆ ಅಂದರೆ ಮಲ್ಪೆ ಮುಂತಾದ ಕಡೆಗಳಲ್ಲಿ ಪ್ರತಿವರ್ಷ ಎರಡು ಮೀನುಗಾರರ ಗುಂಪುಗಳ ನಡುವೆ ಬಹಳ ದೊಡ್ಡ ಯುದ್ಧ ನಡೆಯುತ್ತಿದೆ. ಮೀನುಗಾರರು ತಮಗೇ ಜಾಗ ಸಿಗುತ್ತಿಲ್ಲವಾದ ಕಾರಣ ಆ ಜಾಗವನ್ನು ತಮಗೇ ಕೊಡಿಸಬೇಕೆಂದು ಕೇಳುತ್ತಿದ್ದಾರೆ. ಅಲ್ಲಿ ಲೀಸ್ ಮೇಲೆ ಕೊಟ್ಟಂತಹ ಭೂಮಿ ಸಾಕಷ್ಟು ಇದೆ. ಅದನ್ನು ತಾವು ಬಿಡಿಸಿಕೊಂಡು ಈ ಮೀನುಗಾರರಿಗೆ ಕೊಡಬಹುದು. ಆದರೆ ಈ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲವೆಂದು ನೀವು ಹೇಳುತ್ತೀರಿ, ಅದು ನನಗೆ ಗೊತ್ತು. ನೀವು ಆ ಭೂಮಿಯನ್ನು ಬಿಡಿಸಿಕೊಂಡರೆ ಅಲ್ಲಿರುವ ೨-೩ ಸಹಕಾರ ಸಂಘಗಳಿಗೆ ಭೂಮಿಯನ್ನು ಕೊಡಲು ಸಾಧ್ಯವಾಗುತ್ತದೆ. ಈ ಕೆಲಸವನ್ನು ನೀವು ಮಾಡಬೇಕು. ಮತ್ತು ಈ ಲೀಸ್ ಅಮೌಂಟ್ ಏನು ನಿಗದಿ ಮಾಡಿದ್ದೀರಿ. ಅಂದರೆ ಗುತ್ತಿಗೆ ಹಣ ಅದೂ ಕೂಡ ಬಹಳ ಕಡಿಮೆಯಾಗಿದೆ. ಅದನ್ನು ರಿವೈಸ್ ಮಾಡತಕ್ಕ ಕೆಲಸ ಹಿಂದೆ ನಡೆದಿತ್ತು. ಈಗ ಯಾವ ಮಟ್ಟದಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಇದರ ಬಗ್ಗೆ ತಾವು ಸರಿಯಾದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಉಪ್ಪು ನೀರು ಮೀನುಗಾರಿಕೆ ಬಗ್ಗೆ ಹೇಳಬೇಕಾಗಿದ್ದರೆ ನಮ್ಮಲ್ಲಿ ಸಾಕಷ್ಟು ಅವಕಾಶ ಇದೆ. ಉಪ್ಪು ನೀರಿನ ಮೀನುಗಾರಿಕೆ ಮಾಡುವುದಕ್ಕೆ ಸಾಕಷ್ಟು ಅವಕಾಶ ನಮ್ಮಲ್ಲಿ ಇದೆ. ಅದರಲ್ಲೂ ಅತೀ ಮುಖ್ಯವಾಗಿ ಸೀಗಡಿ ಮೀನಿನ ಉತ್ಪಾದನೆಗೆ ಅವಕಾಶ ಇದೆ ನಾನು ಇದೇ ಉದ್ದೇಶಕ್ಕಾಗಿ ಒಮ್ಮೆ ವಿಶಾಖಪಟ್ಟಣಕ್ಕೆ ಹೋಗಿದ್ದೆ. ಸೀಗಡಿ ಮೀನು ಡೈಗರ್‌ಬ್ರಾನ್ ಎಂದು ಹೇಳತಕ್ಕದ್ದಕ್ಕೆ ಒಂದು ಕೇಜಿಯ ಬೆಲೆ ಎರಡು ನೂರು ರೂಪಾಯಿಗಳಿತ್ತು. ಅದನ್ನು ಇಲ್ಲಿಯೇ ಉತ್ಪತ್ತಿ ಮಾಡುವುದಕ್ಕೆ ಸಾಧ್ಯ ಇದೆ. ಜಪಾನ್ ಮುಂತಾದ ದೇಶಗಳಿಗೆ ಈ ಮೀನನ್ನು ಕಳಿಸುತ್ತಾರೆ ಎರಡು ನೂರು ರೂಪಾಯಿ ಬೆಲೆ ಒಂದು ಕೆ.ಜಿ. ಸೀಗಡಿ ಮೀನಿಗೆ ಇರುವುದರಿಂದ ಅದನ್ನು ನಮ್ಮಲ್ಲಿಯೇ ಉತ್ಪಾದನೆ ಮಾಡುವುದಕ್ಕೆ ಒಳ್ಳೆಯ ಅವಕಾಶ ಇದೆ. ಅದರಲ್ಲಿಯೂ ಉತ್ತರ ಕನ್ನಡದಲ್ಲಿ ಸಾಕಷ್ಟು ಅವಕಾಶ ಇದೆ. ಆದರೆ ಅದನ್ನು ಮಾಡತಕ್ಕ ಕೆಲಸ ನಮ್ಮಲ್ಲಿ ಇನ್ನೂ ಆಗಿಲ್ಲ ಕಾರವಾರ ಪಕ್ಕದಲ್ಲಿ, ಸೀಡ್ ಫಾರಂ ಕೂಡ ಇದೆ ಅದನ್ನು ತಾವು ಹೋಗಿ ನೋಡಬೇಕು. ಅದು ಒಂದು ಮಾನ್ಯುಮೆಂಟ್. ಕಾರವಾರ ಪಕ್ಕದಲ್ಲಿದೆ. ಕಾಳಿನದಿ ಪಕ್ಕದಲ್ಲಿರುವುದನ್ನು ತಾವು ಹೋಗಿ ನೋಡಿಕೊಂಡು ಬನ್ನಿ. ಅದು ಕಾಳಿ ನದಿ ಪಕ್ಕದಲ್ಲಿಯೇ ಇದೆ. ಈಗ ಸೀಗಡಿ ಮೀನು ಉತ್ಪಾದನೆ ಬಹಳ ಕಡಿಮೆ ಆಗುತ್ತಿದೆ. ಇದಕ್ಕೆ ಕಾರಣ ಅಂದರೆ ಖಾಸಗಿಯವರು ಅನೇಕರು ಸೀಗಡಿ ಮೀನು ಉತ್ಪಾದನೆ ಮಾಡಲು ಮುಂದೆ ಬರುತ್ತಿದ್ದಾರೆ. ಆದರೆ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಇವೊತ್ತಿನ ದಿವಸ ಆಗುತ್ತಿಲ್ಲ. ಫಾರಂ ಎಸ್ಟಾಬ್ಲಿಷ್ ಮಾಡುವುದಕ್ಕೆ ಇವೊತ್ತಿನ ದಿವಸ ಅವರಿಗೆ ಆಗುತ್ತಿಲ್ಲ. ಕಾರಣ ಏನು ಅಂದರೆ, ಇದು ಮೂರು ಇಲಾಖೆಗಳಿಗೆ ಒಳಪಟ್ಟಿದೆ. ಮೀನುಗಾರಿಕೆ ಇಲಾಖೆಗೆ ಒಳಪಟ್ಟಿದೆ. ಮೀನುಗಾರಿಕೆ ಇಲಾಖೆಗೆ ಒಳಪಟ್ಟಿರತಕ್ಕ ಭೂಮಿಯನ್ನು ನೇರವಾಗಿ ಕೊಡಬಹುದು. ಫಾರೆಸ್ಟ್ ಇಲಾಖೆಗೆ ಒಳಪಟ್ಟಿದೆ, ಹಾಗೆಯೇ ರೆವಿನ್ಯೂ ಇಲಾಖೆಗೆ ಕೂಡ ಒಳಪಟ್ಟಿದೆ. ಇಲ್ಲಿರತಕ್ಕ ಅಮೂಲ್ಯವಾದ ಸಂಪತ್ತನ್ನು ತಾವು ರೂಢಿಸಿಕೊಳ್ಳಬೇಕಾಗಿದ್ದರೆ ಅಷ್ಟೂ ಜಮೀನನ್ನು ಮೀನುಗಾರಿಕೆ ಇಲಾಖೆಗೆ ಪಡೆದುಕೊಳ್ಳಿ. ಸಾಕಷ್ಟು ಸಂಖ್ಯೆಯಲ್ಲಿ ಖಾಸಗಿಯವರು ಮೀನುಗಾರಿಕೆ ಮಾಡುವುದಕ್ಕೆ ಇಷ್ಟಪಟ್ಟಿದ್ದಾರೆ. ಒಂದು ಎಕರೆ ಫಾರಂನಲ್ಲಿ ಲಕ್ಷಾಂತರ ರೂಪಾಯಿ ಉತ್ಪಾದನೆ ಮಾಡುವುದಕ್ಕೆ ಅವಕಾಶ ಇದೆ. ನಾನು ಲೆಕ್ಕಗಳನ್ನು ಬರೆತಿದ್ದೆ, ಈಗ ನನಗೆ ಟಚ್ ಬಿಟ್ಟು ಹೋಗಿದೆ. ನಮ್ಮಲ್ಲಿ ಪ್ರಕೃತಿದತ್ತವಾದ ಸಂಪತ್ತು ನಮ್ಮ ಕಡಲತೀರದಲ್ಲಿ ಸಾಕಷ್ಟು ಇದೆ. ಇದನ್ನು ದಯವಿಟ್ಟು ಉಪಯೋಗಿಸಬೇಕೆಂದು ಹೇಳುತ್ತೇನೆ. ಅದಕ್ಕಾಗಿ ಬೇರೆ ಬೇರೆ ಇಲಾಖೆಗೆ ಒಳಪಟ್ಟಿರತಕ್ಕ ಭೂಮಿಯನ್ನು ಮೀನುಗಾರಿಕೆ ಇಲಾಖೆಗೆ ಒಳಪಡಿಸಿಕೊಂಡು ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮೀನುಗಾರಿಕೆ ಕಸುಬನ್ನು ಮಾಡುವವರಿಗೆ ಕೊಡಬೇಕೆಂಬ

ಸೂಚನೆಯನ್ನು ಕೊಡಲು ಇಷ್ಟಪಡುತ್ತೇನೆ. ಈಗ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ಏನಿದೆ. ಇದನ್ನು ಮುಚ್ಚಬೇಕೆಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ ಎಂದು ತಿಳಿದು ಬಂದಿದೆ. ಇದನ್ನು ಮಾಡಿದ್ದು ಸಹ ನನ್ನ ಕಾಲದಲ್ಲಿ. ಟ್ಯಾಂಕ್ ಫಿಷರೀಸ್ ಪ್ರಾಜೆಕ್ಟ್ ಏನು ಇದೆ ಇದಕ್ಕೆ ವರ್ಲ್ಡ್ ಬ್ಯಾಂಕ್‌ನಿಂದ ದುಡ್ಡು ಬರುತ್ತದೆ ಎಂಬ ಕಾರಣದಿಂದ ಈ ನಿಗಮವನ್ನು ರಚಿಸಿದ್ದು. ಅವರ ನಿಬಂಧನೆಗಳ ಪ್ರಕಾರ ಇದನ್ನು ಫೆಡರೇಶನ್ ಮಾಡಬೇಕು. Inland fisheries ಕಾರ್ಪೊರೇಷನ್ ಅನ್ನು ಫೆಡರೇಷನ್ ಮಾಡಬೇಕೆಂದು ಈ ಕಾರ್ಪೊರೇಷನ್ ಮಾಡಿರತಕ್ಕದ್ದು. ನೀವು ಮಾಡುವಂತಹ ಸಂದರ್ಭದಲ್ಲಿ ಅಲ್ಲಿರತಕ್ಕ ಕೆಲಸಗಾರರನ್ನು, ನೌಕರರನ್ನು ದಿಕ್ಕಾಪಾಲು ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ. ಅಲ್ಲಿರುವವರೆಲ್ಲಾ ಸಣ್ಣ ಪುಟ್ಟ ಕೆಲಸಗಾರರು, ಅವರೆಲ್ಲಾ ಹೆಚ್ಚು ಜನ ಇಲ್ಲ ಎಲ್ಲಾ ೨೦೦ ೩೦೦ ರೂಪಾಯಿಗಳ ಕೆಲಸಕ್ಕೆ ಬರತಕ್ಕಂಥ ಸಾಮಾನ್ಯ ಜನ ಅವರು. ಅವರನ್ನು ದಿಕ್ಕಾಪಾಲು ಮಾಡತಕ್ಕ ಕೆಲಸಕ್ಕೆ ತಾವು ಹೋಗಬೇಡಿ, ಹಾಗೂ ಅವರನ್ನು ದಿಕ್ಕಾಪಾಲು ಮಾಡಬಾರದೆಂದು ಕೇಳಿ ಕೊಳ್ಳುತ್ತೇನೆ ಅವರನ್ನು ಈ ಫೆಡರೇಷನ್‌ಗೆ ತೆಗೆದುಕೊಳ್ಳತಕ್ಕ ಕೆಲಸವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಂದರು ಇಲಾಖೆಯ ಬಗ್ಗೆ ಇನ್ನೂ ಮುಖ್ಯವಾದ ವಿಚಾರಕ್ಕೆ ಬಂದಿಲ್ಲ. ಈ ಬಂದರು ಇಲಾಖೆಗೆ ಒಳಪಟ್ಟಿರತಕ್ಕಂಥ ಭೂಮಿ ಮಂಗಳೂರಿನಲ್ಲಿ ಕೂಡ ಇದೆ. ನಿನ್ನೆ ಎಲ್ಲಾ ಮಾನ್ಯ ಇದಿನಬ್ಬನವರು ಹೇಳಿದರು. ಮಂಗಳೂರಿನಲ್ಲಿ ಇರತಕ್ಕ ಭೂಮಿ, ಅಲ್ಲಿನ ಹಾರ್ಬರ್‌ಗೆ ಸಂಬಂಧಪಟ್ಟದ್ದು. ಹೊಸ ಮಂಗಳೂರಿನಲ್ಲಿ ಅಲ್ಲ, ಹಳೆ ಮಂಗಳೂರಿಗೆ ಸಂಬಂಧಪಟ್ಟಂತೆ ಇರುವ ಭೂಮಿ ಸುಮಾರು ಇನ್ನೂರು ಎಕರೆಗೆ ಮೇಲ್ಪಟ್ಟು ಇದೆ. ಈ ಭೂಮಿಯನ್ನು ಯಾವ ರೀತಿ ಅಭಿವೃದ್ಧಿ ಪಡಿಸಿಕೊಳ್ಳಬೇಕು ಎನ್ನುವುದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರಾಗಿ ಅದು ಆಗಿದ್ದು ನಾನು ಮಂತ್ರಿಯಾಗಿದ್ದಾಗ. ನಾನು ಮಂತ್ರಿ ಆದ ನಂತರ ಅದಕ್ಕೆ ಮಂಜೂರಾತಿಯನ್ನೂ ಕೊಡುವ ಹಂತಕ್ಕೆ ತಂದು ಇಟ್ಟಿದ್ದೆ. ಈಗ ಅದು ಏನು ಆಗಿದೆ ಗೊತ್ತಿಲ್ಲ. ಒಂದು ಸಾರಿ ನೀವು ಸರಿಯಾದ ರೀತಿಯಲ್ಲಿ ಇದನ್ನು ಯೋಚನೆ ಮಾಡಬೇಕು. ಯಾಕೆಂದರೆ ಅಲ್ಲಿ ಟೂರಿಸ್ಟ್ ಪೊಟೆನ್ಶಿಯಾಲಿಟಿ ಜಾಸ್ತಿ ಇದೆ.

ಆದಕಾರಣ ಆ ಮಾಸ್ಟರ್ ಪ್ಲಾನ್ ಏನಿದೆ ಆ ಮಾಸ್ಟರ್ ಪ್ಲಾನನ್ನು ತಾವು ತರಿಸಿ ನೋಡಿ ಅದರಲ್ಲಿ ಮತ್ತೂ ಏನಾದರೂ ಕೂಡ ಮಾರ್ಪಾಟುಗಳನ್ನು ಮಾಡಬೇಕಾಗಿದ್ದರೆ ಅದನ್ನು ಮಾಡಿ ಆ ಮಾಸ್ಟರ್ ಪ್ಲಾನನ್ನು ತಾವು ಮಂಜೂರುಮಾಡಿ ಒಂದು ಯೋಜನಾಬದ್ಧವಾದ ರೀತಿಯಲ್ಲಿ ಆ ಭೂಮಿಯನ್ನು ಅಭಿವೃದ್ಧಿ ಪಡಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಒಂದೇಸಾರಿ ಆದರೆ ಅಲ್ಲಿರತಕ್ಕಂಥ ಬೇಂಗ್ರೆಯಾಗಲಿ ವೈಗೆಬಜಾರ್ ಆಗಲಿ ಅವೆಲ್ಲವನ್ನೂ ಅಭಿವೃದ್ಧಿ ಪಡಿಸುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಮತ್ತು ನಾನು ಆಗಲೇ ಹೇಳಿದಹಾಗೆ ಅಲ್ಲಿ ಹೈಲಿ ಟೂರಿಸ್ಟ್ ಪೊಟೆನ್ಷಿಯಾಲಿಟಿ ಇರತಕ್ಕಂಥಾದ್ದನ್ನು ಕೂಡ ತಾವು ಎಕ್ಸ್‌ಪಾಂಡ್ ಮಾಡಬಹುದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕಡಲ ಮೀನುಗಾರಿಕೆ ಬಗ್ಗೆ ಒಂದೇ ಒಂದು ವಿಚಾರವನ್ನು ಹೇಳುವುದಾದರೆ ನಮ್ಮ ಪಶ್ಚಿಮ ಕರಾವಳಿಯಲ್ಲಿ ಈಗ ಮೀನುಗಾರಿಕೆಗೆ ಹೆಚ್ಚಿನ ಅವಕಾಶವಿದೆ. ಅದರಲ್ಲೂ ಕೂಡ ಆಳ ಸಮುದ್ರದ ಮೀನುಗಾರಿಕೆಗೆ ಹೆಚ್ಚಿನ ಅವಕಾಶವಿದೆ. ನಾನು ಇಷ್ಟು ಹೊತ್ತು ಪ್ರಸ್ತಾಪ ಮಾಡಿರತಕ್ಕಂಥಾದ್ದು ಎಲ್ಲ ದಡದ ಸಮೀಪದಲ್ಲಿರತಕ್ಕಂಥ ಮೀನುಗಾರಿಕೆ ಬಗ್ಗೆ. ಆಳ ಸಮುದ್ರದ ಮೀನುಗಾರಿಕೆಗೆ ಮತ್ತು ದೂರ ಸಮುದ್ರದ ಮೀನುಗಾರಿಕೆಗೆ ನಾವು ಇನ್ನೂ ಪ್ರಯತ್ನ ಪಟ್ಟಿಲ್ಲ. ಅದು ಅತಿ ಅವಶ್ಯಕವಾಗಿ ಆಗಬೇಕಾಗಿರತಕ್ಕಂಥಾದ್ದು. ಅದಕ್ಕೆ ಬಹಳ ಹಣ ಕೂಡ ಖರ್ಚಾಗುತ್ತದೆ. ಹಿಂದೆ ಒಂದೆರಡು ಫಿಷಿಂಗ್ ಶಿಪ್‌ನ್ನು ಕೊಂಡುಕೊಳ್ಳಬೇಕು ಎಂದು ತೀರ್ಮಾನವಾಗಿತ್ತು. ಅದು ಈಗ ಏನಾಯಿತೋ ಗೊತ್ತಿಲ್ಲ. ತದಡಿಯಲ್ಲಿ ಇಂಡೋ ಡ್ಯಾನಿಷ್ ಪ್ರಾಜೆಕ್ಟ್‌ನವರು ರೀಸರ್ಚ್ ಸೆಲ್ ಇಟ್ಟಿದ್ದಾರೆ, ಅದನ್ನು ಮಾಡುತ್ತಾ ಇದ್ದಾರೆ ಆಳ ಸಮುದ್ರದ ಮೀನುಗಾರಿಕೆಗೆ ಪ್ರಯತ್ನ ನಡೆಯುತ್ತಾ ಇದೆ ಎಂದು ತಾವು ಹೇಳಬಹುದು. ಆದರೆ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಈ ಆಳ ಸಮುದ್ರದ ಮೀನುಗಾರಿಕೆ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಸಾಧ್ಯವಿದೆ. ಅದರಲ್ಲೂ ಪಶ್ಚಿಮ ಕರಾವಳಿಯ ಟೂನ ಮೀನು ಎನ್ನತಕ್ಕದ್ದು ಪ್ರಾನ್ ಬಿಟ್ಟರೆ ಇದು ಎರಡನೆಯದು. ಟೂನಸಿಸಲಿ ವರೈಟಿ ಮೀನನ್ನು ಬಹಳ ಜಾಗರೂಕತೆಯಿಂದ ನಾವು ಜಪಾನಿಗೆ ಕಳಿಸಿದರೆ ಬಂಗಾರದಷ್ಟು ಬೆಲೆಯನ್ನು ತಂದುಕೊಡುವುದಕ್ಕೆ ಅವಕಾಶವಿದೆ. ಈ ಟೂನ ಮೀನು ಬಹಳ ದೂರದಲ್ಲಿ ಸಿಗತಕ್ಕಂಥಾದ್ದು ಇದೆ.

(ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಕೆಲವು ರಿಸರ್ಚ್‌ನವರು ಹೇಳಿದ್ದಾರೆ. ಅಲ್ಲಿ ಟೂನ ಗ್ರೌಂಡ್ಸನ್ನು ಐಡೆಂಟಿಫೈ ಮಾಡಿದ್ದಾರೆ, ಟೂನ ಪೊಟೆನ್‌ಷಿಯಾಲಿಟಿ ಬಹಳ ಹೆಚ್ಚಿಗೆ ಇದೆ ಎನ್ನತಕ್ಕಂಥ ಮಾತನ್ನು ನಾನು ಪತ್ರಿಕೆಯಲ್ಲಿ ಓದಿರತಕ್ಕ ವಿಚಾರ ಆದುದರಿಂದ ಟೂನ ಗ್ರೌಂಡ್ಸನ್ನು ಎಕ್ಸ್‌ಪಾಂಡ್ ಮಾಡುವುದಕ್ಕೂ ಕೂಡ ತಾವು ಪ್ರಯತ್ನ ಪಡಬೇಕು. ಅದು ನಡೆದಿಲ್ಲ. ಅದನ್ನು ಮಾಡಬೇಕು. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ನಗರಾಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಾವು ಹಳ್ಳಿಯಿಂದ ಬರತಕ್ಕ ಜನ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಯಾವ ರಸ್ತೆಯಲ್ಲಿ ಹೋದರೂ ಕೂಡ ನಾವು ಹೋಗ ಬೇಕಾದಂಥ ಜಾಗಕ್ಕೆ ನಾವು ಸುಲಭವಾಗಿ ಹೋಗಿ ಮುಟ್ಟುತ್ತೇವೆ ಎನ್ನತಕ್ಕಂಥ ನಂಬಿಕೆ ನಮಗೆ ಖಂಡಿತ ಇಲ್ಲ. ಅಷ್ಟೊಂದು ಟ್ರಾಫಿಕ್ ಇಂಟೆನ್ಸಿಟಿ ಇದೆ. ಅಲ್ಲಿ ನೋಡಿದರೆ ಅಲ್ಲಿ ಹೊಗೆ, ಬೆಂಗಳೂರು ಅಂದರೆ ಹೊಗೆ ಸೂಸತಕ್ಕ ಜಾಗ ಹೊಗೆಗೆ ಹೆಸರುವಾಸಿಯಾಗಿದೆ ಈ ಹೊಗೆ ಎಗ್ಸಾಸ್ಟ್‌ನಿಂದಾಗಿ ಏನು ಬರುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಏನೂ ಪ್ರಯತ್ನ ಕೂಡ ನಡೆದಿಲ್ಲ. ಇದನ್ನು ತಡೆಗಟ್ಟತಕ್ಕಂಥ ಮತ್ತು ಟ್ರಾಫಿಕ್‌ನ್ನು ಸರಿಯಾದ ರೀತಿಯಲ್ಲಿ ನಡೆಸತಕ್ಕಂಥ ರೀತಿಯಲ್ಲಿ ಏನೂ ಪ್ರಯತ್ನ ಆಗಿಲ್ಲ. ಇದನ್ನು ತಡೆಗಟ್ಟುವುದಕ್ಕೆ ತಾವು ಅರ್ಬನ್ ಡೆವಲಪ್‌ಮೆಂಟ್‌ನಿಂದ ಪ್ರಯತ್ನ ಪಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ; ಮತ್ತೆ ಈ ಹೈಗ್ರೌಂಡ್ಸ್ ಪೋಲೀಸ್ ಸ್ಟೇಷನ್‌ನಿಂದ ಹಿಡಿದು ಬಳ್ಳಾರಿ ರಸ್ತೆವರೆಗೂ ಈ ಸ್ಯಾಂಕಿ ರಸ್ತೆಯನ್ನು ಅಗಲ ಪಡಿಸತಕ್ಕ ಒಂದು ಯೋಜನೆ ಇತ್ತು. ಆ ಯೋಜನೆ ಏನಾಯಿತೋ ಗೊತ್ತಿಲ್ಲ. ಏಕೆಂದರೆ ಸ್ಯಾಂಕಿ ರಸ್ತೆಯಲ್ಲಿ ಸಾಕಷ್ಟು ಅಪಘಾತಗಳು ಆಗುತ್ತಿವೆ. ಅದರಲ್ಲೂ ಅಲ್ಲಿ ಹೊಸದಾಗಿ ಹೋಟೆಲ್‌ಗಳಾಗಿವೆ. ಅಲ್ಲಿ ಹೈಗ್ರೌಂಡ್ಸ್ ಪೋಲೀಸ್ ಸ್ಟೇಷನ್ ಇದೆ, ಗಾಲ್ಫ್ ಕ್ಲಬ್ ಪಕ್ಕದಲ್ಲಿದೆ, ಅಲ್ಲಿ ಸಾಕಷ್ಟು ಆಕ್ಸಿಡೆಂಟ್ಸ್ ಆಗಿದೆ. ಇತ್ತೀಚೆಗೆ ಒಂದೇ ದಿವಸ ೩-೪ ಜನ ಸತ್ತಿರತಕ್ಕಂಥಾದ್ದನ್ನು ತಾವು ನೋಡಿರಬಹುದು. ಯಾರ ಒಂದು ಪ್ರಭಾವದಿಂದ ರಸ್ತೆಯನ್ನು ಅಗಲಪಡಿಸುವುದಕ್ಕೆ ಆಗಲಿಲ್ಲ. ಗಾಲ್ಫ್ ಕ್ಲಬ್‌ನವರ ಪ್ರಭಾವದಿಂದ ಆಗಲಿಲ್ಲವೇ? ಯಾರು ಪ್ರಭಾವ ಬೀರಿದ್ದಾರೆ ಎಂಬುದನ್ನು ತಾವು ಉತ್ತರ ಕೊಡುವಾಗ ತಿಳಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ನಾನು ಮೊನ್ನೆ ಪತ್ರಿಕೆಯಲ್ಲಿದೆ ಓದಿದೆ, ಏನೆಂದರೆ ಬೆಂಗಳೂರು ನಗರ ಕಾರ್ಪೊರೇಷನ್‌ನವರು ಕಟ್ಟಿಸುತ್ತಿರತಕ್ಕ ಬ್ರಿಡ್ಜ್ ಬಿದ್ದು ಹೋಯಿತು ಎಂದು. ಕಾರ್ಪೊರೇಷನ್‌ನಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ ಎನ್ನುವುದಕ್ಕೆ ಇದು ಸಾಕ್ಷಿ. ಕಟ್ಟತಕ್ಕ ಹಂತದಲ್ಲಿಯೇ ಬ್ರಿಡ್ಜ್ ಬಿದ್ದು ಹೋಗಿ, ೩-೪ ಜನ ಸತ್ತು ಹೋಗಿದ್ದಾರೆ. ಒಬ್ಬರಿಗೆ ಕೈಕಾಲು ಮುರಿಯಿತು ಎಂದು ವರದಿ ಆಗಿದೆ. ರಾಜಾಜಿನಗರಕ್ಕೆ ಹೋಗತಕ್ಕ ದಾರಿಯಲ್ಲಿ ಕಟ್ಟುತ್ತಿದ್ದ ಬ್ರಿಡ್ಜ್ ಬಿದ್ದು ಹೋಗಿದ್ದಕ್ಕೆ ಯಾರು ಕಾರಣಕರ್ತರು ಇಂಜನಿಯರುಗಳೇ ಏತಕ್ಕೆ ಇಂಥ ಕಳಪೆ ಕೆಲಸ ಮಾಡುತ್ತಿದ್ದಾರೆ. ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದವರು ಸತ್ತರು ಕೆಲವರು ಕೈಕಾಲ ಮುರಿದು ಕೊಂಡು ಹೋಗಿದ್ದಾರೆ. ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕ್ರೀಡೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ. ನಾನು ಅಮೆಚೂರ್ ಅಥ್ಲೆಟಿಕ್ಸ್ ಸಂಘದಲ್ಲಿದ್ದೇನೆ. ಅನೇಕ ನಗರಸಭೆಯವರು ಆಟಪಾಠಗಳಿಗೆ ಹೆಚ್ಚಿನ ಉತ್ತೇಜನ ಕೊಡುತ್ತಿದ್ದಾರೆ. ಆದರೆ ಬೆಂಗಳೂರು ನಗರಸಭೆಯವರು ಇದಕ್ಕೆ ಕೈ ಹಾಕಿಲ್ಲ. ಸಹಾಯ ಕೂಡ ಮಾಡುತ್ತಿಲ್ಲ. ರಾಜ್ಯದ ಎಲ್ಲ ನಗರಸಭೆಯವರು ಕೂಡ ಕ್ರೀಡೆಗಳಿಗೆ ಹೆಚ್ಚಿನ ಮಟ್ಟದಲ್ಲಿ ಸಹಾಯ ನೀಡಿ ಉತ್ತೇಜನ ನೀಡಬೇಕು. ಕೇಂದ್ರ ಸರ್ಕಾರದವರು "ಸೆಂಟ್ರಲ್ ಆಫ್ ಎಕ್ಸಲೆನ್ಸ್ ಬೆಂಗಳೂರಿನ ವಿಶ್ವವಿದ್ಯಾನಿಲಯದ ಪಕ್ಕದಲ್ಲಿ" ಮಾಡಿರುವುದನ್ನು ನೋಡಿದ್ದೇವೆ. ಇದರಿಂದ ರಾಜ್ಯದಲ್ಲಿರತಕ್ಕ ಕ್ರೀಡಾಪಟುಗಳಿಗೆ ಪ್ರಯೋಜನವಾಗುತ್ತಿಲ್ಲ. ಒಂದು ಕಾಲದಲ್ಲಿ ನಮ್ಮ ರಾಜ್ಯ ಅಥ್ಲೆಟಿಕ್ಸ್‌ನಲ್ಲಿ ಪ್ರಧಾನವಾದಂಥ ಸ್ಥಾನ ಹೊಂದಿತ್ತು. ಆದರೆ, ಇತ್ತೀಚೆಗೆ ಕ್ರೀಡಾಪಟುಗಳಿಗೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ನಮ್ಮ ರಾಜ್ಯದ ಕ್ರೀಡಾಪಟುಗಳು, ಬೇರೆ ರಾಜ್ಯಗಳ ಜೊತೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಸ್ಪರ್ಧೆ ಮಾಡಬೇಕಾದರೆ, ಅದಕ್ಕೆ ಬೇಕಾದ ಸಿಂಥೆಟಿಕ್ ಟ್ರ್ಯಾಕ್ ಇಲ್ಲ. ಇದು ಇದ್ದರೆ ಇಡೀ ದೇಶದಲ್ಲಿಯೇ ಒಂದನೇ ಸ್ಥಾನದಲ್ಲಿ ಬರಬಹುದು. ಇದಕ್ಕೆ ಒಂದು ಕೋಟಿ ರೂಪಾಯಿ ಮಾತ್ರ ಖರ್ಚಾಗುತ್ತದೆ. ಇದನ್ನು ಮಾಡಿದರೆ ಕೇಂದ್ರ ಸರ್ಕಾರ ಅರ್ಧ ಭಾಗವನ್ನು ಕೊಡುತ್ತದೆ. ಉಳಿದರ್ಧಭಾಗವನ್ನು ರಾಜ್ಯ ಸರ್ಕಾರ ಹಾಕಿ ಮಾಡಬೇಕಾಗುತ್ತದೆ. ಇವತ್ತು ಇದರ ಅವಶ್ಯಕತೆ ಇದೆ. ಜಯನಗರದಲ್ಲಿ ಸ್ಟೇಡಿಯಂ ಅನ್ನು ಅಭಿವೃದ್ಧಿ ಪಡಿಸುತ್ತಿದ್ದೀರಿ ಕೇಂದ್ರ ಸರ್ಕಾರ ಕೊಡತಕ್ಕ ಹಣವನ್ನು ಉಪಯೋಗಿಸಿ ಕೊಂಡು ಈ ಒಂದು ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಬೆಂಗಳೂರು ನಗರದಲ್ಲಿ ಸಾಕಷ್ಟು ಭೂಮಿಯನ್ನು ಈ ಕ್ಲಬ್‌ಗಳಿಗೆ ಕೊಟ್ಟಿದ್ದಾರೆ. ಗಾಲ್ಫ್ ಕ್ಲಬ್ ಸೆಂಚುರಿ ಕ್ಲಬ್ ಬೌರಿಂಗ್ ಇನ್‌ಸ್ಟಿಟ್ಯೂಟ್ ಹೀಗೆ ಹಲವಾರು ಕ್ಲಬ್‌ಗಳಿಗೆ ಕೊಟ್ಟಿದ್ದಾರೆ. ನರಸಿಂಹಮೂರ್ತಿಯವರೆ ತಾವೇನಾದರೂ ಅಲ್ಲಿಗೆ ಹೋಗಿದ್ದೀರಾ ಅವರಿಗೆ ಏತಕ್ಕೆ ಕೊಡಬೇಕು. ಅಲ್ಲಿ ಅವರು ಕುಡಿದು ಕಟ್ಟಿ

ಹಾಕುವಂಥ ಕೆಲಸವಾದರೂ ಏನು? ಮೊದಲು ಸರ್ಕಾರ ಇವುಗಳನ್ನು ವಶಪಡಿಸಿಕೊಳ್ಳುವ ಕೆಲಸ ಮಾಡಬೇಕು. ರೇಸ್‌ಕೋರ್ಸ್‌ನ್ನು ಬೇರೆ ಕಡೆ ವರ್ಗಾಯಿಸುವ ವಿಚಾರ ಮೊದಲಿನಿಂದಲೂ ಇದೆ. ಇದು ಬಹಳ ದೊಡ್ಡ ವ್ಯವಹಾರ. ಇತ್ತೀಚೆಗೆ ೩ ತಿಂಗಳು ೬ ತಿಂಗಳು ಅವಧಿಯನ್ನು ವಿಸ್ತರಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೆ, ನಾನು ನೆನ್ನೆಯ ದಿವಸ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಬರೀ ಕ್ಲಬ್‌ಗಳು ಒಂದೇ ಅಲ್ಲ, ಈ ಪೆಟ್ರೋಲ್ ಬಂಕ್‌ಗಳಿಗೆ ಸಹ ಲ್ಯಾಂಡನ್ನು ಲೀಸ್ ಮೇಲೆ ಕೊಟ್ಟಿದ್ದಾರೆ. ಬೆಂಗಳೂರು ಸಿಟಿಯ ಕಾರ್ಪೊರೇಷನ್‌ನಿಂದ ಈ ರೀತಿ ಕೊಟ್ಟಿರತಕ್ಕ ಲ್ಯಾಂಡ್‌ನ ಬೆಲೆ ೫೦೦ ಕೋಟಿ ರೂಪಾಯಿಗಳು ಎಷ್ಟೆಷ್ಟು ವರ್ಷ ಈ ಭೂಮಿಯನ್ನು ಲೀಸ್ ಕೊಟ್ಟಿದ್ದಾರೆ ಅಂದರೆ ೯೯ ವರ್ಷಗಳ ಕಾಲದವರೆಗೆ ಲೀಸ್ ಕೊಟ್ಟಿದ್ದಾರೆ ಇಡೀ ಬೆಂಗಳೂರು ಸುತ್ತಾ ಅನೇಕ ಜನರು ಒಂದಲ್ಲ ಒಂದು ಹೆಸರಿನಲ್ಲಿ ತೆಗೆದುಕೊಂಡು ಧರ್ಮ ಕಾರ್ಯಕ್ಕೆ ಛತ್ರ ಕಟ್ಟುತ್ತೇವೆಂದು ಹೇಳಿ ತೆಗೆದುಕೊಂಡಿರುವಂಥಾದ್ದು ಇದೆ. ಇಂಥಾದ್ದು ಒಟ್ಟು ೫೦೦ ಕೋಟಿ ರೂಪಾಯಿ ಆಸ್ತಿ ಇದೆ. ಅದರಲ್ಲಿ ಯು. ಬಿ. ಪಕ್ಕದಲ್ಲಿರತಕ್ಕದ್ದು ಒಂದು ಕೋಟಿ ರೂಪಾಯಿ ಪ್ರಾಪರ್ಟಿ ಇದೆ. ಆಸ್ತಿ ಸಂರಕ್ಷಣೆ ನಮ್ಮದು ಎಂದು ಹೇಳುತ್ತಿದ್ದರು. ಈಗ ಏನಾಗಿದೆ ೯೯ ವರ್ಷ ಲೀಸ್ ತೆಗೆದುಕೊಂಡಿರುವುದರಿಂದ ಆಸ್ತಿಯನ್ನು ಅವರ ಹೆಸರಿಗೆ ಮಾಡಿಕೊಂಡಿದ್ದಾರೆ. ಅದರ ಬೆಲೆ ಲೆಕ್ಕ ಹಾಕಿದರೆ ಅದು ಎರಡು ಕೋಟಿ ರೂಪಾಯಿಗೆ ಹೋಗುತ್ತದೆ ಅದು ಬೆಂಗಳೂರು ಕಬ್ಬನ್ ಪಾರ್ಕ್ ಮೂಲೆಯಲ್ಲಿಯೇ ಇದೆ. ಬೆಂಗಳೂರು ಸುತ್ತಲೂ ಸುಮಾರು ೯೯ ವರ್ಷಗಳ ಕಾಲ ಲೀಸ್ ಕೊಟ್ಟಿರುವುದು ನೋಡಿದರೆ ಅವರು ಹೆಸರುಗಳಿಗೆ ಅದು ಹೋದ ಹಾಗೆ. ಇದನ್ನು ಬಿಡಿಸಿಕೊಳ್ಳುವವರು ಯಾರು ? ಇದರ ಒಟ್ಟು ಬೆಲೆ ೫೦೦ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ, ಮಾನ್ಯ ನರಸಿಂಹಮೂರ್ತಿಯವರು ದೊಡ್ಡ ಮನಸ್ಸು ಮಾಡಿ ಯಾರು ಯಾರಿಗೆ ಈ ಭೂಮಿಯನ್ನು ಲೀಸ್ ಕೊಟ್ಟಿದ್ದಾರೆ ಅದನ್ನು ಹಿಂದಕ್ಕೆ ಪಡೆಯುವುದಕ್ಕೆ ಒಂದು ತಿದ್ದುಪಡಿ ತಂದು ವಾಪಸ್ಸು ಪಡೆದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಅದನ್ನು ಅವರು ಮಾಡುತ್ತಾರೆಂದು ತಾವು ನಂಬಿಕೆ ಇಟ್ಟುಕೊಳ್ಳಬೇಡಿ ಇದರಿಂದ ಯಾವ ಪುರುಷಾರ್ಥ ಸಾಧನೆಯಾಗುತ್ತಿದೆ. ನಾನು ಗಾಲ್ಫ್‌ಕ್ಲಬ್ ಪಕ್ಕದಲ್ಲಿಯೇ ಹೋಗುತ್ತಾ ನೋಡಿಕೊಂಡು ಹೋಗಿದ್ದೇನೆ. ಅಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಅದು ಎಷ್ಟು ಭೂಮಿ ಇದೆ, ಅದನ್ನು ಏತಕ್ಕೆ ಕೊಡಬೇಕು. ಮತ್ತೆ ರೇಸ್‌ಕೋರ್ಸ್‌ಗೆ ಕೊಟ್ಟಿರತಕ್ಕದ್ದು ಖಾಲಿ ಮಾಡಿಸಿ, ಬೆಂಗಳೂರಿನಿಂದ ಹೊರಗಡೆ ಹಾಕಬೇಕೆಂದು ತೀರ್ಮಾನವಾಗಿದ್ದು ಸಹ ಇಲ್ಲಿಯವರೆಗೆ ಜಾರಿ ಆಗಿಲ್ಲ. ಇದರ ಗುಟ್ಟೇನು ರೇಸ್‌ಕೋರ್ಸ್ ಹೊರಗಡೆ ಹಾಕದೇ ಇಲ್ಲಿ ಇಟ್ಟುಕೊಂಡಿರತಕ್ಕ ಗುಟ್ಟೇನು. ಇದನ್ನು ದಯಮಾಡಿ ಬಹಿರಂಗಪಡಿಸುತ್ತೀರಾ ? ನೀವು ಬಹಿರಂಗಪಡಿಸದೇ ಹೋದರೆ ನೀವು ಕೂಡ ಮೊದಲಿನಿಂದಲೂ ಅವರು ಯಾವರೀತಿ ಬಂದಿದ್ದಾರೆ ಅದೇ ರೀತಿ ೧೧ರಲ್ಲಿ ಮತ್ತೊಬ್ಬರು ಎಂದು ಆಗುತ್ತೀರಿ ಆ ರೀತಿಯಲ್ಲಿ ತಾವು ತೀರ್ಮಾನಕ್ಕೆ ಬರುವುದಾದರೆ, ನಾನು ಏನೂ ಹೇಳಲಿಕ್ಕೆ ಆಗುವುದಿಲ್ಲ. ಇದುವರೆಗೂ ನಾನು ಏನು ಹೇಳಿದ್ದೇನೆ ಅದರ ಬಗ್ಗೆ ಒಂದು ದಿಟ್ಟತನದಿಂದ ತೀರ್ಮಾನವನ್ನು ತಾವು ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಬೆಂಗಳೂರಿನಲ್ಲಿ ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ಎಲ್ಲಾ ರಸ್ತೆಗಳು ಇನ್ನೂ ಹಾಳಾಗಿ ಹೋಗಿವೆ. ಹೊಸೂರು ರಸ್ತೆ ಏನಿದೆ, ಅದು ಶೂಲೆ ಸರ್ಕಲ್‌ನಿಂದ ಪ್ರಾರಂಭವಾಗುತ್ತಿದೆ. ಅಲ್ಲಿ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ೫ ಅಡಿ, ೬ ಅಡಿ ದೂರ ಹೋದರೆ ಎರಡು ಮೂರು ಅಡಿ ಹಳ್ಳ ಸಿಕ್ಕುತ್ತದೆ. ಅಲ್ಲಿ ಪೈಪ್ ಲೈನ್ ಹಾಕಿದ ಮೇಲೆ ಸರಿಯಾಗಿ ರಿಪೇರಿ ಮಾಡಿಲ್ಲ ಹೊಸೂರು ರಸ್ತೆ ನ್ಯಾಷನಲ್ ಹೈವೇಗೆ ಹೋಗತಕ್ಕಂಥ ಬಹಳ ಟ್ರಾಫಿಕ್ ಇರತಕ್ಕಂಥ ರಸ್ತೆ. ಅಲ್ಲಿ ಯಾರೂ ಓಡಾಡಲಿಕ್ಕೆ ಸಾಧ್ಯವಿಲ್ಲ ಬೆಂಗಳೂರಿನಲ್ಲಿ ಕೆಲವು ರಸ್ತೆಗಳಲ್ಲಿ ಹೋಗಬೇಕೆಂದರೆ, ಜೀವವನ್ನು ಕೈಯಲ್ಲಿ ಇಟ್ಟುಕೊಂಡು ಹೋಗಬೇಕಾಗುತ್ತದೆ. ಅಂಥಾದ್ದರಲ್ಲಿ ಹೊಸೂರು ರಸ್ತೆ ಒಂದು. ಮತ್ತೊಂದು ಅಂದರೆ ಹಳೇ ಮದ್ರಾಸ್ ರಸ್ತೆ. ನಮ್ಮ ಕಡೆ ಹೋಗುವಾಗ ಅಲ್ಲಿ ೫೦ ಕಡೆ ಪೈಪ್ ಲೈನ್ ಲೀಕ್ ಆಗುತ್ತಿರುತ್ತದೆ. ಇದನ್ನು ಕಳೆದ ೧೦-೧೫ ವರ್ಷದಿಂದ ನೋಡುತ್ತಿದ್ದೇವೆ ಲೀಕ್ ಆಗುವುದನ್ನು ನಿಲ್ಲಿಸತಕ್ಕ ತಂತ್ರಜ್ಞಾನ ಈ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲವೇ ? ಇದಕ್ಕೆ ಕೋಟ್ಯಾಂತರ ರೂಪಾಯಿ ಏನು ಖರ್ಚು ಆಗುವುದಿಲ್ಲ ಆದರೂ ಇದನ್ನು ನಿಲ್ಲಿಸಲಿಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ? ಈ ಲೀಕೇಜ್ ಏನಾಗುತ್ತಿದೆ ಅದನ್ನು ನಿಲ್ಲಿಸತಕ್ಕಂಥ ತಜ್ಞರು ಬಹಳ ಮಂದಿ ಇದ್ದಾರೆ ಆದರೂ ಈ ಕೆಲಸ ಏತಕ್ಕೆ ಆಗುತ್ತಿಲ್ಲ. ಇದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತಿದೆ ಈ ಪೈಪು ಲೀಕೇಜ್ ಆಗತಕ್ಕದ್ದು ಪ್ರಮುಖವಾಗಿ ಎರಡು ರಸ್ತೆಗಳಲ್ಲಿ ಆಗುತ್ತದೆ, ಒಂದು ಹೊಸೂರು ರಸ್ತೆ, ಎರಡು ಓಲ್ಡ್ ಮದ್ರಾಸ್ ರಸ್ತೆ ಮಾನ್ಯ ಮಂತ್ರಿಗಳು ಶತಾಯುಗತಾಯ ಇದನ್ನು ಮಾಡಿಸುತ್ತೇನೆಂದು ಒಂದು ಶಪಥ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಇಲ್ಲದೆ ಇದ್ದರೆ ಇದು

ಆಗುವುದಿಲ್ಲ. ಈ ಪೈಪುಗಳಲ್ಲಿ ಲೀಕೇಜ್ ಆಗುತ್ತಾ ಇರುವುದರಿಂದ, ಬೆಂಗಳೂರಿನಲ್ಲಿರತಕ್ಕ ಅನೇಕ ರಸ್ತೆಗಳು ಹಾಳಾಗುತ್ತಿವೆ. ಇದಕ್ಕಾಗಿ ಒಂದು ಸ್ಕ್ವಾಡ್ ಮಾಡಿ ಈ ಲೀಕೇಜ್ ಆಗತಕ್ಕದನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಹೇಳಬೇಕೆಂದರೆ, ನಾನು ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ಒಳ್ಳೆಯ ಕೆಲಸಗಳು ಕೆಲವುಕಡೆ ಆಗಿದೆ ಇಲ್ಲ ಎಂದು ಹೇಳುವುದಿಲ್ಲ. ನಾನು ಇದ್ದಾಗ ಹೆಚ್ಚಿಗೆ ಹಣ ಬರತಕ್ಕ ಅವಕಾಶ ಇರಲಿಲ್ಲ ಈಗ ಅನೇಕ ಯೋಜನೆಗಳನ್ನು ಅವರಿಗೆ ಕೆಲಸ ಮಾಡುವುದಕ್ಕೆ ವಹಿಸಿದ್ದೀರಿ. ಅದನ್ನು ಮಾಡತಕ್ಕ ಶಕ್ತಿಸಾಮರ್ಥ್ಯ ಅವರಿಗೆ ಇದೆ.

೪-೨೦ ಪಿ. ಎಂ.

ಕಳೆದ ೬ ತಿಂಗಳಿನಿಂದ ಅವರಿಗೆ ಕೋಟ್ಯಾಂತರ ರೂಪಾಯಿ ಹಣವನ್ನು ಕೊಟ್ಟಿದ್ದೀರಿ. ಆದರೆ ಅಲ್ಲಿ ಹೇಳುವವರು ಕೇಳುವವರು ಯಾರು ಬೇಡವೆ? ಅಲ್ಲಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರು ಎಷ್ಟು ಕಡೆಗಳಲ್ಲಿ ಅಧ್ಯಕ್ಷರಾಗಿ ಇರುತ್ತಾರೆ. ಹಲವಾರು ಕಡೆಗಳಿಗೆ ಒಬ್ಬರನ್ನೇ ಅಧ್ಯಕ್ಷರನ್ನಾಗಿ ಮಾಡಿದರೆ ಅವರು ಏನಾದರೂ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ? ಅಲ್ಲಿ ಎಂ. ಡಿ. ಇಲ್ಲ. ಇಂಜಿನಿಯರ್ಸ್‌ಗಳು ಇಲ್ಲ. ಹೆಸರಿಗೆ ಮಾತ್ರ ಅಧ್ಯಕ್ಷರು ಇದ್ದರೆ ಸಾಕೇ ? ಅಲ್ಲಿ ಅಧ್ಯಕ್ಷರ ಕೆಲಸ. ಲಿಮಿಟೆಡ್ ಕೆಲಸ ಅವರು ಸಭೆಗಳಲ್ಲಿ ಹಾಜರಾಗಬಹುದು ಅಷ್ಟು ಬಿಟ್ಟರೆ ಚೇರ್ಮನ್‌ಗೆ ಹೆಚ್ಚಿನ ಕೆಲಸ ಇದೆಯೆಂದು ನಾನು ತಿಳಿದುಕೊಂಡಿಲ್ಲ. ಅಲ್ಲಿನ ಎಂ.ಡಿ.ಯವರ ಜಾಗ ಏನು ಇದೆ ಆ ಜಾಗ ಬಹಳ ಜವಾಬ್ದಾರಿಯುತವಾದುದು ಮತ್ತು ಅದಕ್ಕೆ ತಜ್ಞರೇ ಬೇಕು. ಯಾರು ಯಾರನ್ನೋ ಎಂ. ಡಿ. ಯನ್ನಾಗಿ ಹಾಕುತ್ತೇವೆಂದು ಹೇಳಿದರೆ ಆಗುವುದಿಲ್ಲ. ಪೈಪ್‌ಲೈನ್ ಏಕೆ ಲೀಕ್ ಆಗುತ್ತಿದೆ ಎಂದರೆ ಅಲ್ಲಿ ತಜ್ಞರು ಇಲ್ಲದೇ ಬೇರೆಯವರು ಕೆಲಸ ಮಾಡಿದರೆ ಈ ರೀತಿಯಾಗುತ್ತದೆ. ಆದುದರಿಂದ ಈ ತೊಂದರೆಯನ್ನು ತಪ್ಪಿಸಲು ತಜ್ಞರಾಗಿರತಕ್ಕಂತವರನ್ನೇ ಅಲ್ಲಿಗೆ ಎಂ, ಡಿ. ಯನ್ನಾಗಿ, ಮತ್ತು ಇಂಜಿನಿಯರ್‌ಗಳನ್ನು ನೇಮಕ ಮಾಡಬೇಕು. ನಾವು ಅಂತಹವರನ್ನೇ ಮಾಡಿ ಇಂತಹವರನ್ನೇ ಮಾಡಿ ಎಂದು ಹೇಳುವುದಿಲ್ಲ. ನಾನು ಹಿಂದೆ ಅಧ್ಯಕ್ಷನಾಗಿದ್ದಂತಹ ಕಾಲದಲ್ಲಿ ಅವರದ್ದೇ ಆದಂತಹ ಒಂದು ಕೇಡರ್ ಅನ್ನು ಬಿಲ್ಡ್ ಅಪ್ ಮಾಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೆ. ಈಗ ಅದು ಏನಾಯಿತೋ ಗೊತ್ತಿಲ್ಲ ಅಲ್ಲಿರತಕ್ಕಂತಹ ಬೋರ್ಡ್‌ನಲ್ಲಿ ಒಳ್ಳೆಯ ನೌಕರರು ಇದ್ದಾರೆ ಅವರಿಗೆ ಪ್ರಮೋಷನಲ್ ಅಪೋರ್ಚುನಿಟೀಸ್ ಇಲ್ಲದೇ ಇರತಕ್ಕಂತಹ ಪರಿಸ್ಥಿತಿ ಬಂದಿದೆ ಅದನ್ನು ತಾವು ದಯಮಾಡಿ ಗಮನಿಸಬೇಕು. ಮತ್ತು ಅಲ್ಲಿಗೆ ತಜ್ಞರಾದವರನ್ನೇ ಹಾಕಬೇಕೆಂದು ಹೇಳುತ್ತೇನೆ ಇನ್ನು ಹೌಸಿಂಗ್ ಬೋರ್ಡ್ ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ. ಹಿಂದೆ ಹೌಸಿಂಗ್ ಬೋರ್ಡ್‌ನಲ್ಲಿ ರೂರಲ್ ಹೌಸಿಂಗ್ ಸೆಲ್ ಎಂದು ಇತ್ತು ಅದು ಈಗ ವೈಂಡ್ ಅಪ್ ಆಗಿದೆ ಅದರ ಬಗ್ಗೆ ಸ್ವಲ್ಪ ಗಮನ ಕೊಟ್ಟು ಅದನ್ನು ಪರಿಶೀಲನೆ ಮಾಡಬೇಕು. ರೂರಲ್ ಹೌಸಿಂಗ್ ಬೋರ್ಡಿನಲ್ಲಿ ಅನೇಕಫೋರ್ಜರಿ ಕೇಸುಗಳು ಇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ತಾಲ್ಲೂಕಿನದು ಒಂದು ಫೋರ್ಜರಿ ಕೇಸ್ ಆಯಿತು ಅದೇನಾಯಿತೋ ಗೊತ್ತಿಲ್ಲ ನನ್ನ ತಾಲೂಕಿನ ನನ್ನ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಒಂದು ಕೇಸ್‌ನಲ್ಲಿ ಅಲ್ಲಿ ಜೆ. ಇ. ಆಗಿರತಕ್ಕಂತಹವರು ಲಕ್ಷಾಂತರ ರೂಪಾಯಿ ಹಣದ ಚೆಕ್‌ಗಳನ್ನು ಫೋರ್ಜರಿ ಮಾಡಿ ತೆಗೆದುಕೊಂಡಿದ್ದಾರೆ ಆದರೆ ಅದು ಬೆಳಕಿಗೇ ಬಂದಿಲ್ಲ ಅದನ್ನು ತಾವು ದಯಮಾಡಿ ನೋಡಬೇಕು. ಇನ್ನು ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ ಇಂದಿರಾ ನಗರದಲ್ಲಿ ಅವರದ್ದು ಒಂದು ಗೆಸ್ಟ್ ಹೌಸ್ ಇತ್ತು ಅದನ್ನು ಹುಡ್ಕೋ ಅಫಿಷಿಯಲ್‌ಗೆ ಕೊಟ್ಟಿದ್ದಾರೆ ಈಗಲೂ ಅವರು ವಾಸವಿದ್ದಾರೆ. ಸುಮಾರು ೧೫ ಲಕ್ಷ ರೂಪಾಯಿ ಬೆಲೆ ಬಾಳತಕ್ಕಂತಹ ಗೆಸ್ಟ್-ಹೌಸ್ ಅದು ಅದನ್ನು ಯಾರಿಗೋ ೨-೩ ಲಕ್ಷ ರೂಪಾಯಿಗೆ ಅಲಾಟ್ ಮಾಡಿದ್ದಾರೆ ಅದನ್ನು ಯಾರ ಆಸ್ತಿ ಎಂದು ತಿಳಿದುಕೊಂಡು ಅಷ್ಟಕ್ಕೆ ಅಲಾಟ್ ಮಾಡಿದ್ದೀರಿ? ನಿರ್ಗತಿಕನಿಗೆ, ಬಡವನಿಗೇನಾದರೂ ಕೊಟ್ಟಿದ್ದೀರಾ ? ಇದಕ್ಕೆ ಏನು ಕಾರಣ ಎಂಬುದನ್ನು ವಿವರವಾಗಿ ತಾವು ತಮ್ಮ ಉತ್ತರದಲ್ಲಿ ನೀಡಬೇಕು. ಸುಮಾರು ೧೫ ಲಕ್ಷ ರೂಪಾಯಿ ಬೆಲೆ ಬಾಳತಕ್ಕಂಥಾದ್ದನ್ನು ೨- ಲಕ್ಷ ರೂಪಾಯಿಗೆ ಯಾರಿಗೋ ಕೊಡುವುದೆಂದರೆ ಸರ್ಕಾರ ಏನು ವೀರ ದಾನ ಶೂರ ಕರ್ಣನೇ ? ಇದರ ಅರ್ಥ ಏನು ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದು ಯಾರ ಕಾಲದಲ್ಲಿ ಆಯಿತು ಎಂದು ಹೇಳಿ ?

ಶ್ರೀ ಸಿ ಬೈರೇಗೌಡ.—ಅದನ್ನು ಅವರು ಹೇಳಬೇಕು, ಯಾವ ಕಾರಣಕ್ಕೋಸ್ಕರ ಕೊಟ್ಟಿದ್ದಾರೆ. ಅವರು ಯಾರು ಎಂಬುದನ್ನು ಅವರು ಕೇಳಲಿ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಉತ್ತರ ಹೇಳದಿದ್ದರೆ ಅದರಲ್ಲಿ ನಿಮ್ಮ ಪಾಲೂ ಇದೆ ಎಂಬ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ವಿವರವನ್ನು ಕೊಡಬೇಕು.

ಈ ಇಲಾಖೆಯು ಪಡೆದಷ್ಟು ಪ್ರಖ್ಯಾತಿಯನ್ನು ಇನ್ನು ಬೇರೆ ಯಾವುದೇ ಇಲಾಖೆಯೂ ಕೂಡ ಪಡೆದಿಲ್ಲ ಕಳೆದ ಕೆಲವು ವರ್ಷಗಳಲ್ಲಿ ಅಷ್ಟೊಂದು ಪ್ರಖ್ಯಾತಿಯನ್ನು ಪಡೆದಿತ್ತು. ಒಂದು ಸಂದರ್ಭದಲ್ಲಿ ಲಂಚ ಎಂಬುದು ಯಾವರೀತಿ ಇತ್ತು ಎಂದರೆ ಆಗ ನೋಟಿನ ರೂಪದಲ್ಲಿರಲಿಲ್ಲ. ನೋಟಿನ ರೂಪದಲ್ಲಿ ಯಾರಾದರೂ ಲಂಚವನ್ನು ಕೊಟ್ಟರೂ ಕೂಡ ಅದನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆಗ ಬಂಗಾರದ ನಾಣ್ಯ, ಬಂಗಾರದ ಬಿಸ್ಕತ್ತುಗಳು ಲಂಚಕ್ಕಾಗಿ ವಿನಿಮಯವಾಗುತ್ತಿದ್ದುವು.

ಶ್ರೀಮತಿ ಮನೋರಮಾ ಮಧ್ವರಾಜ್.— ಯಾವ ಕಾಲದಲ್ಲಿ ?

ಶ್ರೀ ಸಿ. ಬೈರೇಗೌಡ.— ಯಾವ ಕಾಲದಲ್ಲಿ ಎಂದು ಹೇಳುವುದು ಬೇಡ, ಅದಕ್ಕಾಗಿಯೇ ನಾನು ಹಿಂದೆ ಒಂದು ಕಾಲದಲ್ಲಿ ಅಂತ ಹೇಳಿದ್ದು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಉಪಾಧ್ಯಕ್ಷಿಣಿಯವರೆ ಯಾವ ಕಾಲದಲ್ಲಿ ಅಂತ ಹೇಳಬೇಕು. ಗುರುತರವಾದ ಆಪಾದನೆಯನ್ನು ಹೇಳಿದಮೇಲೆ ನಿರ್ಧಿಷ್ಟವಾಗಿ ಅವರು ಹೇಳಬೇಕು. ಅದನ್ನು ಅವರು ಸ್ಪಷ್ಟಪಡಿಸಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಈ ಇಲಾಖೆಯಲ್ಲಿ ನಡೆದಂಥ ಪ್ರಕರಣಗಳ ಬಗ್ಗೆ

ಛೇರ್ಮನ್.— ನೀವು ಇದುವರೆಗೆ ಅರ್ಧ ಗಂಟೆಯ ಮೇಲೆ ಮಾತನಾಡಿದ್ದೀರಿ. ಬೇಗನೆ ಮುಗಿಸಿ.

ಶ್ರೀ ಬಿ. ಎಂ. ಇದಿನಬ್ಬ.— ನೀವು ನಮಗೆ ೮ ನಿಮಿಷ ಅಂತ ತಡೆ ಹಾಕಿದ್ದಿರಿ...

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷಿಣಿಯವರೆ, ಈಗ ನಾನು ಭಾಷಣದ ಕೊನೆಗೆ ಬಂದಿದ್ದೇನೆ. ಕೊನೆಯ ಅಂಚಿನಲ್ಲಿದ್ದೇನೆ ಮಾನ್ಯ ಮುಖ್ಯ ಮಂತ್ರಿಗಳು ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮಾತನಾಡುವಾಗ, ಕಾನೂನು ತನ್ನಷ್ಟಕ್ಕೆ ತಾನೇ ಜಾರಿಯಾಗುತ್ತದೆ ಎಂದು ಹೇಳಿದ್ದಾರೆ. ಸ್ವಾಮಿ, ನಾನಾದರೂ ಕೇಳುತ್ತೇನೆ. ತಾವು ಅಧಿಕಾರಕ್ಕೆ ಬಂದು ೬ ತಿಂಗಳಾಯಿತು. ಕಾನೂನನ್ನು ಜಾರಿಮಾಡುವುದಕ್ಕೆ ತಮಗೆ ಎಷ್ಟು ದಿವಸಬೇಕೆ ? ತಾವು ಏನು ಮಾಡುತ್ತಿದ್ದೀರಿ ? ಜಿ. ವಿ.ಕೆ. ರಾವ್‌ರವರ ಸಮಿತಿಯ ವರದಿಯ ಪ್ರಕಾರವೇ ಸುಮಾರು ೫೦-೬೦ ಕೋಟಿ ರೂಪಾಯಿಗಳು ಮಧ್ಯವರ್ತಿಗಳ ಪಾಲಾಗಿದೆ ಎಂದು ಹೇಳಿದ್ದಾರೆ. ಇದು ಯಾರ ಜೇಬಿಗೆ ಹೋಗಿದೆ ?

ಶ್ರೀ ಬಿ. ಎಂ. ಇದಿನಬ್ಬ.— ಹಿಂದೆ ಆದಂಥ ಹೆಚ್ಚುಕಮ್ಮಿಗಳನ್ನು, ಹೊಲಸುಗಳನ್ನು ಸರಿಪಡಿಸುವುದಕ್ಕೆ ಇನ್ನೂ ೫-೬ ತಿಂಗಳು ಬೇಕಾಗುತ್ತದೆ.

ಶ್ರೀ ಸಿ ಬೈರೇಗೌಡ.— ಅವರು ಮಾಡಿದ ತಪ್ಪನ್ನೇ ನೀವೂ ಮಾಡುತ್ತಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ, ಇದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ೬ ತಿಂಗಳು ಬೇಕೇ? ಇಷ್ಟು ತಡವಾಗುವುದಕ್ಕೆ ಏನು ಕಾರಣ ? ಬಹುಶಃ ನನಗನಿಸುತ್ತದೆ, ಇದರಲ್ಲಿ ಏನೋ ವ್ಯವಹಾರ ಒಳಗಡೆ ನಡೆಯುತ್ತಿದೆ. ಇವರು ಏನೋ ಮಾಡುವುದಕ್ಕೆ ಹೊಂಚುಹಾಕುತ್ತಿದ್ದಾರೆ. ಇವರ ವ್ಯವಹಾರ, ವ್ಯಾಪಾರ ಅಲ್ಲಿ ಕುದುರಿಲ್ಲ ಆದ್ದರಿಂದಲೇ ಇವರು ಸುಮ್ಮನಿದ್ದಾರೆಂದು ನಾನು ಹೇಳಬೇಕಾಗುತ್ತದೆ. ನೀವು ಈ ರೀತಿ ಮಾಡುವುದಾದರೆ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ಅವರು ಸುಮ್ಮನಿರುವುದಿಲ್ಲ. ೧೭೭ ಜನರು ಇದ್ದೇವೆ, ನಾವು ಏನು ಮಾಡಿದರೂ ನಡೆದುಕೊಂಡು ಹೋಗುತ್ತದೆಂದು ನೀವು ತಿಳಿದುಕೊಂಡಿದ್ದರೆ ಅದು ತಪ್ಪು. ಎಲ್ಲಿ ಏನೇ ಅವ್ಯವಹಾರಗಳಾಗಿರಲಿ, ಅಕ್ರಮಗಳಾಗಿರಲಿ ಅದರ ಬಗ್ಗೆ ವಿಚಾರಣೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಯಾರೂ ಕೂಡ ಕಾನೂನಿಗಿಂತ ದೊಡ್ಡವರಲ್ಲ. ಅದು ಇವತ್ತು ಸಾಬೀತಾಗಬೇಕು. ಆದರೆ ಇದುವರೆಗೂ ಆ ಕೆಲಸ ಆಗಿಲ್ಲ. ಇದಕ್ಕೆ ಕಾರಣ ಏನೆಂಬುದನ್ನು ದಯವಿಟ್ಟು ತಿಳಿಸಬೇಕು. ಇಲ್ಲಿ ಒಂದು ಮಾತನ್ನು ತಮ್ಮ ಮತ್ತು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಹೌಸಿಂಗ್ ಸೊಸೈಟಿಯ ವಿಚಾರದಲ್ಲಿ ಹೇಳಲೇಬೇಕಾಗಿದೆ. ಶಾಂತಿನಗರ ಹೌಸಿಂಗ್ ಸೊಸೈಟಿ ೧೯೬೫ರಲ್ಲಿ ರಿಜಿಸ್ಟರ್ ಆಗಿದೆ. ಅದು ೧೯೮೩ನೇ ಇಸವಿಯವರೆಗೂ ಕೂಡ ಅದು ಎಲ್ಲಿತ್ತು ಎಂಬುದು ಯಾರಿಗೂ ಕೂಡ ಗೊತ್ತಿರಲಿಲ್ಲ. ೮೩ರಲ್ಲಿ ಅದು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಯಾರೋ ಬಂದು ದಾನವನ್ನು ಕೊಡುತ್ತಾರೆ. ಅಂದರೆ ಇಷ್ಟೊಂದು ಹಣವನ್ನು ದಾನರೂಪದಲ್ಲಿ ಕೊಡುವವರೂ ನಮ್ಮಲ್ಲಿದ್ದಾರೆ. ಆ ದುಡ್ಡು ಬಂದ ಮೇಲೆ ಇವರು ೧೯೮೩ರಲ್ಲಿ ನಮಗೆ ಜಮೀನು ಬೇಕೆಂದು ಅರ್ಜಿ ಹಾಕಿಕೊಂಡಿದ್ದಾರೆ. ಇದಕ್ಕೂ ಮೊದಲು ಅಲ್ಲಿ ಏನೇನು ನಡೆದಿತ್ತು ಎಂದರೆ, ಅಲ್ಲಿದ್ದ ಸದಸ್ಯರು ೨೫ ಜನ ಮಾತ್ರ. ಇವರ

ಪೈಕಿ ಮೂರುನಾಲ್ಕು ಜನ ಮುಸ್ಲೀಮರು ಮಾತ್ರ ಇದ್ದರು. ಮತ್ತು ಕೆಲವರು ಹರಿಜನರಿದ್ದರು. ಈ ರೀತಿಯಾಗಿ ಕೆಳವರ್ಗದ ಜನರು ಅದಕ್ಕೆ ಸದಸ್ಯರಾಗಿದ್ದರು. ನಂತರ ಬೇರೆಯವರು ಆ ಸಂಘಕ್ಕೆ ನುಗ್ಗಿದರು. ಆ ೨೫ ಜನ ಸದಸ್ಯರ ಸಂಖ್ಯೆ ಇದ್ದದ್ದು ಹೋಯಿತು. ಆಮೇಲೆ ಜಮೀನಿಗೆ ಅರ್ಜಿ ಹಾಕುತ್ತಾರೆ. ಸುಮಾರು ೬೫ ಎಕರೆ ಭೂಮಿಗೆ ಅರ್ಜಿ ಹಾಕುತ್ತಾರೆ. ಬಹಳ ಸ್ವಾರಸ್ಯವಾಗಿ ನಡೆದ ಘಟನೆ ಏನೆಂದರೆ ರಾಜ್ಯ ಸರ್ಕಾರದ ಕಂದಾಯ ಇಲಾಖೆಯಿಂದ ಒಂದು ಪತ್ರ ಅವರಿಗೆ ಹೋಗುತ್ತದೆ. ನಾನು ಎಲ್ಲ ಓದುವುದಕ್ಕೆ ಹೋಗುವುದಿಲ್ಲ, ಸ್ವಲ್ಪಮಾತ್ರ ಓದಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

" Secretary to Government, Revenue Department, letter dated 28th July, 1983."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಮಾಡಿದ್ದನ್ನು ಅವರು ಹೇಳಲೇಬೇಕು.

ಶ್ರೀ ಸಿ ಬೈರೇಗೌಡ.— ಈ ಪತ್ರದಲ್ಲಿ ಅವರಿಗೆ ಕೊಟ್ಟಿರತಕ್ಕಂಥ ಅಕ್ವಿಜಿಷನ್ ಲ್ಯಾಂಡ್ ಕಿರಿವಾಗಲು, ಅಮಾನಿಕೆರೆ, ಜಕ್ಕಸಂದ್ರ, ಅದಕ್ಕೆ ಸಂಬಂಧಪಟ್ಟದ್ದು. ಅದಕ್ಕೆ ಏನು ಸರ್ಕಾರದಿಂದ ಹೇಳುತ್ತಾರೆಂಬುದಕ್ಕೆ ಇಷ್ಟು ಮಾತ್ರ ಎರಡು ಲೈನ್ ಓದಿಬಿಡುತ್ತೇನೆ.

" The entire area proposed for acquisition is in the green belt approved by the Government and request the Government to withdraw the notification immediately."

ಏನು ನೋಟಿಫಿಕೇಶನ್ ಹೊರಡಿಸುತ್ತಾರೆ. ಈ ನೋಟಿಫಿಕೇಷನ್ ವಿತ್‌ಡ್ರಾ ಮಾಡಲು ಕಾರಣವೇನೆಂದರೆ. ಅದು ಗ್ರೀನ್ ಬೆಲ್ಟ್‌ನಲ್ಲಿ ಬರತಕ್ಕಂಥದ್ದು ಎಂದು. ಆದರೆ ಶಾಂತಿನಗರ ಗೃಹ ನಿರ್ಮಾಣ ಸಹಕಾರಿ ಸಂಘದವರು ಅರ್ಜಿ ಹಾಕಿದಾಗ ಗ್ರೀನ್‌ಬೆಲ್ಟ್ ಇಲ್ಲ ಏನೂ ಇಲ್ಲ. ಗ್ರೀನ್‌ಬೆಲ್ಟ್ ಇದ್ದದ್ದು ಹೋಗಿ ಬ್ಲಾಕ್ ಬೆಲ್ಟ್ ಆಯಿತು. ಈ ರೀತಿ ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು. ನಂತರ ಅದು ಬ್ಲಾಕ್ ಬೆಲ್ಟ್‌ಗೆ ನಡೆಯಲಿಲ್ಲ. ನಂತರ ಬ್ಲಾಕ್‌ಬೆಲ್ಟ್ ಹೋಗಿ ರೆಡ್ ಬೆಲ್ಟ್ ಆಯಿತು. ಏಕೆಂದರೆ ಬಹಳ ಗೌರವಾನ್ವಿತ ವ್ಯಕ್ತಿಗಳು ಇಲ್ಲಿಗೆ ಬಂದರೆ ನಾವು ರೆಡ್ ಕಾರ್ಪೆಟ್ ರೆಸೆಪ್ಷನ್ ಕೊಡುತ್ತೇವೆ. ಅದೇರೀತಿ ಈ ಸಂಘಕ್ಕೂ ರೆಸೆಪ್ಷನ್ ಕೊಡಲಾಯಿತು. ಇಲ್ಲಿ ರೆಡ್‌ಬೆಲ್ಟ್ ಹೇಗಾಯಿತು ಏತಕ್ಕಾಗಿ ಆಯಿತೆಂದರೆ ಅದೇ ಪ್ರದೇಶದಲ್ಲಿ ಬಿ.ಡಿ.ಎ.ರವರು ೩೫೦ ಎಕರೆ ಪ್ರದೇಶದಲ್ಲಿ ತಮ್ಮ ಲೇಔಟ್ ಮಾಡಬೇಕೆಂದು ತೀರ್ಮಾನಮಾಡಿದ್ದರು. ಆಮೇಲೆ ಶಾಂತಿನಗರದ ಗೃಹನಿರ್ಮಾಣ ಸಹಕಾರಿ ಸಂಘಕ್ಕೆ ಎಷ್ಟು ಎಷ್ಟು ಭೂಮಿಯನ್ನು ಕೊಟ್ಟಿತ್ತೋ ಅಷ್ಟನ್ನು ಬಿಟ್ಟು ಬಿ.ಡಿ.ಎ.ರವರು ತಮ್ಮ ಲೇಔಟ್ ಮಾಡಬೇಕೆಂದು ತೀರ್ಮಾನ ಆಗುತ್ತದೆ. ಅದಕ್ಕೆ ನಾನು ಇದನ್ನು ಕರೆದಿದ್ದು ಏನೆಂದರೆ, ಗ್ರೀನ್ ಬೆಲ್ಟ್ ಹೋಗಿ ಬ್ಲಾಕ್‌ಬೆಲ್ಟ್ ಆಯಿತು. ಬ್ಲಾಕ್ ಹೋಗಿ ರೆಡ್ ಆಯಿತು ಎಂದು, ಲೋಕಂಡವಾಲ ಸಂಸ್ಥೆಗೆ ಈ ೬೫ ಎಕರೆ ಜಮೀನು ಹೋಗುತ್ತದೆ. ಈಗ ನೀವೇನು ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಲೋಕಂಡವಾಲ ಬಂದುದು ನಿಮ್ಮ ಕಾಲದಲ್ಲೇ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಆ ಭೂಮಿಯಲ್ಲಿ ಗ್ರೂಪ್ ಹೌಸಿಂಗ್ ಮಾಡಬೇಕೆಂದು ಆಯಿತು. ಎನ್. ಆರ್. ಐ. ವಿಷಯ ಬಂದಾಗ ಸರ್ಕಾರದವರು ಏನು ಹೇಳಿದರೆಂದರೆ, ನಾವು ಈ ಸ್ಕೀಮನ್ನು ಒಪ್ಪಿಲ್ಲ, ನಮ್ಮಲ್ಲಿ ಈ ಬಗ್ಗೆ ರೂಲ್ಸ್ ಮಾಡಿಲ್ಲ, ಆ ಕಾರಣಕ್ಕಾಗಿ ಇದನ್ನು ಸರ್ಕಾರ ಒಪ್ಪಲಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ, ಗ್ರೂಪ್ ಹೌಸಿಂಗ್ ಸ್ಕೀಮ್‌ಗೆ ಸರ್ಕಾರ ಇದುವರೆಗೆ ಒಪ್ಪದಿರುವ ಕಾರಣ, ಅದಕ್ಕೂ ಇದೇ ನಿಯಮ ಅನ್ವಯವಾಗುತ್ತದೆ.

ಆದೂ ಕೂಡ ಆ ಸಂಘದಲ್ಲಿ ಸದಸ್ಯರಾಗಿರತಕ್ಕವರಿಗೆ ಮಾತ್ರ ಜಮೀನು ಕೊಡಬೇಕಾಗಿರುವುದು. ಇಲ್ಲೂ ಕೂಡ ಗ್ರೂಪ್ ಹೌಸಿಂಗ್‌ಗೆ ಅವಕಾಶ ಇಲ್ಲ. ಗ್ರೂಪ್ ಹೌಸಿಂಗ್ ಮಾಡಿದರೂ ಸಹ ಆ ಸೊಸೈಟಿಯವರಿಗೆ ಮಾತ್ರ ಸೈಟೋ ಅಥವಾ ಮನೆಯನ್ನೋ ಕೊಡಬೇಕಾಗುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಯಾವ ಸೊಸೈಟಿ ಅದು ?

ಶ್ರೀ ಸಿ. ಬೈರೇಗೌಡ.— ಶಾಂತಿನಗರ ಹೌಸಿಂಗ್ ಸೊಸೈಟಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಈಗಾಗಲೇ ಇದು ಕಾಲಮಿಟ್ಟಿಂಗ್ ಆಯೋಗದ ಮುಂದೆ ಇದೆ. Better not to speak unnecessarily about it.

ಶ್ರೀ ಸಿ. ಬೈರೇಗೌಡ.— ಆಯೋಗದ ಮುಂದೆ ಇದೆ ಎಂದು ಅವರು ಮಿಸ್‌ಲೀಡ್ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಆಯೋಗದ ಮುಂದಿರುವುದು ಎನ್.ಆರ್.ಐ. ಮಾತ್ರ. ಸಿಂಧ್ಯಾ ಅವರು ಮಿಸ್‌ಲೀಡ್ ಮಾಡಲು ಹೊರಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ನಾನು ಅವರ ಚರ್ಚೆಯಲ್ಲಿ ಅವರು ಏನೇನು ಹೇಳುತ್ತಿದ್ದಾರೆ ಎಂಬುದರಲ್ಲಿ ಭಾಗವಹಿಸಿಲ್ಲ. ಮಾನ್ಯ ನರಸಿಂಹ ಮೂರ್ತಿಯವರು ಹೇಳಿದಾಗ ನಾನು ಕುಳಿತು ಹೇಳಿದ್ದೇನೆ. ಆದ್ದರಿಂದ ಅದು ರೆಕಾರ್ಡ್‌ಗೆ ಹೋಗುವಂತಿಲ್ಲ ಆದ್ದರಿಂದ ಅನಾವಶ್ಯಕವಾಗಿ ನನ್ನ ಹೆಸರನ್ನು ಬಳಸುವುದಕ್ಕೆ ಪ್ರಯತ್ನ ಮಾಡಬೇಡಿ.

ಛೇರ್ಮನ್.— ನಾನು ಮೂರು ನಾಲ್ಕು ಬಾರಿ ಬೆಲ್ ಮಾಡಿದ್ದೇನೆ. ನಿಮ್ಮ ಭಾಷಣವನ್ನು ಮುಗಿಸಿ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಈಗಲೂ ಅಲ್ಲಿ ರಸ್ತೆಯಾಗುತ್ತಿದೆ ಜೆಲ್ಲಿ ಹೊಡೆದಿದ್ದಾರೆ. ಎಲ್ಲಾ ನಡೆಯುತ್ತಿದೆ ಆದರೆ ಇಲ್ಲಿವರೆಗೂ ಅವರ ಮೇಲೆ ಏತಕ್ಕೆ ಕ್ರಮ ತೆಗದುಕೊಂಡಿಲ್ಲ ಎಂಬುದನ್ನು ಪ್ರಶ್ನೆ ಮಾಡುತ್ತಿದ್ದೇನೆ. ಅಲ್ಲಿ ಕೆಲಸ ನಿಲ್ಲಿಸುವುದಕ್ಕೆ ಕಾನೂನು ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ ಎಂಬುದನ್ನು ತಾವು ತಿಳಿಸಬೇಕೆಂದು ಹೇಳಿ. ಈಗಿನ ಮುಖ್ಯಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಸದಸ್ಯರಾಗಿದ್ದಾಗ ಪದ ಉಪಯೋಗಿಸಿದ ತಕ್ಕದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. 'ಜಮೀನ್ ಚೋರ್' ಎಂದು ಕರೆದರು. ಭೂಮಿ ಕಳ್ಳರು ಎಂದು ಕರೆದರು.

ಒಬ್ಬ ಮಾನ್ಯ ಸದಸ್ಯರು.— ಯಾರನ್ನು ?

ಶ್ರೀ ಸಿ. ಬೈರೇಗೌಡ.— ಯಾರು ಮಾಡಿದ್ದಾರೋ ಅವರನ್ನು ಇವತ್ತು, ಮುಖ್ಯಮಂತ್ರಿ ಸ್ಥಾನದಲ್ಲಿ ಅವರು ಕುಳಿತಿದ್ದಾರೆ ಆದ್ದರಿಂದ ಇವೊತ್ತು ಕಳ್ಳರು ಯಾರು ಎಂಬುದನ್ನು ಅವರು ತೋರಿಸಿಕೊಡಬೇಕಾಗಿದೆ. ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಅಲ್ಲಿ ಹೇಳಿದ್ದಾರೆ. ಇಲ್ಲಿ ಇವತ್ತಿನ ದಿವಸ ಅವರಿಗೆ ಅವಕಾಶ ಸಿಕ್ಕಿದೆ. ಯಾರು ಎಂಬುದನ್ನು ತೋರಿಸಿಕೊಡಬೇಕು. ಅವರು ಹೇಳಿರತಕ್ಕ ಮಾತಿನಲ್ಲಿ ಅವರಿಗೆ ನಂಬಿಕೆ ಇದ್ದರೆ ಹೇಳಬೇಕು. ಸುಮ್ಮನೆ ಜನರಿಗೆ ಮರುಳು ಮಾಡುವಂಥದ್ದಲ್ಲ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕು.

ಛೇರ್ಮನ್.— ಮಾನ್ಯ ಸಚಿವರು ಬೇಡಿಕೆ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.— ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಣ್ಣ.— ಬೆಂಗಳೂರು ಸಿಟಿ ಬಗ್ಗೆ ನಾವೂ ಕೆಲವು ವಿಚಾರಗಳನ್ನು ಮಾತನಾಡಬೇಕಾಗಿದೆ.

ಛೇರ್ಮನ್.— ಎರಡು ದಿವಸದಿಂದ ಚರ್ಚೆ ನಡೆಯುತ್ತಿದೆ.

ಶ್ರೀ ಕೆ. ಲಕ್ಕಣ್ಣ.— ಹತ್ತುತ್ತು ನಿಮಿಷ ಅವಕಾಶ ಕೊಡಿ.

ಶ್ರೀ ಬಿ. ಹೆಚ್. ಬನ್ನಿಕೋಡ್.— ನಾವು ಪ್ರಶ್ನೆ ಕೇಳಿದಾಗ ಬಜೆಟ್‌ನಲ್ಲಿ ಮಾತನಾಡಿ ಎಂದು ಹೇಳುತ್ತೀರಿ. ಬಜೆಟ್‌ನಲ್ಲಿ ಅವಕಾಶ ಕೇಳಿದರೆ ಸಮಯ ಇಲ್ಲ ಎಂದು ಹೇಳುತ್ತೀರಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಯಾವುದಾದರೂ ವಿಚಾರ ಎತ್ತಿದಾಗ ಬಜೆಟ್ ಮೇಲೆ ಮಾತನಾಡಿ ಎಂದು ಹೇಳುತ್ತೀರಿ. ಈಗ ೧೦೦ ಕಿಲೋಮೀಟರ್ ಸ್ಪೀಡ್‌ನಲ್ಲಿ ಹೋಗಿ ಎಂದು ಹೇಳುತ್ತೀರಿ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಬರೀ ಮುಖಂಡರುಗಳು, ಅಧ್ಯಕ್ಷರುಗಳು ಮಾತನಾಡಬೇಕು ಎಂದು ನಿರ್ಣಯ ತೆಗೆದುಕೊಂಡರೆ ನಮ್ಮ ಅಭ್ಯಂತರ ಇಲ್ಲ.

ಛೇರ್ಮನ್.— ಅಂತಹ ನಿರ್ಣಯ ಏನೂ ತೆಗೆದುಕೊಂಡಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಅದೇ ಈಗ ನಡೆಯುತ್ತಾ ಇರುವುದು.

ಶ್ರೀ ಎಲ್. ಆರ್ ಶಿವರಾಮೇಗೌಡ.— ಐದು ಇಲಾಖೆಗಳ ಬೇಡಿಕೆ ಇಟ್ಟು ಐದು ನಿಮಿಷಗಳಲ್ಲಿ ಮಾತನಾಡಿ ಎಂದು ಹೇಳಿದರೆ ಯಾವ ನ್ಯಾಯ ? ಮುಂದೆ ಬೇಡಿಕೆ ಇಟ್ಟಾಗ ಹೀಗಾಗಬಾರದು. ಇದನ್ನು ಸರಿಪಡಿಸಬೇಕು ಎಂಬುದು ನಮ್ಮ ವಾದ.

ಛೇರ್ಮನ್.— ನಿನ್ನೆ ಚರ್ಚೆ ಮುಗಿಯಬೇಕಾಗಿತ್ತು, ಮತ್ತು ಸಚಿವರು ಉತ್ತರ ಕೊಡಬೇಕಾಗಿತ್ತು. ಆದರೆ ಅನೇಕ ಮಾನ್ಯ ಸದಸ್ಯರು ಬೇಡಿಕೆ ಮೇಲೆ ಭಾಗವಹಿಸಬೇಕು ಎಂದು ಕೇಳಿಕೊಂಡಿದ್ದರ ಮೇರೆಗೆ ಸ್ಪೀಕರ್ ಅವರು ಟೈಂ ಎಕ್ಸ್‌ಟೆಂಡ್ ಮಾಡಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ — ಸಮಯಂ ನಿಗದಿ ಮಾಡಿ ಎಲ್ಲರಿಗೂ ಅವಕಾಶ ಕೊಡಿ. ಸದನದಲ್ಲಿ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಯಾವಾಗ ? ಪ್ರಶ್ನೋತ್ತರ ಕಾಲದಲ್ಲಿ ಇಲ್ಲ. ಬೇರೆ ಕಾಲದಲ್ಲಿ ಅವಕಾಶ ಇಲ್ಲ. ಕೇವಲ ಹಿರಿಯರು, ಅಧ್ಯಕ್ಷರುಗಳು ಮಾತನಾಡಬೇಕು ಎಂದರೆ ಹೇಗೆ ? ಸದನದಲ್ಲಿ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಈ ರೀತಿ ಸದನದಲ್ಲಿ ತಾರತಮ್ಯ ಆಗಬಾರದು. ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಇದೇ ಸದವಕಾಶ. ಬೇರೆ ವೇದಿಕೆ ಸಿಗುವುದಿಲ್ಲ.

ಛೇರ್ಮನ್.— ಮಾನ್ಯ ಬನ್ನಿಕೋಡ್ ಅವರ ಹೆಸರು ಇಲ್ಲಿ ಇದೆ.

ಒಬ್ಬ ಮಾನ್ಯ ಸದಸ್ಯರು.— ೬ ಗಂಟೆಯವರೆಗೆ ಕೊಡಿ ಪೇಡಂ.

ಛೇರ್ಮನ್.— ಸದಸ್ಯರು ಒಪ್ಪಿಕೊಳ್ಳುವುದಾದರೆ ನಮ್ಮ ಅಭ್ಯಂತರ ಇಲ್ಲ. ಆರು ಗಂಟೆ ಅಲ್ಲ ಒಂಭತ್ತು ಗಂಟೆಯವರೆವಿಗೂ ಕುಳಿತುಕೊಳ್ಳಬೇಕೆಂದರೆ ನನ್ನ ಅಭ್ಯಂತರ ಇಲ್ಲ ಮತ್ತೆ ಇವತ್ತು ವೈದ್ಯಕೀಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೇಲಿನ ಬೇಡಿಕೆಗಳನ್ನು ಇತ್ಯರ್ಥ ಮೂವ್ ಮಾಡಬೇಕಾಗಿದೆ.

ಶ್ರೀ ಪಿ. ಜಿ. ಆರ್ ಸಿಂಧ್ಯಾ.—ಹೊಸ ಸದಸ್ಯರು ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಹೇಳುವದಾದರೆ ಹೊಸ ಸದಸ್ಯರು ಆರಿಸಿ ಬಂದಿದ್ದಾರೆ. ಅವರಿಗೆ ಬೇರೆ ವಿಷಯಗಳಿಗಿಂತಾ ಇದು ಮುಖ್ಯವಾಗಿರುತ್ತದೆ.

ಛೇರ್ಮನ್.—ನೀವು ಅವರ ಸಹಾಯಕ್ಕೆ ಬರುವ ಅವಶ್ಯಕತೆ ಇಲ್ಲ ಅವರು ಹೇಳುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಗ್ರಾಮೀಣ ವಸತಿ ಬಗ್ಗೆ ಯಾರೂ ಮಾತನಾಡಿಲ್ಲ. ನಾನು ಆ ಬಗ್ಗೆ ಮಾತನಾಡಬೇಕಾಗುತ ದೆ.

ಛೇರ್ಮನ್.—ಬನ್ನಿಕೋಡ್‌ರವರ ಹೆಸರು ಇಲ್ಲಿ ಲಿಸ್ಟ್‌ನಲ್ಲಿ ಇದೆ. ಅವರಿಗೆ ಸಮಯ ಎಷ್ಟು ಬೇಕೆಂದು ಹೇಳಿದರೆ ಉತ್ತಮ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್. - ಎಲ್ಲರಿಗೂ ಅವಕಾಶ ಕೊಡುವುದಾದರೆ ನಾನು ಸ್ವಲ್ಪ ಕಾಲದಲ್ಲೇ ಮುಗಿಸುತ್ತೇನೆ.

ಛೇರ್ಮನ್.—ತಾವು ೧೦ ನಿಮಿಷದಲ್ಲಿ ಮುಗಿಸಿ.

† ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ. (ಹಿರೇಕೆರೂರು).—ಮಾನ್ಯ ಅಧ್ಯಕ್ಷರೆ. ಇದುವರೆವಿಗೂ ವಸತಿ ಬಗ್ಗೆ ಅದರಲ್ಲೂ ನಗರ ವಸತಿ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಗ್ರಾಮೀಣ ವಸತಿ ಬಗ್ಗೆ ಆಗಿರತಕ್ಕ ಲೋಪದೋಷಗಳ ಬಗ್ಗೆ ಹಾಗೂ ಈ ಬಗ್ಗೆ ನನ್ನ ಸಲಹೆ ಸೂಚನೆಗಳನ್ನು ಈ ಸದನದ ಮುಂದೆ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಈ ಗ್ರಾಮೀಣ ವಸತಿ ಯೋಜನೆ ಮುಖಾಂತರ ಬಡವರಿಗೆ ಗ್ರಾಮದಲ್ಲಿರುವ ಹರಿಜನಗಿರಿಜನರಿಗೆ, ಭೂರಹಿತ ಕೂಲಿಕಾರರಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲ ಆಗಲಿ ಎನ್ನುವ ದೃಷ್ಟಿಯಿಂದ ಹಿಂದಿನಿಂದ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಬಂದಿದ್ದೇವೆ. ಇವತ್ತು ಆ ಕಾರ್ಯದಲ್ಲಿ ನಾವು ಎಷ್ಟರ ಮಟ್ಟಿಗೆ ಸಫಲರಾಗಿದ್ದೇವೆ, ಎಷ್ಟು ಗುರಿ ಸಾಧಿಸಿದ್ದೇವೆ ಎಂಬುದನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಾವು ಬಹಳ ದೊಡ್ಡ ಮಾತುಗಳನ್ನು ಮಾತ್ರ ಆಡುತ್ತಿದ್ದೇವೆ. ರಾಜಕೀಯವಾಗಿ ಮಾತನಾಡುತ್ತಿದ್ದೇವೆ ಈ ಒಂದು ಗ್ರಾಮೀಣ ವಸತಿ ವಿಚಾರದಲ್ಲಿ ಸರ್ಕಾರ ತನ್ನ ಗುರಿಯನ್ನು ಸಾಧಿಸಿಲ್ಲ. ನೂರಕ್ಕೆ ಐವತ್ತರಷ್ಟಾದರು ಗುರಿಯನ್ನು ಸಾಧಿಸಿಲ್ಲ. ಇವತ್ತು ನಿವೇಶನ ಹಂಚಿಕೆ ಮಾಡುವುದರಲ್ಲಿ ಗ್ರಾಮೀಣ ಭಾಗದಲ್ಲಿ ಮನೆಗಳನ್ನು ಕಟ್ಟುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳುತ್ತೇನೆ. ಇವತ್ತು ಜಿಲ್ಲೆಗಳಲ್ಲಿ ಲಕ್ಷಾಂತರ ಮನೆಗಳನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದಕ್ಕೆ ಆಗಿಲ್ಲ. ಇದು ಸಾಕಷ್ಟು ಬಾಕಿ ಉಳಿದಿದೆ. ಇವತ್ತು ಮನೆ ಕಟ್ಟಲು ಸರ್ಕಾರ ಹಣ ಕೊಡಬೇಕಾಗುತ್ತದೆ. ಈ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಮನೆಗಳು

ಆಗಬೇಕಾಗುತ್ತದೆ. ಇಂತಹ ಸೌಕರ್ಯ ಇವತ್ತು ಗ್ರಾಮೀಣ ಜನತೆಗೆ ಸಿಕ್ಕಿಲ್ಲ. ಇವತ್ತು ಅನೇಕ ಪ್ರಕರಣಗಳಲ್ಲಿ ಭೂಮಾಲೀಕರು ತಮ್ಮ ಜಮೀನಿಗೆ ಸಂಬಂಧಪಟ್ಟಂತೆ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಅನೇಕ ಲ್ಯಾಂಡ್ ಅಕ್ವಿಸಿಷನ್‌ಗೆ ಹೈಕೋರ್ಟಿನಲ್ಲಿ ಸ್ಟೇ ಸಿಕ್ಕಿದ್ದು ಆ ಕೆಲಸ ಹಾಗೇ ನಿಂತಿದೆ. ಇದರಿಂದ ಗ್ರಾಮೀಣ ಜನರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಗಮನ ಹರಿಸಬೇಕು. ಈ ಕೇಸ್‌ಗಳು ನಾಲ್ಕೆಂಟು ವರ್ಷಗಳಿಂದ ಹೈಕೋರ್ಟಿನಲ್ಲಿ ಸ್ಥಗಿತವಾಗಿರುವುದರಿಂದ ಈ ಬಗ್ಗೆ ಸರ್ಕಾರ ಗಮನಹರಿಸಿ ಈ ಪ್ರಕರಣಗಳು ಆದಷ್ಟು ಬೇಗ ಇತ್ಯರ್ಥವಾಗುವ ಹಾಗೆ ವ್ಯವಸ್ಥೆ ಮಾಡಬೇಕಾಗಿದೆ. ಇದರಿಂದ ಜನರಿಗೆ ನಿವೇಶನ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮಗಳ ಪಕ್ಕದಲ್ಲಿರುವ ಅರಣ್ಯ ಭೂಮಿ ಸಿ ಅಂಡ್ ಡಿ ಲ್ಯಾಂಡ್ ಏನು ಇದೆ ಅಲ್ಲಿ ನಿವೇಶನ ಕೊಡುವ ವ್ಯವಸ್ಥೆ ಈಗ ಇಲ್ಲ. ಇವತ್ತು ಏನು ಅರಣ್ಯ ಭೂಮಿ ಏನು ಹಳ್ಳಿಯ ಪಕ್ಕದಲ್ಲೇ ಇರುತ್ತದೆ. ಅಲ್ಲಿ ಮನೆ ಕಟ್ಟುವುದಕ್ಕಾಗುವುದಿಲ್ಲವೆಂದು ಹೇಳುವ ಬದಲು ಅದು ಅರಣ್ಯ ಭೂಮಿ ಇದ್ದರೂ ಸಹಾ. ಅದು ಯಾವುದೇ ಸರ್ಕಾರಿ ಭೂಮಿ ಇದ್ದರೂ ಸಹಾ ಅಲ್ಲಿ ವಸತಿ ನಿವೇಶನ ಹಂಚುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ಜನರಿಗೆ ಅನುಕೂಲ ಆಗುವುದಲ್ಲದೇ ವಸತಿ ಸಮಸ್ಯೆ ಏನು ಇದೆ ಅದು ಕೂಡಾ ನಿವಾರಣೆಯಾಗುವುದಲ್ಲದೆ ಬಡವರ ಬಗ್ಗೆ ಸರ್ಕಾರ ಏನು ಯೋಜನೆಗಳನ್ನು ಹಾಕಿಕೊಂಡಿದೆ ಅದರ ಗುರಿಯನ್ನೂ ಮುಟ್ಟುವುದಕ್ಕೆ ಸಹಾಯಕವಾಗುತ್ತದೆ. ಈ ಬಗ್ಗೆ ಕೂಡಾ ಸರ್ಕಾರ ಪ್ರಯತ್ನ ಪಡುತ್ತದೋ ಇಲ್ಲವೋ ಎನ್ನುವ ಒಂದು ಶಂಕೆಯನ್ನು ನಾನು ಇಲ್ಲಿ ವ್ಯಕ್ತ ಮಾಡಬೇಕಾಗುತ್ತದೆ. ಇವತ್ತು ತಾವೇ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ನಿಮ್ಮ ಯೋಜನೆ ಪ್ರಕಾರ ಎಷ್ಟು ಮನೆ ಕಟ್ಟಬೇಕೋ ಅಷ್ಟಕ್ಕೆ ಬೇಕಾದ ಹಣ ಇವತ್ತು ಬಿಡುಗಡೆಯಾಗಿಲ್ಲ. ಇವತ್ತು ಗ್ರಾಮೀಣ ಮನೆ ನಿರ್ಮಾಣಕ್ಕೆ ಎಷ್ಟು ಹಣ ಹೋಗಬೇಕಾಗಿತ್ತೋ ಅಷ್ಟು ಹಣ ಅಲ್ಲಿಗೆ ಹೋಗಿಲ್ಲ. ಕೋಟ್ಯಾಂತರ ರೂಪಾಯಿಗಳ ಹಣ ಪ್ರತಿಯೊಂದು ಜಿಲ್ಲೆಗೂ ಬಾಕಿ ಬರಬೇಕಾದುದು ಉಳಿದಿದೆ. ಆದ್ದರಿಂದ ಎಷ್ಟರ ಮಟ್ಟಿಗೆ ಸಾಧನೆ ಮಾಡಿದ್ದೀರೆಂಬುದನ್ನು ತಾವು ಹೇಳಬೇಕಾಗಿದೆ. ಅಂಕಿ ಸಂಖ್ಯೆಗಳ ಮೂಲಕ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರತಕ್ಕ ವಿಷಯಗಳನ್ನು ತಮಗೆ ತಿಳಿಸುವುದಕ್ಕೆ ಬಯಸುತ್ತೇನೆ. ಧಾರವಾಡ ಜಿಲ್ಲೆ ಒಂದರಲ್ಲೇ ಗ್ರಾಮೀಣ ವಸತಿ ಸೌಕರ್ಯ ಕಲ್ಪಿಸುವುದರಲ್ಲಿ ಸುಮಾರು ೭೯೪೩ ಮನೆಗಳು ಪೂರ್ಣವಾಗದೆ ಬಾಕಿ ಉಳಿದಿವೆ. ಮತ್ತೆ ಇದಕ್ಕೆ ಬೇಕಾದ ಹಣ ೩ ಕೋಟಿ ೩೩ ಲಕ್ಷ ರೂಪಾಯಿಗಳು ಸರ್ಕಾರದಿಂದ ಸಹಾಯಧನದ ರೂಪದಲ್ಲಿ ಅಥವಾ ಸಾಲದ ರೂಪದಲ್ಲಿ ಕೊಡಬೇಕಾದುದನ್ನು ಇಲ್ಲಿಯವರೆವಿಗೂ ಕೊಟ್ಟಿಲ್ಲ. ಇಷ್ಟು ದೊಡ್ಡ ಮೊತ್ತದ ಹಣವನ್ನು ಸರ್ಕಾರ ಕೂಡಲೇ ಒದಗಿಸಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಯಾವ ಒಂದು ಕಾರ್ಯಕ್ರಮನ್ನು ಹಾಕಿಕೊಂಡಿದ್ದಾರೆ ? ಯಾವ ರೀತಿಯಾಗಿ ಈ ಕಾರ್ಯಕ್ರಮವನ್ನು ಪೂರ್ತಿ ಮಾಡುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ನೋಡುವುದಾದರೆ. ಇದಕ್ಕಾಗಿ ಬಜೆಟ್‌ನಲ್ಲಿ ಹಣವನ್ನೇ ಇಟ್ಟಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಬಾಕಿ ಉಳಿದಿರತಕ್ಕ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ತನ್ನ ಬಜೆಟ್‌ನಲ್ಲಿ ಯೋಜನೆಯನ್ನಾಗಲೀ, ಕಾರ್ಯಕ್ರಮವನ್ನಾಗಲೀ ಹಾಕಿಕೊಂಡಿಲ್ಲ. ಇದನ್ನು ಹಾಗೆಯೇ ಬಿಟ್ಟು ಬರೀ ರಾಜಕೀಯ ಭಾಷಣ ಮಾಡುವ ಮೂಲಕ ಪ್ರಗತಿಯನ್ನು ಸಾಧನೆ ಮಾಡಂವುಕ್ಕೆ ಆಗುವುದಿಲ್ಲ. ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಹದ್ದು ಒಂದು ಕಾರ್ಯಕ್ರಮ ಇದೆ. ಇದಂ ನಿಜವಾಗಿಯೂ ಬಡವರ, ಹಿಂದುಳಿದವರ ಏಳಿಗೆಯ ಬಗ್ಗೆ ಈ ಸರ್ಕಾರ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ ಎಂಬ ಶಂಕೆ ಬರುವ ರೀತಿಯಲ್ಲಿ ಈ ಕೆಲಸ ಕುಂಠಿತಗೊಂಡಿದೆ.

ಇನ್ನು ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಹಿರೇಕೆರೂರು ತಾಲ್ಲೂಕಿನಲ್ಲಿ ೩೭ ಲಕ್ಷ ರೂಪಾಯಿಗಳನ್ನು ಅಪೂರ್ಣವಾಗಿರತಕ್ಕ ಮನೆಗಳನ್ನು ಪೂರ್ಣ ಮಾಡುವುದಕ್ಕಾಗಿ ಸರ್ಕಾರದಿಂದ ಬರಬೇಕಾದುದು ಇನ್ನೂ ಬಂದಿಲ್ಲ. ಬರಬೇಕಾಗಿದೆ. ಮಾನ್ಯ ಸಚಿವರು ಆದಷ್ಟು ಬೇಗನೆ ಈ ಹಣವನ್ನು ಬಿಡುಗಡೆ ಮಾಡಿ, ಅಲ್ಲಿ ಅಪೂರ್ಣವಾಗಿರತಕ್ಕ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಸರ್ಕಾರದ ಯಾವುದೇ ಕಾರ್ಯಕ್ರಮಕ್ಕಿಂತ ಹಳ್ಳಿಯ ಜನರ ಪರವಾಗಿ ಹಿಂದುಳಿದ ವರ್ಗದವರ ಸಲುವಾಗಿ, ಬಡವರ ಸಲುವಾಗಿ ಕೂಲಿಗಾರರ ಸಲುವಾಗಿ ಹಾಕಿಕೊಂಡಿರತಕ್ಕ ಇಂತಹ ಕಾರ್ಯಕ್ರಮ ನಿಜವಾಗಿಯೂ ಕುಂಠಿತವಾಗಕೂಡದು. ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರತಕ್ಕ ಜನರು ಒಂದೊಂದು ಮನೆಯಲ್ಲಿ ೪-೫ ಸಂಸಾರಗಳು ವಾಸಿಸುತ್ತಿವೆ ತಂದೆ ತಾಯಿ ೪-೫ ಮಕ್ಕಳು ಸಂಸಾರ ಮಾಡುತ್ತಿದ್ದಾರೆ. ಇಂತಹ ಜನರಿಗೆ ಒಂದು ಸರಿಯಾದ ವಸತಿ ಸೌಲಭ್ಯ ಇಲ್ಲವಾಗಿದೆ. ಈ ದಿಸೆಯಲ್ಲಿ ಈ ಒಂದು ಕಾರ್ಯಕ್ರಮವನ್ನು ಚಾಚೂ ತಪ್ಪದೆ ಗುರಿಯನ್ನು ಸಾಧಿಸಬೇಕು. ಆ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸದನದ ಮೂಲಕ ಸೂಚಿಸುತ್ತೇನೆ. ಅದರ ಜೊತೆಗೆ

ಗ್ರಾಮೀಣ ಪ್ರದೇಶದಲ್ಲಿ ಚಿಕ್ಕ ಚಿಕ್ಕ ಮನೆಗಳಲ್ಲಿ ೪–೬ ಸಂಸಾರಗಳು ಯಾವ ರೀತಿ ತಮ್ಮ ಸಂಸಾರವನ್ನು ಮಾಡಬೇಕೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಈ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬರಿಗೂ ನಿವೇಶನವನ್ನು ಒದಗಿಸಿ, ಅದರಲ್ಲಿ ಮನೆಯನ್ನು ಕಟ್ಟಿಸಿ ಕೊಡುವ ದಿಸೆಯಲ್ಲಿ ಸರ್ಕಾರ ಪುನಃ ರೀ–ಸರ್ವೆ ಮಾಡಿಸಬೇಕೆಂದು ಹೇಳುತ್ತೇನೆ. ಪ್ರತಿಯೊಬ್ಬ ಗ್ರಾಮೀಣ ಬಡ ಜನರಿಗೆ ನಿವೇಶನವನ್ನು ಅದರ ಜೊತೆಗೆ ಮನೆಯನ್ನು ಕಟ್ಟುವ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನು ತಿಳಿಸುತ್ತಾರೆಂದು ಬಯಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೪–೩೦ ಪಿ.ಎಂ.

† ಶ್ರೀ ರಾಮಲಿಂಗ ರೆಡ್ಡಿ (ಜಯನಗರಕ್ಷೇತ್ರ).— ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಮುಖವಾಗಿ ನಾನು ಈ ನಗರದ ವಸತಿಯ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. ಮನುಷ್ಯನ ಜೀವನದಲ್ಲಿ ಕೂಲಿ ಮಾಡುವವನಿಂದ ಹಿಡಿದು ಶ್ರೀಮಂತನವರೆವಿಗೂ ಒಂದು ಗುರಿ ಇರುತ್ತದೆ. ಅದೇನೆಂದರೆ ಒಂದು ಸ್ವಂತ ಮನೆಯನ್ನು ಕಟ್ಟಿಕೊಳ್ಳುವುದು. ಆ ರೀತಿಯ ಸೌಕರ್ಯವನ್ನು ಒದಗಿಸುವಂತಹದ್ದು ಸರ್ಕಾರದ ಒಂದು ಕರ್ತವ್ಯ ಕೂಡ. ಮನೆಯನ್ನು ಕೊಡುತ್ತೀರೋ ಅಥವಾ ಖಾಲಿ ನಿವೇಶನವನ್ನು ಕೊಡುತ್ತೀರೋ ಎಂಬುದು ಆ ವಿಚಾರ ಬೇರೆ. ವಸತಿಗಾಗಿ ನಿವೇಶನಗಳನ್ನು ಕಲ್ಪಿಸುವಂತಹ ಸಂಸ್ಥೆಗಳು ನಮ್ಮ ರಾಜ್ಯದಲ್ಲಿವೆ. ಅವುಗಳನ್ನು ನಗರ ಪ್ರದೇಶಗಳಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಎಂಬುದಾಗಿ ಕರೆಯುತ್ತಾರೆ. ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರಾಗಲಿ, ಅಥವಾ ಬೇರೆಯವರಾಗಲೀ ಕೊಡಬಹುದು. ೨೦ ಡೆವಲಪ್‌ಮೆಂಟ್ ಅಥಾರಿಟಿಗಳು ನಮ್ಮ ರಾಜ್ಯದಲ್ಲಿವೆ. ಈ ಡೆವಲಪ್‌ಮೆಂಟ್ ಅಥಾರಿಟಿಗಳು ವಸತಿ ಸೌಕರ್ಯವನ್ನು ಒದಗಿಸಿ ವಸತಿ ಸಮಸ್ಯೆಯನ್ನು ನೀಗಿಸುವ ಕಾರ್ಯಕ್ರಮವನ್ನು ರೂಪಿಸಿಕೊಂಡಿವೆ. ನಮ್ಮ ಸರ್ಕಾರ ಬಂದು ಆರು ತಿಂಗಳುಗಳು ಆಗಿವೆ. ಅದರ ಹಿಂದಿನ ಸರ್ಕಾರ ಅಂದರೆ ರಾಜ್ಯಪಾಲರ ಆಡಳಿತ ಇತ್ತು. ಅದಕ್ಕೂ ಮೊದಲು ಜನತಾ ದಳದ ಸರ್ಕಾರ ಆಡಳಿತದಲ್ಲಿತ್ತು. ಅದಕ್ಕೂ ಮೊದಲು ಜನತಾ ಸರ್ಕಾರ ನಮ್ಮ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ನಾನು ನಾಲ್ಕೈದು ವರ್ಷಗಳ ಹಿಂದಿನ ಮಾತನ್ನು ಹೇಳುತ್ತಿದ್ದೇನೆ. ತಾವೇನು ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟಿದ್ದೀರಿ ಅದರ ಪ್ರಕಾರ ಯಾವುದೇ ಪ್ರಗತಿ ಕಾಣುತ್ತಿಲ್ಲ. ಮಾನ್ಯ ಸಚಿವರು ಇಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಅದು ಈ ಚಿತ್ರವನ್ನು ತೋರಿಸುತ್ತಿದೆ. ನಮ್ಮ ನಗರದಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ೮೯ ಸಾವಿರ ಜನ ಸೈಟಿಗಾಗಿ ಕಾಯುತ್ತಿದ್ದಾರೆ. ಅವರಿಗೆ ಎಷ್ಟು ವರ್ಷಗಳಲ್ಲಿ ಸೈಟುಗಳನ್ನು ಕೊಡುತ್ತೀರಿ ಎಂದು ಕೇಳುತ್ತೇನೆ. ಹಿಂದಿನ ಸರ್ಕಾರ ಲಾಲ್‌ಬಾಗ್‌ನಲ್ಲಿ ಗ್ಲಾಸ್‌ಹೌಸ್‌ನಲ್ಲಿ ಒಂದು ಕಾರ್ಯಕ್ರಮವನ್ನು ಮಾಡಿ ನಾವು ೧೦ ಸಾವಿರ ಸೈಟುಗಳನ್ನು ಹಂಚುತ್ತೇವೆಂದು ಹೇಳಿ ಪತ್ರಿಕೆಗಳಲ್ಲಿ ಪ್ರಚಾರವನ್ನು ಗಿಟ್ಟಿಸಿಕೊಂಡರು. ಇವರು ೧೦ ಸಾವಿರ ಸೈಟುಗಳನ್ನು ಕೊಡುತ್ತೇವೆಂದು ಏನು ಹೇಳಿಕೊಂಡಿದ್ದರು ಅದರಲ್ಲಿ ಇನ್ನೂ ಒಂದೆರಡು ಸಾವಿರ ಜನಗಳಿಗೆ ಸಹ ಸೈಟುಗಳನ್ನು ಕೊಡಲಿಲ್ಲ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಏನು ಮಾಡುತ್ತಿದ್ದಾರೆಂದರೆ, ನಿಮಗೆ ಸೈಟ್ ಅಲಾಟ್ ಆಗಿದೆಯೆಂದು ಅಲಾಟ್‌ಮೆಂಟ್ ಆರ್ಡರ್ ಕಳುಹಿಸುತ್ತಾರೆ. ನಿವೇಶನಕ್ಕಾಗಿ ಕಾದಿದ್ದವರು ಹಣವನ್ನು ಕಟ್ಟುತ್ತಾರೆ. ಅಲ್ಲಿ ಸೈಟೇ ಇರುವುದಿಲ್ಲ. ಕಳೆದ ಎರಡು–ಮೂರು ವರ್ಷಗಳಲ್ಲಿ ಸೈಟ್ ಅಲಾಟ್ ಆಗಿದೆಯೆಂದು ಯಾರಿಗೆ ಯಾರಿಗೆ ಅಲಾಟ್‌ಮೆಂಟ್ ಆರ್ಡರ್ ಹೋಗಿದೆ ಅವರಿಗೆ ಇದುವರೆಗೆ ಸೈಟ್ ಸಿಕ್ಕಿಲ್ಲ. ಅವರಿಗೆಲ್ಲ ಸೈಟ್‌ಗಳು ಸಿಗಬೇಕಾದರೆ ಇನ್ನು ನಾಲ್ಕೈದು ವರ್ಷಗಳಾದರೂ ಬೇಕಾಗುತ್ತದೆ. ಆದ್ಯತೆಯ ಮೇಲೆ ಅವರಿಗೆ ಸೈಟ್‌ಗಳನ್ನು ದೊರೆಯುವಂತಹ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಮುಂದೆ ಸೈಟ್‌ಗಳನ್ನು ಅಲಾಟ್ ಮಾಡುವಾಗ ಲೇಔಟ್ ಫಾರಂ ಆದಮೇಲೆ ಸೈಟ್ ಅಲಾಟ್ ಮಾಡಬೇಕು. ಲೇಔಟ್‌ಗಳನ್ನು ಮಾಡದೇ ಸೈಟುಗಳನ್ನು ಹಂಚಬಾರದು. ಹಿಂದಿನ ಸರ್ಕಾರ ಏನು ಈ ಕೆಲಸ ಮಾಡುತ್ತಿತ್ತು ಅದನ್ನು ನಮ್ಮ ಸರ್ಕಾರ ಮಾಡಬಾರದು. ೮೯ ಸಾವಿರ ಜನ ಸೈಟಿಗಾಗಿ ಕಾಯ್ದಿದ್ದಾರೆ. ನಮ್ಮ ಶಾಸನ ಸಭೆಯ ಅವಧಿಯಲ್ಲಿ ಅವರುಗಳಿಗೆಲ್ಲ ಸೈಟುಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ೧೯೭೨ರಲ್ಲಿ ದಿವಂಗತ ದೇವರಾಜಅರಸುರವರ ಸರ್ಕಾರ ಇದ್ದಾಗ ವಸತಿಹೀನರಿಗೆ ಸೈಟುಗಳನ್ನು ಕೊಡುವ ಕಾರ್ಯಕ್ರಮ ಹಾಕಿಕೊಂಡು ೧ ಲಕ್ಷದ ೪೪ ಸಾವಿರದ ೬೩ ಜನರನ್ನು ಗುರುತಿಸಲಾಗಿದ್ದು ಅದರಲ್ಲಿ ೬೦ ಸಾವಿರದ ೬೦೨ ಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸೈಟುಗಳನ್ನು ಕೊಡಲಾಗಿದೆ. ಉಳಿದ ೮೫ ಸಾವಿರ ವಸತಿಹೀನರಿಗೆ ನಿವೇಶನಗಳನ್ನು ಯಾವಾಗ

ಕೊಡುತ್ತೀರಿ? ೧೯೮೯–೯೦ನೇ ಸಾಲಿನಲ್ಲಿ ೨೫೦೦ ಜನರಿಗೆ ಮಾತ್ರ ಸೈಟುಗಳನ್ನು ಕೊಟ್ಟಿರುತ್ತಾರೆ. ದೇವರಾಜ ಅರಸ್‌ರವರ ಕಾಲದಲ್ಲಿ ಗುಂಡೂರಾಯರ ಕಾಲದಲ್ಲಿ ವ್ಯಾಪಕವಾಗಿ ಸೈಟುಗಳನ್ನು ಹಂಚುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದರಿಂದ ಬಡವರಿಗೆ ಅನುಕೂಲವಾಗುತ್ತಿತ್ತು. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕಡೆಗೆ ಗಮನ ಕೊಡಲಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಫ್ರೀ ಆಗಿ ಸೈಟುಗಳನ್ನು ಕೊಡುತ್ತಾರೆಂದು ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ಮಧ್ಯವರ್ತಿಗಳು ಹಣವನ್ನು ತೆಗೆದುಕೊಳ್ಳುತ್ತಾರೆಂದು ನನ್ನ ಭಾವನೆ ೧೯೮೯–೯೦ರಲ್ಲಿ ಸೈಟುಗಳನ್ನು ಕೊಟ್ಟ ಹಾಗೆ ಕೊಟ್ಟರೆ ಇನ್ನು ೨೫ ವರ್ಷಗಳಾದರೂ ಕಾದಿರುವವರಿಗೆ ಸೈಟುಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಯಾರು ಸೈಟಿಗಾಗಿ ಅರ್ಜಿ ಹಾಕಿಕೊಂಡಿರುತ್ತಾರೆ, ಯಾರಿಗೆ ಸೈಟುಗಳನ್ನು ಕೊಡಬೇಕೆಂದು ಈಗಾಗಲೇ ಗುರುತಿಸಲಾಗಿದೆ ಅಂತಹವರಿಗೆ ಅವರು ಸಾಯುವವರೆಗೂ ಸೈಟುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದೇ ರೀತಿ ಮುಂದುವರೆದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಹುಡ್ಕೋ ಯೋಜನೆಯಿಂದ ಜನತಾ ಮನೆಗಳನ್ನು ಕಟ್ಟತಕ್ಕ ಯೋಜನೆ ಮೊದಲಿತ್ತು. ೧೯೮೯–೯೦ನೇ ಸಾಲಿನಲ್ಲಿ ಬಹಳ ಕಡಿಮೆ ಮನೆಗಳನ್ನು ಕಟ್ಟಿದ್ದಾರೆ. ವಸತಿ ಸಮಸ್ಯೆಯನ್ನು ಬಗೆ ಹರಿಸಬೇಕು, ಅದು ಬೃಹದಾಕಾರವಾಗಿ ಬೆಳೆಯುತ್ತಿದೆ. ಮನೆಗಳನ್ನು ಕಟ್ಟುವ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ವಸತಿ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಹುಡ್ಕೋ ಮನೆಗಳನ್ನು ಕಟ್ಟತಕ್ಕ ಯೋಜನೆಯನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳಬೇಕೆಂದು ನನ್ನ ಮನವಿ. ಹೌಸಿಂಗ್‌ಬೋರ್ಡ್‌ನವರು ಮನೆಗಳನ್ನು ಕಟ್ಟುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸೈಟುಗಳನ್ನು ಕೊಡುತ್ತಾರೆ ಜನರು ಹೇಗೋ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಹೌಸಿಂಗ್‌ಬೋರ್ಡ್‌ನವರು ಕಟ್ಟತಕ್ಕ ಮನೆಗಳಲ್ಲಿ ವಾಸ ಮಾಡುವುದಕ್ಕೆ ಬಹಳ ಧೈರ್ಯವಿರಬೇಕು. ಆ ಮನೆಗಳು ವಾಸಕ್ಕೆ ಯೋಗ್ಯವಿರುವುದಿಲ್ಲ. ಆ ಮನೆಗಳಿಗೆ ಬಹಳಷ್ಟು ಹಣವನ್ನು ಖರ್ಚು ಮಾಡಿ ರಿಪೇರಿ ಮಾಡಿಸಿಕೊಂಡು ಆ ಮನೆಗಳಿಗೆ ಹೋಗುವ ಪರಿಸ್ಥಿತಿ ಇದೆ. ಈ ಬಗ್ಗೆ ಮಾನ್ಯ ಹನುಮೇಗೌಡರು ಬಹಳ ಚೆನ್ನಾಗಿ ಹೇಳುತ್ತಿದ್ದರು. ನಾನು ಅವರು ಹೇಳಿದ್ದಕ್ಕೆ ಬೆಂಬಲ ಸೂಚಿಸುತ್ತೇನೆ. ಈ ಗೃಹಮಂಡಳಿಯವರು ಮನೆಗಳನ್ನು ಕಟ್ಟುವಾಗ ಗುಣಮಟ್ಟವನ್ನು ಕಾಪಾಡಬೇಕು. ಎಲ್ಲೆಲ್ಲಿ ಗುಣಮಟ್ಟ ಇರುವುದಿಲ್ಲ ಅಂತಹ ಕಡೆಗೆ ಟೆಂಡರ್‌ದಾರರನ್ನು ಮತ್ತು ಇಂಜಿನಿಯರ್‌ಗಳನ್ನು ಜವಾಬ್ದಾರರನ್ನಾಗಿ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತು ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಈ ಕಾವೇರಿ ಮೂರನೇ ಹಂತದ ಯೋಜನೆ ಈಗಾಗಲೇ ಮುಗಿಯಬೇಕಿತ್ತು. ಆದರೆ ಇದು ಆಮೆ ಗತಿಯಲ್ಲಿ ನಡೆದುಕೊಂಡು ಬರುತ್ತಿದೆ. ಯಾವ ಅಂದಾಜಿನಲ್ಲಿ ಇದು ಮುಗಿಯಬೇಕೆಂದು ಹಣ ಸ್ಯಾಂಕ್ಷನ್ ಆಗಿತ್ತೋ ಅದಕ್ಕಿಂತ ಜಾಸ್ತಿಯಾಗುತ್ತಿದೆ. ಇದನ್ನು ಆದಷ್ಟು ಬೇಗ ಮುಗಿಸುವ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಬೆಂಗಳೂರಿಗೆ ಜಲಕ್ಷಾಮ ಬರುವಂಥ ಪರಿಸ್ಥಿತಿ ಬರುತ್ತದೆ. ಈ ಹೊತ್ತು ಬೆಂಗಳೂರು ನಗರದಲ್ಲಿ ಸುಮಾರು ೩ನೇ ಎರಡು ಭಾಗದ ಜನರಿಗೆ ಮಾತ್ರ ಕುಡಿಯುವ ನೀರಿನ ಸೌಕರ್ಯ ಇದೆ. ಉಳಿದ ೩ನೇ ಒಂದು ಭಾಗದ ಜನರಿಗೆ ಈ ಕಾವೇರಿ ಮೂರನೇ ಹಂತದ ಯೋಜನೆಯನ್ನು ಆದಷ್ಟು ಬೇಗ ಮುಗಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ನೀರಿನ ಸಮಸ್ಯೆ ಎಷ್ಟು ಮುಖ್ಯವೋ ಸ್ಯಾನಿಟರಿ ವ್ಯವಸ್ಥೆ ಕೂಡ ಅಷ್ಟೇ ಮುಖ್ಯ. ಬೆಂಗಳೂರಿನಲ್ಲಿ ಮೂರನೇ ಒಂದರಷ್ಟು ಭಾಗದಲ್ಲಿ ಸ್ಯಾನಿಟರಿ ವ್ಯವಸ್ಥೆ ಇಲ್ಲ. ಜಯನಗರ ಕ್ಷೇತ್ರದಲ್ಲಿ ಮಡಿವಾಳ ಅಂತ ಕಾರ್ಪೊರೇಷನ್ ವಿಭಾಗ ಇದೆ ಬರುತ್ತದೆ. ಇಡೀ ವಿಭಾಗದಲ್ಲಿ ನೂರಕ್ಕೆ ತೊಂಬತ್ತು ಭಾಗದಷ್ಟು ಜಾಗದಲ್ಲಿ ಈ ಸ್ಯಾನಿಟರಿ ವ್ಯವಸ್ಥೆ ಇಲ್ಲ ಎಲ್ಲರೂ ಗುಂಡಿತೋಡಿಕೊಂಡಿರುತ್ತಾರೆ. ತಿಂಗಳಿಗೆ ಒಂದು ಸಲ ಈ ಗುಂಡಿ ಕ್ಲೀನ್ ಮಾಡುವುದಕ್ಕೆ ೨೦೦–೩೦೦ ರೂಪಾಯಿ ಕೊಡಬೇಕು. ಪ್ರತಿವರ್ಷ ಒಂದೊಂದು ಮನೆಯವರೂ ಸಾವಿರ ರೂಪಾಯಿ ಯಾದರೂ ಖರ್ಚು ಮಾಡಬೇಕಾಗುತ್ತದೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ಯವರು ಇವರ ಕಡೆಗೆ ಸೂಕ್ತ ಗಮನಹರಿಸಿ ಆದಷ್ಟು ಬೇಗ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ಬೋರ್ಡಿನ ಕಾರ್ಯವೈಖರಿ ಬಗ್ಗೆ ಇನ್ನೊಂದು ವಿಷಯವನ್ನು ಹೇಳುವದಕ್ಕೆ ಇಚ್ಛೆಪಡುತ್ತೇನೆ ಒನ್ನೇರುಫುಟ್ಟು ರೋಡು ಎಂದರೆ ಎಲ್ಲರಿಗೂ ಗೊತ್ತಿದೆ. ಇದು ಸಾಕಷ್ಟು ದಿನ ಪತ್ರಿಕೆಗಳಲ್ಲಿ ಬಂದಿದೆ. ಐದು ವರ್ಷಗಳಿಂದಲೂ ದಿನ ಪತ್ರಿಕೆಗಳಲ್ಲಿ ಬರುತ್ತಿದೆ. ನಾನು ನಗರಸಭೆಯ ಸದಸ್ಯನಾಗಿದ್ದಾಗಿನಿಂದಲೂ ಈ ರಸ್ತೆ ರಿಪೇರಿ ಬಗ್ಗೆ ಹೇಳುತ್ತಿದ್ದೇನೆ. ಈ ರಸ್ತೆ ರಿಪೇರಿಗೂ ಬಿ ಡಬ್ಲ್ಯು.ಎಸ್.ಎಸ್.ಬಿ.ಗೂ ಏನು ಸಂಬಂಧ ಎಂದು ಹೇಳಿದರೆ, ಆ ರಸ್ತೆಯಲ್ಲಿ ೩೬ ಅಂಗುಲದ ವ್ಯಾಸದ ನೀರಿನ ಕೊಳವೆ ಹಾದು ಲೈನು ಆ ಕಡೆ ಹೋಗುತ್ತದೆ ಭೂಮಿ ಮಟ್ಟಕ್ಕೆ ಒಂದು ಅಡಿ ಕೆಳಗೆ ಆ ಲೈನ್ ಹಾಕಿದ್ದಾರೆ. ಹೆವಿ ವೆಹಿಕಲ್ಸ್ ಹೋದಾಗ ೨೦ ಅಡಿ ಮೈಪಿನ ಜಾಯಿಂಟ್ಸ್‌ನಲ್ಲಿ ನೀರು ಬರುತ್ತದೆ ಮತ್ತು ಇದರಿಂದ ಕಳೆದ ನಾಲ್ಕೈದು ವರ್ಷಗಳ ಅವಧಿಯಲ್ಲಿ

ಸುಮಾರು ಐದಾರು ಜನರು ಸತ್ತಿದ್ದಾರೆ. ಮಾನ್ಯ ಸಚಿವರು ದಯವಿಟ್ಟು ಇದನ್ನು ನೋಡಬೇಕು. ಅಂತಹ ಕೆಟ್ಟ ಸ್ಥಿತಿಯಲ್ಲಿರುವ ರಸ್ತೆ ಬೇರೆ ಎಲ್ಲೂ ಇಲ್ಲ. ಬೆಂಗಳೂರಿನಲ್ಲಿ ಇದರ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧ್ಯಕ್ಷರಿಗೆ ಹೇಳಿದ್ದೇನೆ, ಚೀಫ್ ಇಂಜಿನಿಯರ್‌ಗೂ ಹೇಳಿದ್ದೇನೆ. ಆದರೂ ಇದು ಯಾರ ಗಮನಕ್ಕೂ ಬರುತ್ತಿಲ್ಲ. ನಗರಸಭೆಯ ಕಮಿಷನರ್ ಅವರಿಗೂ ಹೇಳಿದ್ದೇನೆ, (ನಗರಪಾಲಿಕೆಯ ಪ್ರತಿಯೊಬ್ಬರಿಗೂ ಹೇಳಿದ್ದೇನೆ]. ಆದರೂ ಏನು ಕೆಲಸ ಆಗಿಲ್ಲ. ಮಾನ್ಯ ಸಚಿವರ ಗಮನಕ್ಕೆ ನಾನು ತರುವುದೇನೆಂದರೆ ಇನ್ನು ಮೂರು ತಿಂಗಳಲ್ಲಿ ಈ ರಸ್ತೆ ಏನಿದೆಯೋ ಅದನ್ನು ಸರಿಪಡಿಸಬೇಕು. ಜಲ ಮಂಡಲಿಯವರು ಆ ಪೈಪನ್ನು ತೆಗೆದು ಪಕ್ಕಕ್ಕೆ ಹಾಕಬೇಕು ಅಥವಾ ಬೇರೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ನಾನು ಈ ಸಭೆಯಲ್ಲಿ ಧರಣಿ ಕುಳಿತುಕೊಳ್ಳುವ ಪರಿಸ್ಥಿತಿ ಬರುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೆಂಗಳೂರು ನಗರ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ, ನಾನು ಹಿಂದೆ ನಗರಸಭಾ ಸದಸ್ಯನಾಗಿದ್ದೆ. ನಾನು ಬೆಂಗಳೂರು ನಗರ ಸಭೆಯ ಸದಸ್ಯನಾಗಿದ್ದಾಗ ಈ ತರಹ (ಮುಂಗಡಪತ್ರದ ಮತ್ತು ವಾರ್ಷಿಕ ವರದಿಯಲ್ಲಿ ಇದೇ ತರಹ ನಾಲ್ಕೈದು ವರ್ಷಗಳಲ್ಲಿ ೮೩ರಿಂದ ೮೮ರವರೆಗೆ ಈ ಕೆಲಸಗಳನ್ನು ಸಭೆಯ ಮುಂದಿಡುತ್ತಾರೆ. ಎಲ್ಲ ಪ್ರಾಜೆಕ್ಟ್‌ಗಳು ಪುಸ್ತಕದಲ್ಲಿರುತ್ತದೆ. ಪ್ರತಿಯೊಂದು ಕೂಡ ಆಗಬೇಕಾದ ಕೆಲಸಗಳೇ. ನೋಡಿ, ಬೆಂಗಳೂರಿನಲ್ಲಿ ಟ್ರಾಫಿಕ್ ವಿಪರೀತವಾಗಿದೆ ಎಂದು ಕೆಂಪೇಗೌಡ ರಸ್ತೆಯಲ್ಲಿ, ಮೈಸೂರು ಬ್ಯಾಂಕ್ ಸರ್ಕಲ್ ಹತ್ತಿರ ಮತ್ತು ರೈಲ್ವೆ ಸ್ಟೇಷನ್ ಹತ್ತಿರ ಮೂರು ಸಬ್‌ವೇ ಮಾಡಬೇಕೆಂದು ನಾಲ್ಕೈದು ವರ್ಷದಿಂದಲೂ ಕಾರ್ಪೊರೇಷನ್‌ನಲ್ಲಿ ನೋಡುತ್ತಿದ್ದೆ ಇಂದು ವಿಧಾನಸಭೆಯ ಮುಂಗಡ ಪತ್ರಗಳಲ್ಲಿ ನೋಡುತ್ತಿದ್ದೇನೆ. ಆಮೇಲೆ ಮಲ್ಟಿ ಸ್ಟೋರೀಡ್ ಪಾರ್ಕಿಂಗ್ ಇನ್ ಕೆ. ಜಿ ರೋಡ್ ಅಂತ ಒಂದು ಪ್ರಾಜೆಕ್ಟ್ ಹಾಕಿಕೊಂಡಿದ್ದಾರೆ. ಹಾಗೆಯೇ ರಿಮಾಡಲಿಂಗ್ ಆಫ್ ಮಾರ್ಕೆಟ್ ಕಾಂಪ್ಲೆಕ್ಸ್ ಇನ್ ಮಲ್ಲೇಶ್ವರಂ ಅಂತ ಇನ್ನೊಂದು ಪ್ರಾಜೆಕ್ಟ್ ಇದೆ. ಮತ್ತೊಂದು ರಿಮಾಡಲಿಂಗ್ ಆಫ್ ರಸೆಲ್ ಮಾರ್ಕೆಟ್ ಎಂದು ಹೇಳುವ ಪ್ರಾಜೆಕ್ಟ್ ಇದೆ. ಮಲ್ಟಿಪರ್ಪಸ್ ಕಾಂಪ್ಲೆಕ್ಸ್ ಇನ್ ಸೆಕೆಂಡ್‌ಬ್ಲಾಕ್, ಜಯನಗರ ಅಂತ ಇನ್ನೊಂದಿದೆ. ನಾನು ನಗರಸಭೆಯ ಸದಸ್ಯನಾಗಿದ್ದಾಗ ಈ ಪ್ರಾಜೆಕ್ಟ್‌ಗಳು ಏನು ಇದ್ದವೋ ಈಗಲೂ ಹಾಗೆಯೇ ಪುಸ್ತಕಗಳಲ್ಲಿ ಇವೆ. ನಾನು ವಿಧಾನಸಭಾ ಸದಸ್ಯನಾಗಿ ಬಂದಾಗಲೂ ಪರಿಸ್ಥಿತಿ ಏನೂ ಬದಲಾಗಿಲ್ಲ. ಸಧ್ಯಕ್ಕೆ ಇವು ಕಾರ್ಯರೂಪಕ್ಕೆ ಬರುವ ಹಾಗೆ ಕಾಣುತ್ತಿಲ್ಲ. ಪ್ರತಿವರ್ಷ ಈ ಪ್ರಾಜೆಕ್ಟ್‌ಗಳು ಪುಸ್ತಕದಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಕಾರ್ಯಗತವಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಬೆಂಗಳೂರಿನಲ್ಲಿ ಜನಸಂದಣಿ ದಿನದಿನೇ ಹೆಚ್ಚುತ್ತಿರುವುದರಿಂದ ಸಬ್‌ವೇಸ್, ಫ್ಲೈಓವರ್ಸ್, ರಸ್ತೆ ಅಗಲ ಮಾಡುವ ಕಾರ್ಯಕ್ರಮಗಳನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆಲ್ಲ ಕಾರ್ಪೊರೇಷನ್ನನ್ನೇ ನಂಬಿದರೆ ಆಗುವುದಿಲ್ಲ. ಏಕೆಂದರೆ ಕಾರ್ಪೊರೇಷನ್‌ನಲ್ಲಿ ಅಷ್ಟು ಹಣ ಇಲ್ಲ. ಇದಕ್ಕೆ ಸರ್ಕಾರ ಅನುದಾನ ಕೊಡಬೇಕು. ಇಲ್ಲವೇ ಕೇಂದ್ರಸರ್ಕಾರದಿಂದ ಅನುದಾನ ಕೊಡಿಸಬೇಕು, ಇಲ್ಲವೇ ಡಿಬೆಂಚರ್ ಸಾಲ ಕೊಡಿಸಬೇಕು ಅಥವಾ ವರ್ಲ್ಡ್ ಬ್ಯಾಂಕ್ ಇಲ್ಲವೇ ಹುಡ್ಕೋದಿಂದ ಸಾಲ ಕೊಡಿಸಿ ಈ ಕಾರ್ಯಕ್ರಮಗಳನ್ನು, ಪ್ರಾಜೆಕ್ಟ್‌ಗಳನ್ನು ಮುಗಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಕಲ್ಕತ್ತಾ ನಗರ ಏನು ಸತ್ತ ನಗರ ಎಂದು ಹೆಸರು ತೆಗೆದುಕೊಂಡಿದೆ, ಅದೇ ರೀತಿ ಇನ್ನು ೨೦ ವರ್ಷಗಳಲ್ಲಿ ನಮ್ಮ ಬೆಂಗಳೂರು ನಗರ ಸಹ ಸತ್ತ ನಗರ ಆಗುತ್ತದೆ ಎಂದು ಹೇಳುವುದಕ್ಕೆ ವಿಷಾದಿಸುತ್ತೇನೆ. ಮತ್ತು ಈ ಕೆಲವು ಪ್ರಾಜೆಕ್ಟ್‌ಗಳು ಏನಿವೆ, ೧) ಕೆ.ಆರ್. ಮಾರ್ಕೆಟ್ ನವೀಕರಣ ಕೆಲಸ ಈಗಾಗಲೇ ಶುರುವಾಗಿದೆ. ೨) ಕಾರ್ಪೊರೇಷನ್ ಕೌನ್ಸಿಲ್ ಕಟ್ಟಡ ಪ್ರಾರಂಭವಾಗಿದೆ. ೩) ಗುಬ್ಬಿವೀರಣ್ಣ ರಂಗ ಮಂದಿರ ಶುರುವಾಗಿದೆ. ೪) ಆಮೇಲೆ ಮಡಿವಾಳ ಮಾರ್ಕೆಟ್ ಸಹ ಪ್ರಾರಂಭವಾಗಿದೆ. ಇವೆಲ್ಲವೂ ಎರಡು-ಮೂರು ವರ್ಷಗಳಲ್ಲೇ ಮುಗಿಯಬೇಕಾಗಿತ್ತು. ಆದರೆ ಆಮೆಗತಿಯಲ್ಲಿ ಈ ಕೆಲಸಗಳು ನಡೆದುಕೊಂಡುಹೋಗುತ್ತಿದೆ. ಇದಕ್ಕೆ ಕಾರ್ಪೊರೇಷನ್‌ನಲ್ಲಿ ಹಣದ ಕೊರತೆಯೋ ಇದೆಯೋ ಅಥವಾ ಕಂಟ್ರಾಕ್ಟರ್‌ಗಳ ತಪ್ಪೋ, ಗೊತ್ತಿಲ್ಲ.

ಇವುಗಳನ್ನು ಆದಷ್ಟು ಬೇಗ ಮುಗಿಸಬೇಕು. ಆ ಮೇಲೆ ಮಾಂಸದ ಮಾರ್ಕೆಟ್ ನವೀಕರಣ ಮಾಡುವುದಕ್ಕೆ ಪ್ರಾರಂಭ ಮಾಡಿ ೯ ವರ್ಷಗಳಾಯಿತು. ಕೇವಲ ೭೫ ಲಕ್ಷ ರೂಪಾಯಿ ಪ್ರಾಜೆಕ್ಟ್ ಇನ್ನೂ ಕಾರ್ಯಗತವಾಗಿಲ್ಲ, ಅದಿನ್ನೂ ಮುಗಿಯುವ ಸಂಭವವಿಲ್ಲ. ಸನ್ಮಾನ್ಯ ಸಚಿವರು ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆಂದು ಬೇರೆ ಸದಸ್ಯರು ಹೇಳಿರುವುದರಲ್ಲಿ ಸಂದೇಹವಿಲ್ಲ. ಮುಖ್ಯ ಮಂತ್ರಿಗಳು ಬೆಂಗಳೂರು ಮಹಾನಗರಪಾಲಿಕೆ, ಬಿ. ಡಿ. ಎ. ಅನ್ನು ಅವರೇ ಇಟ್ಟುಕೊಂಡಿರುವುದರಿಂದ ನಾನು ಈಗ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರ ಕೊಡುತ್ತಾರೋ ಅಥವಾ ನೀವು ಉತ್ತರ ಕೊಡುತ್ತೀರೊ ಗೊತ್ತಿಲ್ಲ. ನಾವು ಪದೇ ಪದೇ ಚೀಫ್ ಮಿನಿಸ್ಟರ್ ಹತ್ತಿರ ಹೋಗಿ ನಗರ ಸಭೆ ಮತ್ತು ಬಿ. ಡಿ. ಎ. ಬಗ್ಗೆ ಕೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಇಲಾಖೆಗಳನ್ನು ತಾವೇ ವಹಿಸಿಕೊಂಡು, ನಮಗೆ

ಕೆಲಸಗಳು ಬೇಗ ಆಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ನಗರ ಸಭಾ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಬೇಕೆಂದು ಬಯಸಿದ್ದೇನೆ. ಈಗ ಮಹಾನಗರಪಾಲಿಕೆಯಲ್ಲಿ ಸುಮಾರು ೧೨೦ ಕೋಟಿ ವರಮಾನ ಬರುವುದು ಮತ್ತು ಖರ್ಚಾಗುವುದು ಏನಿದೆ ಈ ವಿಚಾರದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ಆಗುತ್ತಿವೆ. ಇದರಲ್ಲಿ ಬಹುತೇಕ ಕಳೆದ ವರ್ಷದಲ್ಲಿ ಸಿಲ್ ಕಿಟ್ ಮತ್ತು ಸಿಲ್ ಮೆಕಾಡೆಮ್ ಕೆಲಸಗಳನ್ನು ಮಾಡಿದ್ದಾರೆ. ಸುಮಾರು ೧೦-೨೦ ಲಕ್ಷ ಕೆಲಸಗಳನ್ನು ಪೀಸ್ ವರ್ಕ್ ಕೊಟ್ಟು ಮುಗಿಸಿದ್ದಾರೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳು ಮಹಾನಗರಪಾಲಿಕೆಯ ಹಣ ಸೋರಿ ಹೋಗಿದೆ ಎಂದು ಹೇಳುತ್ತೇನೆ ಏಕೆಂದರೆ, ಇವತ್ತಿನ ದಿವಸ ಸಿಲ್ ಕಿಟ್ ಮತ್ತು ಸಿಲ್ ಮೆಕಾಡೆಮ್ ಕೆಲಸಗಳಲ್ಲಿ ಕೆಲವು ಭಾಗಗಳನ್ನು ಸೇರಿಸಿ ಎಸ್ಟಿಮೇಟ್ ಮಾಡುತ್ತಾರೆ. ಕೆಲವು ಭಾಗಗಳನ್ನು ಕೆಲಸ ಮಾಡದೇ ಪೂರೈಸುತ್ತಿದ್ದಾರೆ. ಈ ದಿಸೆಯಲ್ಲಿ ಒಳ್ಳೆಯ ನಿವೃತ್ತ ಮುಖ್ಯ ಇಂಜಿನಿಯರುಗಳಾದ ಆರ್. ಎಲ್. ಶ್ರೇಷ್ಠ ಅಥವಾ ಅಶ್ವತ್ಥನಾರಾಯಣರೆಡ್ಡಿ ಅಥವಾ ಚುರುಕಿ ಅವರುಗಳಿಂದ ತನಿಖೆ ಮಾಡಿಸಿದರೆ, ಎಷ್ಟು ಕೋಟ್ಯಾಂತರ ರೂಪಾಯಿ ಹೋಗಿದೆ ಎನ್ನುವುದು ಬಯಲು ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, ಅಲ್ಲಿಯ ಒಳಭಾಗದಲ್ಲಿ ಅನೇಕ ಕೆಲಸಗಳು ಆಗಬೇಕಾದ ಡಿವಿಜನ್‌ಗಳಲ್ಲಿ ೧೦ ಸಾವಿರ ರೂಪಾಯಿ ಕೆಲಸಗಳನ್ನು ಅವರ ಅಧೀನದಲ್ಲಿ ಮಂಜೂರ್ಮಾಡುವುದು ಮತ್ತು ಎಂಟ್ರಸ್ಟ್ ಮಾಡತಕ್ಕಂಥ ಕೆಲಸಗಳನ್ನು ಸಹ ಕೊಟ್ಟಿಲ್ಲ ಅನೇಕ ಸಂದರ್ಭದಲ್ಲಿ ಮುಖ್ಯ ಇಂಜಿನಿಯರುಗಳಿಗೆ ಹೇಳಿದರೆ, ಈ ಕೆಲಸಗಳನ್ನು ಮಾಡದೇ; ಸಿಲ್ ಕಿಟ್ ಮತ್ತು ಸಿಲ್ ಮೆಕಾಡೆಮ್ ಕೆಲಸಗಳನ್ನು ಯಾವ ಹಿತದೃಷ್ಟಿಯಿಂದ ಮಾಡಿದ್ದಾರೋ, ಕೆಲಸದ ಹಿತದೃಷ್ಟಿಯಿಂದ ಮಾಡಿದ್ದಾರೋ ಅಥವಾ ಹಣದ ಹಿತದೃಷ್ಟಿಯಿಂದ ಮಾಡಿದ್ದಾರೋ ಎಂಬುದು ಬಯಲಿಗೆ ಬರಬೇಕಾಗಿದೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದನ್ನು ತಜ್ಞರಿಂದ ತನಿಖೆ ಮಾಡಿಸಿ, ಇದನ್ನು ಹೊರಗಡೆ ತರಬೇಕು. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿ ಮಹಾನಗರಪಾಲಿಕೆಯ ಏನು ಕಂದಾಯದ ಹಣ ಸೋರಿ ಹೋಗಿದೆ, ಈ ದಿಸೆಯಲ್ಲಿ ಒಂದು ಮಳೆ ಬಂದ ಕಾರಣದಿಂದ ಈ ಅನಾಹುತದ ಕೆಲಸಗಳನ್ನು ಮಾಡಿದ್ದಾರೆ. ಈ ದೃಷ್ಟಿಯಲ್ಲಿ ಸೋರಿ ಹೋಗಿರತಕ್ಕ ಹಣವನ್ನು ಬಯಲು ಮಾಡುವುದಕ್ಕೆ ತಾವು ಕಾರಣಕರ್ತರಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಇವತ್ತಿನ ದಿವಸ ಜೋನಲ್ ರೆಗ್ಯುಲೇಷನ್ ಆಕ್ಟ್ ಮಾಡಿದ್ದರೂ ಆ ಪ್ರಕಾರವಾಗಿ ಬೆಂಗಳೂರು ನಗರದ ಜನತೆ ಮನೆಗಳನ್ನು ಕಟ್ಟುತ್ತಾ ಇಲ್ಲ. ಈ ಕಾನೂನನ್ನು ಜನಗಳ ಹಿತದೃಷ್ಟಿಯಿಂದ ತಜ್ಞರು ಮತ್ತು ಸರ್ಕಾರದವರು ಏನು ಮಾಡಿದ್ದಾರೆ, ಆ ಪ್ರಕಾರ ಹೋಗುತ್ತಾ ಇಲ್ಲ. ಈ ಕಾನೂನು ಪ್ರಕಾರ ಮನೆಗಳನ್ನು ಕಟ್ಟದೇ ಇರುವುದರಿಂದ ಅಧಿಕಾರಿಗಳಿಗೆ ಇದು ಲಾಭವಾಗಿದೆ. ಈ ದಿಸೆಯಲ್ಲೂ ತಜ್ಞರ ಸಮಿತಿಯನ್ನು ನೇಮಕ ಮಾಡಿ. ಜನಗಳಿಗನುಗುಣವಾಗಿ ಕಾನೂನುಗಳನ್ನು ಮಾಡಬೇಕು ಜನರು ಯಾವ ರೀತಿ ಪರಿಪಾಲನೆ ಮಾಡುತ್ತಾರೆ, ಅದಕ್ಕೆ ವಿರುದ್ಧವಾಗಿ ಕಾನೂನು ಮಾಡಿದರೆ ಅಧಿಕಾರಿಗಳಿಗೂ ಕಷ್ಟ ಸಂಬಂಧಪಟ್ಟ ಜನಗಳಿಗೂ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಜನತೆಯು ಯಾವ ರೀತಿಯಲ್ಲಿ ಕಾನೂನುಗಳನ್ನು ಪರಿಪಾಲನೆ ಮಾಡುತ್ತಾರೆ ಆ ದೃಷ್ಟಿಯಲ್ಲಿ ಮಾಡಬೇಕಾಗುತ್ತದೆ. ಜೋನಲ್ ರೆಗ್ಯುಲೇಷನ್ ಆಕ್ಟ್ ಪ್ರಕಾರ ವರ್ತಕರು ಅನೇಕ ಅಪಾರ್ಟ್‌ಮೆಂಟ್ಸ್‌ಗಳು ಮತ್ತು ಅಂಗಡಿಗಳನ್ನು ಕಟ್ಟಿ ೫-೬ ವರ್ಷಗಳಾಗಿದೆ ಅವರಿಗೆ ಎನ್. ಒ. ಸಿ. ಕೊಡದೇ, ಕಂದಾಯ ವಸೂಲಿ ಮಾಡುವುದಕ್ಕೆ ಅವಕಾಶವಾಗಿಲ್ಲ. ಅಧಿಕಾರಿಗಳು ಎನ್. ಒ, ಸಿ. ಕೊಡದೇ ಇರುವುದರಿಂದ ಕಂದಾಯ ನಿಗದಿ ಮಾಡುವುದಕ್ಕೆ ಆಗುತ್ತಿಲ್ಲ. ಇದು ೫-೬ ವರ್ಷದಿಂದ ಅನಾಮತ್ತಾಗಿ, ಕೋಟ್ಯಾಂತರ ರೂಪಾಯಿ ಹಣ ಮಹಾನಗರ ಪಾಲಿಕೆಯಲ್ಲಿ ಕಟ್ಟದೇ ಇರತಕ್ಕ ಪರಿಸ್ಥಿತಿ ಇದೆ ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಿ, ಈ ಅಪಾರ್ಟ್‌ಮೆಂಟ್‌ಗಳು ಏನು ಡೀವಿಯೇಷನ್ ಆಗಿದೆ, ಜೋನಲ್ ರೆಗ್ಯುಲೇಷನ್ ಆಕ್ಟ್ ವೈಲೇಟ್ ಆಗಿದೆ, ಇದರ ಬಗ್ಗೆ ವಿಚಾರ ಮಾಡಿ, ಕಂದಾಯವನ್ನು ವಿಧಿಸಿದರೆ, ಇವತ್ತಿನ ದಿವಸ ಮಹಾನಗರ ಪಾಲಿಕೆಗೆ ಸುಮಾರು ೧೦-೧೫ ಕೋಟಿ ವರಮಾನ ಬರತಕ್ಕ ಸನ್ನಿವೇಶ ಇದೆ ಆದ್ದರಿಂದ ಈ ಬಗ್ಗೆ ಗಮನಕೊಡಬೇಕೆಂದು ಹೇಳುತ್ತೇನೆ ಈಗ ಅಲ್ಲಿ ಮೇಯರ್ ಅವರು ಏನಿದ್ದಾರೆ ಅವರಿಗೆ ಯಾವ ಅಧಿಕಾರವೂ ಇಲ್ಲ, ಸಭೆ ನಡೆಸುವ ಅಧಿಕಾರವೂ ಇಲ್ಲ. ಯಾರಾದರೂ ಬೆಂಗಳೂರು ನಗರದ ಜನತೆ ಮೇಯರ್ ಅವರ ಹತ್ತಿರ ಹೋಗಿ, ತಾವು ಬನ್ನಿ ಇಂತಹ ಕೆಲಸಗಳು ಆಗಬೇಕು, ಸ್ಥಳ ಪರಿಶೀಲನೆ ಮಾಡಿ ಎಂದಾಗ, ಮೇಯರ್‌ರವರು ಹೋಗಿ ಸ್ಥಳ ಪರಿಶೀಲನೆ ಮಾಡಿದರೂ, ತಕ್ಷಣ ಆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಅಧಿಕಾರ ಇಲ್ಲ. ಈ ದಿಸೆಯಲ್ಲಿ ಹಿಂದೆ

ಮಹಾನಗರ ಪಾಲಿಕೆ ಸಭೆಯಲ್ಲಿ ಮೇಯರ್‌ರವರಿಗೆ ೨೦ ಲಕ್ಷ ರೂಪಾಯಿಗಳನ್ನು ತಾವು ತನಿಖೆ ಮಾಡಿ ದಂಥ ಅರ್ಜೆಂಟ್ ಕೆಲಸಗಳಿಗೆ ಖರ್ಚು ಮಾಡುವ ಅಧಿಕಾರ ನೀಡಬೇಕೆಂದು, ಸಭೆ ತೀರ್ಮಾನ ಮಾಡಿ ಅದನ್ನು ಸರಕಾರಕ್ಕೆ ಕಳುಹಿಸಿತ್ತು. ಸರಕಾರ ಅದನ್ನು ಒಪ್ಪಿ ಮಾಡಿದರೆ ಮೇಯರ್ ಅವರಿಗೆ ಒಂದು ಗೌರವ ಬರುತ್ತದೆ, ಇಲ್ಲದೇ ಹೋದರೆ ಮೇಯರ್ ಅವರು ಕೇವಲ ಒಂದು ಉತ್ಸವ ಮೂರ್ತಿಯ ತರಹ ಇರುವ ಸನ್ನಿವೇಶ ಆಗಿದೆ. ಮೇಯರ್ ಅವರ ಅಧಿಕಾರವನ್ನು ಮೂರು ವರ್ಷಗಳ ಕಾಲ ಮಾಡಬೇಕು. ಒಂದು ವರ್ಷ ಸಾಲದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ನಮ್ಮ ಅನೇಕ ಸ್ನೇಹಿತರು ಹೇಳಿದ ಹಾಗೆ ಇವತ್ತು ಬೆಂಗಳೂರು ನಗರಕ್ಕೆ ಸಬ್‌ವೇಗಳು ಅತ್ಯಗತ್ಯವಾಗಿ ಬೇಕು. ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ. ರಸ್ತೆಗಳು ಬಹಳ ಚಿಕ್ಕದಾಗಿವೆ. ಇವು ವೈಡನ್ ಆಗಬೇಕು. ಅನೇಕ ಕೆಲಸಗಳು ಆಗಬೇಕಾದರೆ, ಬೆಂಗಳೂರು ಮಹಾನಗರ ಪಾಲಿಕೆಗೆ ಸರಕಾರ ಹಣವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇದೆ ಈ ಪ್ರಾಧಿಕಾರ ಕಳೆದ ಎರಡು ಮೂರು ವರ್ಷಗಳಿಂದ ಬೆಂಗಳೂರು ನಗರದ ಜನತೆಗೆ ಸೈಟುಗಳನ್ನು ಹಂಚಿಲ್ಲ ಇದಕ್ಕೆ ಕಾರಣ ಅಲ್ಲಿ ಒಂದು ಅಕ್ವಿಜಿಷನ್ ಸೆಕ್ಷನ್ ಎಂದು ಇದೆ. ಇವರು ಏನು ಮಾಡುತ್ತಾರೆ ಎಂದರೆ ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿದ ಹತ್ತು ವರ್ಷಕ್ಕೆ ಅವಾರ್ಡ್ ಪಾಸ್ ಮಾಡುತ್ತಾರೆ. ಆದುದರಿಂದ ರೈತರು ತಮ್ಮ ಆಸ್ತಿಗಳನ್ನು ಬೇರೆಯವರಿಗೆ ಪರಭಾರೆ ಮಾಡುತ್ತಾರೆ. ಹತ್ತು ವರ್ಷಗಳು ಕಾಯಿಸಿದರೂ ಕಡೆಗೆ ಅವರಿಗೆ ಒಂದು ಎಕರೆಗೆ ೪೦ ಸಾವಿರದಿಂದ ೮೦ ಸಾವಿರ ಕೊಡುತ್ತಾರೆ. ಇದು ಏನೇನೂ ಸಾಲುವುದಿಲ್ಲ. ಇವರು ಮಾಡಿದ ಅನಾಹುತದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇವತ್ತು ಒಂದು ಸೈಟ್ ಹಂಚಿಕೆ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳುತ್ತೇನೆ. ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ನಮ್ಮ ಸರಕಾರದ ನೀತಿ ಹಾಗೂ ರಾಜ್ಯಪಾಲರ ಭಾಷಣದಲ್ಲಿ ರೆವಿನ್ಯೂ ನಿವೇಶನಗಳನ್ನು ಸಕ್ರಮ ಮಾಡಿ ಅವರವರಿಗೆ ಕೊಡುತ್ತೇವೆ ಎಂಬುದು ನಮ್ಮ ನೀತಿಯಾಗಿದೆ. ಈ ದಿಸೆಯಲ್ಲಿ ಬಹುಮಟ್ಟಿಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಗರಾಭಿವೃದ್ಧಿ ಸಚಿವರು ಗಮನಕೊಟ್ಟು ಈ ರೆವಿನ್ಯೂ ಸೈಟ್‌ಗಳನ್ನು ಅವರವರಿಗೇ ಕೊಡುವುದಕ್ಕೆ ಒಂದು ಆರ್ಡರ್ ಪಾಸ್ ಮಾಡಿ ಅದನ್ನು ಬೇಗ ಆ ಜನಗಳಿಗೇ ಕೊಡಬೇಕು. ಏಕೆಂದರೆ ಇವೆಲ್ಲಾ ಸ್ಥಳೀಯ ಜನಗಳು, ಬಡವರು ಮತ್ತು ಕೂಲಿಕಾರರು ಕಾರ್ಮಿಕರು ಕೊಂಡುಕೊಂಡಿರುವಂತಹ ನಿವೇಶನಗಳಾಗಿದ್ದು, ಅದನ್ನು ಅವರವರಿಗೇ ಕೊಡುವ ವ್ಯವಸ್ಥೆ ಮಾಡಬೇಕು. ಬೆಂಗಳೂರು ನಗರದ ಒಳಭಾಗದಲ್ಲಿ ೧೯೬೭, ೧೯೬೮ ಮತ್ತು ೧೯೬೭ನೇ ಇಸವಿಗಳಲ್ಲಿ ರೀಕನ್ವೆ ಸ್ಕೀಂ ಆಗಿತ್ತು. ರಾಜಾಜಿನಗರ ಎರಡನೇ ಹಂತ, ಮೂರನೇ ಹಂತ ಮಂಜುನಾಥನಗರ ಸೋಮೇಶ್ವರ ನಗರ, ಗಂಗೇನಹಳ್ಳಿ ಇವುಗಳೂ ಕೂಡಾ ರೀಕನ್ವೆ ಆಗಿದ್ದವು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇವುಗಳಿಗೆ ಹಣ ಖರ್ಚು ಮಾಡಬೇಕಾಗಿಲ್ಲ. ಈಗಾಗಲೇ ಅಲ್ಲಿ ರಸ್ತೆಗಳು ಇವೆ. ಡ್ರೈನ್ಸ್ ಎಲ್ಲಾ ವ್ಯವಸ್ಥೆ ಇದೆ. ಆದರೆ ಆ ಜನಗಳಿಗೆ ಪೊಸಿಷನ್ ಸರ್ಟಿಫಿಕೇಟ್ ಕೊಟ್ಟು ಆ ಜನಗಳು ಕೊಡುವಂತಹ ಹಣ ತೆಗೆದುಕೊಂಡರೆ ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿ ಆದಾಯ ಪ್ರಾಧಿಕಾರಕ್ಕೆ ಬರುತ್ತದೆ. ಈ ದಿಸೆಯಲ್ಲಿ ಹಿಂದೆ ಏನು ಕಾರ್ಯಕ್ರಮ ನಡೆದಿತ್ತು ಅದನ್ನು ತಕ್ಷಣ ಜಾರಿಗೆ ಕೊಡುವಂತೆ ಆದೇಶ ಕೊಡಬೇಕು. ಇದಕ್ಕೆ ಹೊಸ ಕಾನೂನು ಬೇಕಾಗಿಲ್ಲ. ಮುಕ್ಕಾಲು ಭಾಗ ಜನ ಪೊಸಷನ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ ಇನ್ನು ೨೫–೩೦ ಭಾಗ ತೆಗೆದುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಪ್ರಾಧಿಕಾರದವರು ಕೆಲಸ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಹಾಗೆಯೇ ಸಿ. ಎ. ಸೈಟ್ಸ್ ಏನಿದೆ, ಅದನ್ನು ಸ್ಕೂಲ್‌ಗಳಿಗೆ ದೇವಸ್ಥಾನಗಳಿಗೆ ಲೀಸ್ ಕೊಟ್ಟಿದ್ದಾರೆ. ಇವತ್ತು ಮಕ್ಕಳು ಆಟವಾಡುವುದಕ್ಕೆ ಸ್ಥಳ ಇಲ್ಲ. ಸ್ಮಶಾನ ಮಾಡುವುದಕ್ಕೆ ಜಾಗ ಇಲ್ಲ, ಗೊರಗುಂಟೆ ಪಾಳ್ಯದಲ್ಲಿ ಇದ್ದ ಸ್ಮಶಾನದ ಜಾಗವನ್ನು ಸೇರಿಸಿ ಮಾರ್ಕೆಟ್‌ಯಾರ್ಡ್ ಡಂಪಿಂಗ್‌ಗೆ ಕೊಟ್ಟಿದ್ದಾರೆ ಎಂಜಿನಿಯರ್‌ಗಳು ಈ ರೀತಿ ಮಾಡುತ್ತಾರೆ. ನಗರದ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಇವತ್ತು ಸ್ಮಶಾನಕ್ಕೆ ಜಾಗವೇ ಇಲ್ಲ. ಐದಾರು ಎಕರೆಗಳನ್ನು ತಾವು ಸ್ವಾಧೀನ ಪಡಿಸಿ ಸ್ಮಶಾನಕ್ಕೆ ಇಡಿ ಎಂದು ಅನೇಕ ಕಾಗದಗಳನ್ನು ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬರೆದರೂ ಇದುವರೆಗೂ ಏನು ಮಾಡಿದ್ದಾರೆ ಎನ್ನುವ ರೀತಿಯಲ್ಲೇ ಇದೆ. ತಮ್ಮ ಮೂಲಕ ಸರಕಾರದ ಗಮನಕ್ಕೆ ತರುವುದು ಏನೆಂದರೆ, ಶಾಸಕರು ಏನು ತಮ್ಮ ಅಹವಾಲುಗಳನ್ನು ಹಾಗೂ ಅರ್ಜಿಗಳನ್ನು ಬರೆಯುತ್ತಾರೆ ಅದರ ಬಗ್ಗೆ ತಕ್ಷಣ ಉತ್ತರ ಕೊಡತಕ್ಕಂಥ ಒಂದು ನೀತಿಯನ್ನು ಪರಿಪಾಠವನ್ನು ಅಧಿಕಾರಿಗಳು ಇಟ್ಟುಕೊಳ್ಳಬೇಕು. ಸಚಿವರೂ ಕೂಡಾ ನಮ್ಮ ಕೊಡುವಂಥ ಕಾಗದ ಪತ್ರಗಳಿಗೆ ತಕ್ಷಣ ಉತ್ತರ ಕಳುಹಿಸುತ್ತಾರೆ. ಆದರೆ ಅಧಿಕಾರಿಗಳಿಗೆ ಆ ರೀತಿ ನೀತಿ ಇಲ್ಲ. ಇದರ ಬಗ್ಗೆ ತಕ್ಷಣ ಆದೇಶ ಕೊಡಬೇಕು. ನಾವು ಜನತೆಯ ಪ್ರತಿನಿಧಿಗಳು. ಜನತೆಗೆ ಬೇಕಾದ ಕೆಲಸದ ಬಗ್ಗೆ ಅರ್ಜಿಗಳನ್ನು ಕೊಡುತ್ತೇವೆ ತಕ್ಷಣ ಆ ಕೆಲಸ ಆಗಬೇಕು. ಕೆಲಸ ಆಗ ದಿದ್ದರೆ ಜೊತೆಯಲ್ಲಿ ಏನು ಮಾಡುತ್ತಿದ್ದಾರೆ ಎಂಬುವನ್ನು ನಮ್ಮ ಗಮನಕ್ಕೆ ತರಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಇನ್ನು ಬೆಂಗಳೂರು ಜಲಮಂಡಲಿ ಬಗ್ಗೆ ಇವತ್ತಿನ ದಿವಸ ನಾನು ಹೇಳಬೇಕಾದರೆ ಬೆಂಗಳೂರು ನಗರದಲ್ಲಿ ಅನೇಕ ಬಡಾವಣೆಗಳು ಇರುವಾಗ ಅಲ್ಲಿ ಸರಿಯಾದ ಸ್ಯಾನಿಟೇಶನ್ ಇರಬೇಕಾಗುತ್ತದೆ. ಒಳ್ಳೆಯ ಒಳಚರಂಡಿ ವ್ಯವಸ್ಥೆ ಮಾಡಬೇಕಾದರೆ ಪೈಪುಗಳನ್ನು ಹೊಸದಾಗಿ ಅಳವಡಿಸಬೇಕಾಗುತ್ತದೆ. ಅದಕ್ಕೆ ಸರ್ಕಾರದವರು ಹಣ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಬೆಂಗಳೂರು ಮಹಾನಗರಪಾಲಿಕೆಯವರಾಗಲಿ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಆಗಲಿ ಹಣ ಕೊಡಬೇಕಾಗುತ್ತದೆ. ಈ ಒಂದು ಯೋಜನೆಗೆ ಬೆಂಗಳೂರು ಜಲಮಂಡಲಿಯವರು ೫-೬ ವರ್ಷಗಳ ಹಿಂದೆಯೇ ಒಂದು ಪ್ಲಾನ್ ಎಸ್ಟಿಮೇಟ್ ಮಾಡಿ ಕಳುಹಿಸಿದ್ದಾರೆ. ಆದರೆ ಇದುವರೆವಿಗೂ ಅವರಿಗೆ ಯಾರೂ ಹಣ ಕೊಟ್ಟಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ತನಿಖೆಯನ್ನು ಮಾಡಿಸಬೇಕಾಗುತ್ತದೆ. ಕಳೆದ ೫-೬ ವರ್ಷಗಳಿಂದ ಅವರು ಕಳುಹಿಸಿದ ಎಸ್ಟಿಮೇಟ್ ಏತಕ್ಕೆ ಮಂಜೂರು ಮಾಡಿ ಹಣ ಕೊಡಲಿಲ್ಲ ಎಂದು ನಾವು ಕೇಳಬೇಕಾಗುತ್ತದೆ. ಅಧಿಕಾರಿಗಳು ಇವತ್ತಿನ ದಿವಸ ಏನೂ ಕೆಲಸ ಮಾಡಿರುವುದಿಲ್ಲ. ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಈ ಕೆಲಸ ಕಾರ್ಯಗಳಿಗೆ ಏತಕ್ಕೆ ಹಣ ಕೊಡಲಿಲ್ಲ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಆಗಲಿ ಏತಕ್ಕೆ ಹಣ ಕೊಡಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ನನಗೆ ತಿಳಿಸಬೇಕು. ಬೆಂಗಳೂರು ಜಲಮಂಡಲಿಯವರನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ ನಾವೇನು ಮಾಡುವುದು ಎಂದು ಅವರು ಹೇಳುತ್ತಾರೆ. ಆದ್ದರಿಂದ ಈ ಒಂದು ಒಳಚರಂಡಿ ವ್ಯವಸ್ಥೆಗೆ ಸರ್ಕಾರದ ವತಿಯಿಂದ ಆದರೂ ಹಣ ಕೊಟ್ಟು ಆದಷ್ಟು ಬೇಗ ಈ ಕೆಲಸ ಮಾಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಬೆಂಗಳೂರು ನಗರವನ್ನು ಸುಂದರ ನಗರ, ಉದ್ಯಾನವನಗಳ ನಗರ ಎಂದು ಏನು ಕರೆಯುತ್ತಾರೋ, ಆ ಹೆಸರು ಉಳಿಸುವುದಕ್ಕೆ ಆಗುವುದಿಲ್ಲ. ಬೆಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿ ಮಾಡದಿದ್ದರೆ ವಾಸನೆಯ ನಗರವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಸರ್ಕಾರದ ವತಿಯಿಂದ ಆದರೂ ಹಣ ಕೊಟ್ಟು ಈ ಕೆಲಸ ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಒಳಚರಂಡಿ ವ್ಯವಸ್ಥೆ ಇಲ್ಲದೆ ಗಲೀಜು ನೀರು ಎಲ್ಲಾ ರಸ್ತೆಗೆ ಬಿಟ್ಟಿರುತ್ತಾರೆ. ಇದರಿಂದ ಆ ಸುತ್ತಮುತ್ತಲು ವಾಸ ಮಾಡತಕ್ಕಂಥ ಜನರಿಗೆ ಕಾಯಿಲೆ ಮಕ್ಕಳಿಗೆ ಬಂದು ಅವರು ಔಷಧಿ ಕೊಡಿಸಿ ಸಾಕಾಗಿ ಹೋಗಿದೆ ಎಂದು ಗೋಳಾಡುತ್ತಿದ್ದಾರೆ. ಇಂತಹ ಕಡೆ ಸಹ ಒಳಚರಂಡಿ ವ್ಯವಸ್ಥೆ ಮಾಡಿಸಿ ಗಲೀಜು ನೀರನ್ನು ರಸ್ತೆಗಳ ಮೇಲೆ ಬಿಡದೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಈ ಬೋರ್ಡ್ ಒಂದು ನಯಾಪೈಸೆಗೂ ಪ್ರಯೋಜನ ಇಲ್ಲ. ಈ ಬೋರ್ಡ್‌ಗೆ ಸರ್ಕಾರದಿಂದ ಕೊಡತಕ್ಕಂಥ ಹಣ ಎಲ್ಲಾ ಅಲ್ಲಿರತಕ್ಕಂಥ ಅಧಿಕಾರಿಗಳ ಸಂಬಳಕ್ಕೆ ಹೋಗುತ್ತಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಈ ಬೋರ್ಡನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಥವಾ ಬೆಂಗಳೂರು ಮಹಾನಗರಪಾಲಿಕೆಗೆ ವಹಿಸಿಕೊಟ್ಟರೆ ಅಲ್ಲಿ ಸರ್ಕಾರದವರು ಕೊಡುತ್ತಿದ್ದ ಹಣದಿಂದ ಇನ್ನು ಅಭಿವೃದ್ಧಿ ಕೆಲಸಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ಮಾಡಬಹುದು ಎಂದು ನಾನು ಹೇಳುತ್ತೇನೆ. ನಮ್ಮ ಮಾನ್ಯ ಸಚಿವರು ಹೆಚ್ಚು ಆಸಕ್ತಿಯಿಂದ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಂತೆ ಅಧಿಕಾರಿಗಳಲ್ಲಿ ಕೂಡ ದಕ್ಷತೆ ಪ್ರಾಮಾಣಿಕತೆ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅಧಿಕಾರಿಗಳು ತಮ್ಮ ಕರ್ತವ್ಯ ಮರೆತಿದ್ದಾರೆ. ಅವರು ಜನತೆಯ ಕಂದಾಯದಲ್ಲಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದು ಮರೆತಿದ್ದಾರೆ. ಅವರಲ್ಲಿ ದಕ್ಷತೆ ಇಲ್ಲ. ಪ್ರಾಮಾಣಿಕತೆ ಇಲ್ಲ. ನಿಷ್ಠೆ ಇಲ್ಲ. ಆಸಕ್ತಿ ಇಲ್ಲ. ತಮಗೆ ಇರುವ ಆಸಕ್ತಿ ಅಧಿಕಾರಿಗಳಲ್ಲಿ ಬರುವಂತೆ ಮಾಡಬೇಕೆಂದು ಹೇಳಿ ಮಾನ್ಯ ಮಂತ್ರಿಗಳು ಮಂಡಿಸಿದ ಬೇಡಿಕೆಗಳ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತು ಮುಗಿಸುತ್ತೇನೆ.

ಛೇರ್ಮನ್.—ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಗಿಯಿತು. ಮಾನ್ಯ ಮಂತ್ರಿಗಳಿಂದ ಈಗ ಉತ್ತರ.

† ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ, ನಗರಾಭಿವೃದ್ಧಿ, ಬಂದರು ಮತ್ತು ಮೀನುಗಾರಿಕೆ ಸಚಿವರು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಬದಲಾವಣೆಯಾಗಿದೆ ಬಹುಶಃ ೭ ವರ್ಷಗಳ ಕಾಲ ಆಡಳಿತ ಮಾಡಿದಂತಹ ಪಕ್ಷ ಇತ್ತೀಚೆಗೆ ನಡೆದಂತಹ ಮಹಾಚುನಾವಣೆಗಳ ನಂತರ ಅದು ಇವತ್ತು ವಿರೋಧಪಕ್ಷವಾಗಿ ಕುಳಿತುಕೊಂಡಿವೆ. ಕಳೆದ ೭ ವರ್ಷಗಳ ಕಾಲ ವಿರೋಧ ಪಕ್ಷವಾಗಿದ್ದಂತಹ ಒಂದು ಪಕ್ಷ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಡಳಿತ ಮಾಡುತ್ತಿರುವಂತಹ ಸಂದರ್ಭದಲ್ಲಿ ರಾಜ್ಯದ ಜನತೆಗೆ ಚುನಾವಣೆ ಸಂದರ್ಭದಲ್ಲಿ ನಾವು ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಂತಹ ಕಾಲಕ್ಕೆ ಜನತೆಗೆ ಏನು ಭರವಸೆಯನ್ನು ಕೊಟ್ಟಿದ್ದೇವೆ. ಅದರಿಂದ ನಾವು ಮತ

ಸ್ವೀಕಾರ ಮಾಡಿದಂತಹ ಕಾಲದಲ್ಲಿ ನಾವು ಅಧಿಕಾರಕ್ಕೆ ಬಂದರೆ ನಮ್ಮ ಭರವಸೆಗಳನ್ನು ಈಡೇರಿಸುತ್ತೇವೆಂದು ಪ್ರತಿಜ್ಞೆ ಮಾಡಿದ್ದೇವೆ. ಅದರಂತೆ ನಾವು ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೇಸ್ (ಐ) ಪಕ್ಷದ ಮೂಲಕ ಅಧಿಕಾರ ನಡೆಸುತ್ತಿದ್ದೇವೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಂದೂ ಇಲ್ಲದಂತೆ ನಾವು ಪ್ರಚಂಡ ಬಹುಮತ ಪಡೆದು ದಕ್ಷ ಹಾಗೂ ಸಮರ್ಥ ನಾಯಕರಾದಂತಹ ಶ್ರೀಮಾನ್ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ನಾನು ಈ ಇಲಾಖೆಗಳ ಅಧಿಕಾರ ಸೂತ್ರವನ್ನು ವಹಿಸಿಕೊಂಡಿದ್ದೇನೆ. ೬ ತಿಂಗಳ ನಂತರ ನಾವು ಆಯವ್ಯಯವನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇವೆ. ನಾವು ನಾಲ್ಕು ತಿಂಗಳ ಕಾಲ ವೋಟ್ ಆನ್ ಅಕೌಂಟ್ ತೆಗೆದುಕೊಂಡಿದ್ದು ಇನ್ನುಳಿದ ೮ ತಿಂಗಳಿಗೆ ನಾವು ಬಜೆಟ್ ಮಂಡಿಸಿದ್ದೇವೆ. ಬಹುಶಃ ಇದು ಪ್ರಥಮ ಬಾರಿಗೆ ೮ ತಿಂಗಳ ಬಜೆಟ್ ಮಂಜೂರಾತಿಗೆ ಸೇರತಕ್ಕಂಥ ಅಧಿವೇಶನವಾಗಿದೆ.

ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ಮೀನುಗಾರಿಕೆ. ಬಂದರು, ನಗರಾಭಿವೃದ್ಧಿ ಹಾಗೂ ಅನೇಕ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮೂರು ದಿವಸಗಳ ಕಾಲ ಚರ್ಚೆಯಾಗಿದೆ. ಈ ಸಂಸದೀಯ ವ್ಯವಸ್ಥೆಯಲ್ಲಿ ಸುಮಾರು ೨೦ ವರ್ಷಗಳ ಕಾಲ ನಾನು ಶಾಸಕನಾಗಿ ಮೇಲ್ಮನೆಯ ಸದಸ್ಯನಾಗಿ ನಾನು ಯಾವತ್ತೂ ಕೂಡಾ ಮಂತ್ರಿಯಾಗಿರಲಿಲ್ಲ. ಪ್ರಥಮ ಬಾರಿಗೆ ಮಂತ್ರಿಯಾಗಿರತಕ್ಕಂಥ ಕಾಲದಲ್ಲಿ ಈ ಸದನದಲ್ಲಿ ಇವತ್ತು ಉತ್ತರ ಹೇಳುವ ಭಾಗ್ಯ ಸಿಕ್ಕಿದೆ. ಇದು ನಾನು ನಿಜವಾಗಿ ಎಂದೆಂದಿಗೂ ಕೂಡಾ ಮರೆಯುವಂತಹ ಸಂದರ್ಭ ಅಲ್ಲ ಎಂದು ತಿಳಿದುಕೊಂಡಿದ್ದೇನೆ, ನನ್ನ ಇಲಾಖೆಯ ಮೇಲೆ ಮೂರು ದಿವಸಗಳ ಕಾಲ ಚರ್ಚೆಯಾಗಿದೆ, ಬಹಳ ಮೇಲ್ಮಟ್ಟದಲ್ಲಿ ಚರ್ಚೆ ನಡೆದಿದೆ ಎಂದು ನಾನು ಗಮನಿಸಿದ್ದೇನೆ. ಚರ್ಚೆ ನಡೆದಂಥ ಸಂದರ್ಭದಲ್ಲಿ ನಾನು ಬಹಳ ಸಂತೋಷದಿಂದ ಗಮನಿಸಿದ್ದು ಏನೆಂದರೆ ಸುಮಾರು ೨೭ ಮಂದಿ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಆಳುವ ಪಕ್ಷದ ಸದಸ್ಯರು ಹೆಚ್ಚು ಮಾತನಾಡದಿದ್ದರೂ ಕೂಡಾ, ಬಹುತೇಕ ವಿರೋಧ ಪಕ್ಷಗಳ ಸದಸ್ಯರು, ಅವರು ಜನತಾ ದಳ ಆಗಿರಬಹುದು, ಜನತಾ ಪಕ್ಷ ಆಗಿರಬಹುದು, ಬಿ.ಜೆ.ಪಿ. ಆಗಿರಬಹುದು, ಪಕ್ಷೇತರ ಸದಸ್ಯರು ಇರಬಹುದು, ರೈತ ಸಂಘದವರು ಇರಬಹುದು. ಒಟ್ಟಾರೆ ಅವರು ಕೊಟ್ಟಂಥ ಅಭಿಪ್ರಾಯಗಳಲ್ಲಿ ನಾವು ಅಧಿಕಾರಕ್ಕೆ ಬಂದಮೇಲೆ, ಈ ಇಲಾಖೆಗಳನ್ನು ನಾನು ವಹಿಸಿಕೊಂಡಮೇಲೆ, ಎಲ್ಲೆಲ್ಲಿ ಬೇಕೋ ಅಲ್ಲಿ ಎಚ್ಚರಿಕೆಯ ಮಾತನಾಡಿದ್ದಾರೆ, ಎಲ್ಲೆಲ್ಲಿ ಸಲಹೆಗಳನ್ನು ಕೊಡಬೇಕೋ ಅಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ನಾವು ಜನತೆಗೆ ಏನೆಲ್ಲಾ ಭರವಸೆಗಳನ್ನು ಕೊಟ್ಟಿದ್ದೇವೆ ಆ ಭರವಸೆಯತ್ತ ಹೋಗುತ್ತಿದ್ದೇವೆ. ಅದರ ಬಗ್ಗೆ ಎಚ್ಚರಿಕೆ ವಹಿಸಬೇಕೆಂಬ ಅಭಿಪ್ರಾಯವನ್ನು ಅವರುಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಚರ್ಚೆಯ ಕಾಲದಲ್ಲಿ, ನಾನು ಗಮನಿಸಿದ್ದು ಏನೆಂದರೆ, ಕಳೆದ ಸರಕಾರದ ಇತ್ತೀಚಿನ ಕೊನೆಯ ದಿನಗಳಲ್ಲಿ ಈ ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳಾಗಿ ಶ್ರೀಮಾನ್ ದೇಶಪಾಂಡೆಯವರು ಸ್ವತಃ ಅಧಿಕಾರ ವಹಿಸಿಕೊಂಡಿದ್ದರು. ಮಾನ್ಯ ಧರ್ಮಸಿಂಗ್‌ರವರೂ ನಗರಾಭಿವೃದ್ಧಿ ಮಂತ್ರಿಗಳಾಗಿದ್ದರು. ಈ ಇಬ್ಬರು ಪ್ರಮುಖರು ತಾವು ನಿರ್ವಹಿಸಿದ್ದ ಇಲಾಖೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಅದರಲ್ಲೂ ಕೂಡಾ ದೇಶಪಾಂಡೆಯವರು ಪ್ರಮುಖರು. ಅವರು ಇದರ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಿದರು. ಅವರ ಭಾಷಣಕ್ಕೆ ಸಾಕಷ್ಟು ಪ್ರಚಾರ ಕೂಡಾ ಸಿಕ್ಕಿದೆ. ಅವರು ಏನೆಲ್ಲಾ ಹೇಳಿದ್ದರು ಅದಕ್ಕೆ ಉತ್ತರ ಸಿಗಬೇಕಾಗಿದೆ. ಇವತ್ತು ವಿರೋಧ ಪಕ್ಷದ ಮಾನ್ಯ ಉಪನಾಯಕರು ಸಭೆಯಲ್ಲಿ ಇದ್ದಾರೆ. ವಿರೋಧಪಕ್ಷದ ನಾಯಕರು ಇಲ್ಲ. ಅವರು ಇಲ್ಲದಿದ್ದರೂ ಕೂಡಾ ಯಾರು ಈ ಚರ್ಚೆಯನ್ನು ಪ್ರಾರಂಭ ಮಾಡಿದರು. ಆ ಸದಸ್ಯರೂ ಸಭೆಯಲ್ಲಿ ಇದ್ದಿದ್ದರೆ ನನಗೆ ಹೆಚ್ಚು ಸಹಾಯಕವಾಗುತ್ತಿತ್ತು. ಅವರು ಏನೆಲ್ಲಾ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರು ಅವರ ಬಗ್ಗೆ ಉದ್ದೂರಿಯಾದ ಪ್ರಚಾರವನ್ನು ಪಡೆದಿದ್ದಾರೆ ಅವರಿಗೆ ಸರಿಯಾದಂಥ ಉತ್ತರವನ್ನು ನಾನು ಕೊಡುತ್ತಿದ್ದೆ. ಏನೇ ಆಗಲಿ ಸಾಕಷ್ಟು ಸದಸ್ಯರುಗಳು ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಲ್ಲದಿದ್ದರೂ, ಮೂರು ದಿವಸಗಳ ಕಾಲ ಚರ್ಚೆ ನಡೆದು ಇವತ್ತು ಅಂತಿಮವಾಗಿ ಇದಕ್ಕೆ ಸರಕಾರದ ಉತ್ತರ ಆಗಲೇ ಬೇಕೆಂದು ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇವತ್ತು ೨೭ ಜನ ಸದಸ್ಯರು ಯಾರು ಮಾತನಾಡಿದ್ದಾರೆ ಅವರಲ್ಲಿ ಅವರು ಪ್ರಸ್ತಾಪ ಮಾಡಿರುವ ಮೂಲಭೂತ ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಪ್ರಮುಖವಾದ ವಿಷಯಗಳ ಬಗ್ಗೆ, ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ಮಾತನಾಡುತ್ತೇನೆ. ಹೆಚ್ಚಾಗಿ ಇವತ್ತು ಪ್ರಸ್ತಾಪವಾಗಿರತಕ್ಕದ್ದು, ನಮ್ಮ ದೇಶಪಾಂಡೆಯವರು ಮಾತನಾಡತಕ್ಕ ಕಾಲದಲ್ಲಿ ಬಿ.ಡಿ.ಎ.ನಲ್ಲಿ ನಡೆದಿರತಕ್ಕಂಥ ಕೆಲವು ವಿಚಾರಗಳ ಬಗ್ಗೆ ಏನೆಲ್ಲಾ ಹೇಳುತ್ತಿದ್ದಾರೆ, ಅಲ್ಲಿ ಹೇಳಿದಂತೆ ನಡೆಯುತ್ತಿಲ್ಲ,

ಬಡವರಿಗೆ ಸೈಟ್ ಸಿಗುತ್ತಿಲ್ಲ, ನಾಗರಿಕರಿಗೆ ಸೈಟ್ ಸಿಗುತ್ತಿಲ್ಲ, ಎಂಬ ಮಾತನ್ನು ಏನು ಹೇಳಿದರು, ಬಹುಶಃ ಅದರ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ನಾನು ಹೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಅವರು ಇದಿದ್ದರೆ ಉತ್ತರ ಹೇಳಬಾರದು ಎಂದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅವರು ಇಲ್ಲದ್ದಿದ್ದರೆ ಅವರಿಗೆ ಸರಿಯಾದ ಉತ್ತರ ಸಿಗುತ್ತಿತ್ತು. ಆಗ ನನಗೂ ಸಮಾಧಾನವಾಗುತ್ತಿತ್ತು.

ಶ್ರೀ ಎಂ. ಪಿ. ವೆಂಕಟೇಶ್.—ಪತ್ರಿಕೆಯಲ್ಲಿ ಬರುತ್ತದೆ. ಇಲ್ಲಿ ರೆಕಾರ್ಡ್ ಆಗುತ್ತಿದೆ. ಅವರಿಗೆ ಗೊತ್ತಾಗುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಒಟ್ಟಾರೆ ೨೭ ಮಂದಿ ಸದಸ್ಯರಿಗೂ ಕೂಡಾ ನಾನು ಉತ್ತರ ಹೇಳುವುದಕ್ಕೆ ಹೊರಟರೆ ಕನಿಷ್ಟ ೫-೬ ಘಂಟೆಗಳು ಬೇಕಾಗುತ್ತದೆ. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಕೆಲವು ಪ್ರಮುಖವಾದ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ, ಮಾನ್ಯ ಸದಸ್ಯರು ಯಾರೂ ಕೂಡಾ ನಾವು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ಸಿಗಲಿಲ್ಲ ಎಂದು ಹೇಳಬಾರದು. ಈ ಹಿನ್ನೆಲೆಯಲ್ಲಿ ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಆ ರೀತಿ ತಾವು ಅನ್ಯಥಾ ಭಾವಿಸಬಾರದು. ಏನೆಲ್ಲಾ ವಿಷಯಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ ಅದೆಲ್ಲಾ ವಿಷಯಗಳನ್ನೂ ನಾನು ಪ್ರಸ್ತಾಪ ಮಾಡುವುದಿಲ್ಲ. ಅದಕ್ಕೆ ಬೇಕಾದರೆ ಪ್ರತ್ಯೇಕವಾಗಿ ನಾನು ಬೇರೆ ರೀತಿ ತಮ್ಮಲ್ಲಿ ಸಮಾಲೋಚನೆ ಮಾಡಿ ತಮ್ಮ ಬೇಡಿಕೆಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಮೂಲಭೂತವಾಗಿ ಏನು ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆ ಕೇವು ಮಾತುಗಳನ್ನು ಈ ಸದನದಲ್ಲಿ ಅವಕಾಶ ಸಿಕ್ಕಿದಾಗ ಹೇಳುವುದು ಸರಿ ಎಂದು ನಾನು ತಿಳಿದಿದ್ದೇನೆ. ಮೊಟ್ಟಮೊದಲನೆಯದಾಗಿ ಮೀನುಗಾರಿಕೆ ಮತ್ತು ವಸತಿ ಬಗ್ಗೆ ನಾನು ಉತ್ತರ ಹೇಳುತ್ತೇನೆ. ಶ್ರೀಮಾನ್ ಬೈರೇಗೌಡರ ಹೆಸರನ್ನು ನಾನು ಮರೆತಿದ್ದೆ. ಅವರು ಮೀನುಗಾರಿಕೆ ವಿಚಾರದಲ್ಲಿ ಸಾಕಾದಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಸ್ವತಃ ಮಂತ್ರಿಗಳಾಗಿದ್ದವರು. ಅವರು ಹೆಚ್ಚಾಗಿ ಪ್ರವಾಸ ಮಾಡುತ್ತಿದ್ದರು ಹಾಗೂ ಮೀನುಗಾರಿಕೆ ಬಗ್ಗೆ ಸಾಕಾದಷ್ಟು ಆಸಕ್ತಿ ಇರತಕ್ಕಂಥವರು ಎಂಬ ಮಾತನ್ನು ನಾನು ಕೇಳಿದ್ದೇನೆ. ನಾನು ಮಂತ್ರಿಯಾಗಿ ಬಂದಮೇಲೆ ಕರಾವಳಿ ಪ್ರದೇಶದಲ್ಲಿ ಪ್ರವಾಸ ಮಾಡಿ ಅಲ್ಲಿ ಭೇಟಿ ನೀಡಿದ ಕಾಲದಲ್ಲಿ ಅವರು ಬಹಳ ಸಲ ಬರುತ್ತಿದ್ದರು ಹಾಗೂ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು ಎಂದು ಅಲ್ಲಿಯವರು ಹೇಳುತ್ತಿದ್ದರು.

೫-೨೦ ಪಿ. ಎಂ.

ಕರ್ನಾಟಕದ ಕರಾವಳಿ ಪ್ರದೇಶದ ಮೀನುಗಾರಿಕೆ ಸಂಪತ್ತು ಇಡೀ ದಕ್ಷಿಣ ಭಾರತದಲ್ಲೇ ವಿಶೇಷವಾದ ಸಂಪತ್ತು ಆಗಿದೆ. ಇಲ್ಲಿರುವಷ್ಟು ಈ ಸಂಪತ್ತು ಬೇರೆ ರಾಜ್ಯದಲ್ಲಿಲ್ಲ. ಆದರೆ ಅದನ್ನು ಯಾವ ಪ್ರಮಾಣದಲ್ಲಿ ಅದನ್ನು ಹೆಚ್ಚಿಸಬೇಕಾಗಿತ್ತೊ ಅಷ್ಟು ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆ ಭಾಗದ ಮೀನುಗಾರರಿಗೆ ಯಾವರೀತಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು, ಅವರ ಅಭಿವೃದ್ಧಿ ಹೇಗೆ ಸಾಧಿಸಬೇಕು ಎಂಬ ಬಗ್ಗೆ ಹಿಂದಿನ ಸರ್ಕಾರ ಹಾಕಿಕೊಂಡಿದ್ದ ಯೋಜನೆಗಳಾವುವನ್ನೂ ನಾವು ಕೈಬಿಟ್ಟಿಲ್ಲ. ಈ ದಿಸೆಯಲ್ಲಿ ಕೇಂದ್ರದ ಸಹಾಯ ಪಡೆದು ರಾಜ್ಯದ ಸಂಪತ್ತನ್ನು ಕ್ರೋಢೀಕರಿಸಬೇಕಾಗಿದೆ. ನಮ್ಮ ಕರಾವಳಿ ಪ್ರದೇಶದಲ್ಲಿ ಬರುವ ಕಾರವಾರ ಮತ್ತು ಮಂಗಳೂರಿನಲ್ಲಿ ಮೀನುಗಾರಿಕೆ ಮಾಡಲು ವಿಶೇಷ ಅವಕಾಶವಿದೆ. ಆದರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ವೇಗ ಕಡಿಮೆ ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗ ನಮ್ಮ ಸರ್ಕಾರ ಕಾರವಾರ, ಮಂಗಳೂರು, ಮಲ್ಪೆ, ಹೊನ್ನಾವರ ಮುಂತಾದ ಬಂದರುಗಳನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಕ್ರಮ ಕೈಗೊಂಡಿದೆ. ಶ್ರೀಮತಿ ಮನೋರಮಾ ಮಧ್ವರಾಜ್‌ರವರೂ ಕೂಡ ಆ ಭಾಗದಿಂದ ಬಂದವರು. ಅವರ ಜೊತೆಯಲ್ಲೇ ನಾನು ವಿಸ್ತೃತವಾದ ಪ್ರವಾಸ ಮಾಡಿ ಅಭ್ಯಾಸ ಮಾಡಿದ್ದೇನೆ. ಭಟ್ಕಳ, ಮಲ್ಪೆ, ಹೊನ್ನಾವರ ಕಾರವಾರ ಮುಂತಾದ ಕಡೆ ಇರುವಂತಹ ವಿಶೇಷ ಸವಲತ್ತುಗಳು ಬೇರೆ ಎಲ್ಲಿಯೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಆಮೇಲೆ ಮಲ್ಪೆ ಬಂದರಿನ ಬಗ್ಗೆ ಹೇಳಿದರು. ಅಲ್ಲಿನ ಮೊದಲನೇ ಹಂತದ ಕೆಲಸ ಈಗಾಗಲೇ ಮುಗಿದಿದೆ. ಈಗ ಎರಡನೇ ಹಂತಕ್ಕೆ ಹೋಗುತ್ತಿದ್ದೇವೆ. ಅದಕ್ಕಾಗಿ ಕೇಂದ್ರದ ಅನುಮತಿಗಾಗಿ ಯೋಜನೆಯನ್ನು ಕಳಿಸಿಕೊಟ್ಟಿದ್ದೇವೆ. ಮಾನ್ಯ ಬೈರೇಗೌಡರು ಮೀನುಗಾರಿಕೆ ಸಚಿವರಾಗಿ ಸಾಕಷ್ಟು ಅನುಭವ ಪಡೆದವರಾಗಿದ್ದಾರೆ. ಹಾಗೆಯೇ ಬಿಎಂ. ಇದಿನಬ್ಬ ಅವರು, ಡಿಸೌಜ ಅವರು, ರಾಜೂಗೌಡ

ಅವರು ಈ ಮೀನುಗಾರಿಕೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರೆಲ್ಲ ಈಗ ಇದ್ದಿದ್ದರೆ ಚೆನ್ನಾಗಿತ್ತು. ಮಂಗಳೂರು ಮತ್ತು ಕಾರವಾರದಲ್ಲಿ ಮೀನುಗಾರಿಕೆಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಬೇಕಾಗಿದೆ. ನಾವು ಆ ಭಾಗಗಳಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ಬಂದಂತಹ ಒಂದೇ ದೂರು ಎಂದರೆ ಸಮುದ್ರದಲ್ಲಿ ಹೂಳೆತ್ತುವ ಕೆಲಸ ಸರಿಯಾಗಿ ಮಾಡಿಲ್ಲ ಎಂಬುದು ಆ ಕಾರ್ಯಕ್ಕೆ ದೊಡ್ಡ ದೊಡ್ಡ ಯಂತ್ರಗಳು ಬೇಕಾಗಿವೆ. ಅದಕ್ಕಾಗಿ ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ನಾವು ಈ ಕೆಲಸವನ್ನು ವಹಿಸಿದ್ದೆವು. ಆದರೆ ಅವರು ಕೆಲಸ ಪ್ರಾರಂಭ ಮಾಡಿದ ಕೆಲವೇ ದಿನಗಳಲ್ಲಿ ಆ ಯಂತ್ರಗಳು ಕೆಟ್ಟು ಹೋದವು. ಇದರಿಂದ ಸಕಾಲದಲ್ಲಿ ಆ ಕೆಲಸವನ್ನು ಮಾಡುವುದಕ್ಕಾಗಲಿಲ್ಲ. ಇಂತಹ ಯಂತ್ರಗಳು ಇಡೀ ರಾಷ್ಟ್ರದ ಬೇರೆಲ್ಲೂ ಸಿಗುವುದಿಲ್ಲ. ಈಗ ಈ ಕೆಲಸವನ್ನು ಮುಗಿಸಿ ಅಲ್ಲಿನ ಮೀನುಗಾರರಿಗೆ ಅನುಕೂಲ ಮಾಡಿಕೊಡಬೇಕಾದರೆ, ಸಮುದ್ರದ ಅಲೆಗಳನ್ನು ತಡೆಯುವ ಗೋಡೆಗಳನ್ನು ನಿರ್ಮಿಸಬೇಕಾಗುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರ ಸುಮಾರು ೧.೮೫ ಕೋಟಿ ರೂ ಯೋಜನೆ ತಯಾರಿಸಿದೆ. ಇದಕ್ಕೆ ಕೇಂದ್ರದ ನೆರವು ಪಡೆದಿದ್ದೇವೆ. ಟೆಂಡರ್ ಕರೆದು ಈಗಾಗಲೇ ಕೆಲಸವನ್ನು ಸಹ ಪ್ರಾರಂಭ ಮಾಡಿದ್ದೇವೆ ಬ್ರೇಕ್ ವಾಟರ್ ಅನ್ನು ತಡೆಹಿಡಿಯದಿರುವುದರಿಂದ ಮಂಗಳೂರು ಪೋರ್ಟ್‌ನಲ್ಲಿ ಹೂಳೆತ್ತುವ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ತಾಂತ್ರಿಕವಾದ ಅಭಿಪ್ರಾಯ ಬಂದಿರುವುದರಿಂದ ಈ ಕೆಲಸವನ್ನು ನಾವು ಜಾಗ್ರತೆ ಮಾಡಿ ಮುಗಿಸಬೇಕಾಗಿದೆ. ಮುಖ್ಯವಾಗಿ ಈ ಕೆಲಸ ಮಾಡಲು ನಮಗಿರುವ ಅಡ್ಡಿ ಆತಂಕಗಳನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಹಾಗೆಯೇ ಕಾರವಾರ ಬಂದರಿನಲ್ಲೂ ಬ್ರೇಕ್ ವಾಟರ್ ಕನ್‌ಸ್ಟ್ರಕ್ಷನ್‌ಗೆ, ಸ್ವಲ್ಪ ಕಾಲಾವಕಾಶ ಬೇಕಾಗಿದೆ. ಅಲ್ಲಿ ಈ ಕೆಲಸ ಮಾಡಿ ಮುಗಿಸಲು ಒಂದೆರಡು ವರ್ಷಗಳಷ್ಟು ಕಾಲಾವಕಾಶ ಬೇಕಾಗುತ್ತದೆ.

ನಾನು ಆ ಪೋರ್ಟಿಗೂ ಸಹಾ ಭೇಟಿ ಕೊಟ್ಟಿದ್ದೇನೆ. ಕಾರವಾರಕ್ಕೂ ಕೂಡಾ ಹೋಗಿ ಬಂದಿದ್ದೇನೆ. ಒಟ್ಟಾರೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಯಾವುದೇ ಕಾರಣದಿಂದ ಇಂಥ ಪ್ರಾಮಾಣಿಕವಾದಂಥ ಕಾಮಗಾರಿಗಳನ್ನು ಒಂದಲ್ಲ ಒಂದು ಕಾರಣದಿಂದ ನಿಲ್ಲಿಸುವುದು ಸರಿಯಿಲ್ಲ ಎಂದು ನಾವು ಒಂದು ಅಂತಿಮ ತೀರ್ಮಾನಕ್ಕೆ ಬಂದಿದ್ದೇವೆ. ಇವತ್ತು ಡ್ರೆಡ್ಜಿಂಗ್ ಕಾರ್ಪೊರೇಷನ್‌ನವರು ಅಕಸ್ಮಾತ್ ಅವರ ಕೈಯಲ್ಲಿ ಈ ಕೆಲಸವನ್ನು ಮಾಡಲಿಕ್ಕೆ ಸಾಧ್ಯ ಇಲ್ಲ ಎಂದರೆ ಪಾಶ್ಚಿಮಾತ್ಯ ದೇಶಗಳೊಡನೆ ನಾವು ಸಂಪರ್ಕ ಮಾಡಿ ಅಲ್ಲಿಂದ ಯಂತ್ರವನ್ನು ತರಿಸಿ ಹೂಳೆತ್ತುವ ಮಹಾ ಕೆಲಸವನ್ನು ಮಾಡಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದುದರಿಂದ ಖಾಯಂ ಆಗಿ ಪರಿಹಾರ ಮಾಡಬೇಕಾದರೆ ಬಹುಶಃ ಇದರ ಬಗ್ಗೆ ತಾಂತ್ರಿಕ ಅಭಿಪ್ರಾಯವನ್ನು ಪಡೆಯಬೇಕು ಎಂದು ಹೇಳಿ ಸಾಧ್ಯವಾದರೆ ಫಾರೀನ್ ಎಕ್ಸ್‌ಪರ್ಟ್ಸ್‌ಗಳ ಕಡೆಯಿಂದ ಅಭಿಪ್ರಾಯವನ್ನು ಪಡೆಯಬೇಕು ಎಂದು ಹೇಳಿ ಆ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆ. ಇವತ್ತು ಕರಾವಳಿ ಪ್ರದೇಶದಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಬ್ರೇಕ್ ವಾಟರ್ ಕನ್‌ಸ್ಟ್ರಕ್ಷನ್ ಮತ್ತು ಸಣ್ಣ ಪುಟ್ಟ ವರ್ಕ್ಸ್ ಮಾಡಬೇಕು ಮತ್ತು ಜಟ್ಟಿ ಮಾಡಿಕೊಡಬೇಕು ಎನ್ನುವ ಅಭಿಪ್ರಾಯವನ್ನು ನಾವು ಕೇಳುತ್ತಿದ್ದೇವೆ. ನಾವು ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ನಾನು ಕೊಡತಕ್ಕಂಥ ಭರವಸೆ ಏನೆಂದರೆ ತಾವು ಅಧಿಕಾರದಲ್ಲಿದ್ದಾಗ ಏನೆಲ್ಲಾ ಕಾಮಗಾರಿಗಳು ನಿಂತಿದ್ದವೋ ಅದನ್ನು ನಾವು ಮತ್ತಷ್ಟು ಚುರುಕುಗೊಳಿಸಿ ವೇಗವಾಗಿ ಹೋಗಲಿಕ್ಕೆ ಅಲ್ಲಿ ಏನು ಆನ್-ಗೋಯಿಂಗ್ ಪ್ರಾಜೆಕ್ಟ್ಸ್‌ಗಳು ಇವೆ. ಅವನ್ನೆಲ್ಲಾ ಆದಷ್ಟು ಬೇಗ ಮಾಡಿ ಮುಗಿಸುತ್ತೇವೆಂದು ಭರವಸೆಯನ್ನು ಕೊಡುತ್ತೇನೆ. ಮಂಗಳೂರಿನಲ್ಲಿರತಕ್ಕಂಥ ಬಂದರುಗಳ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಈ ಮೀನುಗಾರಿಕೆ ಏನಿದೆ, ಬಹುಶಃ ನಮ್ಮ ರಾಷ್ಟ್ರದಲ್ಲಿ ಪ್ರಪಂಚದಲ್ಲಿ ಮೀನು ತಿನ್ನುವವರ ಸಂಖ್ಯೆ ಜಾಸ್ತಿ ಇದೆ. ಮೀನನ್ನು ಬಹಳಷ್ಟು ಉತ್ಪನ್ನವನ್ನು ನಾವು ಮಾಡುತ್ತೇವೆ. ಅದು ಸರಿಯಾಗಿ ಬಳಕೆದಾರರಿಗೆ ಹೋಗುತ್ತಿಲ್ಲ. ಇವತ್ತು ಮೀನಿನ ಮರಿಯು ಉತ್ಪನ್ನ ಆಗಬೇಕು ಎನ್ನತಕ್ಕಂಥದ್ದು ನಮ್ಮ ಮೂಲ ಉದ್ದೇಶ. ಅದರಲ್ಲಿ ನಾವು ಬಹಳಷ್ಟು ಹಿಂದೆ ಬಿದ್ದಿದ್ದೇವೆ. ನಮ್ಮ ಬೇಡಿಕೆ ಇರುವುದು ಸುಮಾರು ೮೦ ಕೋಟಿ ಟನ್ ಆದರೆ ನಾವು ಇವತ್ತು ಉತ್ಪನ್ನ ಮಾಡುತ್ತಿರುವುದು ಕೇವಲ ೩೦ ಕೋಟಿ ಟನ್ ಮಾತ್ರ. ಇವತ್ತು ಶೇಕಡ ೨೦-೨೫ರಷ್ಟು ಮಾತ್ರ ಮೀನನ್ನು ಉತ್ಪಾದನೆ ಮಾಡುತ್ತಿದ್ದೇವೆ. ಇವತ್ತು ಮೀನಿನ ಮರಿಯು ಉತ್ಪಾದನೆ ಆಗದ ಹೊರತು ಇವತ್ತು ಒಳನಾಡಿನ ಪ್ರದೇಶದಲ್ಲಿ ಇವತ್ತು ಮೀನಿನ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಕರಾವಳಿ ಪ್ರದೇಶದಲ್ಲಿ ಮೀನಿನ ಮರಿಯನ್ನು ಸಾಕತಕ್ಕಂಥ ಪ್ರಶ್ನೆ ಬಂದಿಲ್ಲ. ಆದರೆ ಒಳನಾಡು ಪ್ರದೇಶದಲ್ಲಿ ಮೀನಿನ ಉತ್ಪನ್ನಕ್ಕಾಗಿ ನಾವು ಹೆಚ್ಚು ಸಾಹಸವನ್ನು ಮಾಡಬೇಕಾಗುತ್ತದೆ. ಸರ್ಕಾರದ ಇಲಾಖೆಯಿಂದ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳಿ ಖಾಸಗಿ ಜನಗಳಿಗೂ ಅದರಲ್ಲಿ ಯಾರಾದರೂ ಕೂಡಾ ಮುಂದೆ ಬಂದರೆ ಅವರಿಗೆ ಸಬ್ಸಿಡಿ ರೂಪದಲ್ಲಿ ಭೂಮಿಯನ್ನು ಕೊಡಿಸುವುದು. ಹಾಗೂ ಅವರಿಗೆ ಸಾಕಾದಷ್ಟು ರೀತಿಯಲ್ಲಿ ಮೀನುಗಳನ್ನು ಉತ್ಪನ್ನ ಮಾಡುವುದಕ್ಕೆ ಎಲ್ಲಾ ರೀತಿಯಲ್ಲೂ ಪ್ರೋತ್ಸಾಹವನ್ನು ಏತಕ್ಕೆ ಮಾಡಬಾರದು ಎಂಬುದು

ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಆದರೆ ಮೀನು ಮರಿ ಉತ್ಪಾದನೆಗೆ ೧ ಕೋಟಿ ೪೫ ಲಕ್ಷ ರೂಪಾಯಿಗಳನ್ನು ನಾನು ಇತ್ತೀಚೆಗೆ ಅಧಿಕಾರದಲ್ಲಿ ಬಂದಮೇಲೆ ಮೈಸೂರು ಜಿಲ್ಲೆಯ ಗುಂಡಾಲ್ ಜಲಾಶಯದಲ್ಲಿ ಮತ್ತು ಕಬಿನಿ ಜಲಾಶಯದಲ್ಲಿ ಅಂದರೆ ನಮ್ಮ ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಏನು ಇದಾರೆ, ಅವರ ಕ್ಷೇತ್ರದಲ್ಲೂ ಕೂಡಾ ಮೀನಿನ ಮರಿಗಳನ್ನು ಉತ್ಪಾದನೆ ಮಾಡತಕ್ಕಂಥ ಒಂದು ದೃಷ್ಟಿಯಲ್ಲಿ, ಅಲ್ಲಿಯೂ ಕೂಡಾ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಕೈಗೆ ಎತ್ತಿಕೊಂಡಿದ್ದೇವೆ. ಆದುದರಿಂದ ಈ ಮೀನಿನ ಮರಿ ಉತ್ಪಾದನೆಗಾಗಿ ಖಾಸಗಿ ಜನಗಳಿಗೂ ಕೂಡಾ ಇವತ್ತಿನ ದಿವಸ ಪ್ರೋತ್ಸಾಹ ಮಾಡಿ, ನಮ್ಮ ಬೇಡಿಕೆ ಎಷ್ಟಿದೆ, ಆ ಬೇಡಿಕೆಗೆ ತಕ್ಕಂತೆ ಮೀನು ಉತ್ಪಾದನೆ ಆಗಬೇಕೆಂದು ನಮ್ಮ ಅಭಿಲಾಷೆ. ಆದರೆ ದುರ್ದೈವ ಎಂದರೆ ಕಳೆದ ನಾಲ್ಕೈದು ವರ್ಷಗಳಿಂದ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ನಮ್ಮ ಕೆರೆಕಟ್ಟೆಗಳೆಲ್ಲಾ ಅಲ್ಲಿ ನೀರಿನ ಮಟ್ಟ ಕಡಿಮೆಯಾಗಿ ಜಲಾಶಯಗಳಲ್ಲೂ ನೀರಿನ ಮಟ್ಟ ಕಡಿಮೆಯಾಗಿ, ಕೆರೆಕಟ್ಟೆಗಳೆಲ್ಲಾ ಒಣಗಿ ಹೋಗಿರುವುದರಿಂದ ಒಳನಾಡು ಮೀನಿನ ಅಭಿವೃದ್ಧಿ ಮಾಡಲಿಕ್ಕೆ ಬಹಳಷ್ಟು ಕಷ್ಟವಾಯಿತು. ಸುದೈವದಿಂದ ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಮಳೆ ಚೆನ್ನಾಗಿ ಬೀಳುತ್ತಿದೆ. ಕೆರೆಕಟ್ಟೆಗಳೆಲ್ಲಾ ತುಂಬಿದೆ. ಒಳನಾಡು ಮೀನುಗಾರಿಕೆಗೆ ಇದು ಹೆಚ್ಚು ಸಹಾಯಕವಾಗಿದೆ ಎಂಬ ಮಾತನ್ನು ಹೇಳುತ್ತೇನೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಇವತ್ತು ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆ ಇರಬಹುದು ಅಥವಾ ಒಳನಾಡಿನ ಮೀನುಗಾರಿಕೆ ಇರಬಹುದು, ಈ ಮೀನುಗಾರಿಕೆ ಇಲಾಖೆಗೆ ಒಂದು ಹೊಸ ಶಕ್ತಿ, ಒಂದು ಹೊಸ ಚೈತನ್ಯವನ್ನು ಕೊಟ್ಟು ಆಯಾಯ ಕಾರ್ಯಕ್ರಮಗಳು ಬಹಳ ವೇಗವಾಗಿ ಹೋಗಲಿಕ್ಕೆ ಎಲ್ಲಾ ರೀತಿಯಾದಂಥ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕು ಎಂದು ಸರ್ಕಾರದ ಇಚ್ಛೆಯಾಗಿದೆ ಎನ್ನತಕ್ಕಂಥ ಈ ಒಂದು ನೀತಿಯನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಬೈರೇಗೌಡರಿಗೂ ಗೊತ್ತಿದೆ, ಅವರು ಕೂಡಾ ಮಂತ್ರಿಯಾಗಿದ್ದವರು. ಅನೇಕ ಜನ ಮಂತ್ರಿಗಳಾದಂಥ ನಮ್ಮ ಸ್ನೇಹಿತರುಗಳು ಇಲ್ಲಿದ್ದಾರೆ. ಯಾವುದೇ ಒಂದು ಸರ್ಕಾರ ಇರಬಹುದು, ಸರ್ಕಾರದಲ್ಲಿ ಇರತಕ್ಕಂಥ ಇಲಾಖೆಗಳು ಇರಬಹುದು. ಆ ಇಲಾಖೆಯಲ್ಲಿ ಸೇವಾ ನಿಯಮಗಳೇ ಇಲ್ಲ ಎಂದರೆ ಅಲ್ಲಿ ಯಾವ ಅಧಿಕಾರಿಗಳಿಗೂ ಉತ್ಸಾಹ ಬರುವುದಿಲ್ಲ ಮತ್ತು ಅವರಲ್ಲಿ ಶಿಸ್ತು ಕೂಡಾ ಇರುವುದಿಲ್ಲ ಬಹುಶಃ ೧೮–೨೦ ವರ್ಷಗಳ ಕಾಲ ಮೀನುಗಾರಿಕೆ ಇಲಾಖೆಯಲ್ಲಿ ಈ ಒಂದು ಸೇವಾ ನಿಯಮಗಳು ಇಲ್ಲ ಎಂದು ಹೇಳಿದರೆ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಅಲ್ಲಿ ಒಬ್ಬ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಮತ್ತು ಡೆಪ್ಯುಟಿ ಡೈರೆಕ್ಟರ್‌ಗಳು ಆ ರೀತಿ ಹುದ್ದೆಗಳು ಇದೆ. ಇದು ಸಕ್ಸಸ್‌ಫುಲ್ ಆಗಿರತಕ್ಕಂಥ ಈ ಇಲಾಖೆಯ ಒಂದು ಹೈರಾರ್ಕಿಯ ಪೊಜಿಷನ್ಸ್ ಬಗ್ಗೆ ಯಾರಿಗೂ ಆಸಕ್ತಿ ಇಲ್ಲ. ನಾನು ಇವತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ, ಮೀನುಗಾರಿಕೆ ಇಲಾಖೆಯನ್ನು ನನಗೆ ಕೊಟ್ಟಮೇಲೆ ಆ ಇಲಾಖೆಗೆ ಸೇವಾ ನಿಯಮಗಳಿಗೆ ತಿದ್ದುಪಡಿಯನ್ನು ಮಾಡಿಲ್ಲ, ಅದನ್ನು ಮಾಡದ ಹೊರತು ಆ ಇಲಾಖೆಯಲ್ಲಿ ಶಿಸ್ತನ್ನು ತರುವುದಕ್ಕಾಗುವುದಿಲ್ಲ, ಆಡಳಿತ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಮೇಲೆ, ಅವರು ಆದ್ಯತೆ ಮೇರೆಗೆ ಸೇವಾ ನಿಯಮಗಳಿಗೆ ತಿದ್ದುಪಡಿಯನ್ನು ತರುವುದಕ್ಕೆ ನಮ್ಮ ಮುಖ್ಯಕಾರ್ಯದರ್ಶಿಗಳಿಗೆ ಆದೇಶವನ್ನು ನೀಡಿ ಸೇವಾ ನಿಯಮಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಕಳೆದ ೧೫–೨೦ ವರ್ಷಗಳಿಂದ ತಿದ್ದುಪಡಿ ಆಗಿರಲಿಲ್ಲ. ಇದನ್ನು ನಾನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಈ ಸೇವಾ ನಿಯಮಗಳನ್ನು ಮಾಡಿದ ಮೇಲೆ ನಮ್ಮ ಇಲಾಖೆಯಲ್ಲಿ ಎಲ್ಲ ಹಂತದ ಅಧಿಕಾರಿಗಳಿಗೂ ಕೂಡಾ ಒಂದು ರೀತಿಯಾದಂಥ ಉತ್ಸಾಹ ಬಂದಿದೆ ಮತ್ತು ಅವರಿಗೆ ವಿಶ್ವಾಸ ಬಂದಿದೆ. ಈ ಇಲಾಖೆಯಲ್ಲಿ ನಾವು ಕೆಲಸವನ್ನು ಮಾಡಿದರೆ ನಮಗೆ ಒಳ್ಳೆಯ ಅವಕಾಶ ಇದೆ, ಭವಿಷ್ಯ ಇದೆ. ಆ ಒಂದು ಕೆಲಸವನ್ನು ನಾವು ಮಾಡಿದ್ದೇವೆ. ಬಹುಶಃ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅತ್ಯುತ್ತಮವಾದ ಕೆಲಸವನ್ನು ಮಾಡಿದ್ದು ಎಂದರೆ ಆಡಳಿತ ಯಂತ್ರದಲ್ಲಿ ಒಂದು ಉತ್ಸಾಹ ಮತ್ತು ಶಕ್ತಿಯನ್ನು ನಾವು ಹೆಚ್ಚು ಮಾಡಿದ್ದೇವೆ.

ಮತ್ತೊಂದು ಮಾತನ್ನು ಹೇಳುತ್ತಿದ್ದೇನೆ, ಒಂದಲ್ಲ ಒಂದು ಕಾರಣದಿಂದ ಈ ಇಲಾಖೆಯಲ್ಲಿ ನಿರ್ದೇಶಕರು ಇರಲಿಲ್ಲ ಬಹಳಷ್ಟು ಪ್ರಯತ್ನ ಮಾಡಿ ಅಲ್ಲಿ ಅಧಿಕಾರಿಗಳು ಯಾರು ಸಮರ್ಥರಿದ್ದರೂ, ಕೂಡ ಐ. ಎ. ಎಸ್. ಅಧಿಕಾರಿಗಳನ್ನು ತಂದು ಅಲ್ಲಿ ಡೈರೆಕ್ಟರ್ ಆಗಿ ನೇಮಕ ಮಾಡುತ್ತಿದ್ದರು. ಇವೊತ್ತು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಕೆಳ ಹಂತದಿಂದ ಬಂದಂತಹ ಒಬ್ಬ ಅಧಿಕಾರಿ ಇವೊತ್ತು ಅವರ ಒಂದು ಸೀನಿಯಾರಿಟಿಯನ್ನು ಗಮನಿಸಿ, ಅವರ ಸಾಮರ್ಥ್ಯವನ್ನು ಗಮನಿಸಿ ಅವರನ್ನು ಡೈರೆಕ್ಟರ್ ಆಗಿ ನೇಮಕ ಮಾಡುವಂತಹ ಕೆಲಸವನ್ನು ಮಾಡುವ ದಿಸೆಯಲ್ಲಿ ನಾವು ದಿಟ್ಟವಾದ ಹೆಜ್ಜೆಯನ್ನಿಟ್ಟಿದ್ದೇವೆ. ಹೀಗೆ ಸೇವಾ ನಿಯಮಗಳನ್ನು ಮಾಡಿದ್ದು ಮತ್ತು ಅಲ್ಲಿಗೆ ಸಮರ್ಥರಾದ, ತಜ್ಞರಾದ ತಾಂತ್ರಿಕ ಅನುಭವ ಇರತಕ್ಕ ಒಬ್ಬ ಅಧಿಕಾರಿಯನ್ನು ಡೈರೆಕ್ಟರ್ ಆಗಿ ನೇಮಕ ಮಾಡಿದಂತಹ ಕೀರ್ತಿ ಕೂಡ ನಮ್ಮ ಸರ್ಕಾರಕ್ಕೆ ಇದೆ. ಅಂದರೆ ನಾವು ಬಹಳ ಮೆಚ್ಚಿಗೆಯಾದ

ಕೆಲಸ ಮಾಡಿದ್ದೇವೆ ಎಂದು ಅರ್ಥವಲ್ಲ. ಹಿಂದೆ ಯಾರೂ ಮಾಡದಿರುವ ಕೆಲಸವನ್ನು ಅತ್ಯಲ್ಪ ಕಾಲದಲ್ಲಿ ನಾವು ಮಾಡಿದ್ದೇವೆ ಎಂಬ ಸಂತೋಷದ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ. ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಅದನ್ನು ಇವೊತ್ತು ರದ್ದು ಮಾಡಿ ಜೂನ್ ತಿಂಗಳೊಳಗೆ ಅದನ್ನು ಡಿಸಾಲ್ವ್ ಮಾಡುತ್ತಿದ್ದೇವೆ. ಮತ್ತು ಅದೇ ಒಂದು ಸ್ಥಳದಲ್ಲಿ ಇವೊತ್ತು ಕೇಂದ್ರ ಸರ್ಕಾರದ ಸಹಾಯ ಪಡೆಯಲಿಕ್ಕೋಸ್ಕರ ನ್ಯಾಷನಲ್ ಕೋ ಆಪರೇಟೀವ್ ಫೆಡರೇಷನ್ ಎಂದು ಹೇಳಿ ಇವೊತ್ತು ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಅಸ್ತಿತ್ವಕ್ಕೆ ಬಂದಿದೆ. ಇದರಿಂದ ಏನಾಗಿದೆ ಅಂದರೆ, ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೂಡ ಪಡೆದು ಈ ಒಳನಾಡು ಮೀನುಗಾರಿಕೆಯನ್ನು ಹೆಚ್ಚು ಅಭಿವೃದ್ಧಿ ಮಾಡಲಿಕ್ಕೋಸ್ಕರ ನಾವು ಈ ಒಂದು ಕಾರ್ಯವನ್ನು ಮಾಡುತ್ತಿದ್ದೇವೆ. ಹೊಸ ಹೆಜ್ಜೆಯನ್ನು ಇಟ್ಟಿದ್ದೇವೆ. ಹೊಸ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಮತ್ತು ಈ ಒಂದು ಇಲಾಖೆಗೆ ಯಾವತ್ತೂ ಇಲ್ಲದಂತಹ ಚಾಲನೆಯನ್ನು ನಾವು ಕೊಟ್ಟಿದ್ದೇವೆ ಎಂದು ಸಂತೋಷದಿಂದ ಹೇಳುತ್ತೇನೆ. ಬಹಳ ಸಂತೋಷದಿಂದ ಹೇಳುತ್ತಾ ಇರುವುದು ಅಂದರೆ ಮೀನಿನ ಉತ್ಪತ್ತಿ ಬಗ್ಗೆ. ಕರಾವಳಿ ಪ್ರದೇಶ ಮತ್ತು ಒಳನಾಡು ಪ್ರದೇಶದಲ್ಲಿ ಉತ್ಪಾದನೆ ಮೀನು ಬಳಕೆದಾರರಿಗೆ ಹೋಗುತ್ತಿಲ್ಲ. ನಾನು ಮಂತ್ರಿ ಆದ ಮೇಲೆ ಎಲ್ಲಾ ಮಂಡಲ್ ಪಂಚಾಯತ್‌ಗಳಿಗೆ, ಜಿಲ್ಲಾ ಪರಿಷತ್‌ಗಳಿಗೆ, ಪುರಸಭೆಗಳಿಗೆ, ನಗರ ಸಭೆಗಳಿಗೆ, ಮಹಾ ನಗರ ಪಾಲಿಕೆಗಳಿಗೆ ಸುತ್ತೋಲೆಯನ್ನು ಕಳಿಸಿ ಎಲ್ಲೆಲ್ಲಿ ಮಾಂಸದ ಅಂಗಡಿ ಇದೆ ಅದರ ಪಕ್ಕದಲ್ಲಿ ಮೀನಿನ ಮಾರ್ಕೆಟ್ ಕೂಡ ಪ್ರಾರಂಭ ಮಾಡಬೇಕು ಎಂದು ಹೇಳಿದ್ದೇನೆ. ಮನುಷ್ಯರಿಗೆ ಅತಿ ಮುಖ್ಯವಾದ ಆಹಾರದ ವಸ್ತು ಅಂದರೆ ಅದ ಮೀನು. ಬಹಳ ಪೌಷ್ಟಿಕವಾದ ಆಹಾರ ಮೀನು. ಜಗತ್ತಿನಲ್ಲಿ ಎಲ್ಲರೂ ಮೆಚ್ಚಿಗೆಯಿಂದ ಸೇವಿಸುವ ಆಹಾರವಾದ ಮೀನನ್ನು ಸರ್ಕಾರದಿಂದ ಬಳಕೆದಾರರಿಗೆ ಕೊಡುತ್ತಿಲ್ಲವೆಂದು ತಿಳಿದು ಈಗ ನಾವು ಆ ಕೆಲಸವನ್ನು ಸಹ ಮಾಡಿದ್ದೇವೆ.

ಶ್ರೀ ಜಿ. ರಾಜೂಗೌಡ.—ಮೀನು ಮತ್ತು ಮಾಂಸದ ಅಂಗಡಿಗಳು ಒಂದೇ ಕಡೆ ಇರಬೇಕೆಂದು ಹೇಳುವಾಗ ಅದರ ಅರ್ರೈಕೆ ಕೂಡ ಚೆನ್ನಾಗಿರಬೇಕು...

ಶ್ರೀ ಹೆಚ್. ಏಕಾಂತಯ್ಯ.—ಮೀನಿನ ಆಹಾರವನ್ನು ಕಡ್ಡಾಯ ಮಾಡುತ್ತಿದ್ದೀರಾ ?

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಮ್ಮ ಸರ್ಕಾರದ ನೀತಿ ಏನೆಂದರೆ, ಹಣ್ಣು, ಹಾಲು ಮಾಂಸ ಮತ್ತು ಮೀನು ಇವುಗಳನ್ನು ವ್ಯವಸ್ಥಿತವಾಗಿ ಮಾರಾಟ ಮಾಡಿದರೆ ಮನುಷ್ಯರಿಗೆ ಯಾವ ರೋಗಗಳೂ ಬರುವುದಿಲ್ಲ. ಮನುಷ್ಯ ಪೌಷ್ಠಿಕವಾಗಿ ಮತ್ತು ಬಲಿಷ್ಟವಾಗಿ ಇರುತ್ತಾನೆ ಎನ್ನುವ ದೃಷ್ಟಿಯಿಂದ ನಾನು ಈ ಕಾರ್ಯವನ್ನು ಮಾಡಬೇಕೆಂದಿದ್ದೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮೀನಿನ ಅಂಗಡಿ ಇಟ್ಟಿದ್ದೀರಿ. ಮೀನನ್ನು ಯಾವ ದರದಲ್ಲಿ ಸಾರ್ವಜನಿಕರಿಗೆ ಸರಬರಾಜು ಮಾಡುತ್ತೀರಿ...

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಬಳಕೆದಾರರಿಗೆ ಹೆಚ್ಚು ದುಬಾರಿ ಆಗಬಾರದು. ಮಾಂಸಕ್ಕಿಂತಲೂ ಕಡಿಮೆ ಬೆಲೆಗೆ ಸಿಗುವಂತಹ ವ್ಯವಸ್ಥೆ ಮಾಡುತ್ತೇವೆ.

(ಗೊಂದಲ)

ಶ್ರೀ ಜಿ. ರಾಜೂಗೌಡ.—ಬಡವನ ಕೈಗೆ ಮೀನು ಎಟುಕಬೇಕಾಗಿದೆ. ಆದ್ದರಿಂದ ಸರ್ಕಾರದಿಂದ ಸಬ್ಸಿಡಿ ಏನಾದರು ಕೊಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಪಿ. ವೆಂಕಟೇಶ್.—ಈಗ ಮಾರ್ಕೆಟ್‌ನಲ್ಲಿ ಮೀನಿಗೆ ಏನು ಬೆಲೆ ಇದೆ, ಅದಕ್ಕಿಂತ ಎಷ್ಟು ಕಡಿಮೆ ಬೆಲೆಗೆ ತಾವು ಕೊಡುತ್ತೀರಿ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಮೀನು ಬಹಳ ಪೌಷ್ಟಿಕ ಆಹಾರ ಎಂದು ಹೇಳಿದ್ದೀರಿ. ಹೊಸದಾಗಿ ಇದನ್ನು ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಆದ್ದರಿಂದ ಈ ಸಂದರ್ಭದಲ್ಲಿ ಸಹಾಯ ಧನವನ್ನು ಘೋಷಣೆ ಮಾಡಿದರೆ ತಿನ್ನುವವರಿಗೆ ಅನುಕೂಲ ಆಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸಬ್ಸಿಡಿ ಕೊಡುವುದಾದರೆ ಅವರ ದುಡ್ಡಿನಲ್ಲಿ ಸಬ್ಸಿಡೈಸ್ ಮಾಡಲಿ. ನಮಗೆ ಯಾಕೆ ಟ್ಯಾಕ್ಸ್ ಹಾಕುತ್ತೀರಿ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮೀನು ಬಳಕೆದಾರರಿಗೆ ಸುಲಭವಾಗಿ ಸಿಗಬೇಕು. ಅದು ಕಡಿಮೆ ಬೆಲೆಯಲ್ಲಿ ಸಿಗಬೇಕು ಎಂಬುದು ನಮ್ಮ ಇಚ್ಛೆ. ಇದರಿಂದ ಏನು ಆಗುತ್ತದೆ ಅಂದರೆ ನಮ್ಮ ರಾಷ್ಟ್ರದಲ್ಲಿ ಆಹಾರದ ಸಮಸ್ಯೆ ಕಡಿಮೆ ಆಗುತ್ತದೆ ಮತ್ತು ರೋಗ ಇಲ್ಲದೆ ಮನುಷ್ಯ ಪೌಷ್ಟಿಕವಾಗಿ ಬೆಳೆಯುತ್ತಾನೆ.

ಛೇರ್ಮನ್.—ಮೀನಿನ ಬಗ್ಗೆ ಯಾಕೆ ಇಷ್ಟು ರುಚಿ. ವಿಷಯ ರುಚಿಯಾಗಿದೆ ಎಂತಲೋ ?

ಶ್ರೀ ಎಂ. ಪಿ. ವೆಂಕಟೇಶ್.—ಅವರು ಪೌಷ್ಟಿಕ ಆಹಾರವೆಂದು ಹೇಳಿದ ಮೇಲೆ ಸಾರ್ವಜನಿಕರಿಗೆ ಬಹಳ ಕಡಿಮೆ ಬೆಲೆಯಲ್ಲಿ ಕೊಡಬೇಕು...

ಛೇರ್ಮನ್.—ಮೀನಿನ ವಿಷಯ ತಮಗೆಲ್ಲಾ ಬಹಳ ಆಪ್ಯಾಯಮಾನವಾಗಿದೆಯೆಂದು ಕಾಣುತ್ತಿದೆ.

ಶ್ರೀ ಎಂ. ರಾಮಪ್ಪ.—ಏಕಾಂತಯ್ಯನವರಿಗೆ ಹಾಗೂ ಇವರಿಗೆ ಮೀನು ಬೇಕಾಗಿದೆ...

(ಗೊಂದಲ)

ಛೇರ್ಮನ್.—ಮಾನ್ಯ ಸಚಿವರು ಉತ್ತರ ಕೊಟ್ಟು ಮುಗಿಸಿದ ಮೇಲೆ ತಾವುಗಳು ಕ್ಲಾರಿಫಿಕೇಷನ್ ಕೇಳಬಹುದು ಮಧ್ಯೆ ಮಧ್ಯೆ ಈ ರೀತಿ ಎದ್ದು ನಿಂತು ಅವರ ಉತ್ತರಕ್ಕೆ ಅಡ್ಡಿಪಡಿಸಬೇಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ರಾಜೂ ಗೌಡರು ಮತ್ತು ಕೆಲವು ಸ್ನೇಹಿತರು ಹಲವಾರು ಸಲಹೆ ಸೂಚನೆಯನ್ನು ನೀಡಿದ್ದಾರೆ.

ಶ್ರೀ ಆರ್. ಎನ್. ನಾಯಕ್ ಬೇರೆ ಯಾವುದರಲ್ಲಿ ಯಾದರೂ ಡೂಪ್ಲಿಕೇಟ್ ಸಿಗಬಹುದು ಆದರೆ ಮೀನಿನಲ್ಲಿ ಡೂಪ್ಲಿಕೇಟ್ ಸಿಗುವುದಿಲ್ಲ. ಆದ್ದರಿಂದ ಮೀನನ್ನು ಎಲ್ಲ ಕಡೆಗೂ ಕೊಡಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಾಮಾನ್ಯವಾಗಿ ಕಲಬೆರಕೆ ಎಂಬುದು ಮೀನಿನಲ್ಲಿಲ್ಲ. ಶುದ್ಧವಾದ ಆರೋಗ್ಯವಾದ, ರುಚಿಕರವಾದ ಆಹಾರ ವಸ್ತು ಜಗತ್ತಿನಲ್ಲಿ ಇವತ್ತು ಇದೆಯೆಂದರೆ ಅದು ಮೀನು: ನಾನು ಇವತ್ತು ಈ ಮಟ್ಟದಲ್ಲಿ ಆರೋಗ್ಯದಿಂದ ಇರಬೇಕಾದರೆ, ನಾನು ಹೆಚ್ಚಾಗಿ ಈ ಮೀನನ್ನು ತಿನ್ನುವುದು.

(ಸಭೆಯಲ್ಲಿ ನಗು)

ಶ್ರೀ ರಾಮಲಿಂಗರೆಡ್ಡಿ.—ಅದಕ್ಕೇ ನಿಮಗೆ ಮೀನುಗಾರಿಕೆ ಇಲಾಖೆಯನ್ನೇ ಕೊಟ್ಟಿದ್ದಾರೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಆದುದರಿಂದ ಈ ಮೀನುಗಾರಿಕೆ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆಯಾಗಿದೆ. ಇದು ಲಘುವಾಗಿ ತೆಗೆದುಕೊಳ್ಳುವ ಇಲಾಖೆಯಲ್ಲ. ನನಗೆ ಈ ಇಲಾಖೆಯನ್ನು ಕೊಟ್ಟಂತಹ ಸಮಯದಲ್ಲಿ ಪತ್ರಿಕೆಯವರು ನನ್ನನ್ನು ಕೇಳಿದರು, ಆಗ ನಾನು ಅವರಿಗೆ ಏನು ಉತ್ತರ ಕೊಟ್ಟೆ ಎಂದರೆ ಬಹುಶಃ ಇದು ನನ್ನ ಭಾಗ್ಯ, ಈ ಇಲಾಖೆ ನನ್ನ ಕೈಯಿಗೆ ಸಿಕ್ಕಿರುವುದು. ಸನ್ಮಾನ್ಯ ಮುಖ್ಯ ಮಂತ್ರಿಯವರು ಈ ಇಲಾಖೆಯನ್ನು ನನಗೆ ಕೊಟ್ಟಿದ್ದಾರೆ. ನಾನು ಈ ಮೀನುಗಾರಿಕೆ ಇಲಾಖೆ ಹೇಗೆ ಕೆಲಸಮಾಡಬೇಕೆಂಬುದನ್ನು ನಾನು ಕೆಲಸ ಮಾಡಿ ತೋರಿಸುತ್ತೇನೆಂದು ಹೇಳಿದೆ. ಇವತ್ತು ಈ ಮೀನುಗಾರಿಕಾ ಇಲಾಖೆ ನನ್ನ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯವಾದ ಇಲಾಖೆ ಇದನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ, ನಾವು ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುವುದಾದರೆ ಬಹುಶಃ ಇದರಿಂದ ನಮ್ಮ ಆಹಾರ ಸಮಸ್ಯೆಯನ್ನು ನಿವಾರಣೆ ಮಾಡಲು ಮತ್ತು ಆರೋಗ್ಯವನ್ನು ಕಾಪಾಡಲು ಹಾಗೂ ಹೆಚ್ಚು ಬುದ್ಧಿವಂತರಾಗಲು ಅವಕಾಶವಾಗುತ್ತದೆಂದು ನಾನು ಭಾವಿಸಿದ್ದೇನೆ. ತಮಗೆ ಗೊತ್ತಿರುವಂತೆ ನಮ್ಮ ಮಂಗಳೂರಿನ ಶಾಸಕರು ಬಹಳ ಬುದ್ಧಿವಂತರಿದ್ದಾರೆ. ಇದಕ್ಕೆ ಕಾರಣ ಅವರು ಈ ಮೀನನ್ನು ತಿನ್ನುವುದರಿಂದಲೇ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರು ಚೆನ್ನಾಗಿರುವುದಷ್ಟೇ ಅಲ್ಲ, ಬಹಳ ಬುದ್ಧಿವಂತರಾಗಿಯೂ ಇದ್ದಾರೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನೀವೆಲ್ಲಾ ಗಲಾಟೆ ಮಾಡುತ್ತೀರಿ. ಆದರೆ ಅವರು ಬುದ್ಧಿವಂತಿಕೆಯಿಂದ ಆಡಳಿತ ಮಾಡುತ್ತಾರೆ. ಇವತ್ತು ಕರಾವಳಿ ಪ್ರದೇಶಗಳಿಂದ ಅಂದರೆ ಕಾರವಾರ ಮಂಗಳೂರು ಭಾಗಗಳಿಂದ ಬಂದಿರತಕ್ಕ ನನ್ನ ಸ್ನೇಹಿತರು ಇರಬಹುದು, ಅಧಿಕಾರಿಗಳು ಇರಬಹುದು, ಶಾಸಕರು, ಮಿತ್ರರು ಇರಬಹುದು, ಮಂತ್ರಿಗಳು ಇರಬಹುದು, ಅವರೆಲ್ಲರೂ ಇವತ್ತು ಬಹಳ ಚುರುಕಾಗಿದ್ದಾರೆ. ಅದನ್ನು ನೋಡಿ ನಾನು ಸಹ ಸ್ವಲ್ಪ ಜಾಸ್ತಿ ಮೀನನ್ನು ತಿನ್ನಲು ಪ್ರಯತ್ನ ಮಾಡಿದ್ದೇನೆ. ಇನ್ನು 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಿದಂತಹ ಹಣದ ಬಗ್ಗೆ

ತಮಗೆ ಸೂಕ್ಷ್ಮವಾಗಿ ತಿಳಿಸುತ್ತೇನೆ. ೧೯೮೫-೮೬ರಲ್ಲಿ ಸುಮಾರು ೪.೩೪ ಕೋಟಿ ರೂ.ಗಳ ಪೈಕಿ ೨.೯೯ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ೧೯೮೬-೮೭ರಲ್ಲಿ ೩.೪೨ ಕೋಟಿ ರೂ.ಗಳ ಪೈಕಿ ಸುಮಾರು ೨.೯೯ ಕೋಟಿ ಖರ್ಚು ಮಾಡಿದ್ದಾರೆ. ಅಂದರೆ ಇಲ್ಲಿ ಹೆಚ್ಚು ಕಡಿಮೆ ಹಣವನ್ನು ಲಾಸ್ ಮಾಡಲಿಕ್ಕೆ ಅವರು ಹೋಗಲಿಲ್ಲ. ೧೯೮೭-೮೮ರಲ್ಲಿ ೩.೩೦ ಕೋಟಿಯಲ್ಲಿ ೨.೭೫ ಕೋಟಿ ಖರ್ಚಾಗಿದೆ. ೧೯೭೮-೮೯ರಲ್ಲಿ ೮ ೧೫ ಕೋಟಿಯಲ್ಲಿ ೩.೭೫ ಕೋಟಿ ಖರ್ಚು ಮಾಡಿದ್ದಾರೆ. ೧೯೮೮-೮೯ರಲ್ಲಿ ೫.೫೫ ಕೋಟಿಯಲ್ಲಿ ೪.೨೧ ಕೋಟಿ ಖರ್ಚು ಮಾಡಿದ್ದಾರೆ. ನಮ್ಮ ರಾಜ್ಯದ ಸಮುದ್ರದ ಮೀನುಗಾರಿಕೆ ಇಲಾಖೆಯಲ್ಲಿ ಸುಮಾರು ೩,೧೭೫ ಯಾಂತ್ರಿಕ ದೋಣಿಗಳು ಇದೆ. ೧೨ ಸಾವಿರ ನಾಡದೋಣಿಗಳನ್ನು ಮೀನುಗಾರರು ಬಳಸುತ್ತಿದ್ದಾರೆ. ೮೮-೮೯ರಲ್ಲಿ ಸುಮಾರು ೫.೪೭೦ ಲಕ್ಷ ಮೌಲ್ಯದ ೧.೬೭ ಮೆಟ್ರಿಕ್ ಟನ್ ಮೀನನ್ನು ಉತ್ಪಾದನೆ ಮಾಡುವುದರ ಜೊತೆಗೆ ೧೯೮೯-೯೦ರಲ್ಲಿ ನಾಲ್ಕು ಕೋಟಿ ೭೦ ಲಕ್ಷ ಮೌಲ್ಯದ ೧.೮೦ ಮೆಟ್ರಿಕ್ ಟನ್ ಮೀನನ್ನು ಉತ್ಪನ್ನ ಮಾಡಿ ಈ ದಿಸೆಯಲ್ಲಿ ಒಳ್ಳೆಯ ಹೆಜ್ಜೆಯನ್ನು ಇಟ್ಟುಕೊಂಡು ಹೋಗುತ್ತಿದ್ದೇವೆ. ಬಹುಶ: ಈ ಮೀನುಗಾರರಿಗೆ ಸರಿಯಾದ ರಕ್ಷಣೆಯನ್ನು ಮಾಡಿ ಕೊಡುವುದರ ಜೊತೆಗೆ ಬಳಕೆದಾರರಿಗೆ ಸಹ ರಕ್ಷಣೆ ಕೊಡತಕ್ಕ ಕೆಲಸ ನಡೆದಿದೆ. ಮತ್ತೊಂದು ಹಂತದಲ್ಲಿ ಕೆಲವು ರಾಷ್ಟ್ರೀಯ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಬಡತನ ರೇಖೆಯಿಂದ ಕೆಳಗಡೆ ಇರತಕ್ಕ ಮೀನುಗಾರರಿಗೆ ರಾಷ್ಟ್ರೀಯ ವಸತಿ ಯೋಜನೆ ಎಂದು ಹೇಳಿ ಏಳನೇ ಪಂಚವಾರ್ಷಿಕ ಯೋಜನೆ ಯಲ್ಲಿ ೫೦೦ ಮನೆಗಳನ್ನು ಮಂಜೂರು ಮಾಡಲಾಗಿದೆ. ಒಂದು ಮನೆಗೆ ತಲಾ ೧೭ ಸಾವಿರ ರೂಪಾಯಿಗಳು ತಗಲುತ್ತವೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೫೦೦ ಮನೆಗಳನ್ನು ಬಡ ಮೀನು ಗಾರರಿಗೆ ಕಟ್ಟಿಸಿಕೊಡಲು ಇದ್ದಂತಹ ಕಾರ್ಯಕ್ರಮವನ್ನು ನಾನು ಅಧಿಕಾರಕ್ಕೆ ಬಂದಮೇಲೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕೆಂಚಳ್ಳಿ ಗ್ರಾಮದಲ್ಲಿ ೪೦೦ ಮನೆಗಳ ಯೋಜನೆ ಹಾಕಿಕೊಂಡಿದ್ದರೂ ಅದನ್ನು ಮಾಡಿಲ್ಲ. ನಾನು ಅಧಿಕಾರಿಗಳನ್ನು ಕೇಳಿದೆ. ಏತಕ್ಕೆ ಬಡವರ ಈ ಯೋಜನೆಯನ್ನು ಜಾರಿಗೆ ತರಲಿಲ್ಲ ವೆಂದು. ಯಾವ ಕಡೆ ಕೇಳಿದರೂ ಜಮೀನು ಇಲ್ಲವೆಂದು ಹೇಳುತ್ತಾರೆ. ನಾನು ಅತ್ಯಂತ ಹೆಮ್ಮೆಯಿಂದ ಹೇಳು ತ್ತಿದ್ದೇನೆ, ಈ ಬಡವರಿಗಾಗಿ ಇಟ್ಟಂತಹ ಹಣವನ್ನು ಖರ್ಚು ಮಾಡಿಲ್ಲವೆಂದರೆ ಇದಕ್ಕಿಂತ ಪಾಪ, ದ್ರೋಹ ಇನ್ನೊಂದಿಲ್ಲವೆಂದು ತಿಳಿದುಕೊಂಡು ನಾನು ನಮ್ಮ ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟು, ಜಿಲ್ಲಾಧಿಕಾರಿಗಳನನ್ನು ಸಂಪರ್ಕ ಮಾಡಿ ಮತ್ತೆ ೧೦೦ ಮನೆಗಳನ್ನು ಕೊಳ್ಳೇಗಾಲ ತಾಲ್ಲೂಕಿನ ಅರಳೆ ಗ್ರಾಮದಲ್ಲಿ ಶ್ರೀ ರಾಜೂಗೌಡರ ಕೈಯಲ್ಲಿ ಶಂಕು ಸ್ಥಾಪನೆ ಮಾಡಿಸಿದ್ದೇನೆ. ಶ್ರೀ ರಂಗಪಟ್ಟಣದ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ೧೦೦ ಮನೆಗಳಿಗೆ ಶಂಕು ಸ್ಥಾಪನೆ ಮಾಡಿದ್ದೇವೆ. ಕಾರವಾರ ಜಿಲ್ಲೆಯಲ್ಲೂ ೧೦೦ ಮನೆಗಳನ್ನು ಕಟ್ಟಿಸಿಕೊಡಲು ಕ್ರಮ ಕೈಗೊಂಡಿದ್ದೇವೆ.

ಗುಲ್ಬರ್ಗದಲ್ಲೂ ೧೦೦ ಮನೆಗಳನ್ನು ನಿರ್ಮಾಣ ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ. ಎಲ್ಲೆಲ್ಲಿ ಹೆಚ್ಚಾಗಿ ಬಡ ಮೀನುಗಾರರು ಇದ್ದಾರೆ ಅವರಿಗೆ ಸೌಕರ್ಯವನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತಾ ಇದ್ದೇವೆ. ಹಣ ಲ್ಯಾಪ್ಸ್ ಆಗುತ್ತಾ ಇದೆ, ಆದುದರಿಂದ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ, ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡ ಮೀನುಗಾರರಿಗೆ ೫೦೦ ಮನೆಗಳಿಗಾಗಿ ನೀಡಿದಂಥ ಹಣ ಪೋಲಾಗುತ್ತಾ ಇದೆ ಅದನ್ನು ಏನಾದರೂ ಮಾಡಿ ತಡೆಗಟ್ಟಬೇಕು ಎಂದು ಈ ಕಾರ್ಯಕ್ರಮವನ್ನು ಮಾಡಿದ್ದೇವೆ. ಮತ್ತೆ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ೧೯೯೦-೯೧ನೇ ಸಾಲಿನಲ್ಲೂ ಕೂಡ ಸುಮಾರು ೫೦೦ ಮನೆಗಳನ್ನು ಬಡ ಮೀನುಗಾರರಿಗೆ ಕಟ್ಟಿಸಬೇಕು ಎಂದು ಮತ್ತು ನಮ್ಮ ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲೂ ಕೂಡ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ದೇವೆ. ಒಟ್ಟಿನಲ್ಲಿ ನಾನು ಈ ಮೀನುಗಾರರ ಬೇಸಾಯದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ, ಮೀನುಗಾರರ ಸಮಸ್ಯೆಗಳ ಬಗ್ಗೆ ಮಾತನಾಡಿದ್ದೇನೆ. ಮತ್ತೆ ಮೀನುಗಾರರು ಏನಾದರೂ ಕೂಡ ಅಲ್ಲಿ ಮೀನು ಹಿಡಿಯುವುದಕ್ಕೆ ಹೋದಾಗ ಯಾರಾದರೂ ಆಕಸ್ಮಿಕವಾಗಿ ಸತ್ತರೆ ಅವರಿಗೆ ಪರಿಹಾರ ಕೊಡಬೇಕು ಎನ್ನತಕ್ಕಂಥ ಕಾರ್ಯಕ್ರಮ ಕೂಡ ಇಟ್ಟುಕೊಂಡಿದ್ದೇವೆ. ಮತ್ತು ಬಡ ಮೀನುಗಾರರು ಏನಾದರೂ ಕೂಡ ಸೊಸೈಟಿಗಳ ಮುಖಾಂತರ ಬೇಸಾಯ ಮಾಡಿದರೆ ಡೀಸಲ್‌ಗೆ ಸಬ್ಸಿಡಿ ಕೊಡತಕ್ಕಂಥ ಕಾರ್ಯಕ್ರಮವನ್ನೂ ಕೂಡ ಇಟ್ಟುಕೊಂಡಿದ್ದೇವೆ. ಒಟ್ಟಿನಲ್ಲಿ ಈ ರಾಜ್ಯದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಸರ್ಕಾರಗಳಿಗೆ ಕಡಿಮೆ ಇಲ್ಲದಂತೆ ಹೆಚ್ಚಿನ ಆದ್ಯತೆ ಮೇರೆಗೆ ಅವರು ಕೈಗೊಳ್ಳುವ ಕಾರ್ಯಕ್ರಮಗಳನ್ನು ಜಾರಿಗೊಳಿಸತಕ್ಕಂಥಾದ್ದು, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳತಕ್ಕಂಥಾದ್ದು, ನೇರವಾಗಿ ಅವರ ಸ್ಥಳಕ್ಕೇ ಹೋಗಿ ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡತಕ್ಕಂಥ ದಿಶೆಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಮೀನುಗಾರರ

ಬೇಸಾಯವಾಯಿತು. ಇವತ್ತು ಹಿಡಿದಂಥ ಮೀನು ಮಾರುಕಟ್ಟೆಗೆ ಬರುತ್ತಾ ಇಲ್ಲವೆಂದು ಹೇಳಿದರು. ಮೀನಿನ ಮರಿ ಉತ್ಪಾದನೆ ಮಾಡತಕ್ಕಂಥಾದ್ದರ ಬಗ್ಗೆ ಮತ್ತು ಹಿಡಿದಂಥ ಮೀನನ್ನು ಶೇಖರಣೆ ಮಾಡುವುದರ ಬಗ್ಗೆ ಹೇಳಬೇಕೆಂದರೆ, ಮಾನ್ಯ ಅಧ್ಯಕ್ಷರು ಮತ್ತು ತಾವೆಲ್ಲಾ ಒಪ್ಪಿಕೊಳ್ಳುವುದಾದರೆ ನಮ್ಮ ಎರಡೂ ಸದನಗಳ ಶಾಸಕ ಮಿತ್ರರನ್ನು ಕಾರವಾರ ಜಿಲ್ಲೆಯ ಕುಮಟ ತಾಲ್ಲೂಕಿನ ಕಡ್ರಿಗೆ ಕರೆದು ಕೊಂಡು ಅಲ್ಲಿ ಹೋಗಿ ತೋರಿಸಬೇಕೆಂದಿದ್ದೇನೆ. ನಾವು ಒಂದು ಹೊಸ ತಾಂತ್ರಿಕ ಸಾಧನೆಗಳನ್ನು ಮಾಡಿರತಕ್ಕಂಥಾದ್ದು ಇದೆ. ಶ್ರೀಮಾನ್ ಬೈರೇಗೌಡರು ಕೇಳಿದರು. ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ಡೆನ್ಮಾರ್ಕ್ ಕೊಲಾಬರೇಷನ್‌ನಲ್ಲಿ ಕೈಗೊಂಡಂಥ ಕಾರ್ಯಕ್ರಮವನ್ನು ನೋಡಿದಾಗ ನಿಮಗೆ ಆಶ್ಚರ್ಯವಾಗುತ್ತದೆ. ಅದಕ್ಕಾಗಿ ೭-೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಿಡಿದಂಥ ಮೀನನ್ನು ಪ್ರಿಸರ್ವ್ ಮಾಡುತ್ತಾ ಇದ್ದೇವೆ. ಮತ್ತು ಅದನ್ನು ಹೇಗೆ ಮಾರುಕಟ್ಟೆಗಳಿಗೆ ಸಾಗಾಣಿಕೆ ಮಾಡಬೇಕು ಎನ್ನುವುದರ ಬಗ್ಗೆ ಸಹ ವ್ಯವಸ್ಥೆ ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿ ಒಂದು ಹೊಸ ವೈಜ್ಞಾನಿಕವಾದ ರೀತಿಯಲ್ಲಿ ಈ ಮೀನುಗಾರಿಕೆಯಲ್ಲಿ ನಾವು ಹೆಜ್ಜೆ ಇಟ್ಟು ಅದರ ಬಗ್ಗೆ ನಾವು ಕೆಲಸ ಮಾಡುತ್ತಾ ಇದ್ದೇವೆ. ಹಾಗೆಯೇ ರಾಯಚೂರು ಮತ್ತು ಶಿವಮೊಗ್ಗದಲ್ಲೂ ಮೀನಿನ ಉತ್ಪಾದನೆ ಮಾಡುವುದಕ್ಕೋಸ್ಕರ ವಿಶೇಷವಾದಂಥ ಕಾರ್ಯಕ್ರಮವನ್ನೂ ಕೂಡ ಇಟ್ಟುಕೊಂಡಿದ್ದೇವೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನಲ್ಲಿ ಸೀಗಡಿ ಮೀನಿನ ಉತ್ಪಾದನೆ ಮಾಡುವುದ ಕ್ಕೋಸ್ಕರ ಪ್ರಾನ್ ಕಲ್ಚರ್ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಹೀಗೆ ಕಾರ್ಯಕ್ರಮಗಳನ್ನು ನಾವು ಚೆನ್ನಾಗಿ ರೂಪಿಸಿದ್ದೇವೆ. ಅದನ್ನು ರೂಪಿಸುವುದರ ಜೊತೆಗೆ ಅದನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡಬೇಕು ಎನ್ನತಕ್ಕಂಥ ಕೆಲಸವನ್ನೂ ಕೂಡ ನಾವು ಮಾಡುತ್ತಾ ಇದ್ದೇವೆ. ಇನ್ನೊಂದು ಅಕ್ವೇರಿಯಂಗಳು. ಇವತ್ತು ಪ್ರಥಮ ಬಾರಿಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಒಂದು ದೊಡ್ಡ ಬೃಹತ್ ಮಟ್ಟದಲ್ಲಿ ಅಕ್ವೇರಿಯಂ ಸ್ಥಾಪನೆ ಮಾಡಿದ್ದೇವೆ. ಹಾಲಿ ಇರತಕ್ಕ ಅಕ್ವೇರಿಯಂಗಳನ್ನು ಸುಧಾರಣೆ ಮಾಡಿ ಬೆಂಗಳೂರಿನಲ್ಲೂ ಕೂಡ ಒಂದು ಭಾರಿ ಪ್ರಮಾಣದಲ್ಲಿ ಒಂದು ಅಕ್ವೇರಿಯಂ ಅನ್ನು ಎಸ್ಟಾಬ್ಲಿಷ್ ಮಾಡಿ ಚೆನ್ನಾಗಿ ಮೇಂಟೇನ್ ಮಾಡಬೇಕು. ಇದು ಪ್ರವಾಸೋದ್ಯಮ ನಗರ. ಇಲ್ಲಿ ನಾವು ಮಾಡುತ್ತಾ ಇದ್ದೇವೆ. ಆದುದರಿಂದ ನಾನು ಈ ಮೀನುಗಾರಿಕೆ ಬಗ್ಗೆ ಇಷ್ಟು ಪ್ರಸ್ತಾಪ ಮಾಡಿದ್ದೇನೆ. ಮತ್ತು ಬಂದರುಗಳನ್ನು ಅಭಿವೃದ್ಧಿಪಡಿಸುವುದರಲ್ಲೂ ಕೂಡ ಹಿಂದಿನ ಸರ್ಕಾರಗಳಿಗೆ ಕಡಿಮೆ ಇಲ್ಲದ ಹಾಗೆ ಅದಕ್ಕೆ ಹೆಚ್ಚು ಹಣ ಕೊಟ್ಟು ಹೆಚ್ಚು ಅಭಿವೃದ್ಧಿ ಮಾಡತಕ್ಕಂಥ ದಿಕ್ಕಿನಲ್ಲಿ ನಾವು ಹೋಗುತ್ತಾ ಇದ್ದೇವೆ. ಮಾನ್ಯ ಸದಸ್ಯರಾದ ಬ್ಲೇಸಿಯಸ್ ಡಿಸೌಜರವರು ಒಂದು ಸಲಹೆ ಕೊಟ್ಟರು ಮಂಗಳೂರಿನಿಂದ ಬಾಂಬೆಗೆ ಹೋಗುವುದಕ್ಕೆ ನಮಗೆ ಸರ್ಕಾರದ ವತಿಯಿಂದ ಹಡಗಿನ ಸೌಕರ್ಯವನ್ನು ಏಕೆ ಮಾಡಬಾರದು ಎನ್ನತಕ್ಕಂಥ ಮಾತನ್ನು ಹೇಳಿದರು.

ಶ್ರೀ ವಾಟಾಳ್ ನಾಗರಾಜ್. — ಹಿಂದಿನ ಸರ್ಕಾರ ಹಡಗನ್ನು ಮುಳುಗಿಸಿದರು. ಅವರಿಗಿಂತ ಹೆಚ್ಚು ತಾವು ಹಡಗನ್ನು ಮುಳುಗಿಸುತ್ತೀರಾ.

ಶ್ರೀ ಟಿ. ಎನ್. ನರಸಿಂಹಮೂರ್ತಿ — ಅವರು ಹಡಗನ್ನು ಮುಳುಗಿಸಿದ್ದು ನನಗೆ ಗೊತ್ತಿಲ್ಲ. ಬಹುಶಃ ಅದರ ಬಗ್ಗೆ ನಮ್ಮ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ಮಂಗಳೂರಿನಿಂದ ಬಾಂಬೆಗೆ ಹೋಗತಕ್ಕಂಥ ಪ್ರಯಾಣಿಕರಿಗೆ ಹಡಗಿನಲ್ಲಿ ಪ್ರಯಾಣಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿದಿರಿ ಸದ್ಯಕ್ಕೆ ಸರ್ಕಾರದಲ್ಲಿ ಆ ಆಲೋಚನೆ ಇಲ್ಲದೇ ಇರುವುದರಿಂದ ಅದನ್ನು ಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ, ಇದು ವರ್ಕಬಲ್ ಅಲ್ಲ ಎಂದು ಅದನ್ನು ಕೈಬಿಡಬೇಕಾಗಿ ಬಂದಿದೆ. ನಾನು ಇದರ ಬಗ್ಗೆ ವ್ಯಾಪಕವಾಗಿ ಉತ್ತರ ಹೇಳುವುದಕ್ಕೆ ಹೋಯಿತು ಅಂದರೆ ಬಹಳಷ್ಟು ಸಮಯ ಅದಕ್ಕೇ ಆಗುತ್ತದೆ. ಮೀನುಗಾರಿಕೆ ಮತ್ತು ಬಂದರಿಗೆ ಸಂಬಂಧಪಟ್ಟ ಹಾಗೆ ನಮ್ಮ ಸ್ನೇಹಿತರು ಏನೇನು ಹೇಳಿದ್ದಾರೆ. ಅದನ್ನು ಗಮನಿಸಿಕೊಂಡಿದ್ದೇನೆ. ಅದನ್ನು ನಾನು ರಿಕಾರ್ಡ್ ಮಾಡಿಕೊಂಡಿದ್ದೇನೆ. ಈ ವಿಚಾರಗಳಲ್ಲಿ ಮತ್ತೆ ಏನಾದರೂ ಕ್ಲಾರಿಫಿಕೇಷನ್ ಕೇಳಿದರೆ ನನ್ನ ಅಭ್ಯಂತರವಿಲ್ಲ. ಈ ಹಂತದಲ್ಲಿ ಕ್ಲಾರಿಫಿಕೇಷನ್ ಕೇಳಿದರೆ ನನ್ನ ಅಭ್ಯಂತರವಿಲ್ಲ. ತಾವು ಕ್ಲಾರಿಫಿಕೇಷನ್ ಕೇಳಿದರೆ ನಾನು ಈಗಲೇ ಉತ್ತರ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ. —ಹಿಡಿದಂಥ ಮೀನಿಗೆ ಒಳ್ಳೆಯ ಬೆಲೆ ಸಿಗುವುದಕ್ಕೆ ಏನು ಮಾಡಿದ್ದೀರಿ, ದಯವಿಟ್ಟು ಅದನ್ನು ಹೇಳಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ. —ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಯುವಂಥ ರೈತನಿಗೆ ಒಳ್ಳೆಯ ಬೆಲೆ ಕೊಡಬೇಕೆಂದು ಒತ್ತಾಯ ಇದೆ. ಅದೇ ರೀತಿ ಮೀನುಗಾರರು ಹಿಡಿದಂಥ ಮೀನಿಗೂ ಒಳ್ಳೆಯ ಬೆಲೆ ಕೊಡಬೇಕೆಂದು ಒತ್ತಾಯ ಇದೆ. ಈ ದಿಕ್ಕಿನಲ್ಲಿ ಕರ್ನಾಟಕ ಫಿಷರೀಸ್ ಡೆವಲಪ್‌ಮೆಂಟ್

ಕಾರ್ಪೊರೇಷನ್ ಸರಿಯಾದ ಬೆಲೆ ಕೊಡಿಸುವ ಪ್ರಯತ್ನ ಮಾಡುತ್ತಿದೆ. ಜೊತೆಗೆ ಮೀನುಗಾರರಿಗೆ ಎಲ್ಲ ರೀತಿಯ ರಕ್ಷಣೆ ಕೊಡತಕ್ಕ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಡಿಸೆಂಬರ್ ಮತ್ತು ಜನವರಿಯಲ್ಲಿ ಸಾಮಾನ್ಯವಾಗಿ ಬಂಗಡೆ ಮೀನು ಯಥೇಚ್ಛವಾಗಿ ಬಂದು ಇದನ್ನು ಮಾರಾಟ ಮಾಡುವುದೇ ಒಂದು ಸಮಸ್ಯೆಯಾಗುತ್ತದೆ. ಮೀನು ಜಾಸ್ತಿ ಬಂದರೆ ಅದನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಒಂದು ಬುಟ್ಟಿಗೆ ಒಂದು ರೂಪಾಯಿನಂತೆ ಮಾರಿದ್ದಾರೆ. ಆದಕ್ಕಾಗಿ ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ಮೀನು ಬಂದಾಗ ಅದನ್ನು ಸ್ಟೋರ್ ಮಾಡುವ ವ್ಯವಸ್ಥೆ ಮಾಡಬೇಕು. ಮತ್ತೆ ಗ್ರಾಹಕರಿಗೆ ಉತ್ತಮ ಮೀನು ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಯೋಗ್ಯ ಸಲಹೆ ಕೊಟ್ಟಿದ್ದಾರೆ. ಜಾಸ್ತಿ ಮೀನು ಬಂದಾಗ ಅದನ್ನು ಪ್ರಿಸರ್ವ್ ಮಾಡಲು ಎಲ್ಲಕಡೆ ಕೋಲ್ಡ್ ಸ್ಟೋರೇಜ್ ಸ್ಥಾಪನೆ ಮಾಡಬೇಕೆಂದಿದ್ದೇವೆ. ಈಗ ತದ್ರಿಯಲ್ಲಿ ಭಾರಿ ಪ್ರಮಾಣದ ಕೋಲ್ಡ್ ಸ್ಟೋರೇಜ್ ಸ್ಥಾಪನೆ ಮಾಡಿದ್ದೇವೆ. ಅದೇ ರೀತಿ ಬೇರೆಕಡೆಗಳಲ್ಲಿಯೂ ಮಾಡುವ ಪ್ರಯತ್ನ ನಡೆದಿದೆ.

ಚೇರ್ಮನ್.—ಮಾನ್ಯ ಮಂತ್ರಿಗಳು ಪೂರ್ತಿ ಬೇಡಿಕೆಗಳಿಗೆ ಉತ್ತರ ಕೊಟ್ಟರೆ ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಒಂದೊಂದು ಬೇಡಿಕೆ ಉತ್ತರ ಮುಗಿದ ಕೂಡಲೇ ಕ್ಲಾರಿಫಿಕೇಷನ್ ಕೇಳಿದರೆ ಉತ್ತರ ಕೊಡಲು ನನಗೆ ಅನುಕೂಲವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಇವತ್ತು ಮೀನುಗಾರಿಕೆ ಮಾಡಲು ಖಾಸಗಿಯವರು ಮುಂದೆ ಬರುತ್ತಿದ್ದಾರೆ. ಇಂಥವರಿಗೆ ಭೂಮಿಕೊಡಲು ಕಾನೂನಿನಲ್ಲಿ ತೊಡಕುಗಳಿವೆ. ಏಕೆಂದರೆ ಇರತಕ್ಕಂಥ ಭೂಮಿ ರೆವಿನ್ಯೂ ಇಲಾಖೆ ಆರಣ್ಯ ಇಲಾಖೆ ಹಾಗೂ ಮೀನುಗಾರಿಕಾ ಇಲಾಖೆಗಳಿಗೆ ಸೇರಿದ. ಈ ಕಾರಣದಿಂದ ಬೇರೆ ಬೇರೆ ಇಲಾಖೆಗಳ ವಶದಲ್ಲಿರುವ ಭೂಮಿಯನ್ನು ಮೀನುಗಾರಿಕೆ ಇಲಾಖೆಗೆ ತೆಗೆದುಕೊಳ್ಳುವ ಸಲುವಾಗಿ ಒಂದು ಕಾನೂನು ತಂದು, ಅಭಿವೃದ್ಧಿಪಡಿಸುವುದು ಸೂಕ್ತವಾಗಿದೆ. ಈ ಬಗ್ಗೆ ತಾವು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈ ದಿಶೆಯಲ್ಲಿ ಸರ್ಕಾರದ ನಿಲುವನ್ನು ನಾನು ಘೋಷಣೆ ಮಾಡುತ್ತಿದ್ದೇನೆ, ಪಾರ್ಲಿಮೆಂಟಿನಲ್ಲಿ ಕನ್ಸಲ್ಟೆಟೀವ್ ಕಮಿಟಿ ಎಂದು ಇರುವಂತೆ ನಮ್ಮ ರಾಜ್ಯದಲ್ಲಿ ಈ ಫಿಷರೀಸ್ ಇಲಾಖೆಗೆ ಸಂಬಂಧಪಟ್ಟಂತೆ ಕನ್ಸಲ್ಟೆಟೀವ್ ಕಮಿಟಿಯನ್ನು ಮುಖ್ಯಮಂತ್ರಿಗಳ ಅನುಮತಿ ಪಡೆದು ರಚಿಸುತ್ತೇನೆ. ಆ ಕಮಿಟಿಗೆ ಮೀನುಗಾರಿಕೆಯ ಬಗ್ಗೆ ಆಸಕ್ತಿ ಇರತಕ್ಕವರನ್ನು ಹಾಕಿ ಆಗಿಂದಾಗ್ಗೆ ಅವರೊಂದಿಗೆ ಸಮಾಲೋಚನೆ ಮಾಡುವುದರ ಮೂಲಕ ಈ ಇಲಾಖೆಯು ದಕ್ಷವಾಗಿ ಕೆಲಸ ಮಾಡುವಂತೆ ಮಾಡುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು.—ಮಂತ್ರಿಗಳು ಎಲ್ಲ ಬೇಡಿಕೆಗಳಿಗೂ ಉತ್ತರ ಕೊಡುವುದು ಒಳ್ಳೆಯದು. ನಂತರ ಮಾನ್ಯ ಸದಸ್ಯರುಗಳು ಕ್ಲಾರಿಫಿಕೇಷನ್ ಕೇಳಲು ಅನುಕೂಲವಾಗುತ್ತದೆ.

ಶ್ರೀ ಜಿ. ರಾಜೂಗೌಡ.—ಧಾರವಾಡದಲ್ಲಿ ಕೋಳಿ ಸಾಕಾಣಿಕೆ ಮಾಡುವಂತೆ 20–30 ಅಡಿಯ ಪಾತಿಗಳನ್ನು ಮಾಡಿ ನೀರನ್ನು ತುಂಬಿ ಒಂದು ವರ್ಷದಲ್ಲಿ 3 ಸಾವಿರ ಕೆ. ಜಿ. ಸಿಗಡಿ ಮೀನನ್ನು ಬೆಳೆಸಿ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಾರೆ. ಆದ್ದರಿಂದ ಸರ್ಕಾರ ತೋಟಗಾರಿಕೆ ಇಲಾಖೆ ಮೂಲಕ ಫಲಪುಷ್ಪ ಪ್ರದರ್ಶನಗಳನ್ನು ಏರ್ಪಡಿಸುವಂತೆ ಸೀಗಡಿ ಮೀನಿನ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸಿ, ಜನರನ್ನು ಆಕರ್ಷಣೆ ಮಾಡುವುದರ ಮೂಲಕ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಹಾಗೂ ಬಡಜನರಿಗೆ ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟು, ಅವರ ಮೂಲಕ ಸೀಗಡಿ ಮೀನಿನ ಬೇಸಾಯಕ್ಕೆ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆ. ಇದರಿಂದ ಬಡಬಗ್ಗರಿಗೆಲ್ಲಾ ಅನುಕೂಲ ಆಗುತ್ತದೆ. ಮೀನಿನ ಉತ್ಪಾದನೆ ಸಹ ಜಾಸ್ತಿಯಾಗುತ್ತದೆ ಆದ್ದರಿಂದ ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಪರಿಶೀಲನೆಗೆ ಯೋಗ್ಯವಾಗಿದೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ತಾವು ಎಲ್ಲರಿಗೂ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ನಾನೂ ಸಹ ಕೇಳುತ್ತೇನೆ.

ಉಪಾಧ್ಯಕ್ಷರು.—ಅವರು ಪೂರ್ತಿ ಉತ್ತರ ಕೊಟ್ಟ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಒಂದು ಇಲಾಖಾ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಟ್ಟ ಮೇಲೆ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಿದರೆ ಉತ್ತರ ಕೊಡಲು ನನಗೆ ಅನುಕೂಲ ವಾಗುತ್ತದೆಂದು ನಾನೇ ಸಲಹೆ ಮಾಡಿದ್ದೇನೆ. ಆದ್ದರಿಂದ ಅವರು ಕೇಳಲಿ.

೫–೫೦ ಪಿ. ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಸಚಿವರು ಬಹಳ ವರ್ಷಗಳ ನಂತರ ನಮ್ಮ ಮಾನ್ಯ ನರಸಿಂಹಮೂರ್ತಿಯವರು ಮಂತ್ರಿಗಳಾಗಿದ್ದಾರೆ. ನಾವೆಲ್ಲರೂ ಅವರಿಗೆ ಅಭಿನಂದಿಸುತ್ತೇವೆ. ಅವರ ಚೊಚ್ಚಲ ಭಾಷಣವನ್ನು ಬಹಳ ಉತ್ಸಾಹದಿಂದ ಮಾಡಿದ್ದಾರೆ. ನಾವೆಲ್ಲಾ ಪಾಪದ ಕೆಲಸ ಮಾಡಿದ್ದನ್ನು ಸಹಿತ ಈ ಸದನಕ್ಕೆ ತಿಳಿಸಿದ್ದಾರೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡವರಿಗೆ ೫೦೦ ಮನೆಗಳನ್ನು ಕಟ್ಟಿಸಲಿಕ್ಕೆ ನಮ್ಮ ಕೈಯ್ಯಲ್ಲಿ ಆಗದೇ ಮೀನುಗಾರರಿಗೆ ಬಹಳ ಪಾಪದ ಕೆಲಸವನ್ನು ನಾವು ಮಾಡಿದ್ದೇವೆ. ಈಗ ತಮ್ಮ ಅವಧಿ ಎಷ್ಟು ದಿವಸ ಇರುತ್ತದೋ ಗೊತ್ತಿಲ್ಲ. ಈ ವರ್ಷ ಮೀನುಗಾರರಿಗೆ ಎಷ್ಟು ಮನೆಗಳನ್ನು ಕಟ್ಟಿಸಿ ಪುಣ್ಯವನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮನೆಗಳನ್ನೆ ಕಟ್ಟದೇ ಇದ್ದ ಕೆಲಸವನ್ನು ಮನೆ ಕಟ್ಟಲಿಕ್ಕೆ ಪ್ರಯತ್ನ ಮಾಡಿರುವುದು ಪ್ರಗತಿಯಲ್ಲವೇ ? ಮಾರ್ಚಿ ೩೧ ರೊಳಗೆ ಉಳಿದಂಥ ಮನೆಗಳು ಏನಿತ್ತು ಅದನ್ನು ನಾನು ಮಾಡದೇ ಇದ್ದರೆ ಬಹುಶ: ಆ ಪಾಪಕ್ಕೆ ಗುರಿಯಾಗುತ್ತದ್ದೆ ಬಹುಶಃ ನೀವು ಬಿಟ್ಟಿರುವ ಕೆಲಸವನ್ನು ನಾನು ಮಾಡಿದ್ದೇನೆ. ಅದಕ್ಕಾಗಿ ನೀವು ನನ್ನನ್ನು ಅಭಿನಂದಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿದ್ದು ಏನೆಂದರೆ, ಈ ರಾಜ್ಯದಲ್ಲಿ ಮೀನುಗಾರರು ಎಷ್ಟು ಜನರು ಇದ್ದಾರೆಂದು ಕೇಳುವುದಿಲ್ಲ. ಅದಕ್ಕೆ ತಾವು ಉತ್ತರವನ್ನು ತರಿಸಿ ಕೊಳ್ಳಬೇಕಾಗುತ್ತದೆ. ಆಥವಾ ಗೊತ್ತಿದ್ದರೆ ಹೇಳಲಿ ಒಟ್ಟು ಎಷ್ಟು ಜನ ಮೀನುಗಾರರು ಇದ್ದಾರೆ, ಎಷ್ಟು ಜನರಿಗೆ ನಿವೇಶನ ಇಲ್ಲ. ಎಷ್ಟು ಜನರಿಗೆ ಮನೆಗಳು ಇಲ್ಲಎಷ್ಟು ಜನರಿಗೆ ನಿವೇಶನ ಕೊಡಬೇಕೆಂದು ಇದ್ದೀರಿ. ಈ ವರ್ಷದಲ್ಲಿ ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಕೊಡಬೇಕೆಂದು ಇದ್ದೀರಿ. ಅದಕ್ಕೆ ಎಷ್ಟು ಹಣ ಬೇಕು ಈಗ ನಮ್ಮ ಹತ್ತಿರ ಅನುದಾನಕ್ಕೆ ಒಪ್ಪಿಗೆ ತೆಗೆದುಕೊಳ್ಳುತ್ತೀರಿ. ಈ ಅನುದಾನ ದಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಇಟ್ಟಿದ್ದೀರಿ ಅದನ್ನು ದಯಮಾಡಿ ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾನು ಈಗಾಗಲೇ ಹೇಳಿದಂತೆ ಕರ್ನಾಟಕ ರಾಜ್ಯದಲ್ಲಿ ೩೦ ಲಕ್ಷ ಮಂದಿ ಮೀನುಗಾರರು ಇದ್ದಾರೆ ಬಹುಶಃ ಅವರಲ್ಲಿ ಹೆಚ್ಚಾಗಿ ಇರತಕ್ಕವರು ಬಡವರು. ತಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ೩೦ ಲಕ್ಷ ಮಂದಿ ಮೀನು ಗಾರರು ಇದ್ದಾರೆ. ಅವರಲ್ಲಿ ಬಹುಶ: ಇರತಕ್ಕವರೆಲ್ಲಾ ಬಿಲೋ ಪಾವರ್ಟಿ ಲೈನ್ ಅವರೆಲ್ಲಾ ಶ್ರಮ ಜೀವಿಗಳು. ಕೇಂದ್ರ ಮತ್ತು ರಾಜ್ಯಸರ್ಕಾರಗಳ ಒಂದು ಜಂಟಿ ಪ್ರಯತ್ನದಲ್ಲಿ ೫೦೦ ಮನೆಗಳನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ಮಾಣ ಮಾಡಬೇಕು ಎನ್ನುವ ಕಾರ್ಯವನ್ನು ಅನೇಕ ಕಾರಣ ಗಳಿಂದ ಕೈಗೆತ್ತಿಕೊಂಡಿರಲಿಲ್ಲ. ೩೧–೩–೯೦ ರೊಳಗೆ ಈ ಯೋಜನೆಯ ಹಣ ಲ್ಯಾಪ್ಸ್ ಆಗುತ್ತದೆಂದು ಜ್ಞಾಪಕಕ್ಕೆ ತಂದುಕೊಂಡು ಇದನ್ನು ಪ್ರಾರಂಭ ಮಾಡಿದ್ದೇವೆ. ಹುಣಸೂರು ತಾಲ್ಲೂಕು ಕೆಂಚಳ್ಳಿ ಯಲ್ಲಿ ೧೦೦ ಮನೆಗಳನ್ನು ಕಟ್ಟುವ ಕೆಲಸ ಕೂಡ ಒಂದೆರಡು ವರ್ಷಗಳ ಹಿಂದೆಯೇ ಪ್ರಾರಂಭ ವಾಗಿದ್ದರೂ ಕೂಡ ಆ ಮನೆಗಳು ಪೂರ್ಣವಾಗಿರಲಿಲ್ಲ. ನಾವು ಲ್ಯಾಂಡ್ ಆರ್ಮಿಯವರಿಗೆ ಹೇಳಿ ಇಷ್ಟು ದಿವಸಗಳಲ್ಲಿಯೇ ಮನೆಗಳನ್ನು ಪೂರ್ಣಗೊಳಿಸಬೇಕೆಂದು ಎಚ್ಚರಿಕೆ ಕೊಟ್ಟೆ ಜೊತೆಗೆ ಅವರಿಗೆ ಎಲೆಕ್ಟ್ರಿಸಿಟಿ ಮತ್ತು ನೀರಿನ ಸೌಕರ್ಯ ಕೊಟ್ಟು ಆ ಮನೆಗಳನ್ನು ಓಪನ್ ಮಾಡಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಕೇಳಿದ ಪ್ರಶ್ನೆಗೆ ಭಾಗಶ: ೩೦ ಲಕ್ಷ ಜನ ಮೀನುಗಾರರು ಇದ್ದಾರೆಂದು ಉತ್ತರವನ್ನು ಕೊಟ್ಟಿದ್ದೀರಿ. ಅವರಲ್ಲಿ ಎಷ್ಟು ಜನರಿಗೆ ನಿವೇಶನ ಇದೆ, ಎಷ್ಟು ಜನರಿಗೆ ನಿವೇಶನ ಇಲ್ಲ. ಎಷ್ಟು ಜನರಿಗೆ ಕೊಡುವವರಿದ್ದೀರಿ. ಈಗ ೭ನೇ ಪಂಚವಾರ್ಷಿಕ ಯೋಜನೆ ಆದರೆ ೫ ವರ್ಷಗಳು ಆಗುತ್ತದೆ ಈ ೫ ವರ್ಷಗಳಲ್ಲಿ ೫೦೦ ಮನೆಗಳನ್ನು ಕಟ್ಟುತ್ತೀರಾ ೫೦೧ ಮನೆ ಕಟ್ಟು ತ್ತೀರಾ, ೫ ಸಾವಿರ ಮನೆಗಳನ್ನು ಕಟ್ಟುತ್ತೀರಾ. ೫ ಲಕ್ಷ ಮನೆಗಳನ್ನು ಕಟ್ಟುತ್ತೀರಾ ಈ ಅನುದಾನಕ್ಕೆ ನಾವು ಮನ್ನಣೆಯನ್ನು ಕೊಡಬೇಕು ಎಂದು ನಾನು ಕೇಳುತ್ತಿರುವುದು. ಈ ಅನುದಾನದಲ್ಲಿ ನೀವು

ಮನೆಗಳನ್ನು ಕಟ್ಟಿಸಲು ಎಷ್ಟು ಹಣವನ್ನು ಇಟ್ಟುಕೊಂಡಿದ್ದೀರೆಂಬುದನ್ನು ತಾವು ತಿಳಿಸಬೇಕು. ಏಕೆಂದರೆ ಈ ಅನುದಾನದಲ್ಲಿ ಇದರ ವಿವರವನ್ನು ಕೊಟ್ಟಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕೇಂದ್ರ ಸರ್ಕಾರದ ಮತ್ತು ರಾಜ್ಯಸರ್ಕಾರದ ಒಂದು ಜಾಯಿಂಟ್ ವೆಂಚರ್‌ನಲ್ಲಿ ಈ ಕಾರ್ಯಕ್ರಮ ಇದೆ. ಅದಕ್ಕಾಗಿ ನಾವು ೫೦ ಪರ್‌ಸೆಂಟ್ ಹಣವನ್ನು ಬಡ್ಜೆಟ್‌ನಲ್ಲಿ ಕೊಟ್ಟಿದ್ದೇವೆ.

SRI P. G. R. SINDYA.—What is the amount you have provided in this year's budget, for the construction of the house to the Fisherman in Karnataka ? How many houses you are going to construct ? ಇದನ್ನು ದಯಮಾಡಿ ಹೇಳಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—೫೦೦ ಮನೆಗಳನ್ನು ನಿರ್ಮಾಣ ಮಾಡಬೇಕೆಂದು, ಪ್ರತಿ ಮನೆಗೆ ೧೭ ಸಾವಿರ ರೂಪಾಯಿ ವೆಚ್ಚವನ್ನು ನಾವು ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಬಹುಶಃ ತಾವು ಬಜೆಟ್ ಓದಿದರೆ ತಮಗೆ ಗೊತ್ತಾಗುತ್ತದೆ. ಹಿಂದಿನ ಸರ್ಕಾರ ಮಾಡದೇ ಇದ್ದುದು, ನಾವು ಮಾಡಿದ್ದೇವೆಂದು ಬೇಜಾರು ಮಾಡಿಕೊಳ್ಳಲಿಕ್ಕೆ ಹೋಗಬೇಡಿ ಈ ಸಾರಿ ಸುಮಾರು ನಾಲ್ಕೈದು ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಏನು ಇಟ್ಟುಕೊಂಡಿದ್ದೇವೆ, ಇದರಲ್ಲಿ ಹೌಸಿಂಗ್ ಕೂಡ ಸೇರಿದೆ ಈ ವರ್ಷದಲ್ಲಿ ಮೀನುಗಾರರಿಗೆ ೫೦೦ ಮನೆಗಳನ್ನು ನಿರ್ಮಾಣ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—೩೦ ಲಕ್ಷ ಜನ ಮೀನುಗಾರರಿಗೆ ೫೦೦ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದೀರಿ ಶಹಭಾಸ್.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಬಡ ಮೀನುಗಾರರಿಗೆ ಈ ಸಲ ೫೦೦ ಮನೆಗಳನ್ನು ಕಟ್ಟಿಸಿ ಕೊಡಲು ನಾನು ಎಲ್ಲ ರೀತಿಯ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ......

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮೀನುಗಾರಿಕೆಗೂ ನಿಮಗೂ ಏನು ಸಂಬಂಧ ?

ಶ್ರೀ ವಾಟಾಳ್ ನಾಗರಾಜ್.—ಇರಲಿ, ನೀವು ಎಲ್ಲರನ್ನೂ ಮೀನು ತಿನ್ನಿ ಎಂದು ಈಗಾಗಲೇ ಹೇಳಿಬಿಟ್ಟಿದ್ದೀರಿ ಎಲ್ಲರಿಗೂ ನೀವು ಸಂಬಂಧ ಕಲ್ಪಿಸಿದ್ದೀರಿ. ಈಗ ೩೦ ಲಕ್ಷ ಮೀನುಗಾರರಿದ್ದಾರೆ. ಅವರು ಬಹಳ ಹಿಂದುಳಿದಿರತಕ್ಕಂತಹವರು ಎಂದು ಹೇಳುತ್ತೀರಿ. ೩೦ ಲಕ್ಷ ಮೀನುಗಾರರಿಗೆ ಈ ವರ್ಷ ೫೦೦ ಮನೆಗಳನ್ನು ಕಟ್ಟಿಸಿದರೆ, ೩೦ ಲಕ್ಷ ಜನರಿಗೂ ಮನೆಗಳನ್ನು ಕಟ್ಟಬೇಕಾದರೆ ಎಷ್ಟು ಕಾಲ ತಲುಪಬಹುದು ಆಗ ಏನೇನಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಈಗ ಪ್ರಾರಂಭ ಮಾಡಿದ್ದೇವೆ. ಹಿಂದೆ ಈ ಕಾರ್ಯಕ್ರಮ ಇರಲಿಲ್ಲ. ಈಗ ಜಾರಿಗೆ ಕೊಟ್ಟಿದ್ದೇವೆ. ನಾವೂ ನೀವೂ ಇರುವವರೆಗೆ ಮಾತ್ರವಲ್ಲ, ಈ ಶತಮಾನದ ವರೆಗೆ ಈ ದೇಶದಲ್ಲಿರುವ ಬಡತನವನ್ನು ಕಿತ್ತು ಹಾಕುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಬೈರೇಗೌಡ.—ಈ ಬಗ್ಗೆ ಮೊದಲು ಕಾರ್ಯಕ್ರಮವಿರಲಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಇದು ರಾಷ್ಟ್ರ ವ್ಯಾಪ್ತಿ ಕಾರ್ಯಕ್ರಮ, ಕೇಂದ್ರ ಸರ್ಕಾರದವರು ಇದಕ್ಕೆ ಹಣ ಕೊಡುತ್ತಾರೆ. ರಾಜ್ಯ ಸರ್ಕಾರ ಕೂಡ ತನ್ನ ಪಾಲನ್ನು ಕೊಡಬೇಕಾಗುತ್ತದೆ. ಹಿಂದೆ ಇಂತಹ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೆವು. ಹಿಂದೆ ಇದ್ದಂತಹ ಕಾರ್ಯಕ್ರಮವನ್ನು ಸಮರ್ಪಕವಾಗಿ ಮಾಡುತ್ತೇವೆಂದು ತಾವು ಹೇಳಿದರೆ ನಾನು ಒಪ್ಪುತ್ತೇನೆ. ಅದನ್ನು ಬಿಟ್ಟು ಈ ಹಿಂದೆ ಇಂತಹ ಕಾರ್ಯಕ್ರಮ ಇರಲಿಲ್ಲವೆಂದು ಹೇಳುವುದಕ್ಕೆ ಮಾತ್ರ ಹೋಗಬೇಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕಾಂಗ್ರೆಸ್ ಪಕ್ಷ ಏನು ಇದೆ, ಅದು ಬಡವರಿಗಾಗಿ ಇರತಕ್ಕಂತಹ ಪಕ್ಷ ಎಂದು ತೋರಿಸುವುದಕ್ಕಾಗಿ ಕೇಂದ್ರದಲ್ಲಿ ಮಾನ್ಯ ರಾಜೀವ್ ಗಾಂಧಿಯವರು ಅಧಿಕಾರದಲ್ಲಿದ್ದಾಗ ಇದನ್ನು ಜಾರಿಗೆ ತಂದರು. ಆದಕ್ಕಾಗಿ ತಾವು ಇದನ್ನು ಜಾರಿಗೆ ಕೊಡಲಿಲ್ಲವೆಂದು ಕಾಣುತ್ತದೆ. ಆದ್ದರಿಂದ ಈಗ ನಾವು ಇದನ್ನು ಜಾರಿಗೆ ತರುತ್ತಿದ್ದೇವೆ.

ಶ್ರೀ ಶಿವಾನಂದ ಕೌಜಲಗಿ.—ಮಲಪ್ರಭಾ, ಪ್ರಾಜೆಕ್ಟ್‌ನಲ್ಲಿ ಕೆಲವೊಂದು ಜನರು ಮನೆಗಳನ್ನು ಕಳೆದುಕೊಂಡಿದ್ದಾರೆ ಅವರಿಗೆ ಪುನರ್ ವಸತಿಯನ್ನು ಕಟ್ಟಿಸಿಕೊಡಬೇಕು. ಕೆಂಗನೂರು ಮಾಟವಳ್ಳಿ ಹತ್ತಿರ ಇರುವ ಮೀನುಗಾರರ ಸಲುವಾಗಿ ಮನೆಗಳನ್ನು ತಾವು ಕಟ್ಟಿಸಿ ಕೊಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಟಿ.ಎನ್. ನರಸಿಂಹಮೂರ್ತಿ.— ನನಗೆ ಅದರ ಬಗ್ಗೆ ಪತ್ರ ಬರೆಯಿರಿ. ಅದನ್ನು ನಾನು ನಮ್ಮ ಇಲಾಖೆಗೆ ಕಳಿಸಿ ಕೂಡಲೇ ವ್ಯವಸ್ಥೆ ಮಾಡಿಕೊಡುತ್ತೇನೆ. ಇನ್ನು ನಗರಾಭಿವೃದ್ಧಿ ಇಲಾಖೆ ಏನಿದೆ, ಇದು ಬಹಳ ದೊಡ್ಡದಾದ ಇಲಾಖೆಯಾಗಿದೆ. ಮಾನ್ಯ ದೇಶಪಾಂಡೆಯವರು ಹಾಗೂ ಇನ್ನೂ ಅನೇಕ ಜನ ಮಾನ್ಯ ಸದಸ್ಯರು ಕುಡಿಯುವ ನೀರಿನ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್, ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್‌ಬೋರ್ಡ್ ಏನು ಇದೆ, ಇವು ಸರಿಯಾಗಿ ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಹಿಂದೆ ನಿಮ್ಮ ಸರಕಾರ ಅಧಿಕಾರದಲ್ಲಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆಂದು ಹೆಚ್ಚು ಕೆಲಸವನ್ನು ಮಾಡಿದ್ದೀರಿ; ಅದರ ಬಗ್ಗೆ ನಾನು ನಿಮ್ಮ ಬೆನ್ನನ್ನು ತಟ್ಟಬೇಕಾಗುತ್ತದೆ. ಹಿಂದೆ ಕೂಡ ಬೆನ್ನನ್ನು ತಟ್ಟಿದ್ದೇನೆ, ಮಾನ್ಯ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ನಮ್ಮ ಸರಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಪಟ್ಟಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಏನು ಇದೆ ಎಂಬುದನ್ನು ಅರಿತುಕೊಂಡು ಆದ್ಯತೆ ಮೇಲೆ ಎಲ್ಲೆಲ್ಲಿ ದೊಡ್ಡ ದೊಡ್ಡ ನದಿಗಳು ಇವೆ, ಅವು ಮಲಪ್ರಭಾ ಇರಬಹುದು, ಘಟಪ್ರಭಾ ಇರಬಹುದು, ಭೀಮಾ ನದಿ ಇರಬಹುದು, ತುಂಗಭದ್ರಾ ನದಿ ಇರಬಹುದು, ಆ ನದಿಗಳಿಂದ ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸಲು ಶ್ರೀಮಾನ್ ವೀರೇಂದ್ರ ಪಾಟೀಲರ ನೇತೃತ್ವದ ಸರ್ಕಾರದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆದ್ಯತೆ ಮೇಲೆ ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೊಡಿಸತಕ್ಕಂಥಾದ್ದಕ್ಕೆಂದು ಈ ಬಡ್ಜೆಟ್ಟಿನಲ್ಲಿ ೨೮ ಕಾಮಗಾರಿಗಳನ್ನು ನಾವು ತೆಗೆದು ಕೊಂಡಿದ್ದೇವೆ. ಎಲ್. ಐ. ಸಿ. ಸಹಾಯದಿಂದ ಇರಬಹುದು, ರಾಜ್ಯ ಸರಕಾರದ ಹಣ ಇರಬಹುದು ಅದು ಬೇರೆ ವಿಚಾರ. ಬೆಳಗಾಂಗೆ ನೀರನ್ನು ಒದಗಿಸಬೇಕೆಂಬ ಉದ್ದೇಶದಿಂದ ಹಿಡ್ಕಲ್ ಜಲಾಶಯದಿಂದ ೨೫ ಕೋಟಿ ೬೦ ಲಕ್ಷವನ್ನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಹಿಂದೆಂದೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳಗಾಂ ನಗರದ ಜನರಿಗೆ ಕುಡಿಯುವ ನೀರಿಗೆಂದು ಕೊಟ್ಟಿರಲಿಲ್ಲ. ಈ ಕೊಡುಗೆಯನ್ನು ನಾವು ನೀಡಿರುವುದಕ್ಕಾಗಿ ನಮ್ಮ ಸರಕಾರವನ್ನು ನೀವೆಲ್ಲರೂ ಮೆಚ್ಚಬೇಕಾಗಿದೆ. ಕುಡಿಯುವ ನೀರಿನ ಬಗ್ಗೆ ಮತ್ತೊಂದು ವಿಚಾರವೆಂದರೆ ಮಂಗಳೂರಿನ ನಮ್ಮ ಸ್ನೇಹಿತರು ಹೇಳಿದರು, ಅಲ್ಲಿ ನೇತ್ರಾವತಿ ನದಿ ಇದ್ದರೂ ಕೂಡ ನೀರಿನ ಸಮಸ್ಯೆ ಇದೆ. ಅದಕ್ಕಾಗಿ ಮಂಗಳೂರಿಗೆ ೧೪ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆ ಸಲುವಾಗಿ ಕೊಟ್ಟಿದ್ದೇವೆ. ಮತ್ತು ಶ್ರೀಮಾನ್ ವೆಂಕಟೇಶ್ ನಾವು ಎಲ್ಲರೂ ಮೈಸೂರು ಜಿಲ್ಲೆಯಿಂದ ಬಂದಿರತಕ್ಕಂಥವರು. ಇವತ್ತು ಕಾವೇರಿ ನದಿ ಮೈಸೂರು ನಗರಕ್ಕೆ ೧೩ ಕಿಲೋಮೀಟರ್ ದೂರ ಇದ್ದರೂ ಸಹ ಮೈಸೂರು ನಗರಕ್ಕೆ, ಪೂರ್ಣವಾಗಿ ಕಾವೇರಿ ನೀರನ್ನು ಕೊಟ್ಟಿಲ್ಲ ಬೆಂಗಳೂರು ನಗರಕ್ಕೆ ನಾವು ಅರ್ಧಭಾಗದ ಜನರಿಗೆ ಕಾವೇರಿ ನೀರನ್ನು ಕೊಟ್ಟಿದ್ದೇವೆ. ಇದರಿಂದ ಇವತ್ತು ಮೈಸೂರು ನಗರದ ನಾಗರೀಕರಿಗೆ ಕಾವೇರಿ ನೀರನ್ನು ಕೊಡಬೇಕೆಂದು ಹೇಳಿ ಸುಮಾರು ಆರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಚಾಮರಾಜನಗರ ಮೈಸೂರಿಗೆ ೪೫–೫೦ ಕಿಲೊಮೀಟರ್ ದೂರದಲ್ಲಿದೆ, ಶ್ರೀಮಾನ್ ವಾಟಾಳ್ ನಾಗರಾಜ್ ಕ್ಷೇತ್ರವಾದ ಚಾಮರಾಜನಗರಕ್ಕೆ ಸುಮಾರು ಆರುವರೆ ಕೋಟಿ ರೂಪಾಯಿಗಳನ್ನು ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ನಾವು ಕೊಟ್ಟಿದ್ದೇವೆಂದರೆ ಮಾನ್ಯ ವಾಟಾಳ್‌ನಾಗರಾಜ್‌ರವರು ಇದು ಸರ್ಕಾರದ ಸಾಧನೆಯಲ್ಲವೇ ? ಅವರು ಇದನ್ನು ಮೆಚ್ಚಬೇಕಾಗಿದೆ. ಅವರು ತಮ್ಮ ಭಾಷಣದಲ್ಲಿ ಚಾಮರಾಜನಗರಕ್ಕೆ ನೀರನ್ನು ಕೊಟ್ಟಿರುವ ಬಗ್ಗೆ ನಮ್ಮ ಸರ್ಕಾರಕ್ಕೆ ಅಭಿನಂದನೆ ಮಾಡಿದ್ದಾರೆ. ಮತ್ತೆ ಒಳಚರಂಡಿಯನ್ನು ಕೂಡ ಮಾಡಬೇಕೆಂದು ಕೇಳಿದ್ದಾರೆ. ಅದಕ್ಕೂ ಕೂಡ ಸರ್ಕಾರ ಸಮ್ಮತಿಯನ್ನು ಕೊಟ್ಟಿದೆ ಎಂದು ಸಂತೋಷದಿಂದ ಹೇಳುತ್ತೇನೆ.

ಇವತ್ತು ಬಜೆಟ್‌ನಲ್ಲಿ ಬಿಜಾಪುರಕ್ಕೆ ಕೃಷ್ಣಾನದಿಯಿಂದ ನೀರನ್ನು ತರಲು ಸುಮಾರು ೧೬ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಕೊಟ್ಟಿದ್ದೇವೆ. ಚಿಕ್ಕಮಗಳೂರಿಗೆ ಸೆಕೆಂಡ್ ಸ್ಟೇಜಿಗೆ ೮೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಿಪ್ಪಾಣಿಗೆ ಸುಮಾರು ೧ ಕೋಟಿ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ರಾಣಿಬೆನ್ನೂರು ಸಿಟಿ ಮುನಿಸಿಪಾಲಿಟಿಗೆ ಇವತ್ತು ಕೊಟ್ಟಿರತಕ್ಕಂಥದ್ದು ನಾಲ್ಕೂವರೆ ಕೋಟಿ ರೂಪಾಯಿಗಳು. ಮತ್ತು ಸಿಂಧನೂರಿನ ಟೌನ್‌ಮುನಿಸಿಪಲ್ ಕೌನ್ಸಿಲ್‌ಗೆ ಎರಡೂವರೆ ಕೋಟಿ ರೂಪಾಯಿಗಳನ್ನು ಕುಮುಟಾಕ್ಕೆ ೧ ಕೋಟಿ ೨೨ ಲಕ್ಷ ರೂ.ಗಳನ್ನು ಕೊಪ್ಪಳಕ್ಕೆ ೧ ಕೋಟಿ ೮೦ ಲಕ್ಷ ರೂ.ಗಳನ್ನು ಸಂಕೇಶ್ವರ ಮತ್ತು ಉಕ್ಕೇರಿಗೆ ೫ ಕೋಟಿ ರೂಪಾಯಿಗಳನ್ನು ಇಳಕಲ್ ಮತ್ತು ಹುನುಗುಂದಕ್ಕೆ ೩ ಕೋಟಿ ೫೫ ಲಕ್ಷ ರೂಪಾಯಿಗಳನ್ನು ಚಾಮರಾಜನಗರಕ್ಕೆ ೬ ಕೋಟಿ ೧೫ ಲಕ್ಷ, ಬೈಲಹೊಂಗಲಕ್ಕೆ ೮೦ ಲಕ್ಷ, ಗಂಗಾವತಿಗೆ ೧ ಕೋಟಿ ೫೨ ಲಕ್ಷ, ಆಳಂದ್‌ಗೆ ಇವತ್ತು ೧ ಕೋಟಿ ೩೦ ಲಕ್ಷ ರೂಪಾಯಿಗಳನ್ನು, ಭದ್ರಾವತಿಯ ನೋಟಿಫೈಡ್ ಏರಿಯಾಕ್ಕೆ ೧ ಕೋಟಿ ೩೦ ಲಕ್ಷ, ಅರಸೀಕೆರೆ ವಾಟರ್ ಸಪ್ಲೈ ಯೋಜನೆಗೆ ಸುಮಾರು ನಾಲ್ಕೂವರೆ ಕೋಟಿ

ರೂ.ಗಳನ್ನು ತಿಪಟೂರಿಗೆ ವಾಟರ್‌ಸಪ್ಲೈ ಸ್ಕೀಮ್‌ಗೆ ೩ ಕೋಟಿ ೬೦ ಲಕ್ಷ, ತುಮಕೂರಿನ ವಾಟರ್ ಸಪ್ಲೈಗೋಸ್ಕರ, ಹೇಮಾವತಿಯಿಂದ ನೀರು ತರಲು ಸುಮಾರು ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಚಿಕ್ಕಮಂಗಳೂರು ಯಗಚಿ "ಸಿ"ಗೆ ಸುಮಾರು ಏಳುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಸನ್ ವಾಟರ್‌ಸಪ್ಲೈ ಸ್ಕೀಮ್‌ಗೆ ಮೂರುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಂಜನಗೂಡ್ ವಾಟರ್‌ಸಪ್ಲೈ ಸ್ಕೀಮ್‌ಗೆ ೫೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಚಿತ್ತಾಪುರ ವಾಟರ್‌ಸಪ್ಲೈ ಸ್ಕೀಮ್‌ಗೆ ೮೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ನರಸಿಂಹಮೂರ್ತಿಯವರು ಬಹಳ ಉತ್ಸಾಹದಿಂದ ಅರ್ಬನ್ ವಾಟರ್ ಡೆವಲಪ್‌ಮೆಂಟ್‌ಗೆ ಹಿಂದೆ ದುಡ್ಡು ಸ್ಯಾಂಕ್ಷನ್ ಆಗಿರುವುದರ ಬಗ್ಗೆ ಹಾಗೂ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ, ಅದೆಲ್ಲವನ್ನೂ ಓದಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಾವು ಕೇಳುವುದೇನೆಂದರೆ, ಈ ವರ್ಷದ ಬಜೆಟ್‌ನಲ್ಲಿ ಎಷ್ಟು ದುಡ್ಡನ್ನಿಟ್ಟಿದ್ದೀರಿ ಎಂಬುದನ್ನು ದಯವಿಟ್ಟು ಹೇಳಿ, ಹೊಸದಾಗಿ ಏನಾದರೂ ಇದ್ದರೆ ಹೇಳಿ. ಇದೆಲ್ಲ ಇರುವ ಮತ್ತು ಆಗಿರುವ ಕೆಲಸಗಳು.

(ಗೊಂದಲ)

ಉಪಾಧ್ಯಕ್ಷರು.— ತಾವೆಲ್ಲರೂ ಕುಳಿತುಕೊಳ್ಳಬೇಕು. ಅವರು ಈಲ್ಡ್ ಆಗಿದ್ದರೆ ತಾವು ಮಾತನಾಡುವುದು ಸರಿ. ಅವರು ಉತ್ತರ ಕೊಡಲಿ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಈಗ ಮಾನ್ಯ ಸಚಿವರು ನಾಲ್ಕು ದಿವಸಗಳಿಂದ ನಾವುಗಳು ಮಾತನಾಡಿರತಕ್ಕಂಥದ್ದನ್ನೆಲ್ಲ ಗುರುತು ಮಾಡಿಕೊಂಡು ಬಹಳ ಗಂಭೀರವಾಗಿ ಇಲಾಖಾವಾರು ಉತ್ತರವನ್ನು ಕೊಡುತ್ತಿದ್ದಾರೆ. ಅವರು ಉತ್ತರವನ್ನು ಕೊಟ್ಟ ನಂತರ ನಾವು ಪ್ರಶ್ನೆಗಳನ್ನು ಕೇಳೋಣ. ಅವರು ಸ್ವಲ್ಪ ಉತ್ಸಾಹದಿಂದ ಮಾತನಾಡುತ್ತಿದ್ದರೆ ಅವರ ಪಕ್ಷದವರೇ ಒಂದು ರೀತಿ ನಗುವುದು, ಜೋಕ್ ಮಾಡುವುದನ್ನು ನಾನು ನೋಡುತ್ತಿದ್ದೇನೆ. ಅವರಿಗೆ ಪ್ರಶಂಸೆ ಮಾಡುವುದರ ಬದಲು ಒಂದು ರೀತಿ ಜೋಕ್ ಮಾಡುತ್ತಿದ್ದಾರೆ ನಾನು ನೋಡುತ್ತಿದ್ದೇವೆ. ಇದು ಸರಿಯಲ್ಲ. ದಯವಿಟ್ಟು ಉತ್ತರ ಕೊಡಲಿ, ಕೊಟ್ಟ ನಂತರ ಪ್ರಶ್ನೆಗಳನ್ನು ಕೇಳೋಣ.

(ಗೊಂದಲ)

ಉಪಾಧ್ಯಕ್ಷರು.— ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

ಶ್ರೀ ಪಿ. ಜಿ ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ. ಆದೇಶ ತಮ್ಮ ಕಡೆಯಿಂದ ಬರಬೇಕು. ನಾವು ಈ ಸ್ಥಾನದಲ್ಲಿ ಕುಳಿತು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ. ರೂಲಿಂಗ್ ಕೊಡುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳ ಬಗ್ಗೆ ನಾವು ಯಾರು ಲಘುವಾಗಿ ಮಾತನಾಡುತ್ತಿಲ್ಲ. ಯಾರೂ ನಗುತ್ತಿಲ್ಲ. ಈಗಾಗಲೇ ೬ ಗಂಟೆಯಾಯಿತು. ಇಷ್ಟು ಹೊತ್ತಿಗೆ ಸಭೆ ಮುಗಿಯಬೇಕಾಗಿತ್ತು. ನಾವು ಸಾಕಷ್ಟು ವಿಚಾರಗಳನ್ನು ಹೇಳಿದ್ದೇವೆ. ಅದಕ್ಕೆ ಅವರು ಕ್ಲಾರಿಫಿಕೇಷನ್ ಕೊಡಬೇಕಾಗಿದೆ. ಈಗ ನಾವು ಏನು ಹೇಳುತ್ತಿರತಕ್ಕಂಥದ್ದು ಎಂದರೆ ಬಜೆಟ್‌ನಲ್ಲಿರತಕ್ಕಂಥ ವಿವರಗಳನ್ನು ಅವರು ಓದುವುದು ಬೇಕಾಗಿಲ್ಲ, ದಯವಿಟ್ಟು ಎಷ್ಟು ಹಣ ಈ ವರ್ಷ ಕೊಡುತ್ತೀರಿ, ಅದನ್ನು ತಿಳಿಸಿ ಎಂದು ನಾವು ಕೇಳುತ್ತಿರುವುದು.

ಉಪಾಧ್ಯಕ್ಷರು.— ದಯವಿಟ್ಟು ಮಾನ್ಯ ಮಂತ್ರಿಗಳು ಈಗ ತಮ್ಮ ಭಾಷಣವನ್ನು ಮುಂದುವರಿಸ ಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಉಪಾಧ್ಯಕ್ಷರೆ, ವಾಟಾಳ್ ನಾಗರಾಜ್ ಅವರು ನಮ್ಮ ಬಗ್ಗೆ ಪ್ರಬಲವಾದ ಆಪಾದನೆ ಮಾಡಿದ್ದಾರೆ. ಅವರಿಗೆ ಮಗುವನ್ನು ಚಿಗುಟುವುದೂ ಗೊತ್ತು, ತೊಟ್ಟಿಲು ತೂಗುವುದೂ ಗೊತ್ತು. ಆದರೆ ನಮ್ಮ ಮಂತ್ರಿಗಳನ್ನು ನಾವು ಯಾರೂ ಲಘುವಾಗಿ ಕಂಡಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಾಗೋಡು ತಿಮ್ಮಪ್ಪನವರು ಇದರಲ್ಲಿ ನಿಸ್ಸೀಮರು. ಅದರ ಬಗ್ಗೆ ಬೇರೆಯವರಿಗೆ ಹೇಳಬೇಕಾಗಿಲ್ಲ. ನೀವು ಇಷ್ಟೆಲ್ಲಾ ಮಾಡಿದರೂ ನಿಮಗೆ ಮಂತ್ರಿ ಪದವಿ ಸಿಕ್ಕಿಲ್ಲ. ಆ ಒಂದು ಕೊರಗು, ಗೋಳು, ಕಣ್ಣೀರು ಅವರಿಗೆ ಇದ್ದೇ ಇದೆ

ಶ್ರೀ ಕಾಗೋಡು ತಿಮ್ಮಪ್ಪ.—ಅದು ನಿಮಗಿರುವುದು.

ಶ್ರೀ ವಾಟಾಳ್ ನಾಗರಾಜ್.—ನಾನು ಮಂತ್ರಿಯಾಗಬೇಕು ಎಂದು ಯಾವಾಗಲೂ ಹೇಳಿಲ್ಲ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳನ್ನು ಯಾರು ಲಘುವಾಗಿ ಕಂಡಿದ್ದಾರೆ ? ಈ ಕಡೆಯ ಸದಸ್ಯರನ್ನು ಕುರಿತು ತಾವು ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ನೀವು ನಗುವುದನ್ನು ನೋಡುತ್ತಿದ್ದೇನೆ, ಕೂತ್ಕೊಳ್ಳಿ ಗೊತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಕೂತ್ಕೊಳ್ಳಿ ಮೊದಲು.

ಉಪಾಧ್ಯಕ್ಷರು.—ನೇರವಾಗಿ ನಿಮಗೆ ಅವರು, ಅವರಿಗೆ ನೀವು ಮಾತನಾಡುವುದು ಸರಿಯಲ್ಲ. ಈಗ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಹೇಳಲಿ.

ಶ್ರೀ ಎಂ. ರಾಮಪ್ಪ.—ಅವರು ಬೇರೆಯವರ ಮೇಲೆ ಈ ರೀತಿ ಹೇಳಬಾರದು. ಅವರಿಗೆ ತಾವು ಬುದ್ಧಿವಾದ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ತಮ್ಮಿಂದ ನಾನು ಬುದ್ಧಿವಾದ ಕಲಿಯಬೇಕಾಗಿಲ್ಲ.

ಶ್ರೀ ಎಂ. ರಾಮಪ್ಪ.—ಅವರೊಬ್ಬರಿಗೇ ಈ ಮಾನ ಸೀಮಿತವಾಗಿದೆಯೇ ? ಏನು ಬೇಕಾದರೂ ಅವರು ಮಾತನಾಡಬಹುದಾ ? ಅವರು ಲಿಮಿಟ್‌ನಲ್ಲಿರುವುದಕ್ಕೆ ಆದೇಶ ಕೊಡಿ.

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಮುಂದುವರೆಸಬೇಕು.

ಶ್ರೀ ಟಿ.ಎನ್. ನರಸಿಂಹ ಮೂರ್ತಿ.—ಮಾನ್ಯ ಸದಸ್ಯರುಗಳು ಮಾತನಾಡುವಾಗ ಮಧ್ಯೆ ಎದ್ದು ನಾನು ಒಂದು ಸಲವೂ ಮಾತನಾಡಲಿಲ್ಲ. ನನ್ನ ಉತ್ತರದಲ್ಲಿ ತಮಗೆ ಯಾವುದೇ ತರಹದ ಶಂಕೆ ಬಂದಾಗ ಸ್ಪಷ್ಟೀಕರಣ ಕೇಳಿದರೆ ತಮಗೆ ಉತ್ತರ ಹೇಳುತ್ತೇನೆ. ನಾನಾದರೂ ಹೇಳುತ್ತಿದ್ದೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಜನತೆಗೆ ಏನೆಲ್ಲಾ ಭರವಸೆಗಳನ್ನು ಕೊಟ್ಟಿದ್ದೇವೆ ಅದರಂತೆ ನಡೆದುಕೊಳ್ಳಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ಪಟ್ಟಣ ಪ್ರದೇಶದ ಜನರಿಗೆ ಕುಡಿಯುವ ನೀರಿಗೆ ಆದ್ಯತೆ ಕೊಟ್ಟಿದ್ದೇವೆ ಎಂದು ಹೇಳುವಾಗ, ಯಾವ ಯಾವ ಭಾಗಗಳಿಗೆ ಹಣ ಕೊಟ್ಟಿದ್ದೇವೆ ಎಂಬುದನ್ನು ಹೇಳುವ ಸಂದರ್ಭದಲ್ಲಿ ಮಧ್ಯದಲ್ಲಿ ಸ್ವಲ್ಪ ಗಲಾಟೆಯಾಯಿತು. ಮತ್ತೆ ಇದನ್ನು ಹೇಳುತ್ತಿದ್ದೇನೆ. ಅರಸೀಕೆರೆ ವಾಟರ್‌ಸಪ್ಲೈ ಸ್ಕೀಮಿಗೆ ಸುಮಾರು ನಾಲ್ಕೂವರೆ ಕೋಟಿ ರೂಪಾಯಿ ಕೊಟ್ಟಿದ್ದೇವೆ. ತಿಪಟೂರು ವಾಟರ್‌ಸಪ್ಲೈ ಸ್ಕೀಮಿಗೆ ೩ ಕೋಟಿ ೬೦ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ತುಮಕೂರು ವಾಟರ್‌ಸಪ್ಲೈ ಸ್ಕೀಮಿಗೆ ಸುಮಾರು ೧೦ ಕೋಟಿ ರೂಪಾಯಿಗಳನ್ನು, ಚಿಕ್ಕಮಗಳೂರು ಯಗಚಿ ವಾಟರ್‌ಸಪ್ಲೈ ಸ್ಕೀಮಿಗೆ ಸುಮಾರು ಏಳೂವರೆ ಕೋಟಿ ರೂಪಾಯಿಗಳನ್ನು ಹಾಸನ ವಾಟರ್‌ಸಪ್ಲೈ ಸ್ಕೀಮಿಗೆ ಸುಮಾರು ಮೂರೂವರೆ ಕೋಟಿ ರೂಪಾಯಿಗಳನ್ನು, ಸಂಜನಗೂಡು ವಾಟರ್‌ಸಪ್ಲೈ ಸ್ಕೀಮಿಗೆ ೫೫ ಲಕ್ಷ ರೂಪಾಯಿಗಳನ್ನು. ಚಿತ್ತಾಪುರ ವಾಟರ್‌ಸಪ್ಲೈ ಸ್ಕೀಮಿಗೆ ೮೬ ಲಕ್ಷ ರೂಪಾಯಿಗಳನ್ನು, ಸೇಡಂ ವಾಟರ್‌ಸಪ್ಲೈ ಸ್ಕೀಮಿಗೆ ೯೯ ಲಕ್ಷ ರೂಪಾಯಿಗಳನ್ನು. ಹುಬ್ಬಳ್ಳಿ ಧಾರವಾಡ ವಾಟರ್‌ಸಪ್ಲೈ ಸ್ಕೀಂಗೆ ಸುಮಾರು ಆರೂವರೆ ಕೋಟಿ ರೂಪಾಯಿಗಳನ್ನು, ಬೈಂದೂರು ವಾಟರ್‌ಸಪ್ಲೈ ಸ್ಕೀಮಿಂಗೆ ೪೦ ಲಕ್ಷ ರೂಪಾಯಿಗಳನ್ನು, ಉಡುಪಿ ವಾಟರ್‌ಸಪ್ಲೈ ಸ್ಕೀಂಗೆ ಸುಮಾರು ೧ ಕೋಟಿ ರೂಪಾಯಿಗಳನ್ನು ಈ ಸಾರಿ ಬಜೆಟ್‌ನಲ್ಲಿ ಕೊಟ್ಟಿದ್ದೇವೆ ಈ ಎಲ್ಲವನ್ನೂ ಒಂದೇ ವರ್ಷದಲ್ಲಿ ಎಲ್ಲಾ ಮುಗಿಸುತ್ತೇವೆಂದಲ್ಲ. ನಾವು ಈ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಈಗ ಕೆಲವು ಯೋಜನೆಗಳು ಅದು ಮಂಗಳೂರಾಗಿರಬಹುದು, ಬೆಳಗಾಂ ಆಗಿರಬಹುದು. ಹುಬ್ಬಳ್ಳಿ–ಧಾರವಾಡ ಆಗಿರಬಹುದು, ಕಮರುಲ್ ಇಸ್ಲಾಂ ಅವರು ಬರತಕ್ಕ ಗುಲ್ಬರ್ಗದ ಭೀಮಾ ನದಿ ಯೋಜನೆ ಆಗಿರಬಹುದು. ಎರಡು ಮೂರು ವರ್ಷಗಳಲ್ಲಿ ಮುಗಿಯತಕ್ಕ ಕಾರ್ಯಕ್ರಮಗಳಿವೆ. ಈ ವರ್ಷದ ಬಜೆಟ್‌ನಲ್ಲಿ ಈ ಎಲ್ಲದಕ್ಕೂ ಆಡಳಿತಾತ್ಮಕವಾದ ಮಂಜೂರಾತಿ ಕೊಟ್ಟು ಸುಮಾರು ೧೭.೧೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದಕ್ಕೆ ಎಷ್ಟೇ ಹಣ ಬೇಕಾದರೂ ಕೂಡ ಬೆಗ್, ಬಾರೋ, ಸ್ಟೀಲ್ ಎಂದು ಹೇಳಿ ಈ ಕಾರ್ಯಕ್ರಮವನ್ನು ಮಾಡಿಮುಗಿಸುತ್ತೇವೆಂಬ ಮಾತನ್ನು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಅನೇಕ ಪಟ್ಟಣ ಪ್ರದೇಶಗಳಲ್ಲಿ ಕಾಂಗ್ರೆಸ್ (ಐ) ಪಕ್ಷ ಅಧಿಕಾರಕ್ಕೆ ಬಂದಿವೆ. ಬೆಂಗಳೂರು ಮಹಾನಗರ ಪಾಲಿಕೆ ಆಗಿರಬಹುದು, ಹುಬ್ಬಳ್ಳಿ–ಧಾರವಾಡ, ಮೈಸೂರು, ಮಂಗಳೂರು, ಗುಲ್ಬರ್ಗ ನಗರಸಭೆ ಆಗಿರಬಹುದು, ಈ ಎಲ್ಲ ಕಡೆ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದಿದೆ. ಜನತೆಯ ವಿಶ್ವಾಸದಿಂದ ನಮ್ಮ ಪಕ್ಷ ಅಲ್ಲೆಲ್ಲ ಬಂದಿದೆ ಎಂದು ಹೇಳುತ್ತಿದ್ದೇನೆ. ನಗರಸಭೆ ಇರಬಹುದು, ಪುರಸಭೆ ಇರಬಹುದು, ನಗರಮಹಾ ಪಾಲಿಕೆ ಇರಬಹುದು, ಜನರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಈ ಕಾರ್ಯಕ್ರಮಗಳನ್ನು ಜಾರಿಗೆ ಕೊಡುತ್ತಾರೆಂಬ

ವಿಶ್ವಾಸದಿಂದ ಬೆಂಬಲ ಕೊಟ್ಟಿದ್ದಾರೆ. ತಾವು ಆದ್ದರಿಂದ ಈ ದಿಶೆಯಲ್ಲಿ ಹೆಜ್ಜೆಯನ್ನಿಟ್ಟಿದ್ದೇವೆಂದು ಹೇಳಿದರೆ ಯಾರೂ ಕೂಡ ಕೋಪ ಮಾಡಿಕೊಳ್ಳಬಾರದು.

ನೀವು ನಾವೆಲ್ಲಾ ಸೇರಿ ಈ ಕಾರ್ಯಕ್ರಮ ಮಾಡೋಣ. ಇದು ಜನತೆಗೆ ಮಾಡುವ ಕಾರ್ಯಕ್ರಮವೇ ಹೊರತು ಪಕ್ಷಕ್ಕೆ ಮಾಡುವ ಕಾರ್ಯಕ್ರಮ ಅಲ್ಲ, ಇವನ್ನು ಜಾರಿಗೆ ಕೊಡುವಾಗ ನಿಮ್ಮೆಲ್ಲರ ಒಂದು ಸಹಕಾರ ಬೆಂಬಲ ಕೋರಿ ಯಾವ ಒಂದು ಸ್ಕೀಮನ್ನು ನಾವು ಕೈಗೊಂಡಿದ್ದೇವೆ, ಅದಕ್ಕೆ ಹಣ ಕೊಡುವುದು, ಆ ಕಾರ್ಯಕ್ರಮಗಳನ್ನು ಅವಧಿಯಲ್ಲಿ ಮುಗಿಸುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಪ್ರಾಮಾಣಿಕವಾದ ಭರವಸೆಯನ್ನು ಈ ಸಭೆಗೆ ಕೊಡುತ್ತಿದ್ದೇನೆ. ಈ ಮಧ್ಯೆ ನಮಗೆ ಫೆಬ್ರುವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಮಳೆ ಕೈಕೊಟ್ಟಿತು. ಮಳೆ ಬರುವ ಸೂಚನೆ ಇದ್ದರೂ ಬರಲಿಲ್ಲ. ಈ ಸಮಯದಲ್ಲಿ ಮಂಗಳೂರಿನ ನೇತ್ರಾವತಿ ನದಿ ನೀರು ಕಡಿಮೆ ಆದಾಗ ಕುಡಿಯುವ ನೀರಿನ ಬಗ್ಗೆ ಮಂಗಳೂರಿನ ಶಾಸಕರು ಮುಖ್ಯಮಂತ್ರಿಗಳು ಹಾಗೂ ನಮ್ಮ ಹತ್ತಿರ ನಿಯೋಗ ಬಂದರು. ಆ ಬಗ್ಗೆ ಗಮನಹರಿಸಿ ನಾವು ಕುಡಿಯುವ ನೀರಿನ ಬಗ್ಗೆ ವ್ಯವಸ್ಥೆ ಮಾಡಿದ್ದೇವೆ. ಹುಬ್ಬಳ್ಳಿ-ಧಾರವಾಡಕ್ಕೆ ಮಲಪ್ರಭಾ ನೀರು ಬರುತ್ತದೆ. ಈ ನದಿಯಲ್ಲೂ ಕೂಡಾ ನೀರು ಕಡಿಮೆ ಆಗಿದೆ. ಯಾದ್ಗಿರ್‌ನಲ್ಲಿ ಕೂಡಾ ಕುಡಿಯುವ ನೀರಿನ ಸಮಸ್ಯೆ ಬಂದಾಗ ನಾವು ಯುದ್ಧಗತಿಯಿಂದ ಟ್ಯಾಂಕ್‌ಗಳ ಮೂಲಕ ನಾವು ನೀರನ್ನು ಸಪ್ಲೈ ಮಾಡಿದ್ದೇವೆ. ಎಲ್ಲ ಕಡೆ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ನೀರನ್ನು ಒದಗಿಸಿದ್ದೇವೆ. ಕುಡಿಯುವ ನೀರಿಗಾಗಿ ಎಷ್ಟೇ ಖರ್ಚು ಆದರೂ ಚಿಂತೆ ಇಲ್ಲ ಎಂದು ಹೇಳಿ ೧೯೮೯-೯೦ನೇ ಸಾಲಿನಲ್ಲಿ ಹಣವನ್ನು ಧಾರಾಳವಾಗಿ ಒದಗಿಸಿದ್ದೇವೆ. ಜನರಿಗೆ ತೊಂದರೆಯಾಗಬಾರದು ಎಂದು ೫ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಒದಗಿಸಿದ್ದೇವೆ, ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆಗೆ ಎರಡೂವರೆ ಕೋಟಿ ಹಾಗೂ ಪಟ್ಟಣ ಪ್ರದೇಶಕ್ಕೆ ಕುಡಿಯುವ ನೀರಿನ ಯೋಜನೆಗೆ ಎರಡೂವರೆ ಕೋಟಿ ರೂಪಾಯಿ ಕೊಟ್ಟು ನಾಗರೀಕರಿಗೆ ತೊಂದರೆ ಆಗದಹಾಗೆ ನೋಡಿಕೊಂಡಿದ್ದೇವೆ. ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಏನಿವೆ ಅವನ್ನು ಪೂರ್ಣಗೊಳಿಸುವುದಕ್ಕೆ ನಾವು ಪ್ರಯತ್ನ ಪಡುತ್ತಿದ್ದೇವೆ. ಗುಲ್ಬರ್ಗಾ ನಗರದ ಕುಡಿಯುವ ನೀರಿಗಾಗಿ ಕೃಷ್ಣಾದಿಂದ ಒದಗಿಸಲು ಏನು ಹಣ ಇಟ್ಟಿದ್ದೀರಿ ಅದು ಸಾಲುವುದಿಲ್ಲವೆಂದು ಕಮರುಲ್ ಇಸ್ಲಾಮ್ ಅವರು ಪ್ರಸ್ತಾಪ ಮಾಡಿದರು. ನಾನು ಈ ಬಗ್ಗೆ ಅವರಿಗೆ ಭರವಸೆ ಕೊಡುತ್ತೇನೆ. ನಾನು ನಿಮ್ಮ ನಗರಕ್ಕೆ ಬಂದಿದ್ದೇನೆ. ಅಲ್ಲಿ ಅಧ್ಯಯನ ಮಾಡಿದ್ದೇನೆ. ೧೯೯೧-೯೨ರೊಳಗೆ ಆ ಪ್ರಾಜೆಕ್ಟ್ ಮುಗಿಸುವುದಕ್ಕೆ ನಾವು ತೀರ್ಮಾನ ತೆಗೆದು ಕೊಂಡಿದ್ದೇವೆ. ಏನೇ ಬರಲಿ, ಈ ಕಾರ್ಯಕ್ರಮ ಮುಗಿಸುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ. ನಾನು ಇದೇ ಒಂದು ಇಲಾಖೆಯಲ್ಲಿ ಮುಂದುವರೆದರೆ, ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಏನಿವೆ ಅವುಗಳನ್ನು ಪ್ರೈಯಾರಿಟಿ ಬೇಸಿಸ್ ಮೇಲೆ ಸ್ಟಿಮ್ಯುಲೇಟೆಡ್ ಟೈಮ್‌ನಲ್ಲಿ ಮುಗಿಸುತ್ತೇವೆಂದು ಭರವಸೆ ಕೊಡುತ್ತೇನೆ. ನಾವು ಆನ್ ಗೋಯಿಂಗ್ ಪ್ರಾಜೆಕ್ಟ್ಸ್‌ಗೆ ಹಣ ಕೊಟ್ಟಿದ್ದೇವೆ. ಇನ್ನು ಒಳಚರಂಡಿ ಬಗ್ಗೆ ಹೇಳಬೇಕೆಂದರೆ ಗದಗ್‌ನಲ್ಲಿ ಈ ವ್ಯವಸ್ಥೆ ಆಗಬೇಕೆಂದು ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದಾರೆ ಅವರೂ ಕೂಡಾ ನಮ್ಮ ಕ್ಯಾಬಿನೆಟ್‌ನಲ್ಲಿ ಇದ್ದಾರೆ. ಇವತ್ತು ಹಣಕಾಸಿನ ಮುಗ್ಗಟ್ಟು ಇರುವುದರಿಂದ ಒಳಚರಂಡಿ ವ್ಯವಸ್ಥೆಯನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಯಾದ್ಗಿರ್‌ನ ಕುಡಿಯುವ ನೀರಿನ ಬಗ್ಗೆ ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ ಮಲಕರೆಡ್ಡಿಯವರೂ ಹೇಳಿದ್ದಾರೆ. ಮತ್ತೆ ಮಾನ್ಯ ಸದಸ್ಯರು ಮಾತನಾಡುವ ಸಮಯದಲ್ಲಿ ಕರ್ನಾಟಕ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನಲ್ಲಿ ಆಡಳಿತ ಯಂತ್ರ ಚುರುಕಾಗಿಲ್ಲ, ಅಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಎಂದು ಕೇಳಿದರು. ಇದನ್ನು ಒಪ್ಪುತ್ತೇನೆ. ಇವತ್ತು ಯಾರು ಇಲ್ಲಿ ಛೇರ್ಮನ್ ಮತ್ತು ಮೇನೇಜಿಂಗ್ ಡೈರೆಕ್ಟರ್ ಇದ್ದಾರೆ, ಅವರು ಐಎಎಸ್ ಇದ್ದು ಒಳ್ಳೆಯ ತಜ್ಞರು ಇದ್ದಾರೆಂದು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ, ಆದರೆ ಅವರಿಗೆ ಟೆಕ್ನಿಕಲ್ಲಾಗಿ ಅವರಿಗೆ ಅರ್ಹತೆ ಇಲ್ಲದೇ ಇರಬಹುದು. ಈ ಬಗ್ಗೆ ನಾವು ಈಗಾಗಲೇ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ, ಹೌಸಿಂಗ್ ಕಮಿಷನರ್ ಜೊತೆ ಮಾತನಾಡಿದ್ದೇನೆ. ಒಬ್ಬ ತಜ್ಞರನ್ನು, ಸೂಪರ್ ಟೈಮ್ ಸ್ಕೇಲ್ ಕೊಟ್ಟು ಈ ಪೋಸ್ಟ್‌ಗೆ ನೇಮಕ ಮಾಡಬೇಕೆಂದು ಹೇಳಿದ್ದೇನೆ. ಇದು ಮಾಡಲೇಬೇಕಾದ ಕೆಲಸ ಆಗಿರುವುದರಿಂದ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಅಧಿವೇಶನ ಮುಗಿಯುವುದರೊಳಗೆ ಅಥವಾ ಅದರ ತರುವಾಯ ಅಲ್ಲಿಗೆ ಸಮರ್ಥರಾಗಿರುವ ತಾಂತ್ರಿಕ ಹಿನ್ನೆಲೆ ಇರುವ ಮೇನೇಜಿಂಗ್ ಡೈರೆಕ್ಟರ್‌ರವರನ್ನು ನೇಮಿಸುತ್ತೇನೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಸೂಪರಿಂಟೆಂಡೆಂಟ್ ಎಂಜಿನಿಯರ್ಸ್, ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳು ಇಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ನಮ್ಮ ಇಲಾಖೆಯಲ್ಲಿ ಸಿ ಅಂಡ್ ಆರ್ ರೂಲ್ಸ್ ಇಲ್ಲದೇ ಇರುವುದರಿಂದ ಬೇರೆ ಇಲಾಖೆಯಿಂದ ತೆಗೆದುಕೊಳ್ಳಬೇಕಾಗಿರುವುದರಿಂದ ಅದಕ್ಕೆ ಸರಿಯಾದ ಪ್ಯಾನಲ್ ಕಳುಹಿಸಿಕೊಡಿ ಎಂದು ಹೇಳಿ

ದ್ದೇನೆ, ನಮ್ಮಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೇ ಇರುವುದರಿಂದ ನಾವು ಕೆಲಸಕಾರ್ಯಗಳನ್ನು ಆದ್ಯತೆ ಮೇಲೆ, ತ್ವರಿತವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದ್ಯತೆ ಮೇಲೆ ಕೆಲಸಗಳನ್ನು ತ್ವರಿತಗತಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತನ್ನಿ ಎನ್ನುವ ಸಲಹೆಗಳನ್ನು ಕೊಟ್ಟಿದ್ದೀರಿ. ಈ ಬಗ್ಗೆ ಸರ್ಕಾರವನ್ನು ಎಚ್ಚರಿಸಿದ್ದೀರಿ. ಸಮಯ ಬಂದಾಗ ಸಹಕಾರ ಕೊಡುವುದಕ್ಕೂ ಸಿದ್ಧ ಎಂದು ತಾವು ಆಶ್ವಾಸನೆ ಕೊಟ್ಟಿದ್ದೀರಿ. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಸ್ಯಾಂಕ್ಷನ್ ಆಗಿರುವುವು ಮತ್ತು ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಏನು ಇವೆ ಇವುಗಳ ಬಗ್ಗೆ ನಾವು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ದಿಸೆಯಲ್ಲಿ ನಮಗೆ ನಿಮ್ಮ ಸಹಕಾರ ಬೇಕಾಗುತ್ತದೆ. ನನ್ನೊಬ್ಬನಿಂದ ಇದನ್ನು ಮಾಡಲು ಸಾಧ್ಯವಿಲ್ಲ. ನಿಮ್ಮ ಸಹಕಾರದಿಂದ ಮಾತ್ರ ಇವನ್ನು ಮಾಡುವುದಕ್ಕೆ ಸಾಧ್ಯ. ತಾವು ಜನತೆಯಿಂದ ಚುನಾಯಿತರಾಗಿ ಬಂದಿರುವ ಪ್ರತಿನಿಧಿಗಳು ಯಾವುದೇ ಪಕ್ಷದ ಶಾಸಕರಿರಲಿ, ತಾವು ಈ ಯೋಜನೆಗಳ ಬಗ್ಗೆ ತಾವೂ ಕೂಡಾ ಭಾಗಿಗಳಾಗಬೇಕಾಗುತ್ತದೆ. ನೀವು ನಮ್ಮ ಜೊತೆ ಸಹ ರಿಸಿದರೆ ಈ ಕಾರ್ಯಕ್ರಮಗಳನ್ನು ತ್ವರಿತಗತಿಯಿಂದ ನಿಗಧಿತ ಕಾಲದಲ್ಲಿ ಮುಗಿಸುವುದಕ್ಕಾಗುತ್ತದೆನ್ನುವ ಭರವಸೆ ಯನ್ನು ಕೊಡುತ್ತೇನೆ. ಈ ಒಂದು ಮಂಡಲಿ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗದೆ ಸೂಕ್ಷ್ಮವಾಗಿ ಹೇಳಿದ್ದೇನೆ. ತಾವು ಏನು ಪ್ರಸ್ತಾಪ ಮಾಡಿದ್ದೀರಿ ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳಿದ್ದೇನೆ.

ಇನ್ನು ಕರ್ನಾಟಕ ಹೌಸಿಂಗ್ ಬೋರ್ಡ್. ಮನುಷ್ಯನಿಗೆ ನೀರು ಅತಿ ಮುಖ್ಯವಾಗಿರಬೇಕು. ಪಟ್ಟಣದಲ್ಲಿರತಕ್ಕ ನಾಗರೀಕರು ಇರಬಹುದು ಅಥವಾ ಗ್ರಾಮಾಂತರ ಪ್ರದೇಶದ ಜನತೆ ಇರಬಹುದು. ಯಾರೂ ಸಹ ನೀರು ಇಲ್ಲದೆ ಬದುಕುವುದಕ್ಕೆ ಆಗುವುದಿಲ್ಲ. ಈ ನೀರಿನಷ್ಟೇ ಆದ್ಯತೆಯನ್ನು ನಾವು ಹೌಸಿಂಗ್‌ಗೆ ಕೊಟ್ಟಿದ್ದೇವೆ. ಬಹುಶಃ ಮೊದಲು ಇದೊಂದು ನೆಸಸಿಟಿ ಅಂತ ಹೇಳುತ್ತಿದ್ದರು. It has become a basic right. ಆಗಿದೆ. ಇದು ಒಂದು ಮೂಲಭೂತ ಹಕ್ಕಾಗಿದೆ. ನಾಗರೀಕರಿಗೆ ಒಂದು ನೆರಳನ್ನು ಕೊಡತಕ್ಕ ವಿಚಾರದಲ್ಲಿ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ಮೇರೆಗೆ ಕಾರ್ಯಕ್ರಮವನ್ನು ರೂಪಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ತಮಗೆ ಗೊತ್ತಿದೆ. ೨೦ ಅಂಶಗಳ ಕಾರ್ಯಕ್ರಮ. ಶ್ರೀಮತಿ ಇಂದಿರಾಗಾಂಧಿಯವರು ಈ ರಾಷ್ಟ್ರದ ಪ್ರಧಾನಮಂತ್ರಿಗಳಾಗಿದ್ದಂತಹ ಕಾಲದಲ್ಲಿ ನಾನು ಒಮ್ಮೆ ಈ ಭಾರತದ ಪ್ರತಿನಿಧಿಯಾಗಿ ಮಲೇಷಿಯಾದಲ್ಲಿ ನಡೆದ ಅಂತರ ರಾಷ್ಟ್ರೀಯ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಶ್ರೀಮತಿ ಇಂದಿರಾಗಾಂಧಿಯವರು ಬಡವರಿಗಾಗಿ ಕೈಗೊಂಡಿದ್ದ ಈ ಕಾರ್ಯಕ್ರಮಗಳು ಅಂದರೆ ಮನೆಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮಗಳು. ಸೈಟು ಗಳನ್ನು ಕೊಡತಕ್ಕ ಕಾರ್ಯಕ್ರಮಗಳು ಏನಿದೆ ಈ ಒಂದು ಕಾರ್ಯಕ್ರಮದ ಬಗ್ಗೆ ಮಲೇಷಿಯಾದ ಬಗ್ಗೆ ಕೌಲಾಲಂಪುರದಲ್ಲಿ ನಡೆದಂತಹ ಸಮ್ಮೇಳನದಲ್ಲಿ ಹೇಳಿದಾಗ ಅಲ್ಲಿದ್ದ ಇಡೀ ಸಮೂಹವೇ ಶ್ರೀಮತಿ ಇಂದಿರಾಗಾಂಧಿಯವರ ಕಾರ್ಯಕ್ರಮವನ್ನು ಮೆಚ್ಚಿದ್ದನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳ ಬೇಕಾಗಿದೆ. ಇವತ್ತು ೧೯೭೨-೭೩ರವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ವಸತಿ ಹೀನರಿದ್ದಾರೆ ಎಂಬ ಬಗ್ಗೆ ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಸಮೀಕ್ಷೆ ಯನ್ನು ಮಾಡಿದರು. ಅವತ್ತು ೧೩ ಲಕ್ಷ ಮಂದಿ ವಸತಿ ಹೀನರಿದ್ದಾರೆಂದು ಗುರುತಿಸಲಾಯಿತು. ನಾವು ಅಂದು ಅಧಿಕಾರವನ್ನು ಬಿಡುವ ಸಮಯದಲ್ಲಿ ೧೧ ಲಕ್ಷ ೫೦ ಸಾವಿರ ಜನರಿಗೆ ಕರ್ನಾಟಕ ರಾಜ್ಯ ದಲ್ಲಿ ವಸತಿ ಸೌಕರ್ಯಗಳನ್ನು ಕೊಟ್ಟಿರುವ ಕೀರ್ತಿ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಬಂತು ಎಂಬುದನ್ನು ನಾವು ಯಾರು ಮರೆಯಬಾರದು. ಹಾಗೆಯೇ ಮನೆಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮದಲ್ಲೂ ಕೂಡ ಅಷ್ಟೇ ಆದ್ಯತೆಯ ಮೇಲೆ ಕೆಲಸ ಮಾಡಿದ್ದೆವು. ಆದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಇದನ್ನು ಎಷ್ಟು ಆದ್ಯತೆ ಮೇರೆಗೆ ಮಾಡಬೇಕಾಗಿತ್ತೋ ಆ ದಿಟ್ಟಿನಲ್ಲಿ ಆಗಲಿಲ್ಲ ಅಂತ ಹೇಳಿದಾಗ ಯಾರೂ ಬೇಜಾರು ಮಾಡಿಕೊಳ್ಳುವುದು ಬೇಡ. ಪರಿಸ್ಥಿತಿಯೂ ಹಾಗೆಯೇ ಇತ್ತು. ಹಣಕಾಸಿನ ಒಂದು ಕೊರತೆಯಿಂದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಎಂಬುದನ್ನು ಶಾಸಕನಾಗಿ ನಾನು ಅರಿತುಕೊಂಡಿದ್ದೇನೆ. ಕರ್ನಾಟಕ ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ ನಿನ್ನೆ ದಿವಸ ಕೇಂದ್ರದ ನಗರಾಭಿವೃದ್ಧಿ ಮಂತ್ರಿಗಳಾದ ಶ್ರೀ ಮುಸಲೋನಿ ಮಾರಂದ್‌ರವರು ಇದನ್ನೊಂದು ರಾಷ್ಟ್ರದ ನೀತಿಯನ್ನಾಗಿ ರೂಪಿಸಬೇಕು, ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನತೆಗೆ ಯಾವ ರೀತಿಯು ವಸತಿ ಸೌಕರ್ಯಗಳನ್ನು ಕೊಡಬೇಕು. ಮತ್ತು ಈ ಒಂದು ಕಾರ್ಯಕ್ರಮವನ್ನು ಯಾವ ರೀತಿ ಜಾರಿಗೆ ಕೊಡಬೇಕು ಎಂಬುದರ ಬಗ್ಗೆ ಜೂನ್ ೨೮ನೇ ತಾರೀಖಿನಿಂದು ಎಲ್ಲಾ ರಾಜ್ಯಗಳ ಸಂಬಂಧಪಟ್ಟ ಮಂತ್ರಿಗಳ ಸಭೆಯನ್ನು ಕರೆದಿದ್ದಾರೆ, ರೂರಲ್ ಹೌಸಿಂಗ್ ಯೋಜನೆಗೆ ಒಂದು ಹೊಸ ಶಕ್ತಿಯನ್ನು ಕೊಡಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಲಾಗುತ್ತಿರುವ ಮನೆಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಆದರೆ ಇದಕ್ಕೆ ಒಂದು ಏಜೆನ್ಸಿಯೇ ಇಲ್ಲ. ಪಟ್ಟಣ ಪ್ರದೇಶಗಳಲ್ಲಿ ಕಟ್ಟುವಂತಹ ಮನೆಗಳ ಬಗ್ಗೆ ಕರ್ನಾಟಕ

ಹೌಸಿಂಗ್ ಬೋರ್ಡ್ ಇದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪೀಪಲ್ ಹೌಸಿಂಗ್ ಸ್ಕೀಮು ಏನು ಇದೆ ಇದನ್ನು ಮಾಡುವಂತಹ ಯಾವುದೇ ಏಜೆನ್ಸಿ ಇಲ್ಲ. ಬಹುಶ: ಇದನ್ನು ತಾವುಗಳೆಲ್ಲರೂ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಭಾರಿ ಪ್ರಮಾಣದಲ್ಲಿ ಬಡವರಿಗಾಗಿ ಮನೆಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮಕ್ಕೆ ಒಂದು ವೇದಿಕೆ ಇಲ್ಲ. ಆ ಬಗ್ಗೆ ಯಾವುದೇ ಒಂದು ಸಂಸ್ಥೆ ಇಲ್ಲದೇ ಇರುವುದರಿಂದ ಈ ಬಗ್ಗೆ ಯಾವ ದಿಕ್ಕಿನಲ್ಲಿ ಹೋಗಬೇಕೆಂಬುದರ ಬಗ್ಗೆ ನಮ್ಮ ಮಂತ್ರಿಮಂಡಲದಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದು ನಮ್ಮ ಪರಿಶೀಲನೆಯಲ್ಲಿದೆ. ಕೇಂದ್ರ ಸರ್ಕಾರ ಕೂಡ ಈ ದಿಸೆಯಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸಬೇಕೆಂದು ಹೇಳುತ್ತಿರುವುದರಿಂದ ಇವತ್ತು ಈ ವಸತಿ ಸೌಕರ್ಯ ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸುವ ಬಗ್ಗೆ ನಮ್ಮ ಸರ್ಕಾರ ಆದ್ಯತೆ ಮೇರೆಗೆ ಇದನ್ನು ಕೈಗೆತ್ತಿಕೊಳ್ಳುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಈ ನಮ್ಮ ಕರ್ನಾಟಕ ಹೌಸಿಂಗ್ ಬೋರ್ಡ್ ಬಗ್ಗೆ ಇಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಮಾತನಾಡಿದ್ದಾರೆ. ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ದೇಶಪಾಂಡೆಯವರು ಅದರ ಬಗ್ಗೆ ಹೇಳಿದರು. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಶ್ರೀ ಕೆ. ಹೆಚ್. ಹನುಮೇಗೌಡರು ಹೇಳಿದರು. ಶ್ರೀ ಬೈರೇಗೌಡರು ಕೂಡ ಹೇಳಿದರು. ಗೃಹ ನಿರ್ಮಾಣ ಮಂಡಲಿಗೆ ಒಂದು ಶಸ್ತ್ರ ಚಿಕಿತ್ಸೆ ಆಗಬೇಕಾಗಿದೆ. ಅದನ್ನು ನಾನು ಮಾಡುತ್ತೇನೆ. ಅಲ್ಲಿ ಒಳ್ಳೆಯ ಅಧಿಕಾರಿಗಳನ್ನು ಇಟ್ಟು ಸರಿಯಾದ ನೀತಿಯನ್ನು ನಿರೂಪಣೆ ಮಾಡುತ್ತೇನೆ. ಕಾರವಾರದಲ್ಲಿ ಕಟ್ಟಿರುವ ಕಳಪೆ ಮನೆಗಳ ಬಗ್ಗೆ ಹೇಳಿದರು. ಅಲ್ಲಿ ೩೦ ಮನೆಗಳು ಕುಸಿದು ಬಿದ್ದಿರುವುದರಿಂದ ಆ ಆ ಬಗ್ಗೆ ತನಿಖೆ ಮಾಡಿಸಲು ಎಕ್ಸ್‌ಪರ್ಟ್ ಕಮಿಟಿ ಕೂಡ ನಾವು ಮಾಡಿದ್ದೇವೆ. ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಕೆಂಚೇನಹಳ್ಳಿಯಲ್ಲಿ ಒಂದು ಕಾಲದಲ್ಲಿ ಕೊಳಚೆ ಪ್ರದೇಶದಲ್ಲಿ ಕಟ್ಟಿಸಿರತಕ್ಕ ಮನೆಗಳು ಬಹಳ ಕಳಪೆ ದರ್ಜೆಯವುಗಳಾಗಿವೆ ಎಂಬುದಾಗಿ ನನಗೆ ವರದಿ ಬಂದಮೇಲೆ ತಕ್ಷಣವೇ ಸಂಬಂಧಪಟ್ಟ ಇಂಜಿನೀಯರ್‌ಗಳನ್ನು ಸಸ್‌ಪೆಂಡ್ ಮಾಡಬೇಕೆಂಬ ಒಂದು ಕಾರ್ಯಕ್ರಮವನ್ನೂ ಕೂಡ ನಾವು ಕೈಗೊಂಡಿದ್ದೇವೆ. ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ಸ್, ಎಗ್ಸಿಕ್ಯೂಟಿವ್ ಇಂಜಿನೀರ್ಸ್ ಹೀಗೆ ಯಾರೇ ಆಗಿರಲಿ, ಅವರನ್ನೆಲ್ಲಾ ಸಸ್‌ಪೆಂಡ್ ಮಾಡಿ ತನಿಖೆ ಮಾಡುವವರು ಇದ್ದೇವೆ ಈ ಒಂದು ಇಲಾಖೆಯಲ್ಲಿ ಸರಿಯಾದ ಇಂಜಿನಿಯರ್‌ಗಳನ್ನು ಅಂದರೆ, ಅವರು ಪ್ರಾಮಾಣಿಕರಾಗಿರಬೇಕು. ನಿಷ್ಠೆಯಿಂದ ಕೆಲಸ ಮಾಡುವವರು ಆಗಿರಬೇಕು, ಅಂತಹವರನ್ನು ತೆಗೆದು ಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇನೆ ಈ ಹೌಸಿಂಗ್‌ಬೋರ್ಡ್‌ನ ಬಗ್ಗೆ ಕೂಡ ಬಹಳ ವರ್ಷಗಳಿಂದ ಇದ್ದಂತಹ ನಿಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡತಕ್ಕ ಕಾಲ ಬಹಳ ದೂರ ಇಲ್ಲವೆಂದು ಹೇಳುತ್ತೇನೆ. ನಾನು ಈ ಖಾತೆಯ ಮಂತ್ರಿಯಾದ ಮೇಲೆ ಬಹಳಷ್ಟು ಸುಧಾರಣೆಗಳನ್ನು ಮಾಡಿದ್ದೇನೆ. ಸಾರ್ವಜನಿಕರು ಪ್ರತಿಯೊಂದು ವಿಚಾರಕ್ಕೂ ವಿಧಾನಸೌಧದ ಮೂರನೆ ಮಹಡಿಗೆ ಬರುತ್ತಾರೆ. ಹೌಸಿಂಗ್ ಬೋರ್ಡ್‌ಗೆ ಹೋದರೆ ನಮ್ಮಗಳ ಕಷ್ಟ-ಸುಖಗಳನ್ನು ಕೇಳುವವರು ಯಾರೂ ಇಲ್ಲ. ಮನೆ ಅಲಾಟ್ ಆಗಿದೆ, ಆದರೆ ಮನೆಗಳನ್ನು ಕೊಟ್ಟಿಲ್ಲ ಎಂಬುದಾದ ದೂರುಗಳನ್ನು ನನ್ನ ಹತ್ತಿರವೇ ತರುತ್ತಿದ್ದಾರೆ. ಆದಕ್ಕಾಗಿ ಈಗ ಅಲ್ಲಿರತಕ್ಕ ಆಯುಕ್ತರು ಶ್ರೀ ರಮೇಶ ಕುಮಾರ್ ಅಂತ ಏನು ಇದ್ದಾರೆ ಅವರು ಬಹಳ ಒಳ್ಳೆಯ ಅಧಿಕಾರಿ. ಕಮಿಟೆಡ್ ಆಫೀಸರ್ ಎಂಬುದಾಗಿ ನನಗೆ ಈಗಾಗಲೇ ಅರ್ಥವಾಗಿದೆ.

೬-೨೦ ಪಿ ಎಂ.

ನಾನು ಅವರಿಗೆ ಹೇಳಿದ್ದೇನೆ. ಗ್ರಿವೆನ್ಸಸ್ ಸೆಲ್ ಒಪನ್ ಮಾಡಿಯೆಂದು. ಮನೆಗಳನ್ನು ಯಾವರೀತಿ ಕಟ್ಟಬೇಕು, ಏನು ದೂರುಗಳಿವೆ ಅವುಗಳನ್ನು ಆ ಸೆಲ್‌ಗೆ ಅರ್ಜಿ ಕೊಡಬಹುದು. ಮನೆಗಳು ಅಲಾಟ್ ಆಗಿರುವವರು ಸಹ ದೂರುಗಳನ್ನು ನೇರವಾಗಿ ಗೃಹಮಂಡಲಿಯಲ್ಲಿಯೇ ಕೊಡುವಂತಹ ವ್ಯವಸ್ಥೆ ಮಾಡಲಾಗಿದೆ. ಗೃಹಮಂಡಲಿಯಲ್ಲಿ ಒಂದು ಗ್ರಿವೆನ್ಸಸ್ ಸೆಲ್ ಒಪನ್ ಮಾಡಬೇಕೆಂದು ಹೇಳಿದ ಮೇಲೆ ಒಂದು ಸೆಲ್ ಅನ್ನು ತೆರೆದಿದ್ದಾರ. ಗೃಹಮಂಡಲಿಯ ಇತಿಹಾಸ ದಲ್ಲಿಯೇ ಈ ಕೆಲಸ ಆಗಿರಲಿಲ್ಲ. ಸಾರ್ವಜನಿಕರ ದೂರುಗಳನ್ನು ಕೇಳುವುದಕ್ಕೆ ಆ ಕೆಲಸ ಮಾಡಿದ್ದೇವೆ. ಈ ದಿಶೆಯಲ್ಲಿ ಸಮರ್ಪಕವಾದ ಕೆಲಸವನ್ನು ಮಾಡಿದ್ದೇವೆ ಎನ್ನುವ ಒಂದು ಅಭಿಪ್ರಾಯ ಇದೆ. ಮತ್ತೊಂದು ವಿಚಾರವನ್ನು ಮಾನ್ಯ ದೇಶಪಾಂಡೆಯವರು ಹೇಳಿದರು, ಅವರು ಏನು ಹೇಳಿದರು ಅಂದರೆ ೧೨ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ, ಮನೆಗಳನ್ನು ಕಟ್ಟಲಿಕ್ಕೆ ನಿಮಗೆ ಜಮೀನು ಎಲ್ಲಿದೆ ಎಂದು ಕೇಳಿದರು. ಆ ಬಗ್ಗೆ ಅವರು ಪ್ರಶ್ನೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಅನೇಕ ಜನ ಮಾನ್ಯಸದಸ್ಯರು ಹೇಳಿದ್ದಾರೆ, ಇಷ್ಟೆಲ್ಲ ಮನೆಗಳನ್ನು ಕಟ್ಟಲಿಕ್ಕೆ ಯೋಚನೆ ಮಾಡಿದ್ದೀರಿ,

ಜಮೀನು ಇಲ್ಲವೆಂದು ಹೇಳುತ್ತಾರೆ ಅದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದರು. ಎಲ್ಲೆಲ್ಲಿ ಮನೆಗಳನ್ನು ಕಟ್ಟಬೇಕೆಂದು ಯೋಚನೆ ಮಾಡಿದ್ದೇವೆ, ಅಲ್ಲೆಲ್ಲ ಭೂಮಿಯನ್ನು ಪಡೆದುಕೊಳ್ಳಲಿಕ್ಕೆ ಫೈನಲ್ ನೋಟಿಫಿಕೇಶನ್ ಆಗಿದೆ. ೧೨ ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಬೇಕಾದ ಭೂಮಿ ನಮ್ಮ ಹತ್ತಿರ ಇದೆ. ಈ ಬಗ್ಗೆ ಎಚ್ಚರಿಕೆ ತೆಗೆದುಕೊಂಡು ಮನೆಗಳನ್ನು ಕಟ್ಟುತ್ತೇವೆ. ಹುಡ್ಕೋ ನೆರವಿನಿಂದ ಹಣವನ್ನು ಪಡೆಯುತ್ತೇವೆ. ಹುಡ್ಕೋ ಮತ್ತು ಎಲ್.ಐ.ಸಿ. ಯಿಂದ ಸಾಲ ಕೊಡುವಂತಹ ಹಣಕ್ಕೆ ಸರ್ಕಾರ ಗ್ಯಾರಂಟಿ ಕೊಡುತ್ತದೆ. ಆದ್ದರಿಂದ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವುಗಳನ್ನು ಹೆಚ್ಚು ಹೆಚ್ಚು ರೀತಿಯಲ್ಲಿ ಜಾರಿಗೆ ಕೊಡುವಂತಹ ರೀತಿಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆಂದು ಸಂತೋಷದಿಂದ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಹನುಮೇಗೌಡರು ಹಾಸನದಲ್ಲಿ ಕಟ್ಟಿರತಕ್ಕ ಮನೆಗಳು ಬಹಳ ಕಳಪೆ ಮನೆಗಳಾಗಿವೆ. ಅಲ್ಲಿ ಬಹಳ ಅನ್ಯಾಯವಾಗಿದೆಯೆಂದು ಹೇಳಿದರು. ಐದಾರು ವರ್ಷಗಳ ಹಿಂದೆ ಕಟ್ಟಿರತಕ್ಕ ಮನೆಗಳು ಕಳಪೆ ಮನೆಗಳು ಎಂದು ಹೇಳಿದರು. ಈ ಅಧಿವೇಶನ ಮುಗಿದ ಮೇಲೆ ನಾನು ಅವರ ಜೊತೆಯಲ್ಲಿ ಹಾಸನಕ್ಕೆ ಹೋಗುತ್ತೇನೆ. ಅವರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಏನು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ, ಏನು ತಮ್ಮ ಕ್ರೋಧ ವ್ಯಕ್ತಪಡಿಸಿದ್ದಾರೆ, ಖುದ್ದಾಗಿ ಆ ಸ್ಥಳಕ್ಕೆ ನಾನೇ ಭೇಟಿ ಕೊಟ್ಟು ನೋಡುತ್ತೇನೆ. ಏನಾದರೂ ತಪ್ಪಾಗಿದ್ದರೆ ಏನಾದರೂ ಲೋಪದೋಷಗಳು ಜರುಗಿದ್ದರೆ ಯಾರು ಅದಕ್ಕೆ ಕಾರಣರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಅವರಿಗೆ ನಾನು ಕೊಡುತ್ತೇನೆ. ಕರ್ನಾಟಕ ಗೃಹನಿರ್ಮಾಣ ಮಂಡಳಿಯವರು ಕಟ್ಟಿರತಕ್ಕ ಸಾಕಷ್ಟು ಮನೆಗಳು ಖಾಲಿ ಇವೆ. ಅವರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಸಹ ಚರ್ಚೆ ಮಾಡಿದ್ದೇವೆ. ಎಲ್ಲಿ ಮನೆಗಳನ್ನು ಕಟ್ಟಬೇಕೋ ಅಲ್ಲಿ ಕಟ್ಟಿಲ್ಲ. ಯಾವ ಪ್ರಮಾಣದ ಗುಣಮಟ್ಟದಲ್ಲಿ ಕಟ್ಟಬೇಕಾಗಿತ್ತೋ ಆ ಗುಣಮಟ್ಟದಲ್ಲಿ ಕಟ್ಟಿಲ್ಲ. ಸಾವಿರಾರು ಮನೆಗಳನ್ನು ತೆಗೆದುಕೊಳ್ಳುವವರೇ ಇಲ್ಲ, ಮನೆಗಳು ಸಿಕ್ಕಿದರೆ ಸಾಕು ಎನ್ನುವಾಗ ಮನೆಗಳು ಬೇಕಾಗಿಲ್ಲವೆಂದು ಜನ ತಾತ್ಸಾರದಿಂದಿದ್ದಾರೆಂದು ನಾನು ಸಹ ಕೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದಹಾಗೆ ಗುಣಮಟ್ಟದ ಮನೆಗಳನ್ನು ಕಟ್ಟಬೇಕು. ಮನುಷ್ಯರಿಗೆ ಎಟುಕುವ ರೀತಿಯಲ್ಲಿ ಅವುಗಳ ಬೆಲೆಯೂ ಸಹ ಇರಬೇಕು. ಇನ್ನೊಂದು ಮಾತನ್ನು ಮಾನ್ಯ ಸದಸ್ಯರುಗಳು ಮಾತನಾಡುವಾಗ ಹೇಳಿದ್ದಾರೆ, ಮನೆಗಳನ್ನು ಅಲಾಟ್ ಮಾಡುವಾಗ ಒಂದು ರೇಟ್ ಇರುತ್ತದೆ. ಅವುಗಳನ್ನು ಕೊಡುವಾಗ ಇನ್ನೊಂದು ರೇಟು ಇರುತ್ತದೆಂದು ಹೇಳಿದರು. ಏನೋ ಒಂದು ಅಂದಾಜಿನ ಮೇಲೆ ರೇಟ್ ಫಿಕ್ಸ್ ಮಾಡಿ ಅಲಾಟ್ ಮಾಡುತ್ತಾರೆ, ಅನಿವಾರ್ಯ ಕಾರಣಗಳಿಂದ ಬೆಲೆಗಳು ಜಾಸ್ತಿಯಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಬೆಲೆಯನ್ನು ಜಾಸ್ತಿ ಮಾಡಲೇಬೇಕಾಗುತ್ತದೆ. ಕಳಪೆ ಮನೆಗಳನ್ನು ಕಟ್ಟಿದರೆ ಜನಗಳು ಅವುಗಳನ್ನು ತಿರಸ್ಕಾರ ಮಾಡಿದ್ದಾರೆ. ಮನೆಗಳನ್ನು ಕಟ್ಟುವಾಗ ಗುಣಮಟ್ಟ ಕಡಿಮೆ ಮಾಡಿದ್ದರೆ, ಅದನ್ನು ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ಗೃಹಮಂಡಳಿಯವರು ಕಟ್ಟುವ ಮನೆಗಳು ಸಕಾಲದಲ್ಲಿ ಮುಗಿಯಬೇಕು, ಯೋಗ್ಯವಾದ ರೀತಿಯಲ್ಲಿರಬೇಕು, ಅವು ಜನತೆಗೆ ಹೆಚ್ಚು ಭಾರವಾಗದಹಾಗೆ ನೋಡಿಕೊಳ್ಳಲಾಗುವುದು. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಹಾಗೆ ಈ ವರ್ಷ ನೀವು ನಮ್ಮನ್ನು ಪ್ರಶ್ನೆ ಮಾಡುವ ಹಾಗೆಯೇ ಇಲ್ಲ. ಆದರೆ ಮುಂದಿನ ವರ್ಷ ಪ್ರಶ್ನೆ ಮಾಡಬಹುದು, ಟೀಕೆ ಟಿಪ್ಪಣಿ ಮಾಡಬಹುದು. ಆದ್ದರಿಂದ ನಮ್ಮ ರಾಜ್ಯದಲ್ಲಿ ವಸತಿ ಸೌಕರ್ಯವನ್ನು ಹೆಚ್ಚಿಸಲಿಕ್ಕೆ ಈ ಗೃಹಮಂಡಳಿಯನ್ನು ಪುನಶ್ಚೇತನಗೊಳಿಸಲಾಗುವುದು. ಈ ಗೃಹಮಂಡಳಿಗೆ ಹೊಸ ಶಕ್ತಿಯನ್ನು ಕೊಡುವುದಕ್ಕೆ ನಿಮ್ಮೆಲ್ಲರ ಸಹಕಾರವೂ ಸಹ ಬೇಕಾಗುತ್ತದೆ. ಇಂದಿರಾನಗರದಲ್ಲಿರುವ ಗೆಸ್ಟ್ ಹೌಸ್‌ನ ಬಗ್ಗೆ ನಾನು ತಿಳಿದುಕೊಂಡೆ. ಅದನ್ನು ಯಾರಿಗೋ ಒಬ್ಬರಿಗೆ ಕೊಟ್ಟಿದ್ದಾರೆಂದು ಮಾನ್ಯ ಬೈರೇಗೌಡರು ಹೇಳಿದ್ದಾರೆ. ಈ ಬಗ್ಗೆ ನಾನು ಭರವಸೆ ಕೊಡುವುದೇನೆಂದರೆ ಆ ವ್ಯಕ್ತಿಯ ಹೆಸರು ಹೇಳುವುದು ಬೇಡ. ಇಷ್ಟು ಭರವಸೆಯನ್ನು ಕೊಡುತ್ತೇನೆ, ಅಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ ಅಂಡರ್ ಡೀಲಿಂಗ್ಸ್ ವ್ಯವಹಾರ ನಡೆದಿದ್ದರೆ, ನಾನಾ ತರಹದ ಸಂಚು ನಡೆದಿದ್ದರೆ ಆ ಬಗ್ಗೆ ನಾನು ಹೆಚ್‌ಯುಡಿ ಸೆಕ್ರೆಟರಿಯವರ ಜೊತೆ ಮಾತನಾಡುತ್ತೇನೆ. ನಮಗೆ ಏನಾದರೂ ಅಲ್ಲಿ ವಂಚನೆ ಆಗಿರುವುದು ಕಂಡುಬಂದರೆ ದನ್ನು ಲೋಕಾಯುಕ್ತಕ್ಕೆ ಕಳುಹಿಸುವುದಕ್ಕೂ ಹಿಂಜರಿಯುವುದಿಲ್ಲ. ನಾನು ಅದರ ಬಗ್ಗೆ ತನಿಖೆ ನಡೆಸಿ ಮೂರು ತಿಂಗಳೊಳಗೆ, ಏನೆಲ್ಲ ವ್ಯವಹಾರ ನಡೆದಿದೆ ಎಂದು ಆಪಾದನೆ ಮಾಡಿದ್ದೀರಿ ಅದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಬೈರೇಗೌಡರಿಗೆ ಭರವಸೆಯನ್ನು ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ವಿಚಾರ ಆದಮೇಲೆ ಈ ಕಾರ್ಪೊರೇಷನ್‌ಗಳು, ನಗರಸಭೆಗಳು ಮತ್ತು ಪುರಸಭೆಗಳ ಬಗ್ಗೆ ಹೇಳಬೇಕಾಗಿದೆ, ಇವತ್ತು ಒಂದು ಮಾತನ್ನು ಸರ್ವೆಸಾಮಾನ್ಯವಾಗಿ ಎಲ್ಲ ಮಾನ್ಯ ಸದಸ್ಯರುಗಳು ಆಡತಕ್ಕಂಥಾದ್ದು,

ನಗರಪಾಲಿಕೆಗಳು ಅದು ಬೆಂಗಳೂರು ನಗರ ಇರಬಹುದು, ಗುಲ್ಬರ್ಗ, ಮೈಸೂರು ಯಾವುದೇ ನಗರ ಇರಬಹುದು, ನೀವು ಸಕಾಲದಲ್ಲಿ ಕೊಡುವಂಥ ಆಕ್ಟ್ರಾಯಿ ಪರಿಹಾರ ಕೊಡುತ್ತಿಲ್ಲ, ಸಕಾಲದಲ್ಲಿ ಕೊಡಬೇಕು ಅಂತ ಹೇಳಿದರು. ಇವತ್ತು ನಾನು ಜವಾಬ್ದಾರಿಯಿಂದ ಹೇಳುತ್ತೇನೆ. ೧೯೮೯–೯೦ ರೊಳಗೆ ಏನೆಲ್ಲ ಅವರಿಗೆ ಪರಿಹಾರ ಕೊಡಬೇಕಿತ್ತೋ, ಅದು ಯಾವುದೂ ಕೂಡ ಬಾಕಿ ಇಟ್ಟುಕೊಂಡಿಲ್ಲ. ಆದರೆ ಸಕಾಲದಲ್ಲಿ ಕೊಡಬೇಕೆಂದು ಹೇಳಿ ಯಾವಾಗಲೋ ಕೊಟ್ಟರೆ ಪ್ರಯೋಜನ ಇಲ್ಲ. ನಮ್ಮ ಶ್ರೀ ವಾಟಾಳ್‌ನಾಗರಾಜ್ ಅವರು ಹೇಳಿದರು ಪುರಸಭೆಗಳಲ್ಲಿ ಕಸ ಗುಡಿಸಲಿಕ್ಕೆ ಕಸಪೊರಕೆ ತೆಗೆದುಕೊಳ್ಳುವುದಕ್ಕೂ ದುಡ್ಡು ಇಲ್ಲವೆಂದು. ಇದು ಸ್ವಲ್ಪ ಉತ್ಪ್ರೇಕ್ಷೆಯ ಮಾತು ಅಷ್ಟೆ. ಕಸಪೊರಕೆಗೆ ದುಡ್ಡು ಇಲ್ಲವೆಂದರೆ, ಅವರು ಹೆಚ್ಚು ದಿವಸ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಆದರೆ ಅನೇಕ ಪುರಸಭೆಗಳು ಅದರ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು ೮–೯ ಪುರಸಭೆಗಳು ಅವರ ಆದಾಯಕ್ಕಿಂತಲೂ ಹೆಚ್ಚು ವೆಚ್ಚ ಮಾಡುತ್ತಿವೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಮುಖ್ಯವಾಗಿ ಈ ಪುರಸಭೆಗಳು ಮತ್ತು ನಗರಪಾಲಿಕೆಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ನಾನು ಉದಾಹರಣೆಯನ್ನು ಹೇಳುತ್ತೇನೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಸಕಲೇಶಪುರದ ಪುರಸಭೆಗೆ ಭೇಟಿ ಕೊಟ್ಟಿದ್ದೆ. ಸಕಲೇಶಪುರ ಒಂದೇ ಅಲ್ಲ. ಇನ್ನೂ ಅನೇಕ ಮುನಿಸಿಪಾಲಿಟಿಗಳು ಇರಬಹುದು. ಅವರು ತಮ್ಮ ಆದಾಯ ಹೆಚ್ಚುಮಾಡಿಕೊಂಡು ಇಮ್ಮೂವಬಲ್ ಪ್ರಾಪರ್ಟಿ ಮಾಡಿಕೊಂಡಿದ್ದಾರೆ, ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸಿದ್ದಾರೆ. ಬೇಕಾದಷ್ಟು ಆದಾಯ ಮಾಡುತ್ತಿದ್ದಾರೆ. ಬಹುಶಃ ತಮ್ಮ ಸ್ವಂತ ಕಾಲಮೇಲೆ ನಿಂತುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ ಎಂದು ಹೇಳಬಹುದು. ನಾನು ಈ ಸಂದರ್ಭದಲ್ಲಿ ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿಶೆಯಲ್ಲಿ ನಾವು ನೀವು ಎಲ್ಲ ಮನಸ್ಸು ಮಾಡಬೇಕಾಗುತ್ತದೆ, ಪುರಸಭೆಗಳಲ್ಲಿ ಏನು ಸೋರಿಹೋಗುತ್ತಿದೆ, ಏನೆಲ್ಲ ಬಾಕಿ ಕೊಡಬೇಕಾಗಿದೆ, ಅದು ಆಸ್ತಿ ತೆರಿಗೆ ಇರಬಹುದು, ವಾಹನ ತೆರಿಗೆ ಇರಬಹುದು, ಬೇರೆ ಯಾವುದೇ ತರಹ ತೆರಿಗೆಗಳನ್ನು ನಗರಪಾಲಿಕೆಗಳಿಗೆ ಕೊಡಬೇಕಾಗಿದ್ದರೆ, ನಾವು ನಾಗರೀಕರಿಂದ ವಸೂಲು ಮಾಡಿ, ಅವರು ಸಕಾಲದಲ್ಲಿ ತಾವು ಕೊಡಬೇಕಾದಂಥ ತೆರಿಗೆಗಳನ್ನು ಕೊಟ್ಟಿದ್ದೇ ಆದರೆ ಅವರು ತಮ್ಮ ಸ್ವಂತ ಕಾಲಿನ ಮೇಲೆ ನಿಂತುಕೊಳ್ಳುವುದಕ್ಕೆ ಅವಕಾಶವಾಗುತ್ತದೆ, ಇವತ್ತು ನಮಗೆ ಜೀವ ನಡಗುತ್ತದೆ. ಏಕೆಂದರೆ ಎಷ್ಟೋ ಪುರಸಭೆಗಳಲ್ಲಿ ತೆರಿಗೆ ವಸೂಲು ಮಾಡತಕ್ಕಂಥ ಕಾಲದಲ್ಲಿ ಪೂರ್ಣ ವಿಫಲಗೊಂಡಿದ್ದಾರೆಂಬುದು ಅಲ್ಲಿನ ರೆಕಾರ್ಡುಗಳಿಂದ ಗೊತ್ತಾಗುತ್ತದೆ. ಇನ್ನು ಮುಂದೆ ಎಲ್ಲಾ ಕಡೆಯಲ್ಲಿ ಜನರಿಂದ ಚುನಾಯಿತರಾದ ಪ್ರತಿನಿಧಿಗಳು ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಬಂದಿದ್ದಾರೆ. ಇವರೆಲ್ಲರ ಸಹಕಾರದಿಂದ ಎಲ್ಲರೂ ಕೂಡ ಪ್ರಾಮಾಣಿಕವಾಗಿ ದುಡಿದು ನಾಗರೀಕರಿಂದ ನಗರಪಾಲಿಕೆಗಳಿಗೆ ಬರುವಂಥ ತೆರಿಗೆಗಳನ್ನು ವಸೂಲುಮಾಡಿ ಅವರು ತಮ್ಮ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ. ಅವರು ಮಾತೆತ್ತಿದರೆ ವಿಧಾನಸೌಧದ ಮೂರನೇ ಮಹಡಿಗೆ ತಿರುಗಿದರೆ ಬಹುಶ: ಅವರು ತಮ್ಮ ಕರ್ತವ್ಯ ಮಾಡಿದಂತಾಗುವುದಿಲ್ಲ. ಅವರಿಗೆ ನಾವು ಅನಿವಾರ್ಯ ಕಾಲದಲ್ಲಿ ವೆಹಿಕಲ್ ಟ್ಯಾಕ್ಸ್ ಇರಬಹುದು, ಆಕ್ಟ್ರಾಯಿ ಕಂಪನ್‌ಸೇಶನ್ ಇರಬಹುದು ಗ್ರಾಂಟ್ ಇರಬಹುದು ಇದನ್ನೆಲ್ಲ ಕೊಡೋಣ. ಹಿಂದಿನ ಸರ್ಕಾರ ಬಹಳ ಕಷ್ಟಪಟ್ಟು ಹಣದ ಕೊರತೆಯಿಂದ ಸಕಾಲದಲ್ಲಿ ಹಣ ಬಿಡುಗಡೆ ಮಾಡಿಲ್ಲದೇ ಇರಬಹುದು. ಆದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ನಮ್ಮ ದಕ್ಷತೆ, ಪ್ರಾಮಾಣಿಕತೆಯಿಂದ ಇದು ಆಗಿದೆ ಎಂದರೆ ಬಹುಶಃ ಯಾರೂ ಕೂಡ ಕೋಪ ಮಾಡಿಕೊಳ್ಳಬಾರದು. ನಮ್ಮ ರಾಜ್ಯಕ್ಕೆ ಸಂಪನ್ಮೂಲಗಳನ್ನು ಹೆಚ್ಚಿಸತಕ್ಕ ಕಾಲದಲ್ಲಿ ಸರ್ಕಾರ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿರುವುದರಿಂದ, ನಮ್ಮ ನಗರಸಭೆಗಳಿಗೆ ಮತ್ತು ಪುರಸಭೆಗಳಿಗ ಹೆಚ್ಚಿನ ರೀತಿಯ ಪ್ರೋತ್ಸಾಹ ಕೊಡುತ್ತೇವೆ ಮತ್ತು ಅವರಿಗೆ ಕೊಡುವಂಥ ಅನುದಾನಗಳನ್ನು ಕೂಡ ಸಕಾಲದಲ್ಲಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಮತ್ತೆ ಹೆಚ್ಚಾಗಿ ನನಗೆ ಬಂದಂಥ ಕೂಗು ಎಂದರೆ ರಸ್ತೆಗಳ ದುರಸ್ತಿಕಾರ್ಯ, ಅದರಲ್ಲೂ ಹೆದ್ದಾರಿಗಳ ಬಗ್ಗೆ ಶ್ರೀ ಬೈರೇಗೌಡರು ಹೇಳಿದರು. ಅದು ಹೊಸೂರು ರಸ್ತೆ ಇರಬಹುದು, ರಾಜಾಜಿನಗರ ರಸ್ತೆ ಇರಬಹುದು, ರಾಜಭವನ ರಸ್ತೆ ಇರಬಹುದು, ಶ್ರೀ ಲಕ್ಕಣ್ಣ ನವರು ಒಂದು ಮಳೆ ಬಂದರೆ ರಸ್ತೆಗಳೆಲ್ಲಾ ಹಾಳಾಗುತ್ತವೆ ಎಂದು ಕೂಡ ಹೇಳಿದ್ದಾರೆ. ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರೂ ಕಳಪೆ ಮಟ್ಟದ ಕೆಲಸ ಆಗುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ನಾನು ನಿಮಗೆ ಈ ಸದನದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಎಲ್ಲಿ ಈ ರೀತಿ ಕಳಪೆ ಕೆಲಸ ಆಗುತ್ತಿದೆ, ಎಲ್ಲಿ ಸೋರಿಹೋಗುತ್ತಿದೆ, ಎಲ್ಲೆಲ್ಲಿ ಅಕ್ರಮಗಳು ನಡೆಯುತ್ತವೆ ಎಂದು ನಮ್ಮ ಗಮನಕ್ಕೆ ತರುವುದಾದರೆ ನಾನು ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಹಾಗೂ ಈ ಬಗ್ಗೆ ನಾನು ತಮಗೆ ಇಷ್ಟೇ

ಭರವಸೆಯನ್ನು ಕೊಡುತ್ತೇನೆ, ತಾವು ನೀಡುವಂಥ ಸಲಹೆಗಳಿಗೆ, ತಾವು ಕೊಡುವಂಥ ಯಾವುದೇ ತರಹ ಅಭಿಪ್ರಾಯಗಳಿಗೆ ಮನ್ನಣೆಕೊಟ್ಟು ನಾನು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆಯನ್ನು ಕೂಡ ತಮಗೆ ನೀಡುತ್ತೇನೆ.

ಮುಖ್ಯವಾಗಿ ಈ ನಗರಸಭೆಗಳು ಮತ್ತು ಪುರಸಭೆಗಳ ಬಗ್ಗೆ ಮಾತನಾಡುವಾಗ ಇವತ್ತು ಒಂದನ್ನು ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ನನಗೆ ಇಲ್ಲಿ ಬಂದಂಥ ಸಲಹೆಗಳಲ್ಲಿ, ಕೆಲವರು ಶಾಸಕರಿಗೆ ವಿಧಾನಪರಿಷತ್ತಿನ ಸದಸ್ಯರಿಗೆ ಪುರಸಭೆ ಮತ್ತು ನಗರಸಭೆಗಳಲ್ಲಿ ಸದಸ್ಯರಾಗಲಿಕ್ಕೆ ಅವಕಾಶ ಇಲ್ಲ, ಇದನ್ನು ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಮತ್ತು ಕೆಲವರು ವಿಧಾನಪರಿಷತ್ತಿನ ಸದಸ್ಯರಾಗಿರತಕ್ಕಂಥವರು ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ನಗರಾಭಿವೃದ್ಧಿ ಸಮಿತಿಗಳಲ್ಲಿ ತಮಗೆ ಅಲ್ಲಿ ಅವಕಾಶ ಇಲ್ಲವೆಂಬ ಮಾತನ್ನು ಹೇಳಿದ್ದಾರೆ, ಯಾರೂ ಇಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡದಿದ್ದರೂ, ಖುದ್ದಾಗಿ ನನ್ನ ಕೊಠಡಿಗೆ ಬಂದು ಕೆಲವರು ಹೇಳಿದ್ದರಿಂದ ಎಲ್ಲೆಲ್ಲಿ ಶಾಸಕರಾಗಿರತಕ್ಕಂಥವರು ಸ್ಥಳೀಯ ಸಂಸ್ಥೆಗಳಲ್ಲಿ ಅವರು ಸಹಸದಸ್ಯರಾಗಿ ಕೆಲಸ ಮಾಡಲಿಕ್ಕೆ ಅವಕಾಶ ಇಲ್ಲದಿದ್ದರೆ ಕಾನೂನು ಪ್ರಕಾರವಾಗಿ ತಿದ್ದುಪಡಿ ಮಾಡಿಯಾದರೂ ಶಾಸಕರು ಜಿಲ್ಲಾ ಪರಿಷತ್ತುಗಳಲ್ಲಿ ಇರುವಂತೆ ಸ್ಥಳೀಯ ಸಂಸ್ಥೆಗಳಲ್ಲಿ ಸಹ ಕೆಲಸ ಮಾಡುವಂತೆ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇನ್ನು ನಗರಾಭಿವೃದ್ಧಿ ವಿಚಾರದಲ್ಲಿ ಮಾತನಾಡುವುದಾದರೆ, ಈ ಕೊಳಚೆ ಪ್ರದೇಶಗಳ ಬಗ್ಗೆ ಹೇಳಬೇಕಾಗುತ್ತದೆ. ಇದು ನನಗೆ ಮೆಚ್ಚುಗೆಯಾದಂಥ ಹಾಗೂ ಪ್ರಿಯವಾದಂಥ ಒಂದು ಇಲಾಖೆ. ನನಗೆ ಫೆಬ್ರುವರಿ ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದು. ನಿಮಗೆ ಈ ಇಲಾಖೆ ವಹಿಸಿದ್ದೇನೆ ಎಂದು ತಿಳಿಸಿದರು. ನಾನು ಅವರಿಗೆ ವಂದನೆಗಳನ್ನು ಹೇಳಿ, ನಿಮ್ಮ ಈ ವಿಶ್ವಾಸಕ್ಕೆ ಋಣಿಯಾಗಿದ್ದೇನೆ ಎಂದು ಪತ್ರ ಬರೆದೆ. ನಾನು ಅವತ್ತೇ ಒಂದು ಕಾರ್ಯಕ್ರಮಕ್ಕೆ ಧಾರವಾಡಕ್ಕೆ ಹೋಗಿ, ಅಲ್ಲಿಂದ ಬಾಗಲಕೋಟೆ ದೋಣಿ ದುರಂತದ ಬಗ್ಗೆ ತಿಳಿದುಕೊಳ್ಳಲು ಖುದ್ದಾಗಿ ಹೋಗಬೇಕಾಗಿ ಬಂತು. ನನಗೆ ಈ ಖಾತೆ ಬಂದಾಗ ರೈಲಿನಲ್ಲಿ ಹುಬ್ಬಳ್ಳಿಗೆ ಹೋಗಿ, ಅಲ್ಲಿಂದ ಬಾಗಲಕೋಟೆಗೆ ಕಾರಿನಲ್ಲಿ ಹೋದೆ. ನಾನು ಬೆಳಿಗ್ಗೆ ಎದ್ದು ದೇವರನ್ನು ಪ್ರಾರ್ಥನೆ ಮಾಡಿ, ತಿಂಡಿ ತಿಂದು ಹುಬ್ಬಳ್ಳಿಗೆ ಹೋಗುವಂತಹ ಸಂದರ್ಭದಲ್ಲಿ ಅಲ್ಲಿಗೆ ಕಮೀಷನರ್ ಮತ್ತು ಇತರ ಅಧಿಕಾರಿಗಳು ಬಂದಿದ್ದರು. ಆಗ ಅವರಿಗೆ ನಾನು ಕೇಳಿದೆ, ನನ್ನನ್ನು ಎಲ್ಲಿಯಾದರೂ ದಾರಿಯಲ್ಲಿ ಸಿಗುವ ಒಂದು ಕೊಳಚೆ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಎಂದು ಹೇಳಿದಾಗ, ಅವರು ಹುಬ್ಬಳ್ಳಿ ನಗರದಲ್ಲಿ ಕೊಳಚೆ ಪ್ರದೇಶಕ್ಕೆ ಕರೆದುಕೊಂಡು ಹೋದರು. ಅಲ್ಲಿ ಶೌಚಾಲಯ ಕಟ್ಟಿರುವ ಕಡೆ ಹೋದೆವು ಅಲ್ಲಿನ ಶೌಚಾಲಯ ಕಟ್ಟಿ ನಾಲ್ಕೈದು ವರ್ಷಗಳಾಗಿರಬಹುದು. ಆದರೆ ಅದನ್ನು ಶುಚಿ ಮಾಡಿರಲಿಲ್ಲ. ನಾನು ಕಮೀಷನರ್ ಅವರಿಗೆ ಹೇಳಿದೆ. ಅಲ್ಲಿನ ಪರಿಸ್ಥಿತಿ ಏನಾಗಿದೆ ನೋಡಿಕೊಂಡು ಬನ್ನಿ ಎಂದು ಹೇಳಿದೆ. ಅವರು ಹೋಗಿ ನೋಡಿಕೊಂಡು ಬಂದು ನನಗೆ ಹೇಳಿದರು, ಕ್ಷಮಿಸಬೇಕು, all is not well ಎಂದು ಹೇಳಿದರು. ಅಂದರೆ, ಅಲ್ಲಿಯ ಶೌಚಾಲಯವನ್ನು ಶುಚಿ ಮಾಡಿಯೇ ಇರಲಿಲ್ಲ. ನಾನು ಅವರಿಗೆ, ಅವತ್ತೇ ಹೇಳಿದೆ. ನಾನು ಬಾಗಲಕೋಟೆಗೆ ಹೋಗಿ ವಾಪಸ್ ಬರುವುದರೊಳಗಾಗಿ ಇವುಗಳು ಕ್ಲೀನ್ ಆಗಬೇಕು ಎಂದು. ಮತ್ತೆ ಸ್ಲಮ್ ಏರಿಯಾದಲ್ಲಿ ಕಂಬ ಇದೆ, ಆದರೆ ಲೈಟ್ ಮಾತ್ರ ಇಲ್ಲ ಅದನ್ನು ಸರಿಪಡಿಸಬೇಕು ಮತ್ತು ನಾನು ವಾಪಸ್ ಬರುವಂಥ ಕಾಲದಲ್ಲಿ ಶೌಚಾಲಯಗಳ ನಿರ್ಮಲೀಕರಣಕ್ಕಾಗಿ, ಸಂಚಾರಿ ಶೌಚಾಲಯ ನಿರ್ಮಲೀಕರಣ ವಾಹನದ ವ್ಯವಸ್ಥೆ ಮಾಡಬೇಕೆಂದು ಹೇಳಿದೆ. ಅದರಂತೆ ಒಂದು ವಾರದೊಳಗಾಗಿ ಪ್ರಥಮ ಬಾರಿಗೆ ಆ ಕಾರ್ಪೊರೇಷನ್ ಸರಹದ್ದಿನಲ್ಲಿ ಈ ಒಂದು ಅನುಕೂಲ ಮಾಡಿಕೊಟ್ಟಿದ್ದಾರೆ, ಈ ರೀತಿ ಎಲ್ಲಾ ಕಡೆಗೂ ಜಾರಿಗೆ ತರುವಂಥ ಕೆಲಸವನ್ನೂ ಮಾಡಿದ್ದೇವೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೊಳಚೆ ಪ್ರದೇಶದಲ್ಲಿರತಕ್ಕ ಜನ ಭಾರತೀಯರು, ಅವರು ಮತ ಹಾಕುತ್ತಾರೆ, ಅವರಿಂದ ನಾವು ಆರಿಸಿ ಬರುತ್ತೇವೆ. ಅವರಿಗೆ ಸೌಕರ್ಯವನ್ನು ಕೊಡತಕ್ಕ ಕಾಲದಲ್ಲಿ ನಾವು ಬಹಳ ಅಸಡ್ಡೆಯಿಂದ ಇದ್ದೇವೆ. ಅವರಿಗಾಗಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಒಂದು ವೇಳೆ ಹಾಕಿಕೊಂಡಿದ್ದರೂ ಅವುಗಳನ್ನು ಸರಿಯಾಗಿ ಜಾರಿಗೆ ಕೊಟ್ಟಿಲ್ಲ, ನಾನು ಎಲ್ಲಾ ಇಲಾಖೆಗಳಿಗಿಂತಲೂ ಮೆಚ್ಚುವ ಇಲಾಖೆ ಎಂದರೆ, ಈ ಕೊಳಚೆ ನಿರ್ಮೂಲನಾ ಇಲಾಖೆ. ಈ ಜನರ ಕಲ್ಯಾಣ ಮಾಡುವಂಥ ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಗಳು ನನಗೆ ಕೊಟ್ಟಿದ್ದಾರೆ, ನನ್ನ ಜೀವನದಲ್ಲಿ ಏನಾದರೂ ಇವರ ಕಲ್ಯಾಣ ಮಾಡುವುದಕ್ಕೆ ಅವಕಾಶ ಇದೆ, ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇವತ್ತು ಭಾರತ ದೇಶದಲ್ಲಿ ಪ್ರತಿ ಪಿನೇ ಪ್ರಜೆ ಕೊಳಚೆ ಪ್ರದೇಶದಲ್ಲಿದ್ದಾನೆ, ಅವನು ನಾಗರೀಕನಾಗಿಲ್ಲ ಎನ್ನುವ ಮಾತನ್ನು ಕೇಳಿದ್ದೇವೆ. ಇವತ್ತು ಪಶ್ಚಿಮ ಬಂಗಾಳದ ಕಲ್ಕತ್ತಾ ಸಿಟಿ ಇರಬಹುದು, ಬಾಂಬೆ, ಮದ್ರಾಸ್ ಮತ್ತು ಕರ್ನಾಟಕ ಹೀಗೆ ಎಲ್ಲ ಕಡೆ ಇವು ಇವೆ,

ಪ್ರತಿ ದಿವಸ ಕೊಳಚೆ ಪ್ರದೇಶಕ್ಕೆ ಜನ ಬರುತ್ತಾರೆ. ಇವತ್ತು ನಮ್ಮ ಬೆಂಗಳೂರಿನಲ್ಲಿ ೪೦೧ ಕೊಳಚೆ ಪ್ರದೇಶಗಳು ಇವೆ. ಅದರಲ್ಲಿ ಕಾರ್ಪೊರೇಷನ್‌ನವರು, ಬಿ. ಡಿ. ಎ ನವರು ಮತ್ತು ಸ್ಲಮ್ ಕ್ಲಿಯರೆನ್ಸ್ ಬೋರ್ಡಿನವರು ಇವರುಗಳ ವ್ಯಾಪ್ತಿಯಲ್ಲಿ ಇವರು ಬರುತ್ತಾರೆ. ಅದಕ್ಕೋಸ್ಕರ ಸ್ಲಮ್ ನಲ್ಲಿರತಕ್ಕ ಜನರಿಗೆ ಈ ಬಜೆಟ್‌ನಲ್ಲಿ ಪ್ರಥಮ ಬಾರಿಗೆ ೩ ಕೋಟಿ ರೂಪಾಯಿಗಳನ್ನು, ಕೊಳಚೆ ಪ್ರದೇಶದಲ್ಲಿರತಕ್ಕ ನತದೃಷ್ಟ ಜನರಿಗೆ ವಸತಿ ಸೌಕರ್ಯವನ್ನು ಕೊಡುವುದಕ್ಕಾಗಿ ೩ ಕೋಟಿ ರೂಪಾಯಿಗಳ ಸೀಡ್ ಮನಿಯನ್ನು ಇಟ್ಟಿದ್ದೇವೆ. ಇದರ ಜೊತೆಗೆ ಇವತ್ತು ಕಮರ್ಷಿಯಲ್ ಬ್ಯಾಂಕ್‌ಗಳಿಂದ ಮತ್ತು ಸಂಬಂಧಪಟ್ಟ ಸಂಸ್ಥೆಗಳಿಂದ ಸಾಲ ಪಡೆದು ೧೦-೧೫ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿದ್ದೇವೆ. ಪಟ್ಟಣ ಪ್ರದೇಶಗಳಲ್ಲಿ ಶತಮಾನಗಳಿಂದ ವಂಚಿತರಾಗಿರತಕ್ಕಂಥ ಭಾರತೀಯರಾದ ಈ ಕೊಳಚೆ ಪ್ರದೇಶದ ಜನ ಏನಿದ್ದಾರೆ, ಇವರ ಕಲ್ಯಾಣಕ್ಕಾಗಿ ಪ್ರಗತಿಪರವಾದ ಹೆಜ್ಜೆಯನ್ನು ನಮ್ಮ ಸರ್ಕಾರ ಇಟ್ಟಿದೆ. ಹಾಗೂ ಪ್ರಪ್ರಥಮವಾಗಿ ಪ್ರಗತಿಪರವಾದ ಕಾರ್ಯಕ್ರಮವನ್ನು ರೂಪಿಸಿದೆ. ಇದು ಬರೀ ಕಾರ್ಯಕ್ರಮವಾಗಿ ಉಳಿಯದೇ, ಪ್ರಾಮಾಣಿಕವಾಗಿ ಜಾರಿಗೆ ಕೊಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇನೆ. ಇನ್ನು ಕೊಳಚೆ ಪ್ರದೇಶಗಳಲ್ಲಿ ಬಹಳ ಮುಖ್ಯವಾಗಿರುವುದು ಕುಡಿಯುವ ನೀರಿನ ವ್ಯವಸ್ಥೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ನಾನು ಮಂತ್ರಿಯಾಗಿ ಬಂದ ತಕ್ಷಣ ಟ್ಯಾಂಕ್‌ಗಳ ಮೂಲಕ ಸಪ್ಲೈ ಮಾಡಬೇಕೆಂದು ಹೇಳಿದೆ. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನವರು ಮತ್ತು ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನವರು ಈ ಕೆಲಸ ಮಾಡಿದ್ದಾರೆ. ಇನ್ನು ರಸ್ತೆಗಳ ದುರಸ್ತಿ ಮಾಡುವುದು ಮತ್ತು ಈ ಜನಗಳು ವಾಸ ಮಾಡತಕ್ಕ ಸ್ಥಳಗಳ ಶುಚಿತ್ವವನ್ನು ಕಾಪಾಡತಕ್ಕ, ಕರ್ನಾಟಕ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಏನಿದೆ, ಇದಕ್ಕೆ ಶಕ್ತಿ ಮತಷ್ಟು ಹಾಗೂ ಚೈತನ್ಯ ಬರುವಹಾಗೆ ಮಾಡಿ, ಹೊಸ ಹೊಸ ಮುಖಗಳನ್ನು ತಂದು, ಹೊಸ ಹೊಸ ಶಕ್ತಿಯನ್ನು ತಂದು, ಕೊಳಚೆ ಪ್ರದೇಶದ ನಿರ್ಮೂಲನ ಕಾರ್ಯದಲ್ಲಿ ನಂಬಿಕೆ ಇರತಕ್ಕ ಅಧಿಕಾರಿಗಳನ್ನು ತಂದಿಟ್ಟು ಕೆಲಸ ಮಾಡಬೇಕೆಂದಿದ್ದೇವೆ. ಶ್ರೀಮಾನ್ ಸಿಂಧ್ಯರವರು ಕನಕಪುರದ ಕೊಳಚೆ ಪ್ರದೇಶದಲ್ಲಿ ರತಕ್ಕ ಬಡವರಿಗೆ ಕಟ್ಟತಕ್ಕ ಮನೆಗಳು ನಿಂತು ಹೋಗಿದೆ ಎಂದು ಹೇಳಿದರು. ನಾನು ಕೂಡಲೇ ಅವರಿಗೆ ಪತ್ರ ಬರೆದೆ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದೆ. ಈಗ ಆ ಕಾರ್ಯವನ್ನು ನಮ್ಮ ಅಧಿಕಾರಿಗಳು ಮಾಡಲು ಎಲ್ಲಾ ರೀತಿಯ ಪ್ರಯತ್ನ ಮಾಡಿದ್ದಾರೆ. ಮಂಡ್ಯದಲ್ಲಿ ೪-೫ ವರ್ಷದಿಂದ ಐನೂರು ಮನೆಗಳನ್ನು ಕಟ್ಟಿದ್ದಾರೆ. ಕಂಟ್ರಾಕ್ಟರ್ಸ್ ಬಂದು ಬಿಲ್ ಕೊಟ್ಟಿಲ್ಲ ಎಂದು ಇವರು. ಅವರು ಬಿಲ್ ಕೊಡುವವರೆಗೆ ಕೆಲಸ ಮಾಡುವುದಿಲ್ಲ ಎಂದು ಕಂಟ್ರಾಕ್ಟರ್ಸ್ ಕುಳಿತಿದ್ದರು. ನಾನೇ ಖುದ್ದಾಗಿ ಜಿಲ್ಲಾಧಿಕಾರಿಗಳು, ಶಾಸಕರನ್ನು ಕರೆದುಕೊಂಡು ಹೋಗಿ ನೋಡಿದೆ. ಆತ್ಮಾನಂದನವರದ ಸಹ ಬಂದಿದ್ದರು ಈಗ ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದಾರೆ. ಆಗಸ್ಟ್ ೧೫ನೇ ತಾರೀಖು ಆ ಮನೆಗಳ ಪ್ರಾರಂಭೋತ್ಸವ ಮಾಡಲೇ ಬೇಕು ಆ ಮನೆಗಳನ್ನು ಜನಗಳಿಗೆ ಕೊಡಲೇಬೇಕೆಂದು ಹೇಳಿದ್ದೇನೆ. ಏತಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ ಎಂದರೆ ಒಂದು ಇನ್‌ವಾಲ್ವ್‌ಮೆಂಟ್, ಒಂದು ಕಮಿಟ್‌ಮೆಂಟ್ ಇರಬೇಕಾಗುತ್ತದೆ. ಈ ಕಾರ್ಯವನ್ನು ಮಾಡೇ ಮಾಡುತ್ತೇವೆ ಎಂಬ ಶತಸಿದ್ಧವಾದ ನಿರ್ಧಾರಗಳು ಇಲ್ಲದೇ ಹೋದರೆ ನಾವು ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ. ಜನತೆಯ ಕಣ್ಣೀರನ್ನು ಮಾತಿನಲ್ಲಿ ಒರೆಸುವುದಕ್ಕೆ ಸಾಧ್ಯ ಇಲ್ಲ, ಕಾರ್ಯಗತ ಮಾಡುತ್ತೇವೆಂಬ ದೃಷ್ಟಿ ಇರಬೇಕು, ಆ ದೃಷ್ಟಿಯಿಂದ ಹೆಜ್ಜೆ ಇಟ್ಟಿದ್ದೇವೆ ಎಂಬ ಮಾತನ್ನು ಹೇಳುತ್ತೇವೆ. ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನ್ನು ಮತ್ತಷ್ಟು ಸುಧಾರಣೆಗೊಳಿಸಿ, ಅದರ ಕಾರ್ಯಗಳನ್ನು ದ್ವಿಗುಣಗೊಳಿಸಿ, ಅದರ ಕಾರ್ಯಗಳನ್ನು ಸಕಾಲದಲ್ಲಿ ಮುಗಿಸಿ ಯಾರು ನೊಂದಿರತಕ್ಕಂಥ ಜನ ಇದ್ದಾರೆ, ಅವರ ಕಾರ್ಯ ಮಾಡಲಿಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಮತ್ತೊಂದು ವಿಚಾರ ಈ ಸಂದರ್ಭದಲ್ಲಿ ಹೇಳತಕ್ಕದ್ದು ಎಂದರೆ ನಮ್ಮ ಸ್ನೇಹಿತರು ಹೇಳಿದರು. ದೇಶಪಾಂಡೆಯವರು ಈಗ ಇದ್ದಿದ್ದರೆ ಚೆನ್ನಾಗಿತ್ತು. ನಾನು ಅವರ ಬಗ್ಗೆ ಬಹಳಷ್ಟು ಗೌರವ ಇಟ್ಟುಕೊಂಡಿರತಕ್ಕಂಥವನು. ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಅವರೂ ಕೂಡಾ ಒಳ್ಳೆಯ ವ್ಯಕ್ತಿ ಎಂದು ನಾನು ತಿಳಿದುಕೊಂಡಿದ್ದೇನೆ. ಅವರೂ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಮಾಡಿದ ಭಾಷಣ ಪತ್ರಿಕೆಗಳಲ್ಲಿ ಬಹಳ ದೊಡ್ಡದಾಗಿ ಬಂದಿದೆ. ಪತ್ರಿಕೆಯವರು ಬಹಳ ಚೆನ್ನಾಗಿ ವರದಿ ಮಾಡಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ನಿಮ್ಮದೂ ಬರುತ್ತದೆ. ನೀವು ಮಾತನಾಡುವುದೂ ಬರುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅವರ ಭಾಷಣ ಬಹಳ ಚೆನ್ನಾಗಿ ವರದಿಯಾಗಿದೆ. ಅವರು ಈ ಸಮಯದಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ನಗರಾಭಿವೃದ್ಧಿ ಇಲಾಖೆಯ ಕಾರ್ಯ ವೈಖರಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು, ಒಂದೇ ವರ್ಷದಲ್ಲಿ ೨೪೦೦ ಹೆಕ್ಟೇರ್ಸ್ ಭೂಮಿಯನ್ನು ಅರ್ಬನ್ ಲ್ಯಾಂಡ್ ಸಿಲೀಂಗ್ ಆಕ್ಟ್‌ನಲ್ಲಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ವರದಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೆ, ಲೋಪದೋಷಗಳು ಇದ್ದಹಾಗೆ ಇದೆ. ಈ ವರದಿಯಲ್ಲಿ ಕೆಲಸ

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಮಗೆ ಕೊಟ್ಟಿರತಕ್ಕಂಥ ವರದಿಯಲ್ಲಿ ಈ ರೀತಿ ಇದೆ. ಇದರ ಬಗ್ಗೆ ಉಪಪ್ರಶ್ನೆಗಳನ್ನು ಕೇಳಬೇಕೆಂದು ಇದ್ದೆ. ೧೯೮೮-೮೯, ೮೯-೯೦ರ ವರದಿಗಳನ್ನು ಇಟ್ಟಿದ್ದೀರಿ. ಇದರಲ್ಲಿ ಕೊಟ್ಟಿರತಕ್ಕಂಥ ಅಂಕಿಅಂಶಗಳು ಸರಿಯೋ ತಪ್ಪೋ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅದರಲ್ಲಿ ತಪ್ಪಿದೆ ಎಂದು ಗೊತ್ತಾಯಿತು. ಅದನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ ಜಿ. ಆರ್. ಸಿಂಧ್ಯಾ.—ಇವರಲ್ಲಿ ಯಾವ ಅಂಕಿ ಅಂಶಗಳು ತಪ್ಪಾಗಿದೆ. ಮತ್ತು ಸರಿಯಾಗಿರುವುದನ್ನು ಯಾವಾಗ ಕೊಡುತ್ತೀರಿ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅದನ್ನು ಸರಿಪಡಿಸುತ್ತೇನೆ. ನಾಳೆಯೇ ಹೇಳುವುದಕ್ಕೆ ಸಾಧ್ಯ ಇಲ್ಲ. ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅದನ್ನು ನಿಮಗ ಹೇಳಲೇ ಬೇಕಲ್ಲ. ಏಪ್ರಿಲ್ ೧೯೮೯ ರಿಂದ ಮಾರ್ಚ್ ೯೦ ರವರೆಗೆ ೯೬ ಕೇಸಸ್‌ನಲ್ಲಿ ಇನ್‌ವಾಲ್ವ್ ಆಗಿರತಕ್ಕಂಥ ಟೋಟಲ್ ಎಕ್‌ಸ್ಟೆಂಟ್ ೫೫.೭೫ ಹೆಕ್ಟೇರ್. ಸಾವಿರಾರು ಎಂದು ಹೇಳಿದರಲ್ಲ ಅದು ಅಲ್ಲ. ಕೇವಲ ೫೫.೭೫ ಹೆಕ್ಟೇರ್‌ಸ್‌ಗೆ ಮಾತ್ರ ಲ್ಯಾಂಡ್‌ಗೆ ಎಕ್ಸೆಂಪ್‌ಷನ್ ಸಿಕ್ಕಿದೆ. ಅದೂ ಏಪ್ರಿಲ್ ೮೯ ರಿಂದ ಮಾರ್ಚ್ ೯೦ರವರೆಗೆ, ನಮ್ಮ ಸರಕಾರ ಅಧಿಕಾರಕ್ಕೆ ಬಂದಮೇಲೆ ಅರ್ಬನ್‌ಲ್ಯಾಂಡ್ ಸೀಲಿಂಗ್ ಎಕ್ಸೆಂಪ್‌ಷನ್ ಕೊಡುವ ವಿಚಾರದಲ್ಲಿ ಬಹಳಷ್ಟು ಜನ ನಮ್ಮ ಕಚೇರಿಗಳಿಗೆ ಬರುತ್ತಿದ್ದರು. ಹುಬ್ಬಳ್ಳಿ, ಧಾರವಾಡ ಕಡೆಗಳಿಂದ ಬಂದಿದ್ದರು. ಅವರಿಗೆ ನಮ್ಮ ಮುಖ್ಯ ಮಂತ್ರಿಗಳಾದ, ವೀರೇಂದ್ರ ಪಾಟೀಲರು ಇದು ನಮ್ಮ ರಾಜ್ಯದ ಕಾನೂನು ಅಲ್ಲ. ಇದು ಕೇಂದ್ರ ಸರಕಾರದ ಕಾಯಿದೆ. ಅದಕ್ಕೋಸ್ಕರ ನಾವು ಬಂದ ಬಂದವರಿಗೆಲ್ಲಾ ಎಕ್ಸೆಂಪ್‌ಷನ್ ಕೊಡುವದಾದರೆ ಈ ಕಾನೂನೇ ಬೇಕಾಗಿಲ್ಲ ಎಂದು ಹೇಳಿದರು. ತಮಗೆ ಗೊತ್ತಿರುವ ಹಾಗೆ ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ನಮ್ಮ ಸರಕಾರಕ್ಕೆ ಯಾವುದೇ ಹೆಚ್ಚುವರಿ ಭೂಮಿ ಬಂದಿಲ್ಲ. ಇವತ್ತು ಈ ಕಾನೂನು ಇಟ್ಟುಕೊಂಡಿದ್ದರೂ ಕೂಡಾ ಏತಕ್ಕೆ ಹೆಚ್ಚುವರಿ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎಂಬುದು ಪ್ರಶ್ನೆಯಾಗಿದೆ. ಅದಕ್ಕೋಸ್ಕರ ನಮ್ಮ ರಾಜ್ಯ ಸರಕಾರ ಕ್ಯಾಬಿನೆಟ್ ಮುಂದೆ ಈ ಸಬ್ಜೆಕ್ಟ್ ತಂದು ಇದರ ಬಗ್ಗೆ ಸರಿಯಾದ ನಿಲುವು ತೆಗೆದುಕೊಳ್ಳಬೇಕು, ಇದನ್ನು ಸರಿಯಾದ ರೀತಿಯಲ್ಲಿ ತರಬೇಕು ಎಂಬ ದೃಷ್ಟಿಯಿಂದ ಕ್ಯಾಬಿನೆಟ್ ಪರಿಶೀಲನೆಗೆ ಇದನ್ನು ಇಟ್ಟು ಮುಂದೆ ಯಾವ ರೀತಿಯಾದ ಎಕ್ಸೆಂಪ್‌ಷನ್ ಕೊಡಬೇಕಾದರೂ ಆ ನೀತಿಗೆ ಅನುಸಾರವಾಗಿ ಮಾಡೋಣ ಎಂಬ ದೃಷ್ಟಿಯನ್ನು ಹೊಂದಿದೆ. ನಮ್ಮ ಸರಕಾರ ಈ ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಯಾವುದೇ ಪ್ರಕರಣಗಳಿಗೂ ಅವಕಾಶ ಕೊಟ್ಟಿಲ್ಲ, ಯಾವುದೇ ರೀತಿಯ ಅವ್ಯವಹಾರಗಳಿಗೂ ಅವಕಾಶ ಕೊಟ್ಟಿಲ್ಲ, ಮತ್ತೊಂದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಈ ಸಭೆಯಲ್ಲಿ ತಮ್ಮ ಮೂಲಕ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಸಾವಿರಾರು ಎಕರೆ ಭೂಮಿಗೆ ರಿಯಾಯಿತಿ ಕೊಟ್ಟಿದ್ದಾರೆ ಎಂದು ಏನೆಲ್ಲಾ ಪತ್ರಿಕೆಯಲ್ಲಿ ವರದಿಯಾಗಿದೆ ಅದು ಸತ್ಯಕ್ಕೆ ದೂರವಾದುದು ಎಂದು ಅದನ್ನು ಬಲವಾದ ಭಾಷೆಯಲ್ಲಿ ಅಲ್ಲಗಳೆದು ನಮ್ಮ ಸರಕಾರ ಈ ದಿಕ್ಕಿನಲ್ಲಿ ಹೋಗಿಲ್ಲ. ನಮ್ಮ ಸರಕಾರದಲ್ಲಿ ಅವ್ಯವಹಾರವಾಗಿಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಮತ್ತೊಂದು ಮುಖ್ಯವಾಗಿರತಕ್ಕದ್ದು ಎಂದರೆ ಬಿ.ಡಿ.ಎ.ನಲ್ಲಿ ಒಂದು ಎಕರೆ ಜಮೀನೂ ಕೊಟ್ಟಿಲ್ಲ ಎಂಬ ಮಾತನ್ನು ಹೇಳಿದರು. ಇದೂ ಸಹ ಬಹಳ ಚೆನ್ನಾಗಿ ಹೆಡ್‌ಲೈನ್‌ನಲ್ಲಿ ಬಂದಿದೆ. ಬಿ.ಡಿ.ಎ.ನಲ್ಲಿ ಯಾವುದೇ ರೀತಿ ಒಂದು ಎಕರೆ ಜಮೀನನ್ನೂ ಕೊಟ್ಟಿಲ್ಲ ಒಂದು ಸೈಟನ್ನೂ ಕೊಟ್ಟಿಲ್ಲ ಎಂದು ಹೇಳಿದರು. ನಾನು ಕೇಳುತ್ತೇನೆ. ಇದರ ಬಗ್ಗೆ ಮಾನ್ಯ ಉಪನಾಯಕರು ಬೇಜಾರು ಮಾಡಿಕೊಳ್ಳಬಾರದು. ಇದು ಸತ್ಯವಾಗಿ ನಡೆದಿರತಕ್ಕಂಥ ಘಟನೆಗಳು, ನಡೆದಿರತಕ್ಕಂಥ ವಿಚಾರಗಳು ನಾವು ನಮ್ಮ ಕಣ್ಣು ಎದುರಿಗೆ ನಡೆದಿರತಕ್ಕಂಥಾದ್ದು. ಪ್ರಥಮ ಬಾರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಂತಹ ಕೆಲವು ಪ್ರಕರಣಗಳ ಬಗ್ಗೆ ಕೆಲವು ಆಪಾದನೆಗಳ ಬಗ್ಗೆ ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶರಿಂದ ತನಿಖೆ ಮಾಡಿಸುವ ಬಗ್ಗೆ ಆ ಮಟ್ಟಕ್ಕೆ ಹೋಯಿತ್ತಲ್ಲ ಇದನ್ನು ಯಾರೇ ಮಾಡಿರಲಿ ಇದಕ್ಕೆ ಯಾರೇ ಹೊಣೆಯಾಗಿರಲಿ, ಇವುಗಳನ್ನು ಸುಪ್ರಿಂ ಕೋರ್ಟ್ ನ್ಯಾಯಾಧೀಶರಾದ ಶ್ರೀಮಾನ್ ಕುಲದೀಪ್‌ಸಿಂಗ್‌ರವರು ಮೂರನೇ ಮಹಡಿಯಲ್ಲಿ ಇದರ ತನಿಖೆಯನ್ನು ನಡೆಸುತ್ತಿದ್ದಾರೆ, ಬೆಂಗಳೂರು ಪ್ರಾಧಿಕಾರದಲ್ಲಿ ನಡೆದಿರತಕ್ಕಂಥ ಯಾವುದೇ ತರಹದ ಅನ್ಯಾಯಗಳು ಇರಬಹುದು, ಕಾನೂನು ಬಾಹಿರವಾಗಿ ನಡೆದಿರತಕ್ಕಂಥಾದ್ದು ಇರಬಹುದು ಅಥವಾ ಮಿತಿಮೀರಿ ನಡೆದಿರತಕ್ಕಂಥ ಯಾವುದೇ ತರಹದ ಆಪಾದನೆಗಳು ಇರಬಹುದು ಅವುಗಳನ್ನು ಯಾವುದೇ ಭಾಷೆಯಲ್ಲಿ ಹೇಳಿದರೂ ಕೂಡ ಕರ್ನಾಟಕ ರಾಜ್ಯದ ಒಂದು ಪ್ರಾಧಿಕಾರದಲ್ಲಿ ಏನೇನು ನಡೆದಿದೆ ಎನ್ನುವ ಬಗ್ಗೆ ತನಿಖೆಯನ್ನು ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶರಿಂದ ನಡೆಸುತ್ತಿರುವುದು ಇದೇ ಮೊದಲು. ಆದ್ದರಿಂದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹುಶಃ ನೀವು ಏನೆಲ್ಲ ಬಿಟ್ಟು ಹೋಗಿದ್ದಿರಿ, ಬ್ಯಾಕ್ ಲಾಗ್ ಸುಮಾರು ೮ ಸಾವಿರ

ಸೈಟುಗಳು ಕೊಡಬೇಕಾಗಿತ್ತು. ಜಾಗವೇ ಇಲ್ಲದಿದ್ದರೂ ಜಾಗ ಇದೆ ಎಂದು ಸೈಟ್ ಹಂಚಿಕೆ ಮಾಡಿದ್ದು; ಆಮೇಲೆ ಸೈಟ್ಸ್ ಅಲಾಟ್‌ಮೆಂಟ್ ಮಾಡಿ ಅವರಿಗೆ ಜಾಗ ತೋರಿಸದೆ ಇರುವುದು, ಆಮೇಲೆ ಆಲ್ಟರ್ ನೆಟೀವ್ ಸೈಟ್ಸ್‌ಗೆ ಜಾಗ ತೋರಿಸಿ ಸೈಟ್ ಕೊಡದೆ ಇರುವಂತಹದ್ದು, ಹೀಗೆ ಸುಮಾರು ೮–೧೦ ಸಾವಿರ ಸೈಟ್‌ಗಳನ್ನು ಹಿಂದಿನ ಸರ್ಕಾರದಲ್ಲಿ ಬಿ.ಡಿ.ಎ, ನವರು ಜನತೆಗೆ ಮಾಡಿರತಕ್ಕಂಥ, ವಂಚನೆ ಏನು ಇದೆ, ಇದನ್ನು ಇತಿಹಾಸದಲ್ಲಿ ಯಾರೂ ಕೂಡ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಲ್ಲಿ ಮಾಡಿದ್ದೀರಿ. ಇವತ್ತು ನಾನು ಒಂದು ಮಾತನ್ನು ಹೇಳುತ್ತೇನೆ. ಎಲ್ಲಾ ಅಧಿಕಾರಿಗಳು ಒಳ್ಳೆಯವರೆಂದು ನಾನು ಹೇಳುತ್ತಿಲ್ಲ. ಶ್ರೀಮಾನ್ ಎನ್.ಪಿ. ಸಿಂಗ್‌ರವರು ಈ ಹೆಚ್.ಯು.ಡಿ. ಕಮಿಷನರ್ ಆಗಿ ಬಂದ ಮೇಲೆ I have to say openly that he is the most competent IAS officer with intigrity and honesty. ನಾನು ಅವರನ್ನು ಮೈಸೂರಿನ ಜಿಲ್ಲಾಧಿಕಾರಿಗಳಾಗಿದ್ದಾಗ ನೋಡಿದ್ದೇನೆ. ಅವರು ಬಿ.ಡಿ.ಎ. ಅಧಿಕಾರವನ್ನು ವಹಿಸಿಕೊಂಡ ಮೇಲೆ ಅವರು ತುಂಬಾ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದ್ದಾರೆ ಅವರು ನಾನು ಮಂತ್ರಿಯಾಗಿ ಬಂದ ಮೇಲೆ ಅವರು ನನ್ನ ಇಲಾಖೆ ಕಮಿಷನರ್ ಆಗಿ ಬಂದಿರುವುದು ಒಳ್ಳೆಯದು. ನಾನು ಅವರ ಸಲಹೆಗಳನ್ನು ಮತ್ತು ಮಾರ್ಗ ದರ್ಶನವನ್ನು ಮೆಚ್ಚುತ್ತೇನೆ, ಶ್ರೀಮಾನ್ ಆರ್. ವಿ. ದೇಶಪಾಂಡೆಯವರು ಹೇಳಿದ ಹಾಗೆ ಬಿ.ಡಿ.ಎ. ಯಲ್ಲಿ ಫ್ರಾಡ್ ಏನೂ ನಡೆದಿಲ್ಲ ಜನತೆಗೆ ಮೋಸ ಏನು ಮಾಡಿಲ್ಲ. ಅವರು ಹೇಳಿದಂತೆ ಒಂದು ಸೈಟ್ ಸಹ ಕೊಟ್ಟಿಲ್ಲವೆಂದು ಹೇಳತಕ್ಕಂಥಾದ್ದು ಸರಿಯಲ್ಲ ೧೯೮೮–೮೯ರಲ್ಲಿ ಮತ್ತು ೧೯೯೦ರವರೆವಿಗೂ ಇವರ ಕಾಲದಿಂದ ಎಷ್ಟು ಸೈಟು ಬಾಕಿ ಕೊಡಬೇಕಾಗಿತ್ತೋ ಆ ಕಾರ್ಯವನ್ನು ಶ್ರೀಮಾನ್ ಎನ್.ಪಿ. ಸಿಂಗ್‌ರವರು ಈ ಬಿ.ಡಿ.ಎ. ಅಧಿಕಾರವನ್ನು ವಹಿಸಿಕೊಂಡ ಮೇಲೆ ಬಹಳ ಅಚ್ಚುಕಟ್ಟಾಗಿ ಹಿಂದಿನ ಸರ್ಕಾರದವರು ಏನು ಮಾಡಿಲ್ಲವೊ ಅದನ್ನು ಅವರು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿ ಸುಮಾರು ೭–೮ ಸಾವಿರ ಸೈಟುಗಳನ್ನು ಕೊಡುವಂತಹ ಕಾರ್ಯವನ್ನು ಅವರು ಮಾಡಿದ್ದಾರೆ. ಇನ್ನು ಇರತಕ್ಕಂಥ ಬ್ಯಾಕ್‌ಲಾಗ್‌ನ್ನು ಫಿಲಪ್ ಮಾಡುವುದಕ್ಕೆ ಅವರು ಈಗಾಗಲೇ ಸಾವಿರಾರು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಇವತ್ತು ಅನ್ ಅಥಾರೈಸ್ಡ್ ಕನ್‌ಸ್ಟ್ರಕ್ಷನ್ ಬಗ್ಗೆ...

ಶ್ರೀ ಬಿ. ಹೆಚ್. ಬನ್ನಿಕೋಡ್.—ಈ ಕಾರ್ಯವನ್ನು ಸರ್ಕಾರ ಮಾಡುತ್ತದೆಯೋ ಅಥವಾ ಅಧಿಕಾರಿಗಳು ಮಾಡುತ್ತಾರೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇವತ್ತು ಸರ್ಕಾರದ ನೀತಿ ನಿಯಮಗಳನ್ನು, ಕಾರ್ಯ ಕ್ರಮಗಳನ್ನು, ಜಾರಿ ಮಾಡುವವರು ಅಧಿಕಾರಿಗಳು. ನಾನಲ್ಲ. ಇವತ್ತು By order and in the name of the Govenor of Karnataka ಎಂದು ಅವರ ಹೆಸರಿನಲ್ಲಿ ಆಜ್ಞೆಗಳನ್ನು ಹೊರಡಿಸುವವರು ಯಾರು? ಅದನ್ನು ಯಾರು ಹೊರಡಿಸುವುದು? ಒಬ್ಬ ಅಂಡರ್ ಸೆಕ್ರೆಟರಿ ಹೊರಡಿಸುತ್ತಾರೆ. ಮಂತ್ರಿಗಳು ಹೊರಡಿಸುವುದಕ್ಕೆ ಆಗುವುದಿಲ್ಲ. ನಾನು ೧೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇನೆ ಎಂದು ಹೇಳಬಹುದು ಅದು ಭರವಸೆ ಆಗುತ್ತದೆ. ಅದೇ ಒಬ್ಬ ಅಂಡರ್ ಸೆಕ್ರೆಟರಿ ಅದಕ್ಕೆ ಸಹಿ ಹಾಕಿ ಹೊರಡಿಸಿದರೆ ಅದು ಆಜ್ಞೆಯಾಗುತ್ತದೆ. ನಮ್ಮ ರಾಷ್ಟ್ರದಲ್ಲಿರುವಂತಹ ಆಡಳಿತದ ವ್ಯವಸ್ಥೆಯನ್ನು ನಾವೆಲ್ಲ ಒಪ್ಪಿಕೊಂಡು ಬಂದಿದ್ದೇವೆ. ಆದ್ದರಿಂದ ಅಧಿಕಾರಿಗಳು ಏನು ಇದ್ದಾರೆ ಅವರ ಬಗ್ಗೆ ನಾನು ಬಹಳ ಎಚ್ಚರಿಕೆಯಿಂದ ನೋಡುತ್ತಿರುವಂತಹ ಕಾಲದಲ್ಲಿ ಒಳ್ಳೆಯ ಪ್ರಾಮಾಣಿಕ ಅಧಿಕಾರಿಗಳು ಕೆಲವರು ಇದ್ದಾರೆ. ಅದೇ ಅಧಿಕಾರಿಗಳು ಮುಂದು ವರಿಯುವುದಾದರೆ ನಾನು ನಿಮಗೆ ಏನೇನು ಭರವಸೆಗಳನ್ನು ಕೊಟ್ಟಿದ್ದೇನೋ ಆ ಎಲ್ಲಾ ಭರವಸೆಗಳನ್ನು ಜಾರಿಗೆ ಖಂಡಿತ ಕೊಡುತ್ತೇನೆ ಮತ್ತು ಆ ದಿಸೆಯಲ್ಲಿ ಪ್ರಯತ್ನ ಸಹ ಮಾಡುತ್ತೇನೆ. ಅಂತಹ ಅಧಿಕಾರಿಗಳು ಹೆಚ್ಚಾಗಲಿ ಎಂದು ನಾನು ಆಸೆ ಪಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಅಂತಹ ಅಧಿಕಾರಿಗಳನ್ನು ನೀವು ಉಳಿಸಿಕೊಳ್ಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅಂತಹ ಅಧಿಕಾರಿಗಳು ಇನ್ನೂ ಹೆಚ್ಚಾಗಲಿ.

ಶ್ರೀ ವಾಟಾಳ್ ನಾಗರಾಜ್.—ನೀವು ಸ್ವಗವೇ ನಿರ್ಮಾಣ ಮಾಡಿದ್ದೀರಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಅವರು ಬಿಟ್ಟು ಹೋಗಿರತಕ್ಕಂಥ ಕೆಲಸವನ್ನು ನಾವು ಕೈಗೊಳ್ಳಲು ಬಿ.ಡಿ.ಎ. ನವರು ಈಗಾಗಲೇ ಸುಮಾರು ೧೧೬೫ ಎಕರೆಯಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕೆಲಸ ಇವತ್ತು ಬನಶಂಕರಿ ನಾಲ್ಕನೇ ಹಂತ ಮತ್ತು ಹೆಣ್ಣೂರು ಬೆಳ್ಳೂರು ರಸ್ತೆಯಲ್ಲಿ ಎಲ್ಲಾ ಫೈನಲ್ ಆಗಿದೆ. ಈ ದರದಲ್ಲಿ ಒಟ್ಟು ೧೧೬೫ ಎಕರೆ ಜಮೀನು ಅಕ್ವೈರ್ ಮಾಡಿ ಬೆಂಗಳೂರು ನಾಗರೀಕರಿಗೆ ಸೈಟ್ ಕೊಡತಕ್ಕಂಥ ಆಂದೋಲನವನ್ನು ಮಾಡ

ಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ಆದ್ದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಏನೇನೋ ನಡೆದಿದೆ ಒಂದು ಸೈಟ್ ಕೊಟ್ಟಿಲ್ಲವೆಂದು ಹೇಳುವಂಥಾದ್ದು ಸತ್ಯಕ್ಕೆ ದೂರವಾದುದು, ಅವರು ಮಾಡಿರುವುದು ಆಧಾರರಹಿತವಾದ ಟೀಕೆ ಎಂದು ನಾನು ಹೇಳಿ ಇವತ್ತು ನಾವು ೭–೮ ಸಾವಿರ ಸೈಟ್‌ಗಳನ್ನು ಹಂಚುವ ಒಂದು ಕಾರ್ಯವನ್ನು ಕಾರ್ಯರೂಪಕ್ಕೆ ತಂದಿದ್ದೇವೆ ಇನ್ನು ಸುಮಾರು ೨೦ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗಳು ನಮ್ಮ ರಾಜ್ಯದಲ್ಲಿವೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇವು ಇವೆ ಅವು ಮೈಸೂರಿನಲ್ಲಿ ಇರಬಹುದು ಮಂಗಳೂರಿನಲ್ಲಿ ಇರಬಹುದು. ಇವುಗಳ ಪೈಕಿ ಕೆಲವು ಅಥಾರಿಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಕೆಲವು ಅಥಾರಿಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ಇಂತಹ ಅಥಾರಿಟಿಗಳನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ಅವುಗಳನ್ನು ರದ್ದು ಮಾಡಿ ಎಂದು ಕೆಲವರು ಹೇಳಿದರು. ಈಗ ಗುಲ್ಬರ್ಗ ಡೆವಲಪ್‌ಮೆಂಟ್ ಅಥಾರಿಟಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕಮ್ರುಲ್ಲಾ ಇಸ್ಲಾಮ್‌ರವರು ಹೇಳಿದರು. ಅದೇರೀತಿ ಮೈಸೂರಿನ ಅಥಾರಿಟಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಬೆಳಗಾಂ ಡೆವಲಪ್‌ಮೆಂಟ್ ಅಥಾರಿಟಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ಈ ಅಥಾರಿಟಿಗಳನ್ನು ೧೯೮೮ರಲ್ಲಿ ನಿಮ್ಮ ಸರ್ಕಾರವಿದ್ದಾಗ ಜಾರಿಗೆ ತಂದಿರಿ. ೧೯೮೮ನೇ ಇಸವಿಯಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮತ್ತು ಪ್ಲಾನಿಂಗ್ ಅಥಾರಿಟಿಯನ್ನು ಅಮಾಲ್ಗಮೇಟ್ ಮಾಡಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಎಂದು ಮಾಡಿದರು. ನಿಜ, ನಾವು ಅದಕ್ಕೆ ವರ್ಕ್ ಲೋಡ್ ಕೊಟ್ಟಿಲ್ಲ. ಬಡವರಿಗೆ ಕೆಲಸ ಮಾಡತಕ್ಕ ಯಾವುದೇ ಪ್ರಾಧಿಕಾರವನ್ನು ನಾನು ವಿರೋಧ ಮಾಡಿಲ್ಲ. ಆದರೆ ಪ್ರಾಧಿಕಾರಗಳಿಂದ ನಿರೀಕ್ಷಿತ ಮಟ್ಟಕ್ಕೆ ಕೆಲಸ ಆಗುತ್ತಿಲ್ಲ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಆದರೆ ಇನ್ನು ಮುಂದೆ ಇವು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ನಿರ್ದಿಷ್ಟವಾದ ಕಾರ್ಯಕ್ರಮ ಇಟ್ಟುಕೊಳ್ಳಬೇಕಾಗುತ್ತದೆ. ಪ್ರತಿವರ್ಷ ಇಷ್ಟು ನಾಗರಿಕರಿಗೆ ಸೈಟ್ ಕೊಡುತ್ತೇವೆ ಇಷ್ಟು ಬಡವರಿಗಾಗಿ ಸೈಟ್ ಕೊಡುತ್ತೇವೆ ಎಂಬ ಕಾರ್ಯಕ್ರಮಹಾಕಿಕೊಳ್ಳಬೇಕು. ಈ ಕಾರ್ಯಕ್ರಮದ ಬಗ್ಗೆ ಹೆಚ್ಚು ನಿಗಾವಹಿಸಿ, ಸರಕಾರದ ಕಡೆಯಿಂದ ಏನೆಲ್ಲಾ ಮಾರ್ಗದರ್ಶನ ಕೊಡಬೇಕೋ ಅದನ್ನೆಲ್ಲಾ ಕೊಟ್ಟು ಪ್ರಾಧಿಕಾರಗಳನ್ನು ರದ್ದು ಮಾಡುವ ಬದಲು ಅದರ ಬಗ್ಗೆ ನಾವು ಪರೀಕ್ಷೆ ಪ್ರಯೋಗ ಮಾಡುತ್ತೇವೆ. ಮುಂದೆ ಕೂಡಾ ಸರಿಯಾದ ಕೆಲಸ ಮಾಡದೇ ಹೋದರೆ ಏನು ಮಾಡಬೇಕೆಂಬುದು ಸರಕಾರದ ವಿವೇಚನೆಗೆ ಬಿಟ್ಟದ್ದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹಿಡಿದು ಒಟ್ಟು ೨೦ ಪ್ರಾಧಿಕಾರಗಳು ಏನಿವೆ ಅವುಗಳನ್ನು ಮತ್ತಷ್ಟು ಚೈತನ್ಯಗೊಳಿಸಿ ಅವು ಒಳ್ಳೆಯ ಕೆಲಸ ಮಾಡುವ ರೀತಿಯಲ್ಲಿ ನಮ್ಮ ಸರಕಾರ ಹೆಜ್ಜೆ ಇಡುತ್ತದೆ ಅಧಿಕಾರಕ್ಕೆ ನಾವು ಹೊಸದಾಗಿ ಬಂದಿದ್ದೇವೆ, ಮುಂದಿನ ಕೆಲಸವನ್ನು ತಾವು ಕಾದು ನೋಡಬೇಕಾಗುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಚಾರವನ್ನು ಸೂಕ್ಷ್ಮವಾಗಿ ಹೇಳಿದ್ದೇನೆ. ಕೊಳಚೆ ನಿರ್ಮೂಲನಾ ಮಂಡಲಿಯ ಬಗ್ಗೆ ಹೇಳಿದ್ದೇನೆ. ಒಟ್ಟಾರೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಹಾಗೆ ಮೀನುಗಾರಿಕೆ, ಬಂದರು ಇಲಾಖೆಗೆ ಸಂಬಂಧಪಟ್ಟಹಾಗೆ ಬಹುಶಃ ಇನ್ನೂ ಹೆಚ್ಚಿನ ಕಾಲ ಕೊಟ್ಟಿದ್ದರೆ ಮಾತನಾಡುತ್ತಿದ್ದೆ. ಕಾಲಾವಕಾಶ ಹೆಚ್ಚು ಇಲ್ಲದಿರುವುದರಿಂದ ನನಗೆ ಕೊಟ್ಟಿರತಕ್ಕಂಥ ಇತಿಮಿತಿಯಲ್ಲಿ ನಾನು ಮಾತನಾಡಿದ್ದೇನೆ.

ಶ್ರೀ ಸಿ. ಬೈರೇಗೌಡ.—ನಿಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಅದನ್ನು ರೆಫರ್ ಮಾಡಿರುತ್ತೇನೆ. ಅವರು ಪಾರ್ಲಿಮೆಂಟ್‌ನಲ್ಲಿ ಏನು ಭಾಷಣ ಮಾಡಿರುತ್ತಾರೆ ಅದನ್ನೂ ಹೇಳಿದ್ದೇನೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಕುಳಿತು ಏನು ಹೇಳಿದ್ದಾರೆ ಅದನ್ನೂ ಹೇಳಿದ್ದೇನೆ. ಇಲ್ಲಿ ನಡೆದಿರತಕ್ಕಂಥ ಭೂ ಹಗರಣಗಳ ಬಗ್ಗೆ ಏನು ಮಾಡುತ್ತೀರಿ. ವಿಚಾರಣೆ ಮಾಡುವುದಕ್ಕೆ ತಯಾರಿದ್ದೀರಾ ಅಥವಾ ಇಲ್ಲವೇ? ಶ್ರೀಮಾನ್ ದೇಶಪಾಂಡೆಯವರೂ ಇದರ ಬಗ್ಗೆ ಒಂದು ವೈಟ್ ಪೇಪರ್ ತರಬೇಕು ಇದರಲ್ಲಿ ಏನೇನಾಗಿದೆ ಎಂಬ ಬಗ್ಗೆ ವಿಚಾರಣೆ ಮಾಡಬೇಕು ಎಂಬ ಮಾತನ್ನು ಹೇಳಿದ್ದಾರೆ. ಆದರೆ ಅದರ ಬಗ್ಗೆ ನೀವು ಚಕಾರ ಎತ್ತದಿರುವ ಕಾರಣದಿಂದ ನಿಮ್ಮ ಬಗ್ಗೆ ಏನು ಹೇಳಬೇಕು? ಇದಕ್ಕೆ ನೀವು ಉತ್ತರ ಕೊಡುವುದಕ್ಕೆ ತಯಾರಾಗಿಲ್ಲವೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾನು ಪ್ರಾರಂಭದಲ್ಲೇ ಹೇಳಿದೆ. ಪ್ರತಿಯೊಬ್ಬ ಸದಸ್ಯರೂ ಹೇಳತಕ್ಕಂಥ ಪ್ರತಿಯೊಂದು ಅಭಿಪ್ರಾಯದ ಬಗ್ಗೆ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ. ನಾನು ಅರ್ಥಮಾಡಿಕೊಂಡಿದ್ದೇನೆ. ಇದನ್ನು ಗಮನಿಸಿಕೊಂಡು ಇದರ ಬಗ್ಗೆ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನಿಮ್ಮ ಮಾತನ್ನು ಮರೆತೆ ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಸಣ್ಣ ಮೋರಿ ರಿಪೇರಿ ಮಾಡಿ ಎಂದು ನಾನು ಹೇಳಲಿಲ್ಲ. ಇದು ನೂರಾರಲ್ಲ, ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ. ಸುಮಾರು ಹತ್ತುವರೆಸಾವಿರ ಎಕರೆ

ಭೂಮಿಯ ಪ್ರಶ್ನೆ ಇದು. ನಮ್ಮ ಭೂಮಿ ಕರ್ನಾಟಕದ ಭೂಮಿ, ಬೆಂಗಳೂರಿನ ಭೂಮಿ, ಬೆಂಗಳೂರಿನಲ್ಲಿರತಕ್ಕಂಥವರಿಗೆ ಸಿಗದೆ. ಕರ್ನಾಟಕದಲ್ಲಿ ಇರತಕ್ಕಂಥವರಿಗೆ ಸಿಗದೆ, ಹೊರದೇಶಗಳಲ್ಲಿ ಇರತಕ್ಕವರಿಗೆ, ಅಮೇರಿಕಾ, ಇಂಗ್ಲೇಂಡ್‌ನಲ್ಲಿರುವವರಿಗೆ ಸಿಕ್ಕಿರತಕ್ಕ ಪ್ರಶ್ನೆ. ಇದು ಸಣ್ಣ ಪ್ರಶ್ನೆ ಎಂದು ಈ ರೀತಿಯಾಗಿ ನೀವು ತಳ್ಳಿ ಹಾಕುವುದಾದರೆ ಹಾಗೂ ನೀವು ಇದಕ್ಕೆ ಉತ್ತರ ಕೊಡದೇ ಇದ್ದರೆ, ನಿಮ್ಮ ಬಗ್ಗೆ ಆಮೇಲೆ ಹೇಳಬೇಕಾಗುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ. ಏತಕ್ಕಾಗಿ ಮಾನ್ಯ ಬೈರೇಗೌಡರು ಈ ಸಂಜೆ ೭ ಗಂಟೆ ಸಮಯದಲ್ಲಿ ಈ ಮಾತನ್ನು ಆಡುತ್ತಿದ್ದಾರೋ ನನಗೆ ಗೊತ್ತಿಲ್ಲ. ನನ್ನ ಮೇಲೆ ನೀವು ಯಾವುದೇ ತರಹ ಆಕ್ಷೇಪಣೆ ಮಾಡುವುದಕ್ಕಾಗಲೀ, ಅತೃಪ್ತಿ ವ್ಯಕ್ತ ಮಾಡುವ ವ್ಯಕ್ತಿಗಳ ಶ್ರೇಣಿಗಾಗಲೀ ನಾನು ಸೇರಿದವನಲ್ಲ. ನನ್ನ ಜೀವನದ ಉಸಿರು ಇರುವವರೆಗೂ, ಆದಷ್ಟು ಮಟ್ಟಿಗೆ, ನಾನು ಸತ್ಯ ಹರಿಶ್ಚಂದ್ರನ ಮಗ ಎಂದು ಹೇಳಿಕೊಳ್ಳದೇ ಹೋದರೂ, ಕೂಡಾ ಸತ್ಯಕ್ಕೆ ಅತಿ ಸಮೀಪದಲ್ಲಿರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅಷ್ಟಕ್ಕೆ ನಾನು ಭರವಸೆ ಕೊಡುತ್ತೇನೆ. ಮಾನ್ಯ ಬೈರೇಗೌಡರು ಏನು ಪ್ರಸ್ತಾಪ ಮಾಡಿದ್ದಾರೆ, ಅದು ರೆಕಾರ್ಡ್‌ಗೆ ಹೋಗಿದೆ. ಅದನ್ನು ತರಿಸಿ ತಾವು ಏನೆಲ್ಲಾ ಪ್ರಸ್ತಾಪ ಮಾಡಿದ್ದೀರಿ, ಅಭಿಪ್ರಾಯ ಹೇಳಿದ್ದೀರಿ. ಅದನ್ನು ಪ್ರಾಮಾಣಿಕವಾಗಿ ತನಿಖೆ ಮಾಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಪಿ ಜಿ. ಆರ್ ಸಿಂಧ್ಯಾ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನರಸಿಂಹಮೂರ್ತಿಗಳು ಬಹಳ ಉತ್ಸಾಹದಿಂದ ಇದ್ದಾರೆ. ಅವರು ತಪ್ಪುಗಳನ್ನು ಮಾಡಿದ್ದಾರೆ ಎಂದು ಹೇಳುವುದು ಸರಿ ಹೋಗುವುದಿಲ್ಲ. ಮೊದಲನೇ ಸಾರಿ ಅವರು ಈ ಬೇಡಿಕೆಗಳನ್ನು ಸದನದ ಮುಂದಿಟ್ಟಿದ್ದಾರೆ. ನಾವು ಅದನ್ನು ವಿರೋಧ ಮಾಡಿದರೂ ಈ ಸಂದರ್ಭದಲ್ಲಿ ಅವರಿಗೆ ಒಳ್ಳೆಯದನ್ನೇ ಆಶೆ ಮಾಡುತ್ತೇವೆ, ಅವರು ಹೇಳಿರತಕ್ಕಂಥ ಮಾತುಗಳನ್ನು ದೀರ್ಘವಾಗಿ ಕೇಳಿರುತ್ತೇನೆ. ಸಮಯದ ಅಭಾವದಿಂದ ನಾನು ಬೇಡಿಕೆಗಳ ಬಗ್ಗೆ ಮಾತನಾಡಲಿಲ್ಲ. ಒಂದು ವಿಚಾರವನ್ನು ಮಂತ್ರಿಗಳ ಗಮನಕ್ಕೆ ಅವರಿಗೆ ನೇರವಾಗಿ ಸಂಬಂಧ ಇಲ್ಲದೇ ಹೋದರೂ ಸಹಿತ ನಾನು ತರುವುದಕ್ಕೆ ಬಯಸುತ್ತೇನೆ. ಅವರಿಗೆ ಕೆಲಸ ಮಾಡಬೇಕೆಂಬ ಉತ್ಸಾಹ ಇದೆ ಮೊನ್ನೆ ತಾನೆ ಭಾನುವಾರ, ಪತ್ರಿಕೆಯಲ್ಲಿ ಈ ವಿಚಾರ ಪ್ರಕಟ ಆಗಿದೆ. ನಮ್ಮ ಬೆಂಗಳೂರು ನಗರಪಾಲಿಕೆ ಅಧಿಕಾರಿಗಳು ಕೆಲವರು, ಮಹಾತ್ಮಾಗಾಂಧಿ ರಸ್ತೆಯಲ್ಲಿ ಹೋಗಿ, ಕುರುಡರು ಅಂಗವಿಕಲರು ಇವರುಗಳಿಗೆ ಕೊಟ್ಟಿರತಕ್ಕಂಥ ಟೆಲಿಫೋನ್ ಬೂತ್‌ಗಳನ್ನು ತೆಗೆದುಹಾಕಿ ರಾತ್ರೋ ರಾತ್ರಿ ಅವರನ್ನೆಲ್ಲಾ ಪೋಲೀಸ್ ಕಸ್ಟಡಿಗೆ ಕೊಡತಕ್ಕಂಥ ಪಾಪದ ಕೆಲಸ ಮಾಡಿದರು. ಇದಾದಮೇಲೆ ೨೪ ಗಂಟೆಯ ಒಳಗಾಗಿ ವಾಪಸ್ ತೆಗೆದುಕೊಂಡು ಹೋಗಿ ಕೊಟ್ಟರು. ವಿಧಾನಸಭೆ ನಡೆಯುತ್ತಿದೆ ಎಂಬ ಭಯದಿಂದ ಈ ರೀತಿ ಮಾಡಿರಬಹುದು. ಇವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು. ಒಂದು ಸಲ ಕ್ರಮ ತೆಗೆದುಕೊಳ್ಳದೇ ಹೋದರೆ ಇಂತಹ ಕೆಲಸ ಅವರು ಮಾಡಿಕೊಂಡೇ ಹೋಗುತ್ತಾರೆ. ತಾವು ಇದಕ್ಕೆ ಸರಕಾರದ ಪರವಾಗಿ ನೇರವಾಗಿ ಈ ಇಲಾಖೆಗೆ ಸಂಬಂಧ ಇಲ್ಲದೇ ಹೋದರೂ ಒಂದು ಭರವಸೆ ಕೊಡಬೇಕು. ಇವರ ಮೇಲೆ ಕ್ರಮ ತೆಗೆದುಕೊಳ್ಳುವ ಭರವಸೆ ಕೊಡಬೇಕು. ಇಂತಹದನ್ನು ಸರಕಾರ ಪುನರಾವರ್ತನೆ ಮಾಡುವುದಿಲ್ಲ ಎಂಬ ಬಗ್ಗೆ ತಾವು ಆಶ್ವಾಸನೆ ಕೊಡಬೇಕು.

೬–೫೦ ಪಿ.ಎಂ.

ಎರಡನೆಯದಾಗಿ ಶ್ರೀ ಎನ್ ಪಿ ಸಿಂಗ್ ಅವರ ಬಗ್ಗೆ ಹೇಳಿದಿರಿ, ಅವರು ಉತ್ತಮ ಅಧಿಕಾರಿಗಳು ಅದರ ಬಗ್ಗೆ ಸಂಶಯವಿಲ್ಲ. ನಾನು ಆರೋಗ್ಯ ಸಚಿವನಿದ್ದಾಗ ಅವರು ಆರೋಗ್ಯ ಇಲಾಖೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದಾರೆ. ಆದರೆ ನೀವು ಇಟ್ಟಿರುವ ವರದಿಯಲ್ಲಿ ಕೆಲವು ತಪ್ಪು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ವಿಚಾರಣೆ ಮಾಡಿ. ಏಕೆಂದರೆ, ವರದಿಯಲ್ಲಿ ಏನು ಹೇಳಿದ್ದಾರೆಂದರೆ, ಒಂದು ವರ್ಷದಲ್ಲೇ ೮೩೩೦ ಹೆಕ್ಟೇರ್ ಭೂಮಿಗೆ ನಗರ ಭೂಮಿತಿ ಕಾಯ್ದೆಯಿಂದ ವಿನಾಯಿತಿ ಕೊಡಲಾಗಿದೆ ಎಂದಿದೆ. ಇಷ್ಟೊಂದು ಭೂಮಿಗೆ ವಿನಾಯಿತಿ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

ಆಮೇಲೆ ಹೌಸಿಂಗ್ ಮಂತ್ರಿಗಳಾದ ನೀವು ಬಡವರಿಗೆ ನಿವೇಶನ ಕೊಡುವ ಬಗ್ಗೆ ಮಾತನಾಡುತ್ತೀರೆಂದು ನಾನು ತಿಳಿದಿದ್ದೆ. ಗ್ರಾಮೀಣ ಪ್ರದೇಶದ ಬಡವರಿಗಾಗಿ ಈ ವರ್ಷ ಎಷ್ಟು ನಿವೇಶನಗಳನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಮೂಲಕ ಕೊಡಿಸುವವರಿದ್ದೀರಿ ಮತ್ತು ಅದಕ್ಕೆ ಬೇಕಾದ ಲ್ಯಾಂಡ್ ಅಕ್ವಿಜಿಷನ್‌ಗಾಗಿ ಎಷ್ಟು ಹಣ ಈ ವರ್ಷ ಖರ್ಚು ಮಾಡುವವರಿದ್ದೀರಿ ಹಾಗೂ ನೀವು ಅನುದಾನದಲ್ಲಿ ಇದಕ್ಕಾಗಿ ಇಟ್ಟಿರುವ ಹಣ ಸಾಕೇ ಎಂಬ ಬಗ್ಗೆ ಉತ್ತರಿಸಬೇಕು. ಹಾಗೆಯೇ

ಹೌಸಿಂಗ್ ಬೋರ್ಡಿನ ಮೂಲಕ ಈ ವರ್ಷ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂದಿದ್ದೀರಿ ಅದಕ್ಕೆ ಬೇಕಾದ ಜಾಗ ಹೌಸಿಂಗ್ ಬೋರ್ಡ್ ಬಳಿ ಇದೆಯೇ ಮತ್ತು ಇದಕ್ಕೆ ಎಷ್ಟು ಜಮೀನು ಬೇಕು ಎಂಬುದನ್ನು ತಿಳಿಸಬೇಕು.

ಅನಂತರ ನನ್ನ ಕ್ಷೇತ್ರದ ಬಗ್ಗೆ ಒಂದು ಮಾತನ್ನು ಕೇಳಲೇಬೇಕು. ನಾನು ಹೇಳಿದ್ದ ಬಡವರ ಮನೆಗಳ ಬಗ್ಗೆ ನಿಮ್ಮ ಕಾರ್ಯದರ್ಶಿಗಳೇನೋ ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಕೆಲಸ ಮಾತ್ರ ಒಂದು ವರ್ಷದ ಹಿಂದೆ ಎಲ್ಲಿ ನಿಂತಿತ್ತೋ ಅಲ್ಲೇ ನಿಂತಿದೆ. ಅದನ್ನು ಯಾವಾಗ ಪ್ರಾರಂಭಿಸುತ್ತೀರಿ ಮತ್ತು ಯಾವಾಗ ಮುಗಿಸುತ್ತೀರಾ ಎಂಬುದನ್ನು ತಿಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಿಂಧ್ಯಾ ಅವರು ಅವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾನು ಡೈರೆಕ್ಷನ್ ಕೊಟ್ಟಿದ್ದರೂ ಅದು ಆಗಿಲ್ಲವೆಂದು ಹೇಳಿದ್ದಾರೆ. ಅದನ್ನು ಯಾವಾಗ ಮಾಡುತ್ತೀರಾ ಎಂದು ಕೇಳಿದ್ದಾರೆ. ಅವರ ಜೊತೆಯಲ್ಲೇ ನಮ್ಮ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅವರ ಎದುರಿಗೇ ಆ ಕೆಲಸ ಮಾಡಿಸಿಕೊಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಎರಡನೆಯದಾಗಿ ಗ್ರಾಮೀಣ ಪ್ರದೇಶದ ಜನರಿಗೆ ವಸತಿ ಕೊಡುವ ಕಾರ್ಯದಲ್ಲಿ ಲ್ಯಾಂಡ್ ಖರೀದಿಸಲು ಎಷ್ಟು ಹಣ ಇಟ್ಟಿದ್ದಾರೆಂದು ಕೇಳಿದರು. ಅದರ ಬಗ್ಗೆ ಸಂಪೂರ್ಣ ವಿವರವನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ರೂರಲ್ ಹೌಸಿಂಗ್ ಬಗ್ಗೆ ನಾವು ಹೆಚ್ಚು ಆದ್ಯತೆ ಕೊಟ್ಟಿದ್ದೇವೆ. ಈ ಬಗ್ಗೆ ನಮ್ಮ ಸರ್ಕಾರದ ನೀತಿ ಏನಿದೆ ಎಂಬುದನ್ನು ಸಹ ಹೇಳಿದ್ದೇನೆ. ಆಮೇಲೆ ಬೆಂಗಳೂರಿನಲ್ಲಿ ಕಾರ್ಪೊರೇಷನ್ ಅಧಿಕಾರಿಗಳು ಟೆಲಿಫೋನ್ ಬೂತ್ ಎತ್ತಿಸಿರುವುದರ ಬಗ್ಗೆ ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ಹಿಂಸೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ನಾಳೆ ಬೆಂಗಳೂರು ನಗರಪಾಲಿಕೆ ಕಮಿಷನರ್‌ರವರನ್ನು ಕರೆದು ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಎಚ್ಚರಿಕೆ ನೀಡುವಂತೆಯೂ ಮತ್ತು ತೊಂದರೆಗೀಡಾಗಿರುವವರಿಗೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಿಸಲೂ ಸಹ ಪ್ರಯತ್ನಿಸುತ್ತೇನೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಈಗಾಗಲೇ ಮಂತ್ರಿಗಳು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ನಿನ್ನೆ ಪುರಸಭೆ ಮತ್ತು ನಗರಸಭೆಗಳಿಗೆ ಆಕ್ಟ್ರಾಯಿಯಿಂದ ಬರುವ ಆದಾಯವನ್ನು ನಿಲ್ಲಿಸಿರುವುದರಿಂದ ಅವು ಆರ್ಥಿಕವಾಗಿ ತೊಂದರೆ ಗೀಡಾಗಿವೆ. ಅದಕ್ಕಾಗಿ ಕಾಂಪೆನ್‌ಸೇಷನ್ ಗ್ರ್ಯಾಂಟ್ಸ್ ಕೊಡುವುದಷ್ಟೇ ಅಲ್ಲ, ಈ ಬಗ್ಗೆ ರಚಿಸಲಾಗಿದ್ದ ಗಲಾಟಿ ಕಮಿಷನ್ ರಿಪೋರ್ಟ್ ಏನಾಗಿದೆ, ಲಕ್ಷ್ಮಣರಾವ್ ಕಮಿಟಿ ಶಿಫಾರಸ್ ಏನಾಗಿದೆ, ಮತ್ತು ಜಾಕೂಬ್ ಕಮಿಟಿ ಶಿಫಾರಸ್ ಏನಾಗಿದೆ, ಎಂಬ ಬಗ್ಗೆ ತಿಳಿಸಬೇಕೆಂದು ಕೇಳಿದ್ದೆ. ತಾವು ಅದರ ಬಗ್ಗೆ ಏನನ್ನೂ ತಿಳಿಸಲಿಲ್ಲ. ಈ ವರದಿಗಳನ್ನು ಸಭೆಯ ಮುಂದಿಡಬೇಕೆಂದು ಸಹ ಕೇಳಿದ್ದೆ. ಅದರ ಬಗ್ಗೆ ಸಹ ತಾವು ಏನನ್ನೂ ಹೇಳಲಿಲ್ಲ. ನೀವು ಬಹಳ ಉತ್ಸಾಹದಿಂದ ಪಟ್ಟಣ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಸಾಕಷ್ಟು ಹಣ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಕೋಟ್ಯಾಂತರ ರೂ.ಗಳನ್ನು ಕೊಟ್ಟಿದ್ದೇವೆ. ಸಾಕಷ್ಟು ಯೋಜನೆಗಳಿಗೆ ಈಗಾಗಲೇ ಮಂಜೂರಾತಿ ಕೊಟ್ಟಿದ್ದೇವೆಂಬ ಮಾತನ್ನು ಹೇಳಿದ್ದೀರಿ. ಈಗಾಗಲೇ ೩೪ ಸ್ಕೀಮುಗಳನ್ನು ಬಜೆಟ್‌ನಲ್ಲಿ ಸೇರಿಸಿದ್ದೀರಿ. ಈ ಯೋಜನೆಗಳನ್ನು ಮುಗಿಸಲು ೧೬.೭ ಕೋಟಿ ರೂಪಾಯಿಗಳು ಬೇಕು. ಆದರೆ ನೀವು ೧೬ ಕೋಟಿ ರೂಪಾಯಿಗಳನ್ನು ಮಾತ್ರ ಬಜೆಟ್‌ನಲ್ಲಿಟ್ಟಿದ್ದೀರಿ ಇದು ಸಫಿಸಿಯೆಂಟ್ ಇಲ್ಲ. ಎಲ್ಲಿಯವರೆಗೆ ನೀವು ಹಣ ಕೊಡುವುದಿಲ್ಲ, ಅಲ್ಲಿಯವರೆಗೂ ಹಾಗೆಯೇ ಕೆಲಸ ನಡೆಯುತ್ತದೆ, ಇದರ ಬಗ್ಗೆ ಸರ್ಕಾರ ಎಷ್ಟು ಕಳಕಳಿಯಿಂದ ಮಾಡಬೇಕು ಎಂದು ಮಾಡುತ್ತೀರೋ, ಅದಕ್ಕೆ ಅಷ್ಟೇ ಹಣವನ್ನು ಕೂಡಾ ಕೊಡಬೇಕಾಗುತ್ತದೆ. ಮತ್ತು International water decade ಕೂಡಾ ೧೯೮೧ ರಿಂದ ೧೯೯೦ರವರೆಗೆ ಪ್ರಾರಂಭವಾಗಿದೆ. ಇದರಲ್ಲಿ ಎಷ್ಟು ಹಣ ಸೆಂಟ್ರಲ್‌ನಿಂದ ನಿಮಗೆ ಸಿಕ್ಕಿದೆ ? ಮತ್ತೆ ಎಷ್ಟು ರೀಜನಲ್ ವಾಟರ್ ಸಪ್ಲೈ ಸ್ಕೀಮಿದೆ ಎಂಬುದನ್ನು ತಿಳಿಸಬೇಕು. ನಮ್ಮ ಮುಖ್ಯ ಸಚೇತಕರಾದ ಮಲ್ಲಾರಿಗೌಡ ಪಾಟೀಲರ ಕ್ಷೇತ್ರವಾದ ಸಂಕೇಶ್ವರದಲ್ಲಿಯೂ ಕೂಡಾ ವಾಟರ್ ಸಪ್ಲೈ ಸ್ಕೀಂ ಇದೆ. ಬೇರೆ ಬೇರೆ ಕಡೆ ಕೂಡಾ ಸಾಕಷ್ಟು ಇಂತಹ ಸ್ಕೀಮ್‌ಗಳಿವೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದ್ದನ್ನು ಹೇಳಬೇಕು. ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಹಳ್ಳಿ ಪ್ರದೇಶದಲ್ಲಿರತಕ್ಕಂಥ ಜನರಿಗೆ ಫಸ್ಟ್ ಡಿಮ್ಯಾಂಡ್ ಸರ್ವೆ ಮಾಡಿ ೧೪ ಲಕ್ಷ ೯೦ ಸಾವಿರ ಸೈಟುಗಳನ್ನು ಕೊಟ್ಟಿದ್ದೀರಿ. ಇನ್ನು ಕೂಡಾ ಒಂದು ಲಕ್ಷ ಸೈಟುಗಳನ್ನು ಕೊಡಬೇಕಾಗಿದೆ. ಸೆಕೆಂಡ್ ಸರ್ವೆ ಕಂಡಕ್ಟ್ ಮಾಡಿ ೨.೬೮ ನಿಮ್ಮ ಷೆಡ್ಯೂಲ್ ಪ್ರಕಾರ ೧೯೮೪ರಲ್ಲಿ ಡಿಮ್ಯಾಂಡ್ ಸರ್ವೆಕಂಡಕ್ಟ್ ಆಗಿದೆ. ಇನ್ನೂ ಕೂಡಾ ಅದನ್ನು ಐಡೆಂಟಿಫೈ ಮಾಡಿ ಹಳ್ಳಿ ಪ್ರದೇಶದಲ್ಲಿರತಕ್ಕಂಥ ಜನರಿಗೆ ಏನು ಬೇಡಿಕೆ ಇದೆ ? ಮತ್ತು ಮೂರನೇ ಡಿಮ್ಯಾಂಡ್ ಸರ್ವೆಯನ್ನು ಯಾವಾಗ ಕಂಡಕ್ಟ್ ಮಾಡುತ್ತೀರಿ ? ಅದನ್ನು ನಿಗದಿ ಮಾಡಿ ಎಷ್ಟು

ಹಣವನ್ನು ಇಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ಸದನಕ್ಕೆ ಹೇಳಬೇಕು. ಎರಡನೆಯದು ಬೆಂಗಳೂರು ಸಿಟಿಗೆ ಕಾವೇರಿ ಮೂರನೇ ಸ್ಟೇಜ್ ಮಾತ್ರವಲ್ಲ, ನಾಲ್ಕನೇ ಸ್ಟೇಜನ್ನು ಕೂಡಾ you have to take up ಎಂಟನೇ ಯೋಜನೆಯಲ್ಲಿ ಹಣವನ್ನು ಅದಕ್ಕೆ ಪ್ರೊವೈಡ್ ಮಾಡಬೇಕು. ಇದರ ಬಗ್ಗೆ ಬಹಳ ಜವಾಬ್ದಾರಿ ಮತ್ತು ಹೊಣೆ ಕೂಡಾ ತಮ್ಮ ಮೇಲೆ ಇದೆ. ಇದರ ಬಗ್ಗೆ ಕೂಡಾ ತಾವು ವಿಚಾರ ಮಾಡಬೇಕು. ಮತ್ತು ಮೆಟ್ರೋಪಾಲಿಟನ್ ಅಥಾರಿಟಿ ಬಗ್ಗೆ ಹೇಳಬೇಕೆಂದರೆ, ಇಡೀ ದೇಶದಲ್ಲಿ ಬೆಂಗಳೂರು ೫ನೇ ಸಿಟಿ ಆಗಿದೆ ಇವತ್ತು ನಮ್ಮ ದೇಶದಲ್ಲಿ ಎಲ್ಲಾವನ್ನು ಕೋ-ಆರ್ಡಿನೇಟ್ ಮಾಡತಕ್ಕಂಥದ್ದು ಅದರಲ್ಲಿ ಬೆಂಗಳೂರು ವಾಟರ್ ಸಪ್ಲೈ ಆಗಲಿ ಮೆಟ್ರೊಪಾಲಿಟನ್ ಅಥಾರಿಟಿಯ ಬಗ್ಗೆ ತಾವು ಏನು ಮಾಡಿದ್ದೀರಿ ಎಂದು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ ಅವರ ಮೊದಲ ಪ್ರಶ್ನೆ ಅದು ಲಕ್ಷ್ಮಣ್‌ರಾವ್ ಕಮಿಟಿ ಇರಬಹುದು. ಗುಲಾಟಿ ಕಮಿಟಿ ಇರಬಹುದು ಹಾಗೂ ಜಾಕೋಬ್ ಕಮಿಟಿಯ ಬಗ್ಗೆ ನಾನು ಆಗಲೇ ನಮ್ಮ ಕಮಿಷನರ್‌ಗೆ ಮಧ್ಯಾಹ್ನದಲ್ಲಿ ಹೇಳಿದ್ದೇನೆ. ಆ ಎಲ್ಲ ವರದಿಗಳನ್ನು ತರಿಸಿ ಯಾವ ರಿಪೋರ್ಟ್‌ಗೆ ಯಾವ ರೀತಿಯಾದಂಥ ಪರಿಹಾರ ಕೊಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಮತ್ತೊಂದು ವಿಚಾರ ಇವತ್ತು ಸೈಟ್-ಸೈಟ್‌ಲೆಸ್ ಪರ್‌ಸನ್ಸ್ ಎನ್ನತಕ್ಕಂಥದ್ದು ನನಗೆ ಜ್ಞಾಪಕ ಇರುವ ಹಾಗೆ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಒಂದು ಸಮೀಕ್ಷೆ ನಡೆದಿತ್ತು ಎಂಬ ಮಾತನ್ನು ಹೇಳಿದ್ದೇನೆ. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ಮೇಲೆ ಇವತ್ತು ಎಲ್ಲೆಲ್ಲಿ ಬಡವರು ಇದ್ದಾರೆ ಹಾಗೂ ದಲಿತ ವರ್ಗದವರು ಎಷ್ಟು ಜನ ಇದ್ದಾರೆ, ಮತ್ತು ಎಷ್ಟು ಮಂದಿ ಸೈಟು ಇಲ್ಲದೇ ಇರತಕ್ಕಂಥ ಜನ ಇದ್ದಾರೆ, ಇದರ ಬಗ್ಗೆ ಒಂದು ಸಮೀಕ್ಷೆಯನ್ನು ಮಾಡಬೇಕು. ಈಗಾಗಲೇ ಕಮಿಷನರ್‌ಗೆ ಸೂಚನೆ ಕೊಟ್ಟು ಇದರ ಬಗ್ಗೆ ಸರ್ವೆ ಮಾಡಲಿಕ್ಕಾಗಿ ಆದೇಶ ಹೋಗಿದೆ. ಮತ್ತು ಪಟ್ಟಣ ಪ್ರದೇಶದಲ್ಲಿರತಕ್ಕಂಥ ಸೈಟ್-ಸೈಟ್‌ಲೆಸ್ ಪರ್‌ಸನ್ಸ್ ಏನಿದ್ದಾರೆ, ಕೊಳಚೆ ಪ್ರದೇಶದಲ್ಲಿರತಕ್ಕಂಥವರ ಬಗ್ಗೆ ಕೂಡಾ ಒಂದು ಸಮೀಕ್ಷೆ ಕೂಡಾ ನಡೆಯಬೇಕು ಎಂದು ಈಗಾಗಲೇ ಹೇಳಿದ್ದೇನೆ ಈ ಒಂದು ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆಯನ್ನು ಧರ್ಮಸಿಂಗ್‌ರವರು ಕೇಳಿದರು. ಕಾವೇರಿ ಮೂರನೇ ಹಂತದ ಯೋಜನೆ ಮಾತ್ರ ಸಾಲದು. ಅಗತ್ಯವಿದ್ದರೆ ನಾಲ್ಕನೇ ಸ್ಟೇಜ್‌ಗೂ ಹೋಗಬೇಕು ಎಂದು ಹೇಳಿದ್ದಾರೆ. ಮೂರನೇ ಸ್ಟೇಜ್‌ಗೆ ನಾವು ೨೪೦ ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗಾಗಿ ಖರ್ಚು ಮಾಡಬೇಕಾಗಿದೆ. ಈಗಾಗಲೇ ೫೦ ಪರ್‌ಸೆಂಟ್ ಕೆಲಸ ಆಗಿದೆ. ಕಾವೇರಿ ಮೂರನೇ ಹಂತವನ್ನು ೧೯೯೧ರ ಒಳಗಾಗಿ ಮುಗಿಸಬೇಕು ಎಂದು ಹೇಳಿ ನಾವು ಕಾತುರರಾಗಿದ್ದೇವೆ. ಅದಕ್ಕೆ ಹಣದ ಕೊರತೆ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತೊಂದು ಮಾತನ್ನು ಮಾನ್ಯ ಸಿಂಧ್ಯರವರು ಹೇಳಿದರು, ಅವರು ಸೀಟಲ್ಲಿ ಇಲ್ಲ. ಈ ಬಿ. ಡಿ. ಎ. ಗೆ ಸಂಬಂಧಪಟ್ಟ ಹಾಗೆ ಅಂಕಿಅಂಶಗಳನ್ನು ಕೊಡುವುದು ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ೮೮-೮೯ರಲ್ಲಿ ಮತ್ತು ೮೯-೯೦ ರಲ್ಲಿ ಯಾವ ಸೈಟನ್ನು ಕೂಡಾ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಈ ವಿಷಯ ಮುಖ್ಯ ಇದೆ, ಅದನ್ನು ಸದನಕ್ಕೆ ರೆಫರೆನ್ಸ್‌ಗಾಗಿ ಹೇಳಿಬಿಡುತ್ತೇನೆ. ೧೯೮೭-೮೮ರಲ್ಲಿ ಬ್ಯಾಕ್‌ಲಾಗ್ ಇದ್ದದ್ದು ೩೧೫೦ ಅಡಿಷನಲ್ ಬ್ಯಾಕ್‌ಲಾಗ್ ಆದದ್ದು ೮೯೪೧, ಒಟ್ಟಾರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೆ ನಿಮ್ಮ ಸರ್ಕಾರ ಅಧಿಕಾರವನ್ನು ಬಿಟ್ಟ ಮೇಲೆ ೧೩,೦೯೧ ಸೈಟುಗಳಿಗೆ ಬರೀ ಪೇಪರ್‌ನಲ್ಲಿ ಅಲಾಟ್ ಮಾಡಿದ್ದೀರಿ. ಅವರು ಸೈಟನ್ನು ಕೊಟ್ಟಿರಲಿಲ್ಲ. ಆ ಕೆಲಸವನ್ನು ನಮ್ಮ ಪ್ರಾಧಿಕಾರದ ಅಧಿಕಾರಿಗಳು ಮಾಡುತ್ತಿದ್ದಾರೆ. ಅದಕ್ಕೆ ಇವತ್ತು the previous government made more than 5,154 paper allotments without assigning site numbers or physically giving any site to the allottees. Such a practice they followed. ಅದನ್ನು ನಿಲ್ಲಿಸಿ ಅವರು ಏನೇನು ಕಮಿಟಿ ಮಾಡಿದ್ದಾರೋ, ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ದೇಶಪಾಂಡೆ ಯವರು ಹೇಳಿದ ಮಾತು ಸತ್ಯಕ್ಕೆ ಬಹಳ ದೂರವಾದದ್ದು ಎಂಬ ಮಾತನ್ನು ಹೇಳಿ ಈ ಸ್ಪಷ್ಟೀಕರಣವನ್ನು ಕೊಡುತ್ತೇನೆ. ಮತ್ತೆ ನಾನು ಪ್ರಾರಂಭದಲ್ಲಿ ಈ ವಿಷಯ ಹೇಳಬೇಕಾಗಿತ್ತು, ಏನೆಂದರೆ, ಈಗ ಎನ್. ಆರ್. ವೈ. ಸ್ಕೀಮ್ ಎಂದು ಬಂದಿದೆ. ಅದು ನೆಹರು ರೋಜ್‌ಗಾರ್ ಯೋಜನೆ, ಇದು ಬಹಳ ಐತಿಹಾಸಿಕವಾದಂಥ ಒಂದು ಕಾರ್ಯಕ್ರಮ. ಪಟ್ಟಣ ಪ್ರದೇಶದ ಯುವಕರಿಗೆ ಬಿಲೋ ಪಾವರ್ಟಿ ಲೈನ್ ಇರತಕ್ಕವರಿಗೆ ೧೯೮೯-೯೦ರಲ್ಲಿ ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಇಡೀ ರಾಷ್ಟ್ರಕ್ಕೇ ಈ ಒಂದು ಕಾರ್ಯಕ್ರಮವನ್ನು ಜಾರಿಗೆ ಕೊಟ್ಟರು. ಆದರೆ ಈ ಕಾರ್ಯಕ್ರಮ ಕಳೆದ ವರ್ಷ ಜಾರಿಗೆ ಬರಲಿಲ್ಲ. ಈ ಸಾರಿ ಈ ಕಾರ್ಯಕ್ರಮವನ್ನು ಏನಾದರೂ ಮಾಡಿ ಜಾರಿಗೆ ಕೊಡಬೇಕೆಂದು ನಮ್ಮ ರಾಜ್ಯ ಸರ್ಕಾರ

ತೀರ್ಮಾನ ಮಾಡಿದೆ. ಇದಕ್ಕಾಗಿ ನಾವು ರಾಜ್ಯಮಟ್ಟದ ಸಮಿತಿಗಳನ್ನು ನೇಮಕ ಮಾಡಿದ್ದೇವೆ, ಜಿಲ್ಲಾ ಮಟ್ಟದಲ್ಲಿ ಕೂಡ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಗಳನ್ನು ಮಾಡಿ ಸುಮಾರು ೪೪,೪೨೨ ಮಂದಿ ಯುವಕರಿಗೆ ನೆಹರೂ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ಕೊಡಬೇಕೆಂದು ನಮ್ಮ ಮಾನ್ಯ ವೀರೇಂದ್ರ ಪಾಟೀಲರ ನೇತೃತ್ವದ ಸರ್ಕಾರ ನಿರ್ಧಾರ ಮಾಡಿದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಯುವಕರಿಗೋಸ್ಕರ ಈ ಯೋಜನೆ ಇದೆ, ಇದನ್ನು ಪಟ್ಟಣ ಪ್ರದೇಶದಲ್ಲಿರುವವರಿಗೂ ವಿಸ್ತರಿಸಬೇಕೆಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗಾಗಲೇ ಸುಮಾರು ೩೮.೫೯ ಕೋಟಿ ರೂಪಾಯಿಯಷ್ಟು ಹಣವನ್ನು ಈ ಯೋಜನೆಗೆ ಖರ್ಚು ಮಾಡಲು ನಾವು ತೀರ್ಮಾನ ಮಾಡಿದ್ದೇವೆ...

ಶ್ರೀ ಹೆಚ್. ಏಕಾಂತಯ್ಯ.—ಗ್ರಾಮೀಣ ವಸತಿ ಯೋಜನೆ ೧೯೭೨-೭೩ನೇ ಇಸವಿಯಲ್ಲಿ ಜಾರಿಗೆ ಬಂತು. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದರೂ ಕೂಡ ನಂತರ ೧೯೭೪-೭೫ನೇ ಇಸವಿಯಲ್ಲಿ ರಾಜ್ಯದ ಯೋಜನೆಯಾಗಿ ಜಾರಿಗೆ ಬಂದಿದೆ. ಇದರಲ್ಲಿ ಒಂದು ಸಮೀಕ್ಷೆಯನ್ನು ಮಾಡಿ ಇದರಲ್ಲಿ ಹದಿನಾಲ್ಕೂವರೆ ಲಕ್ಷ ಜನ ನಿವೇಶನರಹಿತರನ್ನು ಗುರುತು ಮಾಡಿದ್ದೇವೆಂದು ಒಂದು ವರದಿಯಲ್ಲಿ ಹೇಳುತ್ತೀರಿ. ಆದರೆ ತದನಂತರ ೧೯೮೪ರಲ್ಲಿ ಮತ್ತೊಂದು ಸಮೀಕ್ಷೆಯಾಯಿತು. ಈ ಸಮೀಕ್ಷೆಯ ಪ್ರಕಾರ ೨.೭೮ ಲಕ್ಷ ಜನ ನಿವೇಶನ ರಹಿತರನ್ನು ಗುರುತು ಮಾಡಿದ್ದೇವೆಂದು ಇನ್ನೊಂದು ವರದಿಯಲ್ಲಿ ಹೇಳಿದ್ದೀರಿ. ಅಂದರೆ ಒಂದು ವರದಿಗೂ ಇನ್ನೊಂದು ವರದಿಗೂ ಅಜಗಜಾಂತರ ವ್ಯತ್ಯಾಸವಿದೆ. ಈ ವರ್ಷ ೪.೪೮ ಲಕ್ಷ ಜನರು ನಿವೇಶನ ರಹಿತರಿದ್ದಾರೆಂದು ಹೇಳಿದ್ದೀರಿ. ಅಂದರೆ ಈ ಅಂಕಿಅಂಶಗಳನ್ನು ಕೊಟ್ಟಂಥ ಅಧಿಕಾರಿಗಳು ಯಾವುದೇ ಹೊಣೆಗಾರಿಕೆಯೂ ಇಲ್ಲದೆ ಈ ಸದನಕ್ಕೆ ಏನು ಬೇಕಾದರೂ ಮಾಹಿತಿಯನ್ನು ಕೊಡಬಹುದೆಂದು ತಿಳಿದಿದ್ದಾರೇನೋ ಎಂಬ ಸಂಶಯ ಬರುತ್ತಿದೆ. ಇದರ ಬಗ್ಗೆ ತಾವು ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು. ತದನಂತರ ೧೯೮೪ರಲ್ಲಿ ಏನು ಸಮೀಕ್ಷೆಯಾಯಿತು ಅದರ ಪ್ರಕಾರ ೩.೩೮ ಲಕ್ಷ ಜನರು ನಿವೇಶನ ರಹಿತರಿದ್ದಾರೆಂದು ಹೇಳಿದ್ದೀರಿ, ಅಲ್ಲಿಂದ ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಹೆಚ್ಚು ಜನರು ನಿವೇಶನರಹಿತರಿದ್ದಾರೆಂದು ನಾನು ಹೇಳಬಯಸುತ್ತೇನೆ. ಆದ್ದರಿಂದ ಈ ವರ್ಷದ ಅಂತ್ಯದೊಳಗೆ ಹೊಸದಾಗಿ ಇನ್ನೊಂದು ಸಮೀಕ್ಷೆಯನ್ನು ಮಾಡಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ನಿವೇಶನ ರಹಿತರನ್ನು ಗುರುತುಮಾಡಿ ಹಂತ ಹಂತವಾಗಿ ಎಲ್ಲರಿಗೂ ನಿವೇಶನಗಳನ್ನು ಕೊಡುವುದಕ್ಕೆ ಈ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದೆಯೇ ಎಂದು ಕೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ, ಚಿತ್ರದುರ್ಗ ನಗರದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎಂಬುದನ್ನು ತಮ್ಮ ಗಮನಕ್ಕೆ ನಾವು ಅನೇಕ ಸಾರಿ ತಂದಿದ್ದೇವೆ. ಈ ನಗರಕ್ಕೆ ಕುಡಿಯುವ ನೀರನ್ನೊದಗಿಸಲು ಕರ್ನಾಟಕ ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್‌ನವರು ಈಗಾಗಲೇ ತಮಗೆ ಒಂದು ಅಂದಾಜನ್ನು ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಾರೆಂದು ತಿಳಿದುಬಂದಿದೆ. ಇದರ ಜೊತೆಗೆ ಪ್ರಪ್ರಥಮವಾಗಿ ಚಿತ್ರದುರ್ಗ ನಗರಸಭೆಯವರು ತಮ್ಮ ವಂತಿಗೆಯಲ್ಲಿ ಸ್ವಲ್ಪ ಭಾಗವನ್ನು ಕೊಟ್ಟಿದ್ದಾರೆ ಆದ್ದರಿಂದ ತಾವು ಈ ಯೋಜನೆಯನ್ನು ಆದಷ್ಟು ಬೇಗ ಮಂಜೂರು ಮಾಡಿ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ಚಿತ್ರದುರ್ಗ ನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯವರು ಕಟ್ಟಿರತಕ್ಕ ಮನೆಗಳು ಅತ್ಯಂತ ಕಳಪೆಯ ಮನೆಗಳೆಂಬುದನ್ನು ನಾವು ಈ ಸಭೆಯಲ್ಲಿ ಹೇಳಿದ್ದೆವು. ಇದರ ಪರಿಶೀಲನೆಗಾಗಿ ಒಂದು ವಿಶೇಷ ಸಮಿತಿಯನ್ನು ನೇಮಕ ಮಾಡಿದಿರಿ, ಆ ಸಮಿತಿಯವರೂ ಕೂಡ ಇದು ಅತ್ಯಂತ ಕಳಪೆಯ ಕೆಲಸದಿಂದ ಆಗಿರತಕ್ಕ ಮನೆಗಳು ಎಂದು ವರದಿಯನ್ನು ಕೊಟ್ಟಿತು. ಆದರೂ ಕೂಡ ದುರದೃಷ್ಟವಶಾತ್ ಅದರ ಬಗ್ಗೆ ಯಾವುದೇ ಕ್ರಮವನ್ನು ಕೂಡ ತೆಗೆದುಕೊಳ್ಳಲಿಲ್ಲ ಅಷ್ಟೇ ಅಲ್ಲ ಇಂಥ ಕಳಪೆ ಮನೆಗಳನ್ನು ಕಟ್ಟಿದಂಥ ಸಂಬಂಧಪಟ್ಟವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಬಹುಶಃ ಈ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳುವಂತಹ ಆಸಕ್ತಿ ಇಲ್ಲವೆಂದು ನನಗನಿಸುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಮೊದಲನೆಯದು............

ಶ್ರೀ ಹೆಚ್. ಏಕಾಂತಯ್ಯ.—ಗ್ರಾಮಾಂತರ ಪ್ರದೇಶದ ಜನರಲ್ಲಿ ನಿವೇಶನ ರಹಿತರ ಬಗ್ಗೆ ಹೊಸದಾಗಿ ಒಂದು ಸಮೀಕ್ಷೆಯನ್ನು ಮಾಡಿ ಅವರಿಗೆ ನಿವೇಶನವನ್ನು ಕೊಡತಕ್ಕ ಕೆಲಸವನ್ನು ರಾಜ್ಯದ ಯೋಜನೆಯಡಿಯಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾದ ಸಲಹೆ. ಇದನ್ನು ನಾನು ಒಪ್ಪಿಕೊಂಡಿದ್ದೇನೆ. ಮತ್ತು ಈಗಾಗಲೇ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಒಂದು ನಿರ್ದೇಶನವನ್ನೂ ಕೂಡ ಕೊಟ್ಟಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಹಿಂದೆ ಸಮೀಕ್ಷೆಯನ್ನು ಮಾಡಿದಾಗ ಧಾರವಾಡ ಜಿಲ್ಲೆ, ಕೋಲಾರ ಜಿಲ್ಲೆ ಸೇರಿರಲಿಲ್ಲ. ಈಗ ನಾನು ಹೇಳುವುದೇನೆಂದರೆ, ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಕೆಲಸ ಮಾಡದಿದ್ದರೂ ಕೂಡ ರಾಜ್ಯದಾದ್ಯಂತ ಈ ಸಮೀಕ್ಷೆಯ ಕೆಲಸವಾಗಿದೆ ಎಂಬುದನ್ನು ನಾವು ವರದಿಯಲ್ಲಿ ನೋಡಿದ್ದೇವೆ. ಆದ್ದರಿಂದ ನಾನು ಹೇಳುವುದೇನೆಂದರೆ, ಎಲ್ಲ ಗ್ರಾಮಾಂತರ ಪ್ರದೇಶದಲ್ಲೂ ಸವಿಸ್ತಾರವಾಗಿ ಇನ್ನೊಂದು ಸಮೀಕ್ಷೆಯನ್ನು ತಾವು ಮಾಡಿಸಿ ನಿವೇಶನ ರಹಿತರನ್ನು ಗುರ್ತಿಸುವ ಕೆಲಸವನ್ನು ಒಂದು ನಿಗದಿತ ವೇಳೆಯಲ್ಲಿ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಬಹಳ ಅತ್ಯುತ್ತಮ ಸಲಹೆಯನ್ನು ನೀಡಿದ್ದಾರೆ. ಈ ದಿಕ್ಕಿನಲ್ಲಿ ನಮ್ಮ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಡುತ್ತದೆಂದು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ಈಗಾಗಲೇ ಹೇಳಿದ್ದೇನೆ, ಚಿತ್ರದುರ್ಗ ಇರಬಹುದು, ದಾವಣಗೆರೆ ಇರಬಹುದು ಅಥವಾ ಇನ್ನಾವುದೇ ಪಟ್ಟಣ ಇರಬಹುದು ಕುಡಿಯುವ ನೀರಿಗೆ ನಾವು ಮೊದಲನೆಯ ಆದ್ಯತೆಯನ್ನು ಕೊಡುತ್ತಿದ್ದೇವೆ ಮತ್ತು ಮುಂದೆಯೂ ಕೊಡುತ್ತೇವೆಂದು ಸರ್ಕಾರದ ವತಿಯಿಂದ ಉತ್ತರವನ್ನು ಹೇಳಬಯಸುತ್ತೇನೆ. ಮತ್ತು ಈಗ ತಾವು ಪ್ರಸ್ತಾಪ ಮಾಡಿರುವ ಪ್ರಕಾರ ಚಿತ್ರದುರ್ಗದ ನಾಗರೀಕರಿಗೆ ಕುಡಿಯುವ ನೀರನ್ನೊದಗಿಸಲು ಸೂಕ್ತ ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.— ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಲ್ಲಿ ಏನು ಮನೆಗಳನ್ನು ಕಟ್ಟುತ್ತಾರೆ, ಅದನ್ನು ಮಂಜೂರಾತಿ ಮಾಡುವಾಗ ಆಗಲಿ, ಲಾಟರಿ ಮಾಡುವಾಗ ಆಗಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ೨೫ ಪರ್ಸೆಂಟ್ ಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು ಮತ್ತು ಖಾಲಿ ನಿವೇಶನಗಳನ್ನು ಹರಾಜು ಹಾಕಬೇಕಾದರೂ ಸಹ, ೨೫ ಪರ್ಸೆಂಟ್ ಸೈಟುಗಳನ್ನು ಪಡೆಯಲು ಪರಿಶಿಷ್ಟ ಜಾತಿ ಮತ್ತು ಪಂಗಡದವರೇ ಹರಾಜಿನಲ್ಲಿ ಭಾಗವಹಿಸಬೇಕು ಎಂದು ಕಾನೂನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಮನೆಗಳನ್ನು ಮಂಜೂರು ಮಾಡುವಾಗ ೨೫ ಪರ್ಸೆಂಟ್ ಕೊಡಬೇಕು, ನಿವೇಶನಗಳನ್ನು ಕೊಡಬೇಕಾದರೂ ಸಹ ೨೫ ಪರ್ಸೆಂಟ್ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳೂ ಸಹ ಪರಿಶಿಷ್ಟ ಜಾತಿಗೆ ಸೇರಿರುವುದರಿಂದ ಆ ಕೀರ್ತಿ ನಿಮಗೆ ಬರುತ್ತದೆ, ಅದನ್ನು ನೀವು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಗೃಹನಿರ್ಮಾಣ ಮಂಡಲಿಯಲ್ಲಿ ಕಟ್ಟುವ ಮನೆಗಳಲ್ಲಿ ಶೇಕಡ ೨೫ರಷ್ಟು ಮನೆಗಳನ್ನು ಅವರಿಗೆ ಮೀಸಲಿಡಲು ನಾನು ಒಪ್ಪಿದ್ದೇನೆ, ಐ ಹ್ಯಾವ್ ಡಿಕ್ಲೇರ್ಡ್ ಎ ಪಾಲಿಸಿ. ಮತ್ತೆ ಪಟ್ಟಣ ಪ್ರದೇಶಗಳಲ್ಲಿ ಸೈಟುಗಳನ್ನು ಹಂಚುವಾಗಲೂ ಸಹ ಅವರಿಗೆ ಶೇಕಡ ೨೫ ರಷ್ಟು ಸೈಟುಗಳನ್ನು ರಿಸರ್ವ್ ಮಾಡಬೇಕು ಎಂದು ಕೂಡ ಸರ್ಕಾರ ಆದೇಶ ಕೊಡುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.— ಹರಾಜು ಹಾಕುವ ಬಗ್ಗೆ ಹೇಳಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ ಸೈಟ್ ಕೊಡತಕ್ಕಂಥ ವಿಚಾರದಲ್ಲಿ ಐ ವಿಲ್ ಅಗ್ರಿ.

ಶ್ರೀ ಎಂ. ಪಿ. ವೆಂಕಟೇಶ್.— ಅದರಲ್ಲಿ ೨೫ ಪರ್ಸೆಂಟ್ ತೆಗೆದಿಟ್ಟು ಅವರೇ ತೆಗೆದುಕೊಳ್ಳಬೇಕು ಎಂದು ಏಕೆ ಮಾಡಬಾರದು, ಏನು ತೊಂದರೆ ಇದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಅದನ್ನು ನೀವು ಏನಾದರೂ ಮಂತ್ರಿಯಾದಾಗ ಮಾಡಿ.

ಶ್ರೀ ಎಂ. ಪಿ. ವೆಂಕಟೇಶ್.— ತಾವು ಮಾಡುವುದಕ್ಕಾಗುವುದಿಲ್ಲವೇ, ನಾನು ಮಂತ್ರಿಯಾದಾಗ ಖಂಡಿತ ಮಾಡುತ್ತೇನೆ, ನನ್ನನ್ನು ಕೇಳಬೇಕಾದ್ದಿಲ್ಲ, ಅಂತಹ ಅವಕಾಶ ಬರುತ್ತದೆ. ಆದರೆ ತಾವು ಈಗ ಮಂತ್ರಿಗಳಾಗಿದ್ದೀರಿ, ಇದನ್ನು ಮಾಡುವುದರಲ್ಲಿ ಏನು ತೊಂದರೆ ಇದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ನೀವು ಮಂತ್ರಿಯಾಗಿ ಬಂದಾಗ ಮಾಡುತ್ತೇನೆ ಎಂದು ಹೇಳಿದಿರಲ್ಲ, ಆ ತೀರ್ಮಾನ ನಿಮಗೇ ಬಿಡುತ್ತೇನೆ. ಈಗ ನಾನು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.— ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಬಗ್ಗೆ ಕೂಲಂಕಷವಾಗಿ ನಾನು ಈ ಸದನದ ಮುಂದೆ ಮಾತನಾಡಿದೆ, ಮಾನ್ಯ ಸಚಿವರು ಅದನ್ನು ಬರೆದುಕೊಂಡರು. ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಯ ಬಗ್ಗೆ ನಿಮ್ಮ ಮುಂದಿನ ಕಾರ್ಯಕ್ರಮಗಳೇನು ? ಯಾವ ಯಾವ ರೀತಿಯಲ್ಲಿ ಮಾಡಬೇಕು ಎಂದು ಮಾಡಿದ್ದೀರಿ ಎನ್ನತಕ್ಕಂಥಾದ್ದಕ್ಕೆ ತಮ್ಮ ಉತ್ತರದಲ್ಲಿ ಏನೂ ತಿಳಿದು ಬರಲಿಲ್ಲ. ಇದು ಒಂದನೆಯದು. ಎರಡನೆಯದಾಗಿ, ನನ್ನ ಕ್ಷೇತ್ರ ಚಾಮರಾಜನಗರ–ರಾಮಸಮುದ್ರ ಪಟ್ಟಣಗಳಿಗೆ ಕುಡಿಯುವ ನೀರಿನ ಬಗ್ಗೆ ಕಾವೇರಿ ಯೋಜನೆಯನ್ನು ತರುತ್ತೇವೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಸರ್ಕಾರದ ನೀತಿ ಇದೆ ಮತ್ತು ಮಾನ್ಯ ಸಚಿವರು ಬಹಳ ಕಳಕಳಿಯಿಂದ ಇದನ್ನು ತರುತ್ತೇವೆಂದು ಹೇಳಿದ್ದಾರೆ. ಈ ಯೋಜನೆಯನ್ನು ಎಷ್ಟು ವರ್ಷಗಳಲ್ಲಿ ಮುಗಿಸಬೇಕು ಎಂದು ಇದ್ದೀರಿ ಮತ್ತು ಈ ವರ್ಷ ಈ ಯೋಜನೆಗೆ ಇಟ್ಟಿರತಕ್ಕಂಥ ಹಣ ಎಷ್ಟು. ಕೆಲಸ ಪ್ರಾರಂಭ ಮಾಡತಕ್ಕಂಥ ಈ ವರ್ಷದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಮತ್ತು ಎಷ್ಟು ದಿನಗಳಲ್ಲಿ ಮುಗಿಸಬೇಕು ಎಂದು ತಮ್ಮ ಯೋಚನೆ ಇದೆ. ಮೂರನೆಯದು, ಒಳಚರಂಡಿ ವ್ಯವಸ್ಥೆಯನ್ನು ಚಾಮರಾಜ ನಗರಕ್ಕೆ ಮಾಡತಕ್ಕಂಥ ತಮ್ಮ ಕಳಕಳಿ ಬಗ್ಗೆ ನಾನು ಅಭಿನಂದಿಸುತ್ತೇನೆ. ಹಾಗೆಯೇ ಇದಕ್ಕೆ ಎಷ್ಟು ಹಣವನ್ನು ಈ ವರ್ಷ ತೆಗೆದಿಟ್ಟಿದ್ದೀರಿ ಮತ್ತು ಇದಕ್ಕೆ ಸರ್ಕಾರದ ಅನುಮತಿಯನ್ನು ತಾವು ನೀಡಿದ್ದೀರಾ ? ಕಾವೇರಿ ಯೋಜನೆಗೆ ಶಂಕುಸ್ಥಾಪನೆ ಮಾಡುವಾಗ ಈ ಯೋಜನೆಗೂ ಸಹ ತಾವು ಶಂಕುಸ್ಥಾಪನೆ ಮಾಡುತ್ತೀರಾ? ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ, ಚಾಮರಾಜನಗರದ ಕಾವೇರಿ ಯೋಜನೆಯ ಶಂಕುಸ್ಥಾಪನೆ ಬಗ್ಗೆ ಈ ಸದನ ಮುಗಿದ ನಂತರ ನಿಮ್ಮ ಚಾಮರಾಜ ನಗರಕ್ಕೆ ಬರುತ್ತೇನೆ ಎಂದು ಬರೆದ ಪತ್ರ ಇವತ್ತು ನನಗೆ ಬಂದಿದೆ ತಮಗೂ ಅದು ಗೊತ್ತು. ದಯಮಾಡಿ ಈ ವಿಚಾರವನ್ನು ತಾವು ಸದನದ ಮುಂದೆ ಹೇಳಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಚಾಮರಾಜನಗರ ಮತ್ತು ಈ ಪುರಸಭೆಯ ಅಂದರೆ ಚಾಮರಾಜನಗರ ಜನತೆಯ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ಅದರ ಬಗ್ಗೆ ಶಂಕುಸ್ಥಾಪನೆಯಾಗಬೇಕಾಗಿತ್ತು. ಅನಿವಾರ್ಯ ಕಾರಣದಿಂದ ಮುಂದಕ್ಕೆ ಹೋಗಿದೆ. ಅದನ್ನು ಮಾಡುತ್ತೇವೆ. ಆದರೆ ಒಳಚರಂಡಿಗೂ ಇವತ್ತೇ ಭರವಸೆ ಕೊಡಿ ಎಂದು ಹೇಳುವುದಾದರೆ ನನಗೆ ಬಹಳ ಕಷ್ಟವಾಗುತ್ತದೆ. ನಿಮಗೆ ಆಗಲೇ ನಾನು ಕಿವಿ ಮಾತನ್ನು ಹೇಳಿದ್ದೇನೆ. ಈಗಲೂ ಅದೇ ಮಾತನ್ನು ಹೇಳುತ್ತೇನೆ. ಚಾಮರಾಜನಗರ ಇವತ್ತಲ್ಲ ನಾಳೆ ಜಿಲ್ಲಾ ಕೇಂದ್ರ ಆಗುತ್ತದೆ. ಅದನ್ನು ಚೆನ್ನಾಗಿ ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥ ಕಳಕಳಿ ಸರ್ಕಾರಕ್ಕೂ ಇದೆ. ಆ ಒಳಚರಂಡಿ ವ್ಯವಸ್ಥೆಯನ್ನು ಅದರ ಜೊತೆಯಲ್ಲಿ ಮಾಡುವಂಥಾದ್ದರ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಆವತ್ತು ನೀವು ಸಭೆಗೆ ಬಂದಾಗ ಅದರ ಬಗ್ಗೆ ನಾನು...

ಶ್ರೀ ಪಾಟಾಳ್ ನಾಗರಾಜ್.— ಕಾವೇರಿ ನೀರನ್ನು ಕೊಡುವ ಕೆಲಸವನ್ನು ಎಷ್ಟು ದಿವಸದಲ್ಲಿ ಮುಗಿಸುತ್ತೀರಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಈಗ ಎಂಟು ತಿಂಗಳ ಬಜೆಟ್ ಪಾಸ್ ಮಾಡುತ್ತಾ ಇದ್ದೀರಿ. ಇದನ್ನೆಲ್ಲಾ ಮಾಡಿದಮೇಲೆ ಅಂತಿಮವಾಗಿ ಏನೇನು ಕೊಟ್ಟಿದ್ದೇವೆ ಎಂದು ನಿಮಗೇ ಗೊತ್ತಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ಎರಡು ವಿಚಾರ ತಂದಿದ್ದೆ. ಹೌಸಿಂಗ್ ಬೋರ್ಡಿನವರು ಲೋ ಇನ್‌ಕಂ ಗ್ರೂಪ್ ಮನೆಗಳನ್ನು ಮತ್ತು ಎಂ. ಇ. ಜಿ. ಮನೆಗಳನ್ನು ಅಲಾಟ್ ಮಾಡುವಾಗ ೧೦ ರಿಂದ ೧೫ ರಿಂದ ಪರ್ಸೆಂಟ್‌ವರೆಗೆ ಬಡ್ಡಿ ಹಾಕುತ್ತಾರೆ. ಈ ಹಣವನ್ನು ಟೈಂಗೆ ಸರಿಯಾಗಿ ಕಟ್ಟದೇ ಹೋದರೆ, ಇದರ ಮೇಲೆ ೧೦ ರಿಂದ ೧೨ ಪರ್ಸೆಂಟ್ ವರೆಗೆ ಪೀನಲ್ ಇಂಟರೆಸ್ಟ್ ಹಾಕುತ್ತಾರೆ. ಮನೆಗಳನ್ನು ಕೊಂಡವರಿಗೆ ಇದು ಬಹಳ ಹೊರೆಯಾಗಿ ಎಷ್ಟೋ ಜನ ಕಂತುಗಳನ್ನು ಕಟ್ಟುವುದಕ್ಕೆ ಆಗದೆ ಮನೆಗಳನ್ನು ಕಳೆದುಕೊಳ್ಳುವಂಥ ಸ್ಥಿತಿಯಲ್ಲಿದ್ದರು, ಹೀಗೆ ಸಕಾಲದಲ್ಲಿ ಕಂತುಗಳನ್ನು ಕಟ್ಟದೇ ಹೋದರೂ ಒಟ್ಟಿಗೆ ಎಲ್ಲ ಕಂತುಗಳನ್ನು ಕಟ್ಟುವಂತಹ ಸ್ಥಿತಿಯಲ್ಲಿರುವವರಿಗೆ ಪೀನಲ್ ಇಂಟರೆಸ್ಟ್ ಮಾಫಿ ಮಾಡುತ್ತೇವೆಂದು ಹೇಳಿ ಅಂತಹವರಿಗೆ ೨-೩ ತಿಂಗಳ ಅವಕಾಶ ಕೊಟ್ಟಿದ್ದರು. ಆಗ ಬಡವರಿಗೆ ಬಹಳ ಅನುಕೂಲವಾಯಿತು. ಹೌಸಿಂಗ್ ಬೋರ್ಡಿನವರಿಗೆ ಆಗ ಹಣ ಕೂಡ ಸಾಕಷ್ಟು ವಸೂಲಿ ಆಯಿತು. ಆದ್ದರಿಂದ ಇಂತಹ ಒಂದು ಅನುಕೂಲವನ್ನು ಈಗಿನ ಸರ್ಕಾರದವರೂ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಇನ್ನು ಎರಡನೆಯದಾಗಿ ಹಾಸನದ ಕೆರೆಯ ಅಂಗಳದಲ್ಲಿ ಕಟ್ಟಿರತಕ್ಕ ಎಲ್. ಐ.

ಜಿ. ಮನೆಗಳಿಗೆ ಮೊದಲು ೯,೫೦೦ ರೂಪಾಯಿ ನಿಗದಿ ಆಗಿತ್ತು, ಇವತ್ತು ಅದರ ಬೆಲೆ ೬೦,೦೦೦ ಆಗಿದೆ. ಅದೇ ರೀತಿ ಎಂ. ಐ. ಜಿ. ಮನೆಗಳಿಗೆ ೧೯,೦೦೦ ಇದ್ದುದ್ದು, ಇವತ್ತು ೫೫,೦೦೦ ಆಗಿದೆ. ಹೀಗೆ ವರ್ಷೇ ವರ್ಷೇ ಹೆಚ್ಚು ಮಾಡಿಕೊಂಡು ಹೋಗಿದ್ದಾರೆ. ಈ ಬಗ್ಗೆ ಹೋಗಿ ಕೇಳಿದರೆ, ಸುಮಾರು ೪-೫ ಸಾವಿರ ರೂಪಾಯಿ ಸಂಬಳ ಪಡೆಯುತಕ್ಕ ಅಧಿಕಾರಿಗಳು ಮನೆಯ ಬೆಲೆ ಇನ್ನೂ ಹೆಚ್ಚಾಗುತ್ತದೆಂದು ಹೇಳಿದ್ದಾರೆ. ಅಂತಹ ಅಧಿಕಾರಿಗಳ ಬಗ್ಗೆ ನನಗೆ ಬೇಜಾರು ಏನೂ ಇಲ್ಲ. ಆದರೆ ಇಂತಹ ಒಂದು ಹೊರೆಯಿಂದ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ಮನೆಗಳ ಬೆಲೆ ಕಡಿಮೆ ಮಾಡುವ ಬಗ್ಗೆ ನಾನು ನಿನ್ನೆ ದಿವಸ ಸಲಹೆ ಕೊಟ್ಟಿದ್ದೇನೆ. ರೈಲ್ವೆ ಅಂಡರ್ ಬ್ರಿಡ್ಜು ಮತ್ತು ನ್ಯಾಷನಲ್ ಹೈವೇನಲ್ಲಿ ಕಟ್ಟುರತಕ್ಕ ಎಲ್ಲ ಕೆಲಸಗಳ ಖರ್ಚನ್ನು ಈ ಮನೆಗಳ ಮೇಲೆ ಹಾಕಿ ಇದರ ಹೊರೆಯನ್ನು ಆ ಬಡವರ ಮೇಲೆ ಹಾಕಿದರೆ ಹೇಗೆ? ಯಾರೋ ಮಾಡಿದ ತಪ್ಪಿಗೆ ಬಡವರು ಬಲಿಯಾಗಬೇಕೇ? ಇದರ ಖರ್ಚನ್ನು ಆಯಾ ಇಲಾಖೆಗಳಿಂದ ವಸೂಲಿ ಮಾಡಿದರೆ ಈ ಮನೆಗಳ ಬೆಲೆಯನ್ನು ಕಡಿಮೆ ಮಾಡಬಹುದು ಹಿಂದೆ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಆಶ್ವಾಸನೆ ಕೊಟ್ಟಿದ್ದರು ಏನೆಂದರೆ ಹಾಸನದಲ್ಲಿ ಖಾಲಿ ಇರತಕ್ಕ ಜಾಗಗಳನ್ನು ಮಾರಾಟ ಮಾಡಿ ಅದರಿಂದ ಬರತಕ್ಕ ಹಣವನ್ನು ನೋಡಿಕೊಂಡು ೪೭ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಇಲಾಖೆಯ ಮೂಲಕ ಖರ್ಚು ಮಾಡಿರುವುದನ್ನು ಸಹ ಆಯಾ ಇಲಾಖೆಗಳಿಂದ ವಸೂಲಿ ಮಾಡಿ ಒರಿಜನಲ್ ರೇಟಿಗೆ ಮನೆಗಳನ್ನು ಕೊಡಿ ಎಂದು ಆದೇಶ ಕೊಟ್ಟಿದ್ದರು. ಅದರ ಪ್ರಕಾರ ಒಂದು ವರ್ಷದ ಹಿಂದೆ, ಆ ಖಾಲಿ ಜಾಗಗಳನ್ನು ಹರಾಜು ಹಾಕಿದಾಗ, ಅದರಿಂದ ಸುಮಾರು ಒಂದು ಕೋಟಿ ರೂಪಾಯಿ ಆದಾಯ ಬಂದಿದೆ. ಆದ್ದರಿಂದ ಈ ಹಣವನ್ನು ಸಹ ತುಂಬಿಸಿಕೊಂಡು ಬಡವರಿಗೆ ಒರಿಜನಲ್ ರೇಟಿಗೆ ಮನೆ ಕೊಡುವಂಥ ವ್ಯವಸ್ಥೆ ಮಾಡಲು ಸರ್ಕಾರ ತಯಾರಿದೆಯೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ. ಗೃಹ ನಿರ್ಮಾಣ ಮಂಡಲಿ ಒಂದು ಸ್ವಾಯತ್ತ ಸಂಸ್ಥೆ. ಅದಕ್ಕೆ ತನ್ನದೇ ಆದಂಥ ಆಡಳಿತ ಮಂಡಲಿ ಇದ್ದು, ತನ್ನದೇ ಆದ ನೀತಿ ನಿಯಮಗಳನ್ನು ರೂಪಿಸಿದೆ. ಆದ್ದರಿಂದ ನಾನು ಮಂಡಲಿಯ ಅಧ್ಯಕ್ಷರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ. ಅವರ ನೀತಿ ನಿಯಮಗಳಿಗೆ ಏನಾದರು ಅವರು ವಿರುದ್ಧವಾಗಿ ನಡೆದುಕೊಂಡಿದ್ದರೆ......

ಶ್ರೀ ಕೆ. ಹೆಚ್. ಹನುಮೇಗೌಡ.—ಆರ್ಡಿನರಿ ಇಂಟರೆಸ್ಟ್ ನಪ್ಪೇ ಪೀನಲ್ ಇಂಟರೆಸ್ಟ್ ಹಾಕಿದರೆ ಯಾರು ಉಳಿಯುತ್ತಾರೆ ಸ್ವಾಮಿ? ಅವರು ತಮ್ಮ ಮನೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಯೇ? ಇದು ಯಾವ ನಿಯಮ? ಇದು ಬಡವರನ್ನು ಉದ್ಧಾರ ಮಾಡುವ ನಿಯಮವೇ ಹೇಗೆ? ಅವರೂ ಈ ದೇಶದ ಪ್ರಜೆಗಳಲ್ಲಿವೇ? ಅವರಿಗೂ ಓಟು ಮಾಡುವ ಅಧಿಕಾರ ಇಲ್ಲವೇ? ಆ ಬಡವರಿಗೂ ಸಹ ಇರಲು ಒಂದು ನೆಲೆ ಆಗಬೇಕೆಂದು ಹೇಳುತ್ತೀರಿ. ಮತ್ತೊಂದು ಕಡೆ ಈ ರೀತಿ ಮನೆಗಳ ಬೆಲೆ ಹೆಚ್ಚು ಮಾಡುವುದು ಯಾವ ನ್ಯಾಯ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಹನುಮೇಗೌಡರೇ. ತಾವು ಸಾಧ್ಯವಾದರೇ ನಾಳೆಯೇ ಬನ್ನಿ, ತಾವು ಎತ್ತಿರತಕ್ಕ ಪ್ರಶ್ನೆಗಳಿಗೆಲ್ಲಾ ನೇರವಾಗಿ ಈಗಲೇ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದರೆ ಸಮಸ್ಯೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಈ ಬಗ್ಗೆ ಎಷ್ಟು ಪರಿಹಾರ ಕೊಡುವುದಕ್ಕೆ ಸಾಧ್ಯ ಎಂಬುದನ್ನು ತಮ್ಮೊಡನೆ ಸಂಬಂಧಪಟ್ಟ ಆಡಳಿತ ಮಂಡಲಿಯವರ ಜೊತೆಯಲ್ಲಿ ಮಾತನಾಡುತ್ತೇನೆ ಮತ್ತು ಈ ಬಗ್ಗೆ ಏನು ಕ್ರಮ ಜರುಗಿಸಬೇಕೋ ಅದನ್ನು ಜರುಗಿಸುತ್ತೇನೆ.

ಶ್ರೀ ಹರ್ಷಕುಮಾರ್ ಗೌಡ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮಂತ್ರಿಗಳು ಮೈಸೂರು ನಗರಕ್ಕೆ ೬.೫ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಆರೂವರೆ ಕೋಟಿ ರೂಪಾಯಿಯ ಕಾರ್ಯಕ್ರಮ ಎಷ್ಟು ದಿವಸದಲ್ಲಿ ಮುಗಿಸಿ ಮೈಸೂರು ನಗರದ ನೀರಿನ ಬರವನ್ನು ಇಂಗಿಸುವ ದಿಸೆಯಲ್ಲಿ ತ್ವರಿತಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮೈಸೂರು ನಗರದ ನೀರಿನ ಸಮಸ್ಯೆಯನ್ನು ಎದುರಿಸಲು ಬೋರ್ ವೆಲ್‌ಗಳ ಅವಶ್ಯಕತೆ ಬಹಳವಾಗಿದೆ. ಕನಿಷ್ಠಪಕ್ಷ ೧೦೦ ಬೋರ್‌ವೆಲ್‌ಗಳು ಬೇಕಾಗುತ್ತದೆ. ಈಗ ನೀರಿನ ಮಾರಾಟ ಮೈಸೂರಿನಲ್ಲಿ ಆಗುತ್ತಿದೆ. ಆದುದರಿಂದ ತಾವು ೧೦೦ ಬೋರ್‌ವೆಲ್‌ಗಳನ್ನು ಮಂಜೂರು ಮಾಡಿಕೊಡಬೇಕು. ಮೈಸೂರು ನಗರದಲ್ಲಿ ೨೫ ರೆವಿನ್ಯೂ ಲೇಔಟ್‌ಗಳು ಇದೆ. ಅವುಗಳನ್ನು ಸಕ್ರಮ ಗೊಳಿಸದೆ ಇರುವುದರಿಂದ ಸಮಸ್ಯೆ ಗಂಭೀರವಾಗಿದೆ. ಈ ಬಡಾವಣೆಗಳನ್ನು ಸಕ್ರಮಗೊಳಿಸುತ್ತೇವೆಂದು ಹಿಂದಿನ ಸರ್ಕಾರದಿಂದ ವ್ಯವಸ್ಥಿತವಾಗಿ ಪ್ರಚಾರ ನಡೆದುಕೊಂಡು ಬಂದಿದೆ. ತಾವು ಈ ಬಡಾವಣೆಗಳನ್ನು ಸಕ್ರಮಗೊಳಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಸಕ್ರಮಗೊಳಿಸದೇ ಇರುವುದರಿಂದ ಸರ್ಕಾರಕ್ಕೆ ಆದಾಯ ಬರುತ್ತಿಲ್ಲ. ಆದ್ದರಿಂದ ಈ

ಸಮಸ್ಯೆಯನ್ನು ಬಗೆಹರಿಸಬೇಕು. ಮೈಸೂರು ನಗರದಲ್ಲಿ ೭೦ ವರ್ಷಗಳ ಹಿಂದಿನ ಒಳಚರಂಡಿ ವ್ಯವಸ್ಥೆ ಇದೆ. ಇದರಿಂದ ಹಲವಾರು ಕಡೆ ಪೈಪುಗಳೆಲ್ಲ ಒಡೆದು ಹೋಗಿದೆ. ಇದನ್ನು ನವೀಕರಿಸಬೇಕು. ಮೈಸೂರು ನಗರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ೮೦ ಅಕ್ರಮ ನಿವೇಶನಗಳ ವಿಲೇವಾರಿ ಬಗ್ಗೆ ತನಿಖೆಗೆ ಆಜ್ಞೆ ಮಾಡಿದ್ದರು. ಆ ತನಿಖಾವರದಿ ಬಗ್ಗೆ ಏನಾಗಿದೆಯೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮೈಸೂರು ನಗರಕ್ಕೆ ಕಾವೇರಿ ೩ನೇ ಹಂತದ ಯೋಜನೆಗೆ ಶಂಕು ಸ್ಥಾಪನೆಯನ್ನು ಶೀಘ್ರದಲ್ಲೇ ಮಾಡುತ್ತೇವೆ, ನಿಗದಿತ ಅವಧಿಯಲ್ಲಿ ಈ ಕಾರ್ಯವನ್ನು ಮುಗಿಸುತ್ತೇವೆ. ಅಲ್ಲಿಯವರೆಗೆ ಬೋರ್‌ವೆಲ್‌ಗಳನ್ನು ಹಾಕಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ೧೦೦ ಬೋರ್‌ವೆಲ್‌ಗಳನ್ನು ಹಾಕಿಸಿಕೊಡಲು ಕಷ್ಟವಾಗುತ್ತದೆ. ಆದ್ದರಿಂದ ಕನಿಷ್ಠ ಪಕ್ಷ ೩೦ ಬೋರ್‌ವೆಲ್‌ಗಳನ್ನು ಕೂಡಲೆ ಅಲ್ಲಿ ಹಾಕಿಸಿಕೊಡುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಪ್ರವಾಸಿ ಕೇಂದ್ರವಾದ ಶ್ರೀರಂಗಪಟ್ಟಣದ ಪುರಸಭೆಯಲ್ಲಿ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ, ಅಲ್ಲಿಗೆ ಬರತಕ್ಕ ಪ್ರವಾಸೀ ಬಸ್ಸಿನ ಮೇಲೆ ಸೆಸ್ ಅನ್ನು ಹಾಕಲು ಅವರಿಗೆ ಅಧಿಕಾರ ಇಲ್ಲ, ಈ ಪ್ರವಾಸಿ ಕೇಂದ್ರದಲ್ಲಿ ಬರತಕ್ಕ ಪ್ರವಾಸಿಗಳಿಗೆ ಯಾವ ಸೌಲಭ್ಯವೂ ಇಲ್ಲ, ಆದ್ದರಿಂದ ಇಲ್ಲಿ ಬರತಕ್ಕ ಪ್ರವಾಸಿಗರಿಗೆ ಕುಡಿಯುವ ನೀರು ಹಾಗೂ ಇತರ ಸೌಲಭ್ಯಗಳನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಒದಗಿಸಿ ಕೊಡಲಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ನೆನ್ನೆ ದಿವಸ ನಾನು ಮಾತನಾಡುವ ಸಂದರ್ಭದಲ್ಲಿ ೧೦ ಸಾವಿರದಿಂದ ೫೦ ಸಾವಿರ ಜನಸಂಖ್ಯೆ ಇರತಕ್ಕ ಸ್ಥಳಗಳನ್ನು ಪುರಸಭೆಗಳನ್ನಾಗಿ ಮಾಡಬೇಕೆಂದು ಕಾನೂನು ಚೌಕಟ್ಟಿನಲ್ಲಿ ಅವಕಾಶ ಇದ್ದರೂ ಸಹ ನನ್ನ ಕ್ಷೇತ್ರವಾದ ನಾಗಮಂಗಲದಲ್ಲಿ ೧೮ ಸಾವಿರ ಜನಸಂಖ್ಯೆಯಿದ್ದರೂ ಸಹ ಅದನ್ನು ಇಂಟ್ರಿಮ್ ಮಂಡಲ ಎಂದು ಮಾಡಿದ್ದೀರಿ. ಇದನ್ನು ಪುರಸಭೆ ಆಗಿ ಡಿಕ್ಲೇರ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾಗಮಂಗಲದಲ್ಲಿ ಒಂದು ಸಾವಿರ ಜೋಪಡಿಗಳಿದ್ದವು. ಮೊನ್ನೆ ಅವಕ್ಕೆ ಬೆಂಕಿಬಿದ್ದು ಹಲವಾರು ಜೋಪಡಿಗಳು ಸುಟ್ಟು ಹೋದವು. ನಾವು ಈ ಬಗ್ಗೆ ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ತಾವು ಅಲ್ಲಿ ಹೌಸಿಂಗ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಿರಿ. ನಾಗಮಂಗಲದಲ್ಲಿ ಇದುವರೆವಿಗೂ ಹೌಸಿಂಗ್ ಬೋರ್ಡ್‌ನಿಂದ ಒಂದು ಮನೆಯನ್ನೂ ಕಟ್ಟಿಸಿಕೊಟ್ಟಿಲ್ಲ. ಆದ್ದರಿಂದ ೫೦೦ ಮನೆಗಳನ್ನು ಆದರೂ ಅಲ್ಲಿ ಕಟ್ಟಿಸಿಕೊಡುವ ಬಗ್ಗೆ ತಾವು ಈ ಸದನದಲ್ಲಿ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾಗಮಂಗಲವನ್ನು ಪುರಸಭೆಯನ್ನಾಗಿ ಮಾಡುವುದರ ಬಗ್ಗೆ ಜಿಲ್ಲಾ ಪರಿಷತ್ತಿನ ಕಾಯಿದೆಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ನಾನು ಈ ಒಂದು ಸಲಹೆಯನ್ನು ಕಾರ್ಯಗತ ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ೫೦೦ ಮನೆಗಳನ್ನು ಕೊಡುವ ಬಗ್ಗೆ ಹೇಳಿದ್ದಾರೆ. ಆದರೆ ಈಗ ಒಂದನ್ನೂ ಕೊಡಲು ಸಾಧ್ಯವಿಲ್ಲ. ನಿಮ್ಮ ಒಂದು ಸಲಹೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಆದ್ದರಿಂದ ನಿಯಮದ ಚೌಕಟ್ಟಿನಲ್ಲಿ ಏನು ಸಾಧ್ಯವಾಗುತ್ತದೆ ಅದನ್ನು ಸಾಧ್ಯವಾದ ಮಟ್ಟಿಗೆ ಮಾಡಿಕೊಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಂಟ್ರಿಮ್ ಮಂಡಲ್‌ಗೆ ಯಾವ ಸವಲತ್ತನ್ನೂ ಅಲ್ಲಿನ ಜಿಲ್ಲಾ ಪರಿಷತ್ತು ಕೊಟ್ಟಿಲ್ಲ. ಇದರಿಂದ ಆ ಮಂಡಲ್‌ನ ಪರಿಸ್ಥಿತಿ ತ್ರಿಶಂಕು ಸ್ವರ್ಗವಾಗಿದೆ. ತಾವು ಈ ಬಗ್ಗೆ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ೧೦ ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರದೇಶಗಳನ್ನೆಲ್ಲಾ ಮಂಡಳ ಎಂದು ಮಾಡಿಬಿಟ್ಟರೆ ಆ ಊರುಗಳು ಯಾವ ರೀತಿ ಉದ್ಧಾರ ಆಗುತ್ತವೆ ?

೭–೨೦ ಪಿ.ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನನ್ನ ಸ್ವಂತ ಜನ್ಮಸ್ಥಳವಾದ ಟಿ. ನರಸೀಪುರ ಇನಿದೆ. ಆ ಟೌನನ್ನು ಸಹ ಮಾನ್ಯ ನಜೀರ್‌ಸಾಬ್‌ರವರು ಮಂಡಲ್ ಪಂಚಾಯಿತಿ ಮಾಡಿದ್ದಾರೆ. ಸುಮಾರು ೭೦ ಪಟ್ಟಣ ಪ್ರದೇಶಗಳನ್ನು ಮಂಡಲ ಪಂಚಾಯಿತಿಗಳನ್ನಾಗಿ ಮಾಡಿದ್ದಾರೆ. ಈ ಬಗ್ಗೆ ಸಲಹೆಗಳು ನಾನಾ ರೀತಿ ಬಂದಿವೆ. ಪರ ಮತ್ತು ವಿರೋಧ ಎರಡೂ ಇದೆ. ಇದನ್ನೆಲ್ಲಾ ಗ್ರಹಿಸಿ

ಕೊಂಡು ಸಮಗ್ರವಾಗಿ ತಿದ್ದುಪಡಿ ತರತಕ್ಕಂಥ ಅಗತ್ಯ ಇದ್ದರೆ ತರೋಣ. ಆಗ ತಮ್ಮ ಸಲಹೆಯನ್ನು ಕೇಳುತ್ತೇವೆ. ಇನ್ನು ಮನೆಗಳನ್ನು ಕಟ್ಟುವುದರ ಬಗ್ಗೆ ಯಾವ ಯಾವ ರೀತಿ ಸಹಾಯ ಮಾಡಬೇಕೋ ಆ ರೀತಿ ಮಾಡೋಣ.

ಶ್ರೀ ಆರ್. ದಯಾನಂದರಾವ್.—ಕೊಳಚೆ ನಿರ್ಮೂಲನಾ ಮಂಡಲಿಗೆ ಈ ವರ್ಷ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕೊಳಚೆ ನಿರ್ಮೂಲನ ಮಂಡಲಿಗೆ ೩ ಕೋಟಿ ರೂಪಾಯಿ ಸೀಡ್ ಮನಿ ಕೊಟ್ಟಿದ್ದೇವೆ. ಇನ್ನೂ ಮೂರೂವರೆ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಬೇಕೆಂದು ನಮ್ಮ ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ಪಿ. ಸಿ. ಸಿದ್ಧನಗೌಡರ್.—ಹುಬ್ಬಳ್ಳಿ ಧಾರವಾಡ ಮಹಾನಗರದ ಕುಡಿಯುವ ನೀರಿನ ಯೋಜನೆಯ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಂಡಿದ್ದೆ. ಆ ಕಾರ್ಯಕ್ರಮ ಈಗ ಎಲ್ಲಿಗೆ ಬಂದಿದೆ. ಈ ಮಹಾಂದಾಯಿ ಯೋಜನೆ ಎಲ್ಲಿಗೆ ಬಂದಿದೆ. ಯಾವಾಗ ಮಾಡುತ್ತೀರಿ. ಇದು ಯಾವ ಹಂತದಲ್ಲಿದೆ. ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ನಾನು ಹುಬ್ಬಳ್ಳಿ ಧಾರವಾಡದ ಬಗ್ಗೆ ಕೆಲವೊಂದು ಸಲಹೆಗಳನ್ನು ತಮಗೆ ಕೊಟ್ಟಿದ್ದೆ. ಅಲ್ಲಿಯ ಕಾರ್ಪೊರೇಷನ್‌ನವರು ಕೆಲವೊಂದು ಕಾರ್ಯಕ್ರಮಗಳಿಗೆ ಅಡಿಪಾಯವನ್ನು ಹಾಕಿದ್ದಾರೆ. ಅದರಲ್ಲಿ ಒಂದು ಕಲ್ಯಾಣ ಮಂಟಪ ಸಹ ಸೇರಿದೆ. ಅದಕ್ಕೆ ಪಬ್ಲಿಕ್ ಕಾಂಟ್ರಿಬ್ಯೂಷನ್ ಕೂಡ ಕೊಟ್ಟಿದ್ದಾರೆ ಆ ಕಟ್ಟಡ ಆಗುವುದರ ಬಗ್ಗೆ ತಿಳಿಸಬೇಕು. ಮತ್ತೆ ಬಸ್‌ಸ್ಟ್ಯಾಂಡ್ ಎದುರುಗಡೆ ಟ್ರಾಫಿಕ್ ಜಾಸ್ತಿಯಾಗಿದೆ. ಅಲ್ಲಿ ಅಂಡರ್‌ಗ್ರೌಂಡ್ ಬಿಡ್ಜ್ ಆದರೂ ಮಾಡಿ, ಓವರ್ ಬ್ರಿಡ್ಜ್ ಆದರೂ ಮಾಡಿ. ಹುಬ್ಬಳ್ಳಿ ನಗರಕ್ಕೆ ಅವಶ್ಯಕವಾಗಿ ಇವುಗಳನ್ನೆಲ್ಲಾ ಮಾಡಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಸ್ಥಳೀಯ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನೋಟ್ ಮಾಡಿಕೊಂಡಿದ್ದೇನೆ. ನಾನು ಸಂಬಂಧಪಟ್ಟವರ ಜೊತೆಯಲ್ಲಿ ಇದರ ಬಗ್ಗೆ ಸಮಾಲೋಚನೆ ಮಾಡುತ್ತೇನೆ. ಅದು ಮಾದಾಯಿ ಕುಡಿಯುವ ನೀರಿನ ಯೋಜನೆ ಇರಬಹುದು. ಕಲ್ಯಾಣ ಮಂಟಪ ಇರಬಹುದು. ಅದರ ಬಗ್ಗೆ ನಮ್ಮ ಅಧಿಕಾರಿಗಳು ಗಮನಿಸಿಕೊಂಡಿದ್ದಾರೆ. ಇದರ ಬಗ್ಗೆ ಮಂಜೂರಾತಿ ಸಿಕ್ಕಿದ ತಕ್ಷಣವೇ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮತ್ತೊಮ್ಮೆ ನಾನು ಹುಬ್ಬಳ್ಳಿ ಮಹಾನಗರಕ್ಕೆ ಬಂದಾಗ ಸ್ಥಳೀಯವಾಗಿ ಏನು ತೊಂದರೆ ಇದೆ ಎಂಬ ಬಗ್ಗೆ ತಮ್ಮ ಜೊತೆ ಚರ್ಚೆ ಮಾಡಿ, ಅದನ್ನೆಲ್ಲಾ ಪರಿಹಾರ ಮಾಡುತ್ತೇನೆ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಪಟ್ಟಣ ಪ್ರದೇಶದ ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ನಗರಪಾಲಿಕೆ ಮಸೂದೆ ತರಬೇಕೆಂದು ನಮ್ಮ ಹಿಂದಿನ ಕೇಂದ್ರದ ಮಾಜಿ ಪ್ರಧಾನಿಯವರ ಅಭಿಲಾಷೆ ಏನು ಇಟ್ಟುಕೊಂಡಿದ್ದರು ಅದನ್ನು ರಾಜ್ಯ ಸರ್ಕಾರದಲ್ಲಿ ತಂದು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ನಗರಪಾಲಿಕೆ ಮಸೂದೆಯನ್ನು ತಂದು ರಾಜ್ಯದ ಜನಗಳಿಗೆ ಮಾರ್ಗದರ್ಶನವನ್ನು ಏತಕ್ಕೆ ಮಾಡಬಾರದು. ಮತ್ತೊಂದು ಪ್ರಶ್ನೆ ನಮ್ಮ ಬಂಟ್ವಾಳ ಪುರಸಭೆ ಸಾಮಾನ್ಯ ೪೦ ಸಾವಿರ ಜನಸಂಖ್ಯೆ ಇರತಕ್ಕ ಒಂದು ದೊಡ್ಡ ಪುರಸಭೆ. ಇದಕ್ಕೆ ಸರಿಯಾದ ಒಂದು ಕುಡಿಯುವ ನಲ್ಲಿ ನೀರಿನ ಯೋಜನೆ ಇಲ್ಲ ಎಂಬುದು ಬಹುದಿವಸಗಳ ಬೇಡಿಕೆ ಆಗಿದೆ. ಅದನ್ನು ಪೂರೈಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೋ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾಜಿ ಪ್ರಧಾನಿ ರಾಜೀವ್‌ಗಾಂಧಿಯವರು ಸ್ಥಳೀಯ ಸಂಸ್ಥೆಗಳ ಪಂಚಾಯತ್ ಸಂಸ್ಥೆಗಳಿಗೆ ಹೊಸ ಶಕ್ತಿ ಚೈತನ್ಯ ಕೊಡಬೇಕೆಂದು, ಇಡೀ ರಾಷ್ಟ್ರಕ್ಕೆ ಆ ಕಾನೂನು ಬರಬೇಕೆಂದು ಏನು ಯೋಚನೆ ಮಾಡಿದ್ದರು. ಆ ಬಗ್ಗೆ ಮಾನ್ಯ ಸದಸ್ಯರಾದ ರಮಾನಾಥ ರೈ ಅವರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನಮ್ಮ ಪಕ್ಷ ಇವೊತ್ತು ನಮ್ಮ ಮಾಜಿ ಪ್ರಧಾನಿಯವರು ಅಖಿಲ ಭಾರತದ ಕಾಂಗ್ರೆಸ್ ಐ ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರು ಏನೆಲ್ಲಾ ಚಿಂತನೆಯನ್ನು ಮಾಡಿದ್ದಾರೆ. ಅವೆಲ್ಲವನ್ನೂ ಜಾರಿಗೆ ತರಲು ನಮ್ಮ ಸರ್ಕಾರ ವಿಚಾರ ಮಾಡುತ್ತದೆ. ಇನ್ನು ಬಂಟ್ವಾಳ ನಗರದ ಕುಡಿಯುವ ನೀರಿನ ಬಗ್ಗೆ ಹೇಳಿದ್ದೀರಿ. ಅದನ್ನು ಈಗಾಗಲೇ ಜಾರಿಗೆ ಕೊಡಬೇಕೆಂದು ಚಿಂತನೆ ಮಾಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾನು ಮಾತನಾಡುವಾಗ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಅಪೂರ್ಣವಾದ ಮನೆಗಳು ಇವೆ. ಹಾಗೇ ಇನ್ನೂ ಕಟ್ಟದೇ ಇರತಕ್ಕ ಮನೆಗಳು ಬಹಳ ಇವೆ.

ಅದರಲ್ಲಿಯೂ ಸಹಿತ ನನ್ನ ಒಂದೇ ತಾಲ್ಲೂಕಿನಲ್ಲಿ ಸುಮಾರು ೭೧೬ ಜನತಾ ಮನೆಗಳನ್ನು ಕಟ್ಟಬೇಕಾದ್ದು ಬಾಕಿ ಉಳಿದಿದೆ. ನಮ್ಮ ಒಂದೇ ತಾಲ್ಲೂಕಿಗೆ ೩೬ ಲಕ್ಷ ರೂಪಾಯಿಗಳ ಸಹಾಯಧನ ಕೊಡಬೇಕಾಗಿದೆ. ಇದರ ಬಗ್ಗೆ ಏನೂ ಹೇಳಿಲ್ಲ. ಅದೇ ರೀತಿ ಧಾರವಾಡ ಜಿಲ್ಲೆಯಲ್ಲಿ ಸುಮಾರು ೭೮೪೩ ಜನತಾ ಮನೆಗಳನ್ನು ಕಟ್ಟುವುದು ಬಾಕಿ ಉಳಿದಿದೆ. ಕೋಟಿ ೩೩ ಲಕ್ಷ ರೂಪಾಯಿ ಸರ್ಕಾರದಿಂದ ಸಹಾಯ ಧನ ಬರಬೇಕಾಗಿದೆ. ಈ ಸರ್ಕಾರ ಮಾತೆತ್ತಿದರೆ ರಾಜೀವ್‌ಗಾಂಧಿಯವರ ಬಗ್ಗೆ ಹೇಳುತ್ತಾ ನಮಗೆ ಬಡವರ ಬಗ್ಗೆ ಅನುಕಂಪ ಇದೆ ಎಂದು ಹೇಳುತ್ತಿರುತ್ತೀರಿ. ಆದರೆ ಬಾಕಿ ಉಳಿದಿರುವ ಕೆಲಸವನ್ನು ಮುಗಿಸಲು ಹಣಕಾಸಿನ ವ್ಯವಸ್ಥೆ ಮಾಡಿಲ್ಲ.

೩, ೩,೦೦೦೦೦೦ ರೂಪಾಯಿಗಳನ್ನು ಈ ಮನೆಗಳ ಬ್ಯಾಕ್‌ಲಾಗ್‌ಗೆ ಕೊಡಬೇಕಾಗಿದೆ. ನಿಮ್ಮ ಬಡ್ಜೆಟ್‌ನಲ್ಲಿ ಈ ಬ್ಯಾಕ್‌ಲಾಗ್ ಅನ್ನು ತುಂಬಲು ಮತ್ತು ಅಪೂರ್ಣವಾದಂತಹ ಮನೆಗಳನ್ನು ಪೂರ್ಣಗೊಳಿಸಲಿಕ್ಕೆ ತಾವು ಹಣಕಾಸಿನ ಅಲೋಕೇಷನ್ ಅನ್ನು ಏನೂ ತಾವು ಇದರಲ್ಲಿ ಮಾಡಿಲ್ಲ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸುವ ಬಗ್ಗೆ ನಿರ್ಲಕ್ಷ್ಯ ತೋರಿದ್ದೀರಿ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ತಾವು ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಗ್ರಾಮಾಂತರ ಪ್ರದೇಶಗಳಲ್ಲಿ ಮನೆಯನ್ನು ಕಟ್ಟತಕ್ಕಂತಹ ಕೆಲಸ ಏನು ಇದೆ, ಇದರ ಬಗ್ಗೆ ಸರ್ಕಾರ ಒಂದು ನೀತಿಯನ್ನು ಯಾವ ರೀತಿ ರೂಪಿಸಬೇಕೆಂಬ ಬಗ್ಗೆ ವಿಚಾರ ಇದ್ದು, ಅದು ಸಚಿವ ಸಂಪುಟದ ಮುಂದೆ ಇದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಕೂಡ ಚಿಂತನೆ ಮಾಡುತ್ತಿದ್ದಾರೆ. ಈಗ ನಮ್ಮಲ್ಲಿ ಅಪೂರ್ಣವಾಗಿರತಕ್ಕಂತಹ ಮನೆಗಳನ್ನು ಪೂರ್ಣಗೊಳಿಸುವ ಬಗ್ಗೆ ಕೂಡ ಸರ್ಕಾರ ಚಿಂತನೆ ಮಾಡುತ್ತದೆ. ಮತ್ತೆ ಅವರ ಭಾಗದಲ್ಲಿ ಕೆಲವು ಗುಡಿಸಲುಗಳು ಇವೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಪತ್ರ ಬರೆಯಿರಿ. ಎಲ್ಲೆಲ್ಲಿ ಮನೆಗಳನ್ನು ಕಟ್ಟಬೇಕೆಂಬ ಬಗ್ಗೆ ಪತ್ರ ಬರೆಯಿರಿ ಆ ಪತ್ರಕ್ಕೆ ನಾವು ಬೆಲೆ ಕೊಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಮಂತ್ರಿಗಳು ಚಾಮರಾಜ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುತ್ತೇವೆಂದು ಹೇಳಿರುವುದು ತಮ್ಮ ವೈಯಕ್ತಿಕ ಅಭಿಪ್ರಾಯವೇ ಅಥವಾ ಸಚಿವ ಸಂಪುಟದ ಅಭಿಪ್ರಾಯವೇ ? ಏಕೆಂದರೆ ಈ ಬಗ್ಗೆ ಗದ್ದಿಗೌಡರ ವರದಿ ಏನಿದೆ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಿಲ್ಲ. ಆದ್ದರಿಂದ ಇದು ನಿಮ್ಮ ಅಭಿಪ್ರಾಯವೋ ಅಥವಾ ಸರ್ಕಾರದ ಅಭಿಪ್ರಾಯವೋ ಎಂಬುದನ್ನು ತಿಳಿಸಬೇಕು ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇದು ಸರ್ಕಾರದ ಅಭಿಪ್ರಾಯವಲ್ಲ. ನನ್ನ ವೈಯಕ್ತಿಕವಾದಂತಹ ಅಭಿಪ್ರಾಯ. ಪತ್ರಿಕೆಗಳಲ್ಲಿ ಕೂಡ ಇದರ ಬಗ್ಗೆ ಸಾಕಷ್ಟು ಪ್ರಚಾರ ಬಂದಿದೆ. ಆದ್ದರಿಂದ ಅದು ಜಿಲ್ಲಾ ಕೇಂದ್ರವಾಗಬೇಕು ಎಂದು ನಾನು ಹೇಳಿದ್ದೇನೆಯೇ ಹೊರತು ಅದನ್ನು ಮಾಡೇ ಮಾಡುತ್ತೇನೆಂದು ನಾನು ಹೇಳಿಲ್ಲಿಲ್ಲವಲ್ಲ.

ಶ್ರೀ ಜಿ. ರಾಜೂಗೌಡ.—ಮುಂದೆ ಮಾಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅದರ ಬಗ್ಗೆ ನಾನೇಕೆ ಹೇಳಲಿ. ಇಂತಹ ಸ್ಥಳವನ್ನೇ ಜಿಲ್ಲಾ ಕೇಂದ್ರವನ್ನಾಗಿ ಮಾಡುತ್ತೇವೆಂದು ಹೇಳುವ ಸನ್ನಿವೇಶದಲ್ಲಿ ನಾನು ಇಲ್ಲ. ಈ ಬಗ್ಗೆ ಬಂದಿರುವ ವರದಿಗಳ ಆಧಾರದ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಉಪಾಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ :—

> "೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೫, ೩೨, ೩೩, ೩೪ ೪೭ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರದ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೫—ಮೀನುಗಾರಿಕೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೭೬.೬೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೨—ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೨೦,೪೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮,೮೪,೫೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೩—ನಗರಾಭಿವೃದ್ಧಿ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೬,೩೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೫೧,೩೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೪—ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೬೭,೨೨,೨೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೮—ರೇವು ಮತ್ತು ಜಲ ಸಾರಿಗೆ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೧೬,೧೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೧೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು,

ಉಪಾಧ್ಯಕ್ಷರು.—ಈಗ ಸಹಕಾರ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡುತ್ತಾರೆ.